ಮಂಗಳವಾರ, ಸೆಪ್ಟೆಂಬರ್ 27, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಂತಿಮ ಸ್ಪರ್ಶ

ನವರಾತ್ರಿ ಅಂಗವಾಗಿ ಅಸ್ಸಾಂನ ತೇಜ್‌ಪುರದಲ್ಲಿ ಕಲಾವಿದರೊಬ್ಬರು ಸೋಮವಾರ ದುರ್ಗಾದೇವಿಯ ಮೂರ್ತಿಗೆ ಅಂತಿಮ ಸ್ಪರ್ಶ ನೀಡಿದರು

SAMSUNG

Galaxy S22

Now in Bora Purple

Own at ₹ 52999*

Retail price	₹ 72999^
Instant cashback	₹ 10000^^
Upgrade bonus / Bank cashback	₹ 10000^^
Effective price	₹ 52999*

HDFC BANK | Samsung upgrade

Follow us on: samsung.com | @SamsungIndia | @SamsungIndia | SamsungIndia | @samsungindia

Scan to buy.

Re+ Please dispose e-waste and plastic waste responsibly. For more information or for e-waste pick up, please call 1800 40 7267864 or 1800 5 7267864.

Or WhatsApp "S22" to 9870-494949 to buy now at Samsung Exclusive Stores.

*T&C apply. Final pricing is subject to dealer discretion. ^Retail price for Galaxy S22 128GB | 8GB. Price inclusive of taxes. ^^Cashback provided by issuer at its sole discretion. Image simulated for representational purpose only. Colour as per availability.

Cheil-13005/22

ಮಂಗಳವಾರ, ಸೆಪ್ಟೆಂಬರ್ 27, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 268 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಸಂತೃಪ್ತಿಯೆಂದರೆ ಉದಾತ್ತವಾಗಿ ಜೀವನವನ್ನು ರೂಪಿಸಿಕೊಳ್ಳುವುದು

ಆಳ-ಅಗಲ: ಜಾನುವಾರುಗಳಿಗೆ ಚರ್ಮಗಂಟು ರೋಗದ ಕಾಟ
4ನೇ ದಿನವೂ ಕುಸಿದ ಸೆನ್ಸೆಕ್ಸ್ 8
ಸರ್ಕಾರದ 'ಜಡತೆ': ಪುಟಿದೆದ್ದ ಐಟಿ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,145	17,016	₹51,150 (ಬೆಂಗಳೂರು)	₹56,500 (ಬೆಂಗಳೂರು)	81.67

2014–15ನೇ ಸಾಲಿನ ಸಹ ಶಿಕ್ಷಕರ ನೇಮಕಾತಿ: ದಾಖಲೆ ಪರಿಶೀಲಿಸದೇ ಆದೇಶ ವಿತರಣೆ

ನೇಮಕಾತಿ ಅಕ್ರಮ: ನಿರ್ದೇಶಕರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2014–15ನೇ ಸಾಲಿನ ಸಹ ಶಿಕ್ಷಕರ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಕರ್ನಾಟಕ ಪಠ್ಯಪುಸ್ತಕ ಸಂಘದ ನಿರ್ದೇಶಕ ಎಂ.ಪಿ. ಮಾದೇಗೌಡ ಹಾಗೂ ಸಮಗ್ರ ಶಿಕ್ಷಣ ಅಭಿಯಾನ ನಿರ್ದೇಶಕಿ ಗೀತಾ ಸೇರಿದಂತೆ ಆರು ಮಂದಿಯನ್ನು ಸಿಐಡಿ ಅಧಿಕಾರಿಗಳು ಬಂಧಿಸಿದ್ದು, ಹೆಚ್ಚಿನ ವಿಚಾರಣೆಗಾಗಿ ಅಕ್ಟೋಬರ್ 1ರವರೆಗೆ ಕಸ್ಟಡಿಗೆ ಪಡೆದಿದ್ದಾರೆ.

'ಅಧಿಕಾರ ದುರುಪಯೋಗಪಡಿಸಿಕೊಂಡು ಅಕ್ರಮದಲ್ಲಿ ಭಾಗಿಯಾಗಿದ್ದ ಆರೋಪದಡಿ ಮಾದೇಗೌಡ, ಗೀತಾ, ನಿವೃತ್ತ ಜಂಟಿ ನಿರ್ದೇಶಕರಾದ ಡಿ.ಕೆ. ಶಿವಕುಮಾರ್, ಕೆ. ರತ್ನಯ್ಯ, ಜಿ.ಆರ್. ಬಸವರಾಜ್ ಹಾಗೂ ಕಂಪ್ಯೂಟರ್ ಪ್ರೋಗ್ರಾಮರ್ ನರಸಿಂಹರಾವ್ ಅವರನ್ನು ಬಂಧಿಸಲಾಗಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

ರಾಜ್ಯದ ಬಹುತೇಕ ಜಿಲ್ಲೆಗಳ ವ್ಯಾಪ್ತಿಯಲ್ಲಿ ನಡೆದಿದ್ದ ನೇಮಕಾತಿಯಲ್ಲಿ



ಎಂ.ಪಿ.ಮಾದೇಗೌಡ

ಅಕ್ರಮ ಕುರಿತು ವಿಧಾನಸೌಧ ಠಾಣೆಯಲ್ಲಿ ದಾಖಲಾಗಿದ್ದ ಮೂರು ಪ್ರತ್ಯೇಕ ಪ್ರಕರಣಗಳ ಬಗ್ಗೆ ಸಿಐಡಿ ಅಧಿಕಾರಿಗಳು ತನಿಖೆ ಮುಂದುವರಿಸಿದ್ದಾರೆ.

ಸಹ ಶಿಕ್ಷಕರು ಹಾಗೂ ಶಿಕ್ಷಣ ಇಲಾಖೆಯ ಎಫ್‌ಡಿಎ ಕೆ.ಎಂ. ಪ್ರಸಾದ್ ಅವರನ್ನು ಬಂಧಿಸಿದ್ದ ಸಿಐಡಿ ಅಧಿಕಾರಿಗಳು, ಅವರೆಲ್ಲರ ಹೇಳಿಕೆ ದಾಖಲಿಸಿಕೊಂಡಿದ್ದರು. ಇಲಾಖೆಯ ಉನ್ನತ ಅಧಿಕಾರಿಗಳೂ ಅಕ್ರಮದಲ್ಲಿ ಭಾಗಿಯಾಗಿದ್ದಾರೆ.

ಅವರೇ ತರಾತುರಿಯಲ್ಲಿ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಕೊಟ್ಟಿದ್ದರು' ಎಂಬುದಾಗಿ ಬಂಧಿತರು ಬಾಯ್ಬಿಟ್ಟಿದ್ದರೆಂದು ಸಿಐಡಿ ಮೂಲಗಳು ಹೇಳಿವೆ.

'ಜಿಲ್ಲಾವಾರು ಅರ್ಜಿ ಸಲ್ಲಿಸಿದ್ದ ಕೆಲ ಅಭ್ಯರ್ಥಿಗಳು, ನೇಮಕಾತಿ ಮಂಡಳಿಯಲ್ಲಿದ್ದ ಸಿಬ್ಬಂದಿ ಹಾಗೂ ಇತರರಿಗೆ ₹ 5ಲಕ್ಷದಿಂದ ₹ 10 ಲಕ್ಷ ನೀಡಿ ಸಹ ಶಿಕ್ಷಕ ಹುದ್ದೆಗೆ ಆಯ್ಕೆಯಾಗಿದ್ದರು. ಇವರೆಲ್ಲರ ಹೆಸರು ಹೆಚ್ಚುವರಿ ಪಟ್ಟಿಯಲ್ಲಿತ್ತು. ಅಕ್ರಮವಾಗಿ ಆಯ್ಕೆಯಾಗಿದ್ದ ಅಭ್ಯರ್ಥಿಗಳ ದಾಖಲೆ ಪರಿಶೀಲನೆ ನಡೆಸದೇ ನಿರ್ದೇಶಕರು ಹಾಗೂ ಜಂಟಿ ನಿರ್ದೇಶಕರು, ನೇಮಕಾತಿ ಆದೇಶ ಪತ್ರಗಳನ್ನು ನೀಡಿದ್ದರು.'

'ಬಂಧಿತ ಆರೋಪಿಗಳೆಲ್ಲರೂ ಸಂಘಟಿತರಾಗಿ ಅಕ್ರಮದಲ್ಲಿ ಭಾಗಿಯಾಗಿರುವುದು ಇದುವರೆಗಿನ ತನಿಖೆಯಿಂದ ಗೊತ್ತಾಗಿದೆ. ಬಂಧಿತ ನಿರ್ದೇಶಕರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಕಸ್ಟಡಿಗೆ ಪಡೆಯಲಾಗಿದೆ. ವಿಚಾರಣೆ ಬಳಿಕವೇ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ' ಎಂದೂ ತಿಳಿಸಿವೆ.

ಲಕ್ಷಾಂತರ ರೂಪಾಯಿ ಪಡೆದಿರುವ ಶಂಕೆ: 'ಬಂಧಿತ ನಿರ್ದೇಶಕರು ತರಾತುರಿಯಲ್ಲಿ ನೇಮಕಾತಿ ಪ್ರಕ್ರಿಯೆ ಮುಗಿಸಲು ಯತ್ನಿಸಿದ್ದರು. ಇದಕ್ಕಾಗಿ ಅವರು ಲಕ್ಷಾಂತರ ರೂಪಾಯಿ ಪಡೆದಿರುವ ಶಂಕೆ ಇದ್ದು, ಈ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

8ನೇ ಪುಟ ನೋಡಿ

'ಕಂಪ್ಯೂಟರ್ ದಾಖಲೆ ತಿದ್ದಿದ್ದ ಪ್ರೋಗ್ರಾಮರ್'

'ನೇಮಕಾತಿ ಪ್ರಕ್ರಿಯೆಗಾಗಿ ಕಂಪ್ಯೂಟರ್ ಪ್ರೋಗ್ರಾಮ್ ರೂಪಿಸಲಾಗಿತ್ತು. ಇದರ ನಿರ್ವಹಣೆ ಜವಾಬ್ದಾರಿಯನ್ನು ಆಂಧ್ರಪ್ರದೇಶದ ನರಸಿಂಹರಾವ್ ವಹಿಸಿಕೊಂಡಿದ್ದ. ಈತ ಆರೋಪಿಗಳ ಕೃತ್ಯಕ್ಕೆ ಅನುಕೂಲವಾಗುವಂತೆ ಪ್ರೋಗ್ರಾಮ್ ತಿದ್ದುಪಡಿ ಮಾಡಿದ್ದಾನೆ ಎಂಬುದು ತನಿಖೆಯಿಂದ ಗೊತ್ತಾಗಿದೆ. ಈತನನ್ನು ಆಂಧ್ರದಲ್ಲಿ ಬಂಧಿಸಿ ನಗರಕ್ಕೆ ಕರೆತರಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಮತ್ತಷ್ಟು ಅಧಿಕಾರಿಗಳಿಗೆ ನೋಟಿಸ್'

ಬಂಧಿತ ಆರೋಪಿಗಳು ನೀಡಿರುವ ಹೇಳಿಕೆ ಆಧರಿಸಿ ಮತ್ತಷ್ಟು ಸಹ ಶಿಕ್ಷಕರು ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ನೋಟಿಸ್ ನೀಡಲು ಸಿಐಡಿ ಅಧಿಕಾರಿಗಳು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

'ಪ್ರಕರಣದಲ್ಲಿ ಬಂಧಿಸಲಾಗಿರುವ ಮಾದೇಗೌಡ ಹಾಗೂ ಗೀತಾ, ಇತರೆ ಅಧಿಕಾರಿಗಳು ಹಾಗೂ ಕೆಲ ರಾಜಕಾರಣಿಗಳ ಅಣತಿಯಂತೆ ಕೆಲಸ ಮಾಡಿರುವ ಮಾಹಿತಿಯೂ ಇದೆ. ಈ ಸಂಬಂಧ ತನಿಖೆ ಮುಂದುವರಿಸಲಾಗಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

ದಸರಾಕ್ಕೆ ಚಾಲನೆ

ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಸೋಮವಾರ ಚಾಮುಂಡೇಶ್ವರಿ ಉತ್ಸವಮೂರ್ತಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪುಷ್ಪಾರ್ಚನೆ ಮಾಡಿ ದಸರಾ ಉತ್ಸವಕ್ಕೆ ಚಾಲನೆ ನೀಡಿದರು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ಇದ್ದಾರೆ ಪ್ರಜಾವಾಣಿ ಚಿತ್ರ/ಅನೂಪ್ ರಾಘ ಟಿ.

ದಸರಾ ಉತ್ಸವಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಚಾಲನೆ

'ಮಹಿಳಾ ಸಬಲೀಕರಣಕ್ಕೆ ಕರ್ನಾಟಕ ಮಾದರಿ'

• ಕೆ.ನರಸಿಂಹಮೂರ್ತಿ

ಮೈಸೂರು: ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನದ ಆವರಣದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅದ್ಧೂರಿ ನಾಡಹಬ್ಬ ದಸರಾಕ್ಕೆ ಸೋಮವಾರ ಚಾಲನೆ ನೀಡಿದರು. ರಾಷ್ಟ್ರಪತಿ ಆದ ನಂತರ ರಾಜ್ಯಕ್ಕೆ ಇದು ಅವರ ಮೊದಲ ಭೇಟಿ ಆಗಿದ್ದು ವಿಶೇಷ.

ಅಲ್ಲದೇ ದಸರಾ ಉತ್ಸವವನ್ನು ಉದ್ಘಾಟಿಸಿದ ಮೊದಲ ರಾಷ್ಟ್ರಪತಿ ಎಂಬ ಹೆಗ್ಗಳಿಕೆ ಅವರದು. ತಮ್ಮನ್ನು ಆಹ್ವಾನಿಸುವಾಗ ರಾಜ್ಯ ಸರ್ಕಾರ ನೀಡಿದ್ದ ಮೈಸೂರು ರೇಷ್ಮೆಸೀರೆಯನ್ನೇ ಉಟ್ಟುಕೊಂಡಿದ್ದ ಅವರು, ಸನ್ಮಾನಿಸಿದಾಗ ತೊಡಿಸಿದ ಮೈಸೂರು ಪೇಟವನ್ನು ಖುಷಿಯಿಂದ ಮುಟ್ಟಿ ಸಂಭ್ರಮಿಸಿದರು.

ಇದುವರೆಗೂ ರಾಜ್ಯಪಾಲರು, ಉಸ್ತುವಾರಿ ಸಚಿವರು, ರೈತರು, ಲೇಖಕರು, ನಟ-ನಟಿಯರು, ರಾಜಕಾರಣಿಗಳು, ವೈದ್ಯರು ಉತ್ಸವವನ್ನು ಉದ್ಘಾಟಿಸಿದ್ದರು. ಇದೇ ಮೊದಲಿಗೆ ದೇಶದ ಪ್ರಥಮ ಪ್ರಜೆಯ ಆಗಮನದಿಂದ ಬೆಟ್ಟವು ವಿಶೇಷವಾಗಿ ಕಳೆಗಟ್ಟಿತ್ತು. ಸೇರಿದ್ದ ಎಲ್ಲರಲ್ಲೂ ಸಂಭ್ರಮ ಮನೆ ಮಾಡಿತ್ತು.

ಬೃಹತ್ ವೇದಿಕೆಯ ಮೇಲೆ ಬೆಳ್ಳಿ-ರಥದಲ್ಲಿ ಕುಳಿತ ನಾಡದೇವಿ ತಾಯಿ ಚಾಮುಂಡೇಶ್ವರಿಯ ಉತ್ಸವಮೂರ್ತಿಗೆ ಆರತಿ ಬೆಳಗಿ, ಪುಷ್ಪಾರ್ಚನೆ ಮಾಡಿ, ದೀಪ ಬೆಳಗಿ ಅವರು ಉತ್ಸವಕ್ಕೆ ವಿಧ್ಯುಕ್ತ ಚಾಲನೆ ನೀಡಿದರು.

ನಂತರ ಮಾತನಾಡುತ್ತಾ, 'ಭಕ್ತಿ, ಸಮಾನತೆ ಮತ್ತು ಮಹಿಳಾ ಸಬಲೀಕರಣದ ಐತಿಹಾಸಿಕ ಆದರ್ಶವು ಹೊರಹೊಮ್ಮಿದ ರಾಜ್ಯ ಕರ್ನಾಟಕ' ಎಂದು ಮುರ್ಮು ಬಣ್ಣಿಸಿದರು.

'ಶ್ರೀಮಂತ ಆಧ್ಯಾತ್ಮಿಕ ಪರಂಪರೆಯುಳ್ಳ ರಾಜ್ಯದಲ್ಲಿ 12ನೇ ಶತಮಾನದಲ್ಲಿ ಬಸವಣ್ಣ, ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿ ಮುಕ್ತಿಯ ಚಿಂತನೆಯ ಜೊತೆಗೆ ಎಲ್ಲ ಜಾತಿ ಜನರನ್ನೂ ಒಗ್ಗೂಡಿಸಿದ್ದರು. ಅನುಭವ ಮಂಟಪ ಸ್ಥಾಪಿಸಿದ ಬಸವಣ್ಣ ಆಧ್ಯಾತ್ಮಿಕ ಮತ್ತು ಸಾಮಾಜಿಕ ವಿಷಯಗಳ ಚರ್ಚೆಗೆ ವೇದಿಕೆ ಒದಗಿಸಿದ್ದರು. ಆದಿ ಶಂಕರಾಚಾರ್ಯರು ಶೃಂಗೇರಿಯಲ್ಲಿ ಶಾರದಾ ಪೀಠ ಸ್ಥಾಪಿಸಿದರು. ರಾಜ್ಯದಲ್ಲಿ ಭಕ್ತಿ ಮಾರ್ಗದ ಜೊತೆಗೆ ವಚನ ಗಾಯನ, ಕೇಳುವ ಪರಂಪರೆ ಇಂದಿಗೂ ಮುಂದುವರಿದಿದೆ' ಎಂದರು.

'ದಸರಾ ಭಾರತೀಯ ಸಂಸ್ಕೃತಿಯ ಹೆಮ್ಮೆ. ಮಹಿಳಾ ಶಕ್ತಿ ಗೌರವಿಸುವ ಉತ್ಸವ. ಪ್ರೀತಿ, ಕರುಣೆ, ಕಾಳಜಿ ಮತ್ತು ತ್ಯಾಗವೇ ಮೈವೆತ್ತ ಮಹಿಳೆಯು ಅನ್ಯಾಯ, ಅಧರ್ಮದ ವಿರುದ್ಧ ದುರ್ಗ, ಚಂಡಿಕಾ ಮತ್ತು ಚಾಮುಂಡಿಯ ಅವತಾರಗಳನ್ನು ಎತ್ತುತ್ತಾಳೆ. ಹೀಗಾಗಿಯೇ ನವರಾತ್ರಿಯಲ್ಲಿ ಮಹಿಳಾ ಶಕ್ತಿಯ ಆರಾಧನೆ ನಡೆಯುತ್ತದೆ. ಮಹಿಳಾ ಸಬಲೀಕರಣದ ಪ್ರಯತ್ನಗಳು ಹೆಚ್ಚಬೇಕು' ಎಂದು ಹೇಳಿದರು.

'ಶತ್ರುಗಳ ವಿರುದ್ಧ ಹೋರಾಡಿದ ರಾಣಿ ಅಬ್ಬಕ್ಕ, ಕಿತ್ತೂರು ರಾಣಿ ಚೆನ್ನಮ್ಮ, ಒನಕೆ ಓಬವ್ವ ಮಾದರಿಗಳಾಗಿದ್ದಾರೆ. ಈಗಲೂ ಹಲವು ಕ್ಷೇತ್ರಗಳಲ್ಲಿ ಮಹಿಳೆಯರು ಗಮನ ಸೆಳೆಯುವಂಥ ಸಾಧನೆ ಮಾಡಿದ್ದಾರೆ. ಇಷ್ಟಾಗಿಯೂ ಉತ್ತಮ ಸಮಾಜಕ್ಕಾಗಿ ಮಹಿಳೆಯರಿಗೆ ಇನ್ನಷ್ಟು ಅವಕಾಶಗಳು ದೊರಕಬೇಕು' ಎಂದು ಪ್ರತಿಪಾದಿಸಿದರು.

5ನೇ ಪುಟ ನೋಡಿ

ತಾಲ್ಲೂಕು, ಜಿಲ್ಲಾ ಪಂಚಾಯಿತಿ ಚುನಾವಣೆಗೆ 12 ವಾರ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 31 ಜಿಲ್ಲಾ ಪಂಚಾಯಿತಿ ಹಾಗೂ 239 ತಾಲ್ಲೂಕು ಪಂಚಾಯಿತಿಗಳ ಚುನಾವಣೆಗೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳು ಸೇರಿದಂತೆ ಎಲ್ಲ ರೀತಿಯ ಮೀಸಲಾತಿಯನ್ನು 12 ವಾರದೊಳಗೆ ಮರು ನಿಗದಿಪಡಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶಿಸಿದೆ.

ಕರ್ನಾಟಕ ಪಂಚಾಯತ್ ರಾಜ್ ಹಾಗೂ ಗ್ರಾಮ ಸ್ವರಾಜ್ (ತಿದ್ದುಪಡಿ) ಕಾಯ್ದೆ- 2021ರ ಜಾರಿಗೆ ಸಂಬಂಧಿಸಿದಂತೆ ಸರ್ಕಾರ ಹೊರಡಿಸಿದ್ದ ಗೆಜೆಟ್ ಅಧಿಸೂಚನೆ ಪ್ರಶ್ನಿಸಿ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ಹಾಗೂ ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ ನೇತೃತ್ವದ ವಿಭಾಗೀಯ ನ್ಯಾಯಪೀಠವು, ಸರ್ಕಾರ ಕೇಳಿದ್ದ ಆರು ತಿಂಗಳ ಸಮಯಾವಕಾಶದ ಬದಲಿಗೆ 12 ವಾರಗಳ ಗಡುವು ನೀಡಿ ವಿಚಾರಣೆ ಮುಂದೂಡಿದೆ.

ರಾಜ್ಯದಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಪುನರ್‌ವಿಂಗಡಣೆ (ಗಡಿ ನಿರ್ಣಯ) ಮತ್ತು ಮೀಸಲಾತಿ ನಿಗದಿಪಡಿಸುವ ಅಧಿಕಾರವನ್ನು ರಾಜ್ಯ ಚುನಾವಣಾ

ಆಯೋಗದಿಂದ ಹಿಂಪಡೆದಿದ್ದ ಸರ್ಕಾರ, ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ ರಚಿಸಲು ಕಾಯ್ದೆಗೆ ತಿದ್ದುಪಡಿ ತಂದಿದೆ. ಅದನ್ನು ರಾಜ್ಯ ಚುನಾವಣಾ ಆಯೋಗ ಈಗಾಗಲೇ ಬಲವಾಗಿ ಆಕ್ಷೇಪಿಸಿದೆ.

7ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ರಾಜಸ್ಥಾನ: ಕಾಂಗ್ರೆಸ್ ಶಾಸಕರ ಬಂಡಾಯದಿಂದ ನಾಯಕತ್ವಕ್ಕೆ ಅಸಮಾಧಾನ

ಗೆಹಲೋತ್ ಮೇಲೆ ಸೋನಿಯಾ ಗರಂ?

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಬೆಂಬಲಿಗ ಶಾಸಕರ 'ಬಂಡಾಯ'ವು ಪಕ್ಷದ ಅಧ್ಯಕ್ಷ ಸ್ಥಾನದ ಚುನಾವಣೆಯ ಉತ್ಸಾಹಕ್ಕೆ ತಣ್ಣೀರೆರಚಿದೆ. ಅಧ್ಯಕ್ಷ ಸ್ಥಾನದ ಅಭ್ಯರ್ಥಿಯಾಗುವ ಸಾಧ್ಯತೆ ಇದ್ದ ಗೆಹಲೋತ್ ಬಗ್ಗೆ ಪಕ್ಷದ ಹೈಕಮಾಂಡ್ ಅಸಮಾಧಾನಗೊಂಡಿದೆ ಎಂದು ಹೇಳಲಾಗಿದೆ.

'ಅಶಿಸ್ತು' ತೋರಿದ ಶಾಸಕರ ಮೇಲೆ ಶಿಸ್ತುಕ್ರಮದ ಸಾಧ್ಯತೆಯನ್ನೂ ಪಕ್ಷ ಪರಿಶೀಲಿಸುತ್ತಿದೆ. ಶಾಸಕಾಂಗ ಪಕ್ಷದ ಸಭೆಗೆ ಗೈರುಹಾಜರಾಗಿದ್ದ ಶಾಸಕರು ಪರ್ಯಾಯ ಸಭೆಯನ್ನೂ ನಡೆಸಿದ್ದರು. ರಾಜಸ್ಥಾನ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಗೆಹಲೋತ್ ಅವರು ಪಕ್ಷದ ಅಧ್ಯಕ್ಷರಾಗುವ ಸಾಧ್ಯತೆಗಳು ಕ್ಷೀಣಿಸಿದ್ದು, ಪಕ್ಷದ ಉನ್ನತ ಸ್ಥಾನಕ್ಕೆ ಇತರೆ ಹೆಸರುಗಳು ಚಾಲ್ತಿಗೆ ಬರುತ್ತಿವೆ.

ರಾಜಸ್ಥಾನ ಬೆಳವಣಿಗೆ ಬಗ್ಗೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು 'ತೀವ್ರ ಅಸಮಾಧಾನ'ಗೊಂಡಿದ್ದಾರೆ ಎಂದು ಹೇಳಲಾಗಿದೆ. ರಾಜಸ್ಥಾನದ ಬೆಳವಣಿಗೆಗಳ ಬಗ್ಗೆ ವಿವರವಾದ ಲಿಖಿತ ವರದಿ ನೀಡುವಂತೆ ವೀಕ್ಷಕರಾದ ಮಲ್ಲಿಕಾರ್ಜುನ ಖರ್ಗೆ ಮತ್ತು ಅಜಯ ಮಾಕನ್ ಅವರಿಗೆ ಸೂಚಿಸಿದ್ದಾರೆ.

ಮೂಲಗಳ ಪ್ರಕಾರ, ಖರ್ಗೆ ಮತ್ತು ಮಾಕನ್ ಅವರು ಪಕ್ಷದ ಅಧ್ಯಕ್ಷೆ ಸೋನಿಯಾಗಾಂಧಿ ಅವರಿಗೆ ಮಂಗಳವಾರ ಲಿಖಿತ ವರದಿ ಸಲ್ಲಿಸುವರು. ರಾಜಸ್ಥಾನ ಬೆಳವಣಿಗೆಗಳ ಹಿಂದೆ ಪ್ರಮುಖ ಪಾತ್ರವಹಿಸಿದ್ದಾರೆ ಎನ್ನಲಾದ ಸಚಿವ ಶಾಂತಿ ಧರಿವಾಲ್ ಮತ್ತು ರಾಜಸ್ಥಾನ ಕಾಂಗ್ರೆಸ್‌ನ ಮುಖ್ಯ ಸಚೇತಕ ಮಹೇಶ್ ಜೋಶಿ ವಿರುದ್ಧ ಶಿಸ್ತುಕ್ರಮಕ್ಕೆ ಶಿಫಾರಸು ಮಾಡುವ ನಿರೀಕ್ಷೆಯಿದೆ.

ಬೆಂಬಲಿಗರ ರಾಜೀನಾಮೆ: ಈ ಮಧ್ಯೆ, ಗೆಹಲೋತ್ ಬೆಂಬಲಿಗ ಶಾಸಕರು, ಗೆಹಲೋತ್ ಅವರು ಪಕ್ಷದ ಅಧ್ಯಕ್ಷರಾಗಿ ಆಯ್ಕೆ ಆದಲ್ಲಿ ಅವರ ಬಣದವರನ್ನೇ ಮುಖ್ಯಮಂತ್ರಿ ಸ್ಥಾನಕ್ಕೆ ಆಯ್ಕೆ ಮಾಡಬೇಕು ಎಂದು ಹೈಕಮಾಂಡ್ ಮೇಲೆ ಒತ್ತಡ ಹೇರುವ ಕ್ರಮವಾಗಿ ಸ್ಪೀಕರ್ ಸಿ.ಪಿ.ಜೋಶಿ ಅವರಿಗೆ ಭಾನುವಾರ ಸಂಜೆಯೇ ರಾಜೀನಾಮೆ ಸಲ್ಲಿಸಿದ್ದಾರೆ.

6A ಪುಟ ನೋಡಿ

ಕಮಲನಾಥ್ ಮಧ್ಯಸ್ಥಿಕೆ?

ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಮತ್ತು ಕಾಂಗ್ರೆಸ್ ಹಿರಿಯ ನಾಯಕ ಕಮಲನಾಥ್ ಅವರು ಸೋಮವಾರ ಮಧ್ಯಾಹ್ನ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡಿದ್ದಾರೆ. ರಾಜಸ್ಥಾನದ ಬಿಕ್ಕಟ್ಟು ನಿವಾರಣೆಯಲ್ಲಿ ಅವರು ಮಧ್ಯಸ್ಥಿಕೆ ವಹಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಗೆಹಲೋತ್ ಅವರ ಜತೆಗೆ ಕಮಲನಾಥ್ ಅವರು ಆಪ್ತ ಸಂಬಂಧ ಹೊಂದಿದ್ದಾರೆ. ಹೀಗಾಗಿಯೇ ಅವರನ್ನು ಮಧ್ಯಸ್ಥಿಕೆಗೆ ಕಳುಹಿಸುವ ಸಾಧ್ಯತೆ ಅತ್ಯಧಿಕವಾಗಿದೆ ಎಂದು ಮೂಲಗಳು ಹೇಳಿವೆ.

ಮೂರು ಷರತ್ತು

- ಅಧ್ಯಕ್ಷ ಸ್ಥಾನದ ಚುನಾವಣೆಯ ಮತ ಎಣಿಕೆ ಪ್ರಕ್ರಿಯೆ ಮುಗಿಯುವ ಅ. 19ರವರೆಗೆ ರಾಜಸ್ಥಾನ ಕಾಂಗ್ರೆಸ್ ಕುರಿತು ಯಾವುದೇ ತೀರ್ಮಾನ ತೆಗೆದುಕೊಳ್ಳಬಾರದು.
- ಗೆಹಲೋತ್ ಬೆಂಬಲಿಗ ಶಾಸಕರು ವೀಕ್ಷಕರನ್ನು ಪ್ರತ್ಯೇಕವಾಗಿ ಭೇಟಿ ಮಾಡುವುದಿಲ್ಲ. ಬದಲಾಗಿ ಗುಂಪುಗಳಲ್ಲಿ ಬಂದು ಚರ್ಚಿಸಲು ಅವಕಾಶ ಕಲ್ಪಿಸಬೇಕು
- ಗೆಹಲೋತ್ ಪರ ಇರುವ 102 ಶಾಸಕರಲ್ಲಿಯೇ ಒಬ್ಬರನ್ನು ಮುಂದಿನ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಬೇಕು.

‘ಕೈ ಯಾತ್ರೆ: ಭಾಗವಹಿಸಲು ನಿರ್ಧರಿಸಿಲ್ಲ’

ಗುಬ್ಬಿ: ‘ಕಾಂಗ್ರೆಸ್ ಪಕ್ಷದ ಭಾರತ್ ಜೋಡೋ ಯಾತ್ರೆಯಲ್ಲಿ ಭಾಗವಹಿಸುವ ಬಗ್ಗೆ ನಿರ್ಧಾರ ತೆಗೆದುಕೊಂಡಿಲ್ಲ’ ಎಂದು ಶಾಸಕ ಎಸ್.ಆರ್. ಶ್ರೀನಿವಾಸ್ ಸೋಮವಾರ ತಿಳಿಸಿದರು.

ತಾಲ್ಲೂಕಿನ ಬಿದರೆಯಲ್ಲಿ ಡಿಜಿಟಲ್ ಗ್ರಂಥಾಲಯ ಉದ್ಘಾಟಿಸಿ ಮಾತನಾಡಿದ ಅವರು, ‘ಭಾರತ್ ಜೋಡೋ ಯಾತ್ರೆಯಲ್ಲಿ ರಾಷ್ಟ್ರ ನಾಯಕರು ಬರುತ್ತಿದ್ದು, ಶಾಸಕನಾಗಿ ಅವರನ್ನು ಸ್ವಾಗತಿಸುತ್ತೇನೆ ಎಂದರು.

‘ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಸೇರಿದಂತೆ ಹಲವು ಕಾಂಗ್ರೆಸ್ ನಾಯಕರು ಪಾದಯಾತ್ರೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದ್ದಾರೆ’ ಎಂದು ಸ್ಪಷ್ಟಪಡಿಸಿದರು.

ಬೆಂಗಳೂರು ವಿಶ್ವವಿದ್ಯಾಲಯ

NAAC Accredited with 'A' GRADE

ಜ್ಞಾನಭಾರತಿ, ಬೆಂಗಳೂರು-560 056.

ಸಂಖ್ಯೆ: ಇಎಸ್‌ಟಿ-1/ಇ4/ಯು.ಎ/2002 ದಿನಾಂಕ: 19.09.2022

ಪ್ರಕಟಣೆ

ಶ್ರೀ. ಎಂ. ಉಮಾಶಂಕರ್, ಗ್ರೂಪ್ ಡಿ ನೌಕರ, ಪರೀಕ್ಷಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರು 19.02.2014 ರಿಂದ ಈ ದಿನದವರೆಗೂ ಮೇಲಾಧಿಕಾರಿಗಳಿಗೆ ಯಾವುದೇ ಸೂಚನೆ ನೀಡದೆ ಕರ್ತವ್ಯದಿಂದ ಅನಧಿಕೃತವಾಗಿ ಗೈರುಹಾಜರಾಗಿದ್ದು, ಇವರ ಅನಧಿಕೃತ ಗೈರುಹಾಜರಿಗೆ ದಿನಾಂಕ: 31.12.2015 ರಂದು ಪತ್ರಿಕಾ ಪ್ರಕಟಣೆಯ ಮೂಲಕ ಸೂಚನಾ ಪತ್ರಗಳನ್ನು ಜಾರಿ ಮಾಡಲಾಗಿದ್ದರೂ ಸಹ ಕರ್ತವ್ಯಕ್ಕೆ ಹಾಜರಾಗದ ಹಿನ್ನೆಲೆಯಲ್ಲಿ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲಾಯಿತು. ನಂತರ ಇಲಾಖಾ ವಿಚಾರಣಾ ಸಮಿತಿಯು ವಿಚಾರಣೆಗೆ ಹಾಜರಾಗಲು ದಿನಾಂಕ: 26.02.2018 ರಂದು ಪತ್ರಿಕಾ ಪ್ರಕಟಣೆಯ ಮೂಲಕ ಸೂಚನಾ ಪತ್ರಗಳನ್ನು ಜಾರಿ ಮಾಡಲಾಗಿದ್ದರೂ ಸಹ ಕರ್ತವ್ಯಕ್ಕೆ ಹಾಗೂ ವಿಚಾರಣೆಗೆ ಹಾಜರಾಗದ ಹಿನ್ನೆಲೆಯಲ್ಲಿ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮ 108 ಮತ್ತು ಸರ್ಕಾರದ ಸುತ್ತೋಲೆ ದಿನಾಂಕ: 14.09.2001 ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 28.5 ರನ್ವಯ ಕ್ರಮಕೈಗೊಳ್ಳಲು ವರದಿಯನ್ನು ಸಲ್ಲಿಸಲಾಯಿತು. ಸದರಿ ವರದಿಯನ್ನು ದಿನಾಂಕ: 17.08.2022 ರಂದು ನಡೆದ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿತ್ತು. ಸದರಿ ಸಭೆಯ ನಿರ್ಣಯದನುಸಾರ ವಿಶ್ವವಿದ್ಯಾಲಯದ ಆದೇಶ ದಿನಾಂಕ: 06.09.2022 ರಲ್ಲಿ ಶ್ರೀ. ಉಮಾಶಂಕರ್. ಎಂ ಇವರನ್ನು ದಿನಾಂಕ: 19.02.2014 ರಿಂದ ಅನ್ವಯವಾಗುವಂತೆ ವಿಶ್ವವಿದ್ಯಾಲಯದ ಸೇವೆಯಿಂದ ವಜಾಗೊಳಿಸಿ, ಆದೇಶಿಸಲಾಗಿದೆ. ಸದರಿ ಆದೇಶದ ಪ್ರತಿಯನ್ನು ಶ್ರೀ. ಉಮಾಶಂಕರ್. ಎಂ ರವರ ಮನೆ ವಿಳಾಸ ನಂ.37/5, ಶನಿಮಹಾತ್ಮ ದೇವಸ್ಥಾನದ ರಸ್ತೆ ಹಿಂಭಾಗ, ಎಂ.ಪಿ.ಎಂ ಲೇಔಟ್ ಹತ್ತಿರ, 3ನೇ ಕ್ರಾಸ್, ಮಲ್ಲತ್ತಹಳ್ಳಿ, ಬೆಂಗಳೂರು-56 ಇಲ್ಲಿಗೆ ರಿಜಿಸ್ಟರ್ ಪೋಸ್ಟ್ ನೊಂದಣಿಯ ಅಂಚೆ (ಆರ್‌ಕೆ659748735ಐಎನ್) ಮುಖಾಂತರ ದಿನಾಂಕ: 08.09.2022 ರಂದು ಕಳುಹಿಸಲಾಗಿತ್ತು. ಈ ವಿಳಾಸದಲ್ಲಿ ಶ್ರೀ. ಉಮಾಶಂಕರ್. ಎಂ ರವರು ಲಭ್ಯವಿರದ ಕಾರಣ ಪತ್ರವು ದಿನಾಂಕ: 15.09.2022 ರಂದು ವಿಶ್ವವಿದ್ಯಾಲಯದ ಕಛೇರಿಗೆ ಹಿಂದಿರುಗಿಸಿರುತ್ತಾರೆ.

ಆದ ಕಾರಣ ಶ್ರೀ. ಉಮಾಶಂಕರ್. ಎಂ, ಗ್ರೂಪ್ ಡಿ, ಪರೀಕ್ಷಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ನಿಮಗೆ ವಿಶ್ವವಿದ್ಯಾಲಯದ ಸೇವೆಯಿಂದ ವಜಾಗೊಳಿಸಿರುವ ಬಗ್ಗೆ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಲಾಗಿದೆ.

ಸಹಿ/-,
ಕುಲಸಚಿವರು

ದಸರಾ: ಎರಡು ಸಾವಿರ ವಿಶೇಷ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಸರಾ ಹಬ್ಬದ ನಿಮಿತ್ತ ಪ್ರವಾಸಿಗರಿಗಾಗಿ ಹೆಚ್ಚುವರಿ 2 ಸಾವಿರ ಬಸ್‌ಗಳ ಕಾರ್ಯಾಚರಣೆಗೆ ಕೆಎಸ್‌ಆರ್‌ಟಿಸಿ ವ್ಯವಸ್ಥೆ ಮಾಡಿದೆ.

ಸೆ.30ರಿಂದ ಅ.3ರವರೆಗೆ ಬೆಂಗಳೂರಿನಿಂದ ರಾಜ್ಯ ಮತ್ತು ಹೊರ ರಾಜ್ಯದ ವಿವಿಧ ಸ್ಥಳಗಳಿಗೆ ಹಾಗೂ ಅ.7ರಿಂದ 10ರವರೆಗೆ ಹೊರ ರಾಜ್ಯ, ಜಿಲ್ಲೆಗಳಿಂದ ಬೆಂಗಳೂರಿಗೆ ಕಾರ್ಯಾಚರಣೆ ಮಾಡಲಿವೆ.

ಧರ್ಮಸ್ಥಳ, ಕುಕ್ಕೆಸುಬ್ರಹ್ಮಣ್ಯ, ಶೃಂಗೇರಿ, ಹೊರನಾಡು, ಶಿವಮೊಗ್ಗ, ಮಡಿಕೇರಿ, ಮಂಗಳೂರು, ದಾವಣಗೆರೆ, ಗೋಕರ್ಣ, ಕೊಲ್ಲೂರು, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಕಾರವಾರ, ಬಳ್ಳಾರಿ, ಹೊಸಪೇಟೆ, ಕಲಬುರಗಿ, ರಾಯಚೂರು, ಹೈದರಾಬಾದ್, ಚೆನ್ನೈ, ಊಟಿ, ಕೊಡೈಕೆನಾಲ್, ಸೇಲಂ, ತಿರುಚಿನಾಪಳ್ಳಿ, ಪುದುಕೋಟೈ, ಮದುರೈ, ಪಣಜಿ, ಶಿರಡಿ, ಏರ್ನಾಕುಲಂ, ಪಾಲ್ಘಾಟ್, ಪುಣೆಗೆ ವಿಶೇಷ ಬಸ್‌ಗಳು ತೆರಳಲಿವೆ.

ಮೈಸೂರು ದಸರಾಕ್ಕೆ 450 ಬಸ್: ಮೈಸೂರು ದಸರಾ ವೀಕ್ಷಣೆಗೆ ತೆರಳುವ ಪ್ರವಾಸಿಗರಿಗೆ ನೆರವಾಗಲು 450 ಬಸ್‌ಗಳನ್ನು ಹೆಚ್ಚುವರಿಯಾಗಿ ವ್ಯವಸ್ಥೆ ಮಾಡಲಾಗಿದೆ. ಬೆಂಗಳೂರಿನಿಂದ 200 ಬಸ್‌ಗಳು ಮೈಸೂರಿಗೆ ಸಂಚರಿಸಲಿವೆ. ಮೈಸೂರಿನ ಸುತ್ತಮುತ್ತಲ ಸ್ಥಳಗಳಾದ ಚಾಮುಂಡಿಬೆಟ್ಟ, ಕೆ.ಆರ್.ಎಸ್. ಅಣೆಕಟ್ಟು, ಶ್ರೀರಂಗಪಟ್ಟಣ, ನಂಜನಗೂಡು, ಮಡಿಕೇರಿ, ಮಂಡ್ಯ, ಎಚ್.ಡಿ.ಕೋಟೆ, ಚಾಮರಾಜನಗರ ಸೇರಿ ವಿವಿಧೆಡೆಗೆ 250 ಬಸ್‌ಗಳು ಕಾರ್ಯಾಚರಣೆ ಮಾಡಲಿವೆ.

ನಾಲ್ಕು ಅಥವಾ ಅದಕ್ಕಿಂತ ಹೆಚ್ಚು ಪ್ರಯಾಣಿಕರು ಒಟ್ಟಿಗೆ ಮುಂಗಡ ಟಿಕೆಟ್ ಕಾಯ್ದಿರಿಸಿದರೆ ಶೇ 5ರಷ್ಟು ರಿಯಾಯಿತಿ, ಹೋಗುವ ಮತ್ತು ಬರುವ ಪ್ರಯಾಣದ ಟಿಕೆಟ್‌ಗಳನ್ನು ಒಟ್ಟಿಗೆ ಕಾಯ್ದಿರಿಸಿದರೆ ಹಿಂದಿರುಗುವ ಪ್ರಯಾಣ ದರದಲ್ಲಿ ಶೇ 10ರಷ್ಟು ರಿಯಾಯಿತಿ ನೀಡಲಾಗುವುದು ಎಂದು ವಿವರಿಸಿದೆ.

PUBLIC NOTICE

Our clients are investigating the title of all that piece and parcel of agricultural lands bearing Survey Nos. 14/2(p), 15/1, 15/3, 90/2, 90/3, 95/1, 95/3, 96/3, 96/4 and 132 all situated at Tarahunse Village, Jala Hobli, Yelahanka Taluk, Bangalore Urban District, morefully described in Item Nos.1 to 10 in the Schedule hereunder **("Schedule Property")**, from its present owners whose names are set out against their respective items **("Owners")**.

Any person or persons asserting any right, title, interest or claim in the Schedule Property or any part thereof, in any manner whatsoever or having any claim against the Schedule Property or the documents thereof or against the Owners or objecting to such transaction with our clients, should write to the undersigned within fifteen **(15) days** from the date of issuance of this notice with all documentary proof on which they are basing and asserting their rights with regard to Schedule Property or any part thereof, after which period our clients shall proceed on the basis that there are no claims of whatsoever nature with regard to the Schedule Property.

SCHEDULE

All that piece and parcel of agricultural lands, all situated at Tarahunse Village, Jala Hobli, Yelahanka Taluk, Bangalore Urban District, measuring in all about 8 Acres 13 ½ Guntas, detailed in the manner set out in the table herein below:-

Item No.	Survey No.	Name of the Owner	Actual Extent		Kharab		Boundaries			
			A	G	A	G	East	West	North	South
1	14/2(p)	Sanjeevappa s/o late Munishamappa & his family	0	08	0	0	Sy No. 14/3	Remaining portion of Sy No. 14/2	Sy No.14/1	Sy No.12
2	15/1	N. Radhakrishna s/o Nanjundappa	0	20	0	02	Sy No. 15/2	Sy Nos. 16 & 87	Sy No.15/3	Sy No.14
3	15/3	N. Radhakrishna s/o Nanjundappa	0	20	0	0	Sy No.15/2	Sy No.87	Sy No.93	Sy No. 15/1 & kaluve
4	90/2	N. Radhakrishna s/o Nanjundappa	0	20	0	02	Sy No. 148	Sy No.90/3	Sy No.89	Sy No.90/1
5	90/3	N. Radhakrishna s/o Nanjundappa	0	20	0	0	Sy No. 90/2	Sy No.87	Sy No.89	Sy No. 90/1
6	95/1	Munikempaiah s/o late Akkappa & his family	1	20	0	0	Kaluve & Sy No. 96/1	Sy No.94	Sy No.91	Sy No.95/2
7	95/3	Munikempaiah s/o late Akkappa & his family & Kempamma w/o late Gubbi Appaiah & her family	2	01	0	0	Kaluve & Sy No. 96/1	Sy No.94	Sy No.95/2	Sy No.100 (tank)
8	96/3	N. Radhakrishna s/o Nanjundappa	1	7 ½	0	1 ½	Sy No. 96/4	Sy No. 96/7	Sy Nos. 235 & 148	Sy No. 96/7 & kaluve
9	96/4	N. Radhakrishna s/o Nanjundappa	0	35	0	03	Sy No.223	Sy No.96/3	Sy No.148	Sy No. 96/9
10	132	N. Radhakrishna s/o Nanjundappa	0	22	0	01	Sy No.135	Sy No.115	Sy No.131	Sy No.133
Total			8	13 ½	0	9 ½				

Approved by: (1) Radhakrishna (2) Sanjeevappa (3) Munikempaiah (4) Kempamma

Sd/- Advocate
IndusLaw, No.34, 7th Cross, Vasanthnagar, Bangalore-560 001. Phone: 91-80-42423000

3,673 ಪೌರ ಕಾರ್ಮಿಕರ ನೇಮಕಕ್ಕೆ ನಿಯಮ: ಆಕ್ಷೇಪಣೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ (ಬಿಬಿಎಂಪಿ) ಖಾಲಿ ಇರುವ 3,673 ಪೌರ ಕಾರ್ಮಿಕರ ನೇಮಕಾತಿಗೆ ಸಂಬಂಧಿಸಿದಂತೆ ರಚಿಸಲಾದ ‘ವಿಶೇಷ ನಿಯಮಗಳು– 2022’ಕ್ಕೆ ಆಕ್ಷೇಪಣೆ ಸಲ್ಲಿಸಲು ಏಳು ದಿನಗಳ ಕಾಲಾವಕಾಶ ನೀಡಿದೆ.

ನೇಮಕಾತಿ ನಿಯಮಗಳ ಪ್ರಕಾರ, ಬಿಬಿಎಂಪಿಯಲ್ಲಿ ನೇರ ಪಾವತಿ, ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ ಆಧಾರದಲ್ಲಿ ಕನಿಷ್ಠ ಎರಡು ವರ್ಷ ಕೆಲಸ ಮಾಡಿರುವ, ಕನ್ನಡ ಭಾಷೆ ಮಾತನಾಡಲು ಗೊತ್ತಿರುವ, ದೈಹಿಕ ದೃಢತೆ (ಸರ್ಕಾರಿ ಆಸ್ಪತ್ರೆಯ ಸಕ್ಷಮ ಪ್ರಾಧಿಕಾರದಿಂದ ವೈದ್ಯಕೀಯ ಪ್ರಮಾಣಪತ್ರ ಪಡೆದಿರಬೇಕು) ಇರುವವರು ಈ ಹುದ್ದೆಗೆ ಅರ್ಜಿ ಸಲ್ಲಿಸಬಹುದು. ಗರಿಷ್ಠ ವಯೋಮಿತಿ 55 ವರ್ಷ. ವೇತನ ಶ್ರೇಣಿ ₹ 17,000ದಿಂದ ₹ 28,950.

ಆದರೆ, ಎರಡು ವರ್ಷಗಳಿಗಿಂತಲೂ ಹೆಚ್ಚು ಅವಧಿಯಿಂದ ಕೆಲಸ ಮಾಡುತ್ತಿರುವವರಿಗೆ ಆದ್ಯತೆ ನೀಡಲಾಗುತ್ತದೆ. ಅದಕ್ಕೆ ಸಂಬಂಧಿಸಿದಂತೆ ಬಿಬಿಎಂಪಿಯಿಂದ ವೇತನ ಪಡೆದ ದಾಖಲೆಗಳನ್ನು ಸಲ್ಲಿಸಬೇಕು. ಮುಖ್ಯ ಆಯುಕ್ತರ ಅಧ್ಯಕ್ಷತೆಯ 10 ಮಂದಿ ಅಧಿಕಾರಿಗಳನ್ನು ಒಳಗೊಂಡ ಆಯ್ಕೆ ಸಮಿತಿ ಅರ್ಹರನ್ನು ಆಯ್ಕೆ ಮಾಡಲಿದೆ.

ಅಭ್ಯರ್ಥಿಗಳ ವಯಸ್ಸನ್ನು ಶೈಕ್ಷಣಿಕ ದಾಖಲಾತಿ, ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಪಡಿತರ ಚೀಟಿ ಆಧರಿಸಿ ಪರಿಗಣಿಸಲು ನಿಯಮದಲ್ಲಿ ಅವಕಾಶ ನೀಡಲಾಗಿದೆ. ಮೀಸಲಾತಿ ಅನ್ವಯವೇ ನೇಮಕಾತಿ ನಡೆಯಲಿದೆ. ಆದರೆ, ಸಾಮಾನ್ಯ ವರ್ಗ ಮತ್ತು ಹಿಂದುಳಿದ ವರ್ಗದ ಅಭ್ಯರ್ಥಿಗಳು ಲಭ್ಯ ಇಲ್ಲದೇ ಇದ್ದರೆ, ಒಂದು ಬಾರಿ ಮಾತ್ರ ಅನ್ವಯಿಸುವಂತೆ ಎಸ್‌ಸಿ, ಎಸ್‌ಟಿ ವರ್ಗದವರನ್ನು ಪರಿಗಣಿಸಲು ಕೂಡ ಅವಕಾಶ ಕಲ್ಪಿಸಲಾಗಿದೆ.

ನೈಋತ್ಯ ರೈಲ್ವೆ

ಇ-ಟೆಂಡರ್ ಸೂಚನೆ ಸಂ.: BE-29-2022-23-OT-16-19

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಓಟಿ ಸಂ.	ಕಾಮಗಾರಿಯ ವಿವರ	ಅಂದಾಜು ಮೌಲ್ಯ
16	ವಲಯವಾರು ಒಪ್ಪಂದ: ಎಸ್‌ಎಸ್‌ಇ/ಪಿ/ಯಶವಂತಪುರ ವ್ಯಾಪ್ತಿಯೊಳಗೆ ಬೇಕಾದ ವಿದ್ಯುತ್ ಕಾಮಗಾರಿ.	ರೂ. 40,03,181/-
19	ವಲಯವಾರು ಒಪ್ಪಂದ: ಬೆಂಗಳೂರು ವಲಯದ ಎಸ್‌ಎಸ್‌ಇ/ಪಿ/ಕೆಎಸ್‌ಆರ್ ಬೆಂಗಳೂರು ವಿಭಾಗದ ಕೆಎಸ್‌ಆರ್ ಬೆಂಗಳೂರು-ಧರ್ಮಾವರಂನಲ್ಲಿ ಬೇಕಾದ ವಿದ್ಯುತ್ ಕಾಮಗಾರಿ.	ರೂ. 25,03,696/-
17	ವಲಯವಾರು ಒಪ್ಪಂದ: ಎಸ್‌ಎಸ್‌ಇ/ಪಿ/ಬೆಂಗಳೂರು ದಂಡು ವ್ಯಾಪ್ತಿಯಲ್ಲಿ ಬೆಂಗಳೂರು ದಂಡು-ಬಂಗಾರಪೇಟೆ (ಹೊರತುಪಡಿಸಿ) ವಿಭಾಗ, ಕೃಷ್ಣರಾಜಪುರ ಶೆಡ್, ಡೆಮು ಶೆಡ್, ಎಸ್‌ಜಿಟಿ, ಬೈಯಪ್ಪನಹಳ್ಳಿ ವಿಭಾಗಗಳಲ್ಲಿ ವಿದ್ಯುತ್ ಕಾಮಗಾರಿ ಹಾಗೂ ಇತರ ಅನುಸ್ಥಾಪನೆಗಳು.	ರೂ. 30,06,831/-
18	ವಲಯವಾರು ಒಪ್ಪಂದ: ಎಸ್‌ಎಸ್‌ಇ/ಪಿ/ಬಂಗಾರಪೇಟೆ ವ್ಯಾಪ್ತಿಯಲ್ಲಿ ಬಂಗಾರಪೇಟೆ-ಜೋಲಾರ್‌ಪೇಟೆ (ಹೊರತುಪಡಿಸಿ), ಬಂಗಾರಪೇಟೆ-ಮಾರಿಕುಪ್ಪಂ, ಬಂಗಾರಪೇಟೆ-ಕೋಲಾರ-ಚಿಕ್ಕಬಳ್ಳಾಪುರ (ಹೊರತುಪಡಿಸಿ), ವಿಭಾಗಗಳಲ್ಲಿ ವಿದ್ಯುತ್ ಕಾಮಗಾರಿ ಹಾಗೂ ಇತರ ಅನುಸ್ಥಾಪನೆಗಳು	ರೂ. 25,09,527/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:
ಓಟಿ ಸಂ. 16: 11.10.2022 ಮತ್ತು
ಓಟಿ ಸಂ. 19, 17 & 18: 18.10.2022
11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್
PUB/387/AAD/PRB/SWR/2022-23 ಬೆಂಗಳೂರು

S.W.Railways SWRRLY SWRRLY

ಶಾಲಾ ಸಮವಸ್ತ್ರ ವಿತರಣೆ ಪ್ರಕ್ರಿಯೆ ಅ.10ಕ್ಕೆ ಪೂರ್ಣ

ಬೆಂಗಳೂರು: ಶಾಲಾ ಮಕ್ಕಳಿಗೆ ಎರಡೂ ಜತೆ ಸಮವಸ್ತ್ರವನ್ನು ವಿತರಿಸುವ ಕಾರ್ಯ ಅ.10ರ ಒಳಗೆ ಪೂರ್ಣಗೊಳಿಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸೂಚಿಸಿದೆ.

ಈಗ ಒಂದು ಜತೆ ಸಮವಸ್ತ್ರ ವಿತರಣೆ ಕಾರ್ಯ ನಡೆದಿದೆ. ಶಾಲೆಗಳಿಗೆ ಬಟ್ಟೆಗಳ ಸಾಗಣೆಗೆ ತಲಾ ₹ 20 ಸಾವಿರದಂತೆ ಸರ್ಕಾರ ₹ 40.80 ಲಕ್ಷ ಬಿಡುಗಡೆ ಮಾಡಿದೆ. 204 ಬಿಇಒ ಕಚೇರಿ ವ್ಯಾಪ್ತಿಯಲ್ಲಿ ಒಟ್ಟು 48,285 ಶಾಲೆಗಳಿವೆ.

‘ಮೊದಲ ಒಂದು ಜತೆ ಸಮವಸ್ತ್ರ ವಿತರಣೆ ಸೆ.30ರ ಒಳಗೆ ಹಾಗೂ ಎರಡನೇ ಜತೆ ಸಮವಸ್ತ್ರ ವಿತರಣೆ ಕಾರ್ಯ ಅ.10ರ ಒಳಗೆ ಮುಗಿಸಬೇಕು. ಸಾಗಣೆ ವೆಚ್ಚವನ್ನು ಬಳಸಿದ ಕುರಿತು ದಾಖಲೆಗಳನ್ನು ನೀಡಬೇಕು’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತ ಆರ್.ವಿಶಾಲ್ ಸೂಚಿಸಿದ್ದಾರೆ.

ಸಂಚಾರ ದಟ್ಟಣೆ, ಜೋತುಬಿದ್ದ ಕೇಬಲ್‌ಗಳ ನಡುವೆ ಸಂಚಾರ ಕಷ್ಟ – ತಜ್ಞರ ಅಭಿಪ್ರಾಯ

ಮತ್ತೆ ಬರಲಿವೆ ಡಬಲ್ ಡೆಕ್ಕರ್ ಬಸ್

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ನಗರದಲ್ಲಿ ಡಬಲ್ ಡೆಕ್ಕರ್ ಬಸ್‌ಗಳ ಸಂಚಾರಕ್ಕೆ ಮತ್ತೊಮ್ಮೆ ಕಾಲ ಕೂಡಿ ಬರುತ್ತಿದೆ. ಈ ಬಸ್‌ಗಳನ್ನು ರಸ್ತೆಗಿಳಿಸಲು ಬಿಎಂಟಿಸಿ ಸಿದ್ಧತೆ ಮಾಡಿಕೊಂಡಿದೆ. ಸಂಚಾರ ದಟ್ಟಣೆ, ಜೋತುಬಿದ್ದ ಕೇಬಲ್‌ಗಳ ನಡುವೆ ಡಬಲ್ ಡೆಕ್ಕರ್ ಎಲೆಕ್ಟ್ರಿಕ್ ಬಸ್‌ಗಳ ಸಂಚಾರ ಕಾರ್ಯಸಾಧುವೆ ಎಂಬ ಪ್ರಶ್ನೆಯೂ ಉದ್ಭವವಾಗಿದೆ.

15ನೇ ಹಣಕಾಸು ಆಯೋಗದ ಅನುದಾನ ಬಳಸಿಕೊಂಡು ರಾಷ್ಟ್ರೀಯ ವಾಯು ಶುದ್ಧೀಕರಣ ಕಾರ್ಯಕ್ರಮದ(ಎನ್‌ಸಿಎಪಿ) ಅಡಿಯಲ್ಲಿ ಈ ಯೋಜನೆ ಅನುಷ್ಠಾನವಾಗುತ್ತಿದೆ. ಈ ಅನುದಾನದಲ್ಲಿ ಬಿಬಿಎಂಪಿಗೆ ₹140 ಕೋಟಿ ಲಭ್ಯವಾಗಿದೆ. ಪರಿಸರಸ್ನೇಹಿ ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಮುಂದಾಗಿರುವ ಬಿಬಿಎಂಪಿ, ಡಬಲ್ ಡೆಕ್ಕರ್ ಬಸ್ ಖರೀದಿಗೂ ₹10 ಕೋಟಿ ನಿಗದಿ ಮಾಡಿದೆ.

₹10 ಕೋಟಿಯಲ್ಲಿ ಐದು ಡಬಲ್ ಡೆಕ್ಕರ್ ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲು ಸಾಧ್ಯವಿದ್ದು, ಇನ್ನೂ ಐದು ಬಸ್‌ಗಳ ಖರೀದಿಗೆ ಬೇರೆ ಮೂಲಗಳಿಂದ ಅನುದಾನ ಪಡೆಯುವ ಪ್ರಯತ್ನವನ್ನು ಬಿಎಂಟಿಸಿ ಮಾಡುತ್ತಿದೆ. ನಗರ ಭೂಸಾರಿಗೆ ನಿರ್ದೇಶನಾಲಯದ(ಡಲ್ಟ್) ಜತೆಗೂ ಮಾತುಕತೆ ನಡೆಸುತ್ತಿದೆ.

ಡಬಲ್ ಡೆಕ್ಕರ್ ಬಸ್‌ಗಳನ್ನು ಖರೀದಿಸುವ ಜತೆಗೆ ಅವುಗಳನ್ನು ರಸ್ತೆಗಿಳಿಸುವುದು ಸವಾಲಿನ ಕೆಲಸ. ಎಲ್ಲಾ ಮಾರ್ಗಗಳಲ್ಲೂ ಈ ಬಸ್‌ಗಳ ಕಾರ್ಯಾಚರಣೆ ಸುಲಭ ಅಲ್ಲ. ಆದ್ದರಿಂದ ಡಬಲ್ ಡೆಕ್ಕರ್ ಬಸ್‌ಗಳ ಸಂಚಾರಕ್ಕೆ ಯೋಗ್ಯ ಇರುವ ರಸ್ತೆಗಳ ಹುಡುಕಾಟದಲ್ಲಿ ಬಿಎಂಟಿಸಿ ಅಧಿಕಾರಿಗಳು ನಿರತರಾಗಿದ್ದಾರೆ.

ಮೊದಲ ಹಂತದಲ್ಲಿ ಹೊರ ವರ್ತುಲ ರಸ್ತೆಯಲ್ಲಿ ಈ ಬಸ್‌ಗಳ ಕಾರ್ಯಾಚರಣೆ ಮಾಡಲು ಸಾಧ್ಯವೇ ಎಂಬ ಆಲೋಚನೆ ನಡೆಸುತ್ತಿದ್ದಾರೆ. 'ಐದು ಬಸ್‌ಗಳ ಖರೀದಿಗೆ ಅನುದಾನ ಮಂಜೂರಾಗಿದೆ. ಒಟ್ಟಾರೆ 10 ಡಬಲ್ ಡೆಕ್ಕರ್ ಬಸ್‌ಗಳನ್ನು ರಸ್ತೆಗಿಳಿಸುವ ಆಲೋಚನೆ ಇದೆ. ಎಲ್ಲಾ ಮಾರ್ಗಗಳಲ್ಲೂ ಈ ಬಸ್‌ಗಳ ಕಾರ್ಯಾಚರಣೆ ಸಾಧ್ಯವಿಲ್ಲ. ಯಾವ ಮಾರ್ಗದಲ್ಲಿ ಸಾಧ್ಯವಿದೆ ಎಂಬುದನ್ನು ಪರಿಶೀಲಿಸುತ್ತಿದ್ದೇವೆ' ಎಂದು ಬಿಎಂಟಿಸಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ವಿದ್ಯುತ್ ತಂತಿಗಳು, ಜೋತುಬಿದ್ದ ಆಪ್ಟಿಕಲ್ ಕೇಬಲ್‌ಗಳು, ಅಲ್ಲಲ್ಲೇ ಇರುವ ಪಾದಚಾರಿ ಮೇಲ್ಸೇತುವೆಗಳು, ಅಂಡರ್ ಪಾಸ್‌ಗಳು, ಮೇಲ್ಸೇತುವೆಗಳು, ಗ್ರೇಡ್ ಸೆಪರೇಟರ್‌ಗಳ ನಡುವೆ ಈ ಬಸ್‌ಗಳ ಕಾರ್ಯಾಚರಣೆ ಹಿಂದಿನಷ್ಟು ಸುಲಭವಲ್ಲ ಎನ್ನುತ್ತಾರೆ ಸಾರಿಗೆ ತಜ್ಞರು.

'ನೈಸ್ ರಸ್ತೆಯೊಂದೇ ಸೂಕ್ತ'

'ಈಗ ಡಬಲ್ ಡೆಕ್ಕರ್ ಬಸ್‌ಗಳನ್ನು ಪರಿಚಯಿಸಲು ಬಿಎಂಟಿಸಿ ಮುಂದಾಗಿದೆ. ರಸ್ತೆ ಬದಿಯ ಮರಗಳು, ಮೇಲ್ಸೇತುವೆ, ಕೆಳಸೇತುವೆಗಳಲ್ಲಿ ಈ ಬಸ್‌ಗಳ ಸಂಚಾರ ಕಷ್ಟ' ಎನ್ನುತ್ತಾರೆ ಕೃಷ್ಣ ಪ್ರಸಾದ್.

'ಹೊರ ವರ್ತುಲ ರಸ್ತೆಗಳಲ್ಲೂ ಪಾದಚಾರಿ ಮೇಲ್ಸೇತುವೆ, ಮೆಟ್ರೊ ರೈಲು ಮಾರ್ಗಗಳಿವೆ. ಸಂಚಾರದಟ್ಟಣೆ ಈಗ ವಿಪರೀತವಾಗಿದ್ದು, ಸಾಮಾನ್ಯ ಬಸ್‌ಗಳ ಚಾಲನೆಯೇ ಕಷ್ಟವಾಗಿದೆ. ಈ ಸಂದರ್ಭದಲ್ಲಿ ಡಬಲ್ ಡೆಕ್ಕರ್ ಬಸ್‌ಗಳನ್ನು ರಸ್ತೆಗಿಳಿಸಿದರೆ ದಟ್ಟಣೆ ಇನ್ನಷ್ಟು ಹೆಚ್ಚಾಗಬಹುದು' ಎಂದು ಅವರು ಹೇಳುತ್ತಾರೆ.

'ಸದ್ಯಕ್ಕೆ ನೈಸ್ ರಸ್ತೆಯೊಂದೇ ಈ ಬಸ್‌ಗಳ ಸಂಚಾರಕ್ಕೆ ಯೋಗ್ಯ ಎಂಬಂತೆ ಕಾಣಿಸುತ್ತಿದೆ. ಅಲ್ಲಿ ಈ ಬಸ್‌ಗಳು ಸಂಚರಿಸಿದರೆ ಯಾರಿಗೆ ಪ್ರಯೋಜನ' ಎನ್ನುವುದು ಅವರ ಪ್ರಶ್ನೆ.

'ಡಬಲ್ ಡೆಕ್ಕರ್: ಒಳ್ಳೆಯ ಬೆಳವಣಿಗೆ'



'ಬೆಂಗಳೂರಿನ ಸಂಚಾರ ದಟ್ಟಣೆ ಕಡಿಮೆ ಮಾಡಲು ಬಸ್‌ಗಳ ಕಾರ್ಯಾಚರಣೆ ಸಂಖ್ಯೆ ಹೆಚ್ಚಿಸುವುದೇ ಮಾರ್ಗೋಪಾಯ. ಆದ್ದರಿಂದ ಡಬಲ್ ಡೆಕ್ಕರ್ ಬಸ್ ಪರಿಚಯಿಸುವುದು ಒಳ್ಳೆಯ ಬೆಳವಣಿಗೆ' ಎಂದು ನಗರ ಸಂಚಾರ ತಜ್ಞ ಎಚ್.ಎಸ್.ಸುಧೀರ್ ಹೇಳಿದರು.

'ಸಂಚಾರ ದಟ್ಟಣೆ ಹೆಚ್ಚಾಗಿರುವುದು ಬಸ್‌ಗಳಿಂದ ಅಲ್ಲ. ಕಾರು ಮತ್ತು ದ್ವಿಚಕ್ರ ವಾಹನಗಳಿಂದ. ಡಬಲ್ ಡೆಕ್ಕರ್ ಬಸ್ ಬಂದರೆ ಇನ್ನಷ್ಟು ಜನ ಸಾಮೂಹಿಕ ಪ್ರಯಾಣ ಮಾಡಲು ಅನುಕೂಲ ಆಗಲಿದೆ. ಎಲ್ಲಾ ಮಾರ್ಗಗಳಲ್ಲೂ ಸಂಚಾರ ಸಾಧ್ಯವಾಗದೆ ಇರಬಹುದು. ಸಾಧ್ಯವಿರುವ ಮಾರ್ಗಗಳಲ್ಲಿ ಈ ಬಸ್ ಕಾರ್ಯಾಚರಣೆ ಮಾಡಬಹುದು' ಎಂದರು.

ಡಬಲ್ ಡೆಕ್ಕರ್, ರೋಡ್ ಟ್ರೈನ್, ಜಾಯಿಂಟ್ ಬಸ್

1968ರಲ್ಲಿ ಬೆಂಗಳೂರಿನಲ್ಲಿ ಇದ್ದ ಡಬಲ್ ಡೆಕ್ಕರ್ ಬಸ್

ಬೆಂಗಳೂರಿನಲ್ಲಿ ಡಬಲ್ ಡೆಕ್ಕರ್ ಬಸ್‌ಗಳ ಕಾರ್ಯಾಚರಣೆಗೆ ಇತಿಹಾಸವೇ ಇದೆ. ಡಬಲ್ ಡೆಕ್ಕರ್, ರೋಡ್ ಟ್ರೈನ್, ಜಾಯಿಂಟ್ ಬಸ್‌ಗಳನ್ನು ನಗರದ ಜನ ಕಂಡಿದ್ದಾರೆ.

ಡಬಲ್ ಡೆಕ್ಕರ್ ಬಸ್ ಎಂದರೆ ಪ್ರಯಾಣಿಕರು ಎರಡು ಸ್ತರಗಳಲ್ಲಿ ಕೂರುವ ಮಹಡಿ ಬಸ್ ಎಂದೇ ಜನಜನಿತ. ಎಂಜಿನ್‌ನ ಬಲ ಭಾಗದಲ್ಲಿ ಚಾಲಕ ಕೂರಲು ಪ್ರತ್ಯೇಕ ಕೋಣೆ ಇತ್ತು.

'ಒಂದು ಮಹಡಿಗೆ ಹತ್ತಿದ ಪ್ರಯಾಣಿಕ ಇನ್ನೊಂದು ಮಹಡಿಗೆ ಹೋಗಲು ಅವಕಾಶ ಇರಲಿಲ್ಲ. ಎರಡೂ ಮಹಡಿಗಳಿಗೆ ಪ್ರತ್ಯೇಕ ಬಾಗಿಲುಗಳು ಮತ್ತು ನಿರ್ವಾಹಕರು ಇರುತ್ತಿದ್ದರು. ನಂತರದ ದಿನಗಳಲ್ಲಿ ಸುಧಾರಿತ ವಿನ್ಯಾಸದ ಡಬಲ್ ಡೆಕ್ಕರ್ ಬಸ್‌ಗಳನ್ನು ಪರಿಚಯಿಸಲಾಯಿತು. ಈ ಬಸ್ ರಾಮಕೃಷ್ಣ ಆಶ್ರಮದ ಬಳಿ ಪಲ್ಟಿ ಹೊಡೆದ ಬಳಿಕ ಡಬಲ್ ಡೆಕ್ಕರ್ ಬಸ್‌ಗಳ ಸಂಚಾರ ಕ್ರಮೇಣ ಕಡಿಮೆ ಆಯಿತು' ಎನ್ನುತ್ತಾರೆ ಸಾರಿಗೆ ತಜ್ಞ ಕೃಷ್ಣಪ್ರಸಾದ್.

ನಂತರ ರೋಡ್ ಟ್ರೈನ್ ಎಂಬ ಬಸ್‌ಗಳನ್ನು ಪರಿಚಯಿಸಲಾಯಿತು. ಈ ಬಸ್‌ಗಳಲ್ಲಿ ಒಂದರ ಹಿಂದೆ ಮತ್ತೊಂದು ಬಸ್ ಜೋಡಿಸಲಾಗಿತ್ತು. ಜೆ.ಸಿ. ರಸ್ತೆಯಲ್ಲಿ ತೆರಳುತ್ತಿದ್ದ ರೋಡ್ ಟ್ರೈನ್‌ನಲ್ಲಿ ಹಿಂಬದಿಯ ಬಸ್ ಬೇರ್ಪಟ್ಟು, ರವೀಂದ್ರ ಕಲಾಕ್ಷೇತ್ರದ ಆವರಣಕ್ಕೆ ನುಗ್ಗಿತ್ತು. ಆ ಬಳಿಕ ಈ ಬಸ್‌ಗಳ ಸಂಚಾರವನ್ನೂ ಕ್ರಮೇಣ ನಿಲ್ಲಿಸಲಾಯಿತು ಎಂದು ಅವರು ನೆನಪಿಸಿಕೊಂಡರು.

ಕೆಲವೇ ವರ್ಷಗಳ ಹಿಂದೆ ಒಂದಕ್ಕೆ ಮತ್ತೊಂದು ಬಸ್ ಜೋಡಿಸಿದ 'ಜಂಟಿ ವಾಹನ'ವನ್ನು ಬಿಎಂಟಿಸಿ ಪರಿಚಯಿಸಿತು. ಇದರಲ್ಲಿ ನಿರ್ವಾಹಕ ಮತ್ತು ಪ್ರಯಾಣಿಕರು ಒಂದು ಬಾಗಿಲಿನಲ್ಲಿ ಹತ್ತಿದರೆ ಎಲ್ಲಾ ಕಡೆಯೂ ಓಡಾಡಲು ಅವಕಾಶ ಇತ್ತು. ತಿರುವುಗಳಲ್ಲಿ ಬಸ್‌ಗಳನ್ನು ಚಾಲನೆ ಮಾಡಲು ಚಾಲಕರು ತಿಣುಕಾಡುವ ಸ್ಥಿತಿ ಇತ್ತು. ಬಳಿಕ ಇವುಗಳ ಕಾರ್ಯಾಚರಣೆಯೂ ನಿಂತಿತು ಎಂದು ಹೇಳಿದರು.

ಅ. 9ಕ್ಕೆ 'ಇಂಟರ್‌ನ್ಯಾಷನಲ್ ವುಮೆನ್ ಅಚೀವರ್ಸ್ ಅವಾರ್ಡ್' ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಪಾರ್ಕ್ ನಡಿಗೆದಾರರ ಸಂಘ ಮತ್ತು ವಾಯುವಿಹಾರಿಗಳ ಫೋರಂ ವತಿಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಅಕ್ಟೋಬರ್ 9ರಂದು ಸಾಧಕಿಯರಿಗೆ 'ಇಂಟರ್‌ನ್ಯಾಷನಲ್ ವುಮೆನ್ ಅಚೀವರ್ಸ್ ಅವಾರ್ಡ್' ಮತ್ತು ಮಕ್ಕಳಿಗೆ ಯಂಗ್ ಸ್ಟಾರ್ ಪ್ರಶಸ್ತಿ ನೀಡಲಾಗುವುದು.

'ಸಂಗೀತ, ನೃತ್ಯ, ಪತ್ರಿಕೋದ್ಯಮ, ವೈದ್ಯಕೀಯ, ಸಾಹಿತ್ಯ ಸೇರಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರಿಗೆ ಹಾಗೂ ಮಕ್ಕಳಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು' ಎಂದು ಸಂಘದ ಅಧ್ಯಕ್ಷ ಎಸ್. ಉಮೇಶ್ ಮಾಹಿತಿ ನೀಡಿದರು. 'ನಿಮ್ಹಾನ್ಸ್ ನಿರ್ದೇಶಕಿ ಪ್ರತಿಮಾ ಮೂರ್ತಿ, ಸಾಮಾಜಿಕ ಕಾರ್ಯಕರ್ತೆ ಆಲಿಯಾ ಕೃಂಬಿಗಲ್, ಕ್ರೀಡಾಪಟು ಅಶ್ವಿನಿ ನಾಚಪ್ಪ, ಗಾಯಕಿ ಅರ್ಚನಾ ಉಡುಪ, ನಟಿ ಭಾವನಾ ರಾಮಣ್ಣ, 'ಪ್ರಜಾವಾಣಿ'ಯ ಹಿರಿಯ ಉಪಸಂಪಾದಕಿ ಮಂಜುಶ್ರೀ ಕಡಕೋಳ, ಸೋನಿಕಾ ಗೌಡ, ರೇಖಾ ಸತೀಶ, ಮಾನಸ ಜೋಶಿ, ಎಂ.ಸಿ. ಶೋಭಾ, ನಿಶಿತಾ ಪೂಜಾರಿ ಅವರನ್ನು ಮೊದಲ ಹಂತದಲ್ಲಿ ಆಯ್ಕೆ ಮಾಡಲಾಗಿದೆ' ಎಂದರು.

'ಪುನೀತ್ ರಾಜ್‌ಕುಮಾರ್ ಹೆಸರಿನಲ್ಲಿ ನೀಡುವ ಪ್ರಶಸ್ತಿಗೆ ಯುವ ಸಂಗೀತ ನಿರ್ದೇಶಕ ಸುರೇಶ ಆಯ್ಕೆಯಾಗಿದ್ದು, ಅಶ್ವಿನಿ ಪುನೀತ್ ರಾಜ್‌ಕುಮಾರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಮೈಸೂರು ರಾಜ ವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲಿದ್ದಾರೆ' ಎಂದು ತಿಳಿಸಿದರು.

ಕಮಿಷನ್: ಮೊದಲು ಮಾತನಾಡಿದ್ದೇ ಪ್ರಧಾನಿ– ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶೇ 20ರಷ್ಟು ಕಮಿಷನ್ ಕುರಿತು ಮೊದಲು ಮಾತನಾಡಿದ್ದೇ ಪ್ರಧಾನಿ ನರೇಂದ್ರ ಮೋದಿ. ಅವರದೇ ಪಕ್ಷ ಅಧಿಕಾರದಲ್ಲಿರುವ ಕರ್ನಾಟಕದಲ್ಲಿ ಶೇ 100ರಷ್ಟು ಭ್ರಷ್ಟಾಚಾರ ತಾಂಡವವಾಡುತ್ತಿದೆ. ಈಗ ಅವರು ಏನು ಹೇಳುತ್ತಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು.

'ಬಿಎಂಎಸ್ ಸಾರ್ವಜನಿಕ ಶಿಕ್ಷಣ ದತ್ತಿ ಟ್ರಸ್ಟ್‌ನ ಬಹುಕೋಟಿ ಹಗರಣ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಶೀಘ್ರ ಪತ್ರ ಬರೆಯಲಾಗುವುದು. ಹಗರಣದ ಕುರಿತ ಎಲ್ಲ ದಾಖಲೆಗಳನ್ನೂ ನೀಡಲಾಗುವುದು. ದಾಖಲೆಗಳ ಸಮೇತ ವಿಧಾನಸಭೆಯಲ್ಲಿ ಮಾತನಾಡಿದರೂ, ಸರ್ಕಾರಕ್ಕೆ ತನಿಖೆ ಮಾಡಿಸುವ ಧೈರ್ಯ ಇಲ್ಲ. ತಾಕತ್ತು, ದಮ್ಮು ಎಂದೆಲ್ಲ ಮಾತನಾಡುವ ಮುಖ್ಯಮಂತ್ರಿಯೂ ಸುಮ್ಮನಿದ್ದಾರೆ' ಎಂದು ಸೋಮವಾರ ಇಲ್ಲಿ ಚಾಟಿ ಬೀಸಿದರು.

ರಾಷ್ಟ್ರೀಯ ಪಕ್ಷಗಳ ಕೆಸರೆರಚಾಟ: 'ಕಾಂಗ್ರೆಸ್, ಬಿಜೆಪಿ ಸಮಸ್ಯೆಗಳ ಕಡೆ ಗಮನ ಕೊಡದೆ ಪರಸ್ಪರ ಕೆಸರೆರಚಾಟದಲ್ಲಿ ತೊಡಗಿವೆ. ಕಾಂಗ್ರೆಸ್ ಪೇ ಸಿಎಂ ಪ್ರಚಾರ ಶುರು ಮಾಡಿದೆ, ಅದಕ್ಕೆ ಪ್ರತಿಯಾಗಿ ಬಿಜೆಪಿ ಮತ್ತೊಂದು ಪ್ರಚಾರ ಆರಂಭ ಮಾಡಿದೆ. ಎರಡೂ ಪಕ್ಷಗಳ ಆಡಳಿತದಲ್ಲೂ ಹಗರಣಗಳು ನಡೆದಿವೆ. ದಾಖಲೆ ಕೊಟ್ಟರೂ ಕಳಂಕಿತ ಸಚಿವರನ್ನು ರಕ್ಷಣೆ ಮಾಡುತ್ತಿದ್ದಾರೆ' ಎಂದು ಕುಮಾರಸ್ವಾಮಿ ಟೀಕಿಸಿದರು.

ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆಯಲ್ಲಿ ಕನ್ನಡಿಗರಿಗೆ ಅನ್ಯಾಯ ಆರೋಪ

ಪರಿಷತ್‌ಗೆ ಕೊಕ್: ಸಿಎಂಗೆ ಜೋಶಿ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕನ್ನಡ ಅನುಷ್ಠಾನ ಉದ್ದೇಶದಿಂದ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆ-2022'ಯಲ್ಲಿರುವ ಅಂಶಗಳ ಜಾರಿ ವಿಚಾರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಹಾಗೂ ಜಿಲ್ಲಾ ಅಧ್ಯಕ್ಷರನ್ನು ಕೈಬಿಟ್ಟಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿ ಮುಖ್ಯಮಂತ್ರಿಗೆ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ ಜೋಶಿ ಪತ್ರ ಬರೆದಿದ್ದಾರೆ.

'ಈ ಮಸೂದೆ ಕುರಿತಂತೆ ಅ. 12ರಂದು ಚಿಂತನಾಗೋಷ್ಠಿ ಏರ್ಪಡಿಸಿದ್ದು, ಸಾಹಿತ್ಯ, ಶಿಕ್ಷಣ, ಉದ್ಯೋಗ, ಕೈಗಾರಿಕಾ, ನ್ಯಾಯಾಂಗ ಸೇರಿದಂತೆ ಪ್ರಮುಖ ಕ್ಷೇತ್ರಗಳ ತಜ್ಞರು ಅದರಲ್ಲಿ ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು' ಎಂದೂ ಪತ್ರದಲ್ಲಿ ತಿಳಿಸಿದ್ದಾರೆ.

> **ಮಸೂದೆಯಲ್ಲಿ ಅಧಿಕಾರಶಾಹಿ ಧೋರಣೆ ಕಾಣುತ್ತಿದೆ. ಅಧಿಕಾರಿಗಳು ಕನ್ನಡವನ್ನು ವ್ಯವಸ್ಥಿತವಾಗಿ ಹತ್ತಿಕ್ಕಲು ಮತ್ತು ಸರ್ಕಾರವನ್ನು ತಪ್ಪು ದಾರಿಗೆ ಎಳೆದು ತರುವ ಕುತಂತ್ರ ಇದರಲ್ಲಿದೆ**
> **ಮಹೇಶ ಜೋಶಿ,** ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್

'ನ್ಯಾ.ಎಸ್.ಆರ್. ಬನ್ನೂರಮಠ ನೇತೃತ್ವದ ಕಾನೂನು ಆಯೋಗ ಸಿದ್ಧಪಡಿಸಿದ್ದ ಮಸೂದೆಯಲ್ಲಿ, ಕನ್ನಡ ಅಧಿಕೃತ ಭಾಷೆಯ ಅನುಷ್ಠಾನಕ್ಕೆ ರಚಿಸುವ ರಾಜ್ಯಮಟ್ಟದ ಸಮಿತಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರು ಇರಬೇಕು. ಜಿಲ್ಲಾ ಮಟ್ಟದ ಸಮಿತಿಯಲ್ಲಿ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷರು ಇರಬೇಕೆಂದು ತಿಳಿಸಿದ್ದರು. ಆದರೆ, ಸರ್ಕಾರ ವಿಧಾನಸಭೆಯಲ್ಲಿ ಮಂಡಿಸಿದ ಮಸೂದೆಯಲ್ಲಿ ಅದನ್ನು ಕೈಬಿಡಲಾಗಿದೆ. ಇದು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿಗೆ ಮಾಡಿರುವ ಅನ್ಯಾಯ' ಎಂದೂ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಮಸೂದೆಯಿಂದ ಪರಿಷತ್ತನ್ನು ಕೈಬಿಡುವ ಮೂಲಕ ಸರ್ಕಾರವು ಕನ್ನಡ ವಿರೋಧಿ ಧೋರಣೆ ತೋರುತ್ತಿದೆ ಎಂಬ ಅಸಮಾಧಾನ ಸಾಹಿತ್ಯ ವಲಯದಲ್ಲಿ ಗಟ್ಟಿಯಾಗುತ್ತಿದೆ. ಇದರಿಂದಾಗಿ ಮುಖ್ಯಮಂತ್ರಿ ತವರು ಜಿಲ್ಲೆ ಹಾವೇರಿಯಲ್ಲಿ ನಡೆಯಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಮೇಲೂ ಕರಿಛಾಯೆ ಬೀಳುವ ಸಾಧ್ಯತೆ ಇದೆ' ಎಂದೂ ಅವರು ಹೇಳಿದ್ದಾರೆ.

'ಸರ್ಕಾರದ ಮುಖ್ಯ ಕಾರ್ಯದರ್ಶಿಯನ್ನು ಸಮಿತಿಯ ಉಪಾಧ್ಯಕ್ಷರನ್ನಾಗಿಸಿ, ಸಚಿವ ಸ್ಥಾನಮಾನ ಹೊಂದಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನು ಸಮಿತಿಗೆ ಕೇವಲ ಸದಸ್ಯರನ್ನಾಗಿ ಮಾಡಿರುವುದು ಕನ್ನಡಿಗರಿಗೆ ಮಾಡಿದ ಅವಮಾನ. ಪರಿಸ್ಥಿತಿ ಕೈ ಮೀರಿ ಹೋಗುವುದಕ್ಕಿಂತ ಮೊದಲು ಸರ್ಕಾರ ಎಚ್ಚೆತ್ತುಕೊಂಡು ಕ್ರಮಕೈಗೊಳ್ಳಬೇಕು' ಎಂದೂ ಜೋಶಿ ಆಗ್ರಹಿಸಿದ್ದಾರೆ.

ದಸರಾ ಪ್ರಯಾಣ ಬಲು ದುಬಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಸರಾ ಹಬ್ಬಕ್ಕೆ ಸಾಲು ಸಾಲು ರಜೆಗಳಲ್ಲಿ ಬಸ್‌ನಲ್ಲಿ ಪ್ರಯಾಣ ಮಾಡುವರಿಗೆ ಟಿಕೆಟ್ ದರ ಏರಿಕೆಯ ಬಿಸಿ ತಟ್ಟಲಿದೆ. ಸಾಮಾನ್ಯ ದಿನಗಳಲ್ಲಿ ಇದ್ದ ದರಕ್ಕೆ ಹೋಲಿಸಿದರೆ ಎರಡರಿಂದ ಮೂರು ಪಟ್ಟು ಹೆಚ್ಚಾಗಿದೆ.

ಹಬ್ಬ ಮತ್ತು ಸರ್ಕಾರಿ ರಜೆಗಳ ಸಂದರ್ಭದಲ್ಲಿ ಪ್ರಯಾಣ ದರ ಹೆಚ್ಚಳ ಮಾಡದಂತೆ ಕ್ರಮ ಕೈಗೊಳ್ಳುವುದಾಗಿ ಸಾರಿಗೆ ಸಚಿವ ಬಿ.ಶ್ರೀರಾಮುಲು ನೀಡಿದ್ದ ಭರವಸೆ ಮೂರೇ ದಿನಗಳಲ್ಲಿ ಹುಸಿಯಾಗಿದೆ.

ಆನ್‌ಲೈನ್‌ನಲ್ಲಿ ಟಿಕೆಟ್ ಕಾಯ್ದಿರಿಸುವವರು ಎರಡು ಪಟ್ಟು ಹಣ ಸಂದಾಯ ಮಾಡುತ್ತಿದ್ದಾರೆ. ಅದರಲ್ಲೂ ದಸರಾ ಉತ್ಸವ ನಡೆಯುತ್ತಿರುವ ಮೈಸೂರಿಗೆ ಖಾಸಗಿ ಬಸ್‌ಗಳಲ್ಲಿ ಟಿಕೆಟ್ ದರ ಮೂರು ಪಟ್ಟು ಹೆಚ್ಚಾಗಿದೆ. ಸಾಮಾನ್ಯ ದಿನಗಳಲ್ಲಿ ₹450ರಿಂದ ₹900 ಇರುವ ದರ, ಹಬ್ಬದ ಸಂದರ್ಭದಲ್ಲಿ(ಸೆ.30ರಿಂದ ಅ.3) ₹500ರಿಂದ ₹3000 ತನಕ ಇದೆ. ಬೆಂಗಳೂರಿನಿಂದ ಉಡುಪಿಗೆ ಸಾಮಾನ್ಯ ದಿನಗಳಲ್ಲಿ ₹700ರಿಂದ ₹750 ಇದ್ದರೆ, ಹಬ್ಬದ ದಿನಗಳಲ್ಲಿ ₹1400ರಿಂದ ₹1800 ದರ ಇದೆ. ಬೆಳಗಾವಿಗೆ ₹800ರಿಂದ ₹900ಕ್ಕೆ ಬದಲಾಗಿ ₹1,100ರಿಂದ ₹1500 ಇದೆ. ಕೆಎಸ್‌ಆರ್‌ಟಿಸಿ ವಿಶೇಷ ಬಸ್‌ಗಳಲ್ಲೂ ಶೇ 20ರಷ್ಟು ದರ ಹೆಚ್ಚಳ ಆಗಿದೆ.

ಕೋವಿಡ್ ನಡುವೆ ಸರಳವಾಗಿ ಆಚರಣೆಯಾಗುತ್ತಿದ್ದ ದಸರಾ, ಈ ಬಾರಿ ವಿಜೃಂಭಣೆಯಿಂದ ಆಚರಣೆಯಾಗುತ್ತಿದೆ. ಈ ಸಂದರ್ಭದಲ್ಲಿ ಸಾಲು ಸಾಲು ರಜೆಗಳಿದ್ದು, ಬಸ್ ಟಿಕೆಟ್ ದರ ನೋಡಿದರೆ ಪ್ರಯಾಣ ಮಾಡಲು ಯೋಚಿಸಬೇಕಾಗಿದೆ. ಖಾಸಗಿ ಬಸ್‌ಗಳು ಇದರ ದೊಡ್ಡ ಲಾಭ ಪಡೆದುಕೊಳ್ಳಲು ಮುಂದಾಗಿವೆ ಎಂದು ಪ್ರಯಾಣಿಕರು ಬೇಸರ ವ್ಯಕ್ತಪಡಿಸುತ್ತಾರೆ.

ಬೆಳಗಾವಿ: ಬಾಲಕನಿಗೆ ಚೂರಿ ಇರಿತ

ಬೆಳಗಾವಿ: ಇಲ್ಲಿನ ಅನಂತಶಯನ ಗಲ್ಲಿಯಲ್ಲಿ ಸೋಮವಾರ ರಾತ್ರಿ ಯುವಕರ ಎರಡು ಗುಂಪುಗಳ ನಡುವೆ ಗಲಾಟೆ ನಡೆದಿದ್ದು, ಚೂರಿ ಇರಿತದಿಂದ ಒಬ್ಬ ಬಾಲಕ ಗಂಭೀರವಾಗಿ ಗಾಯಗೊಂಡಿದ್ದಾನೆ. ಈತ ಇಸ್ಲಾಮಿಯಾ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಓದುತ್ತಿದ್ದಾನೆ.

ಗಾಯಗೊಂಡ ಬಾಲಕನನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬಾಲಕ ಹಾಗೂ ಇಬ್ಬರು ಸ್ನೇಹಿತರು ಬೈಕ್ ಮೇಲೆ ಹೊರಟಿದ್ದರು. ನಗರದ ಅಂಬಾ ಭವಾನಿ ಮಂದಿರದ ಹತ್ತಿರ 10 ಮಂದಿ ಯುವಕರ ಗುಂಪೊಂದು ಇವರ ಮೇಲೆ ಆಕ್ರಮಣ ಮಾಡಿತು. ಬಾಲಕನಿಗೆ ಚೂರಿಯಿಂದ ಇರಿಯಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಅಕ್ಟೋಬರ್ 21ರಿಂದ ಬಳ್ಳಾರಿಯಲ್ಲಿ ಅಂತರರಾಷ್ಟ್ರೀಯ ಕವಿ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಜನರಲ್ಲಿ ಕಲೆ, ಸಂಸ್ಕೃತಿ ಹಾಗೂ ವೈಚಾರಿಕತೆ ಬಿತ್ತುತ್ತಿರುವ ಇಲ್ಲಿನ 'ಅರಿವು' ಸಂಸ್ಥೆ ನಗರದಲ್ಲಿ ಅಂತರರಾಷ್ಟ್ರೀಯ ಕವಿ ಸಮ್ಮೇಳನ 'ಸಂಗಂ– 2022' ಅನ್ನು ಅ.21ರಿಂದ 24ರ ವರೆಗೆ 'ಏರ್ಪಡಿಸಿದೆ.

'ರಾಜ್ಯದಲ್ಲೇ ಮೊದಲ ಬಾರಿಗೆ ನಡೆಯುತ್ತಿರುವ ಈ ಸಮ್ಮೇಳನದಲ್ಲಿ ದೇಶ– ವಿದೇಶಗಳ 50ಕ್ಕೂ ಹೆಚ್ಚು ಕವಿಗಳು ಭಾಗವಹಿಸುವರು' ಎಂದು ಸಂಗಂ ಕವಿ ಸಮ್ಮೇಳನದ ಸಂಘಟನಾ ಅಧ್ಯಕ್ಷ ಡಾ. ಅರವಿಂದ ಪಟೇಲ್, 'ಅರಿವು' ಸಂಸ್ಥೆಯ ಅಧ್ಯಕ್ಷ ಸಿರಿಗೇರಿ ಪನ್ನಾರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

2022ರಲ್ಲಿ ಮೊದಲ ಮುದ್ರಣ ಕಂಡಿರುವ, ಇದುವರೆಗೆ ಬಿಡುಗಡೆಯಾಗದ ಸಾಹಿತ್ಯದ ಯಾವುದೇ ಪ್ರಕಾರದ ಆಯ್ದ ಕೃತಿಗಳನ್ನು ಬಿಡುಗಡೆ ಮಾಡಲಾಗುವುದು. ಆಯ್ಕೆ ಸಮಿತಿ ಕೃತಿಗಳನ್ನು ಆಯ್ಕೆ ಮಾಡಲಿದೆ ಎಂದು ಅರವಿಂದ ಪಟೇಲ್ ತಿಳಿಸಿದ್ದಾರೆ.

ಕೃತಿಗಳನ್ನು 'ಅರಿವು', 004 ಮರ್ಚೆಡ್ ರೀನೋ,2ನೇ ಅಡ್ಡರಸ್ತೆ, ಗಾಂಧಿನಗರ, ಬಳ್ಳಾರಿ, 583103 ಈ ವಿಳಾಸಕ್ಕೆ ಕಳುಹಿಸಬೇಕು. ಮಾಹಿತಿಗೆ ಕೆ.ವಿ. ನಾಗರೆಡ್ಡಿ ಮೊಬೈಲ್ ಸಂಖ್ಯೆ 94496 67653 ಅವರನ್ನು ಸಂಪರ್ಕಿಸಬಹುದು.

ಬಿಐಟಿಎಂ ಕಾಲೇಜು ಸಭಾಂಗಣದಲ್ಲಿ ನಡೆಯುವ ಕವಿ ಸಮ್ಮೇಳನದಲ್ಲಿ ಅಮೆರಿಕ, ಕೆನಡಾ, ಇಸ್ರೇಲ್, ಐರ್ಲೆಂಡ್, ವೆನಿಜುವೆಲಾ, ಅಲ್ಜೀರಿಯಾ, ಇರಾನ್, ಪೆರು, ಕೋಸ್ಟರಿಕ, ಕ್ಯೂಬಾ, ಚಿಲಿ, ಬಾಂಗ್ಲಾದ ಕವಿಗಳು ಕವನಗಳನ್ನು ವಾಚಿಸುವರು. ಸಮ್ಮೇಳನದ ನೇತೃತ್ವವನ್ನು ಹಿರಿಯ ಕವಿ, ಚಿಂತಕ ಎಚ್.ಎಸ್. ಶಿವಪ್ರಕಾಶ್ ವಹಿಸುವರು.

ಅಲ್ಲದೆ, ಕರ್ನಾಟಕ ಕೇರಳ, ಆಂಧ್ರ, ತಮಿಳುನಾಡು, ಮಹಾರಾಷ್ಟ್ರ, ಗುಜರಾತ್, ಅಸ್ಸಾಂ, ಪಶ್ಚಿಮ ಬಂಗಾಳ ಮತ್ತಿತರ ಕಡೆಗಳಿಂದಲೂ ಕವಿಗಳು ಪಾಲ್ಗೊಳ್ಳುವರು. ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಚಂದ್ರಶೇಖರ ಕಂಬಾರ ಅಕ್ಟೋಬರ್ 21ರಂದು ಕಾವ್ಯೋತ್ಸವ ಉದ್ಘಾಟಿಸುವರು. ನೈಜಿರಿಯಾದ ಲೇಖಕಿ ಪ್ರೊ. ಟೆಸ್ ಒನ್ವು ಉಮೆ ಆಶಯ ಭಾಷಣ ಮಾಡುವರು.

ಸಮ್ಮೇಳನದಲ್ಲಿ ಕಾವ್ಯದೊಂದಿಗೆ, ಅಂತರ ರಾಷ್ಟ್ರೀಯ ವಿಚಾರ ಸಂಕಿರಣ, ಪುಸ್ತಕ ಮೇಳ ಹಾಗೂ ಸ್ಥಳೀಯ ಕಲಾವರಣ ಹೀಗೆ ವೈವಿಧ್ಯಮಯ ಚಟುವಟಿಕೆಗಳು ನಡೆಯಲಿವೆ. ಇದೇ ಸಂದರ್ಭದಲ್ಲಿ ಆಯ್ದ ಕೃತಿಗಳು ಬಿಡುಗಡೆ ಆಗಲಿದ್ದು, ಆಸಕ್ತರಿಂದ ಕೃತಿಗಳನ್ನು ಆಹ್ವಾನಿಸಲಾಗಿದೆ.

ನಗರದಲ್ಲಿ ಇಂದು

ಸಂಶೋಧನೆಯಲ್ಲಿ ನೀತಿ ಸಂಹಿತೆ, ನೈತಿಕ ಪತ್ರಿಕೋದ್ಯಮದ ತತ್ವಗಳು ಮತ್ತು ಸಮಾಜದ ಮೇಲೆ ಅದರ ಪ್ರಭಾವ ವಿಚಾರಸಂಕಿರಣ: ಅತಿಥಿಗಳು: ಪಿ.ಎಸ್. ಹರ್ಷ, ಟಿ.ಆರ್. ಗೋಪಾಲಕೃಷ್ಣನ್, ಎನ್. ಸುಂದರ್ ರಾಜನ್, ಚನ್‌ರಾಜ್ ರಾಯ್‌ಚಂದ್, ಆಯೋಜನೆ: ಜೈನ್ ಡೀಮ್ಡ್ ಟು ಬಿ ಯೂನಿವರ್ಸಿಟಿ, ಸ್ಥಳ: ಸೆಂಟರ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಲಾಲ್‌ಬಾಗ್ ಮುಖ್ಯರಸ್ತೆ, ಬೆಳಿಗ್ಗೆ 9.30

ಆಲ್ ಇಂಡಿಯಾ ಪೋಸ್ಟಲ್ ವಾಲಿಬಾಲ್ ಟೂರ್ನಿ: ಉದ್ಘಾಟನೆ: ಅಲ್ಕಾ ಝಾ, ಅತಿಥಿಗಳು: ಕೆ.ವೈ. ವೆಂಕಟೇಶ, ಎಸ್.ರಾಜೇಂದ್ರ ಕುಮಾರ್, ಆಯೋಜನೆ: ಅಂಚೆ ಇಲಾಖೆ, ಸ್ಥಳ: ಕಂಠೀರವ ಒಳಾಂಗಣ ಕ್ರೀಡಾಂಗಣ, ಬೆಳಿಗ್ಗೆ 9.30

ನವರಾತ್ರಿ ವಿಶೇಷ ಹೋಮ: ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಸ್ಥಳ: ಪ್ಲಾಟ್‌ಫಾರಂ ರಸ್ತೆ, ರಾಜೀವ್ ಗಾಂಧಿ ವೃತ್ತ, ಶೇಷಾದ್ರಿಪುರ, ಬೆಳಿಗ್ಗೆ 9.30

ಡೆಮ್‌ಕ್ಲಿನಿಕ್ ಉದ್ಘಾಟನೆ: ಅತಿಥಿಗಳು: ಡಾ.ಕೆ. ಸುಧಾಕರ್, ಆಯೋಜನೆ ಮತ್ತು ಸ್ಥಳ: ನೈಟಿಂಗೇಲ್ಸ್ ಸೆಂಟರ್ ಫಾರ್ ಏಜಿಂಗ್ ಆ್ಯಂಡ್ ಅಲ್ಝೈಮರ್ಸ್, ಕಸ್ತೂರಿನಗರ, ಬಸವನಗುಡಿ, ಬೆಳಿಗ್ಗೆ 11

ಡಾ. ಕೆ. ರಾಜೇಶ್ವರಿ ದೊಡ್ಡರಂಗೇಗೌಡ ಸ್ಮಾರಕ ದತ್ತಿ ಕಾರ್ಯಕ್ರಮ: ಉಪನ್ಯಾಸಕರು: ಶಾಂತರಾಜು, ಉಪಸ್ಥಿತಿ: ದೊಡ್ಡರಂಗೇಗೌಡ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನ, ಎಂ.ವಿ.ಸಿ. ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಸಂಜೆ 5

ವಚನ ನವರಾತ್ರಿ: ಆಶಯ ನುಡಿ: ಎಸ್. ಪಿನಾಕಪಾಣಿ, ಉಪನ್ಯಾಸ: ವಿಜಯ ಮಂಜಪ್ಪ, ವಚನ ಗಾಯನ: ಲೀಲಾವತಿ, ಅತಿಥಿಗಳು: ಚಂದ್ರಿಕಾ ಗುರುಪ್ರಸಾದ್, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಪದ್ಮಜ ಪ್ರಸನ್ನ ಮನೆಯಂಗಳ, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5.30

ನವರಾತ್ರಿ ಉತ್ಸವ: ಸಾಂಸ್ಕೃತಿಕ ಕಾರ್ಯಕ್ರಮಗಳು, ಆಯೋಜನೆ: ವರಸಿದ್ಧಿ ವಿನಾಯಕ ದೇವಾಲಯ, ಸ್ಥಳ: ಕೆನರಾ ಬ್ಯಾಂಕ್ ಕಾಲೊನಿ, ನಾಗರಬಾವಿ ರಸ್ತೆ, ಸಂಜೆ 6.30

ನವರಾತ್ರಿ ಸಂಗೀತ ನೃತ್ಯೋತ್ಸವ: ಪ್ರಸ್ತುತಿ: ಶಿವಪ್ರಿಯ ಸ್ಕೂಲ್ ಆಫ್ ಡಾನ್ಸ್ ಕಲಾವಿದರಿಂದ ಕೂಚಿಪುಡಿ, ಭರತನಾಟ್ಯ ಸ್ಥಳ: ಮಹಾಯಾಗ ಕ್ಷೇತ್ರ ಗಾಯತ್ರಿ ದೇವಸ್ಥಾನ, ಗಾಯತ್ರಿ ರಂಗ ಮಂದಿರ, ಯಶವಂತಪುರ ಸರ್ಕಲ್ ಬಳಿ, ಸಂಜೆ 6.30

ನವರಾತ್ರಿ ಉತ್ಸವ: ದೇವಿಗೆ ಭಾರತಮಾತೆ ಅಲಂಕಾರ, ಭಜನೆ: ಸ್ಮಿತಾ ತಂಡದವರಿಂದ, ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಸ್ಥಳ: ಕೃಷ್ಣರಾಜಪುರ

ಶರನ್ನವರಾತ್ರಿ ಉತ್ಸವ: ದೇವಿಗೆ ವೀಳ್ಯದೆಲೆ ಅಲಂಕಾರ, ಆಯೋಜನೆ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಸ್ಥಳ: ಚಿಕ್ಕದೇವಸಂದ್ರ, ಕೃಷ್ಣರಾಜಪುರ

ಶರನ್ನವರಾತ್ರಿ ಉತ್ಸವ: ದೇವಿಗೆ ವಿಭೂತಿ ಅಲಂಕಾರ, ಆಯೋಜನೆ: ಯಲ್ಲಮ್ಮದೇವಿ ದೇವಾಲಯ, ಸ್ಥಳ: ದೇಶದಪೇಟೆ ರಸ್ತೆ, ಯಲಹಂಕ

ಚಿತ್ರಾವಳಿ

ಎಪಿಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರಾಜೆಕ್ಟ್ ಎಕ್ಸ್‌ಪೋನಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಬೆಂಗಳೂರು ವಲಯ ಪ್ರಾದೇಶಿಕ ನಿರ್ದೇಶಕ ಎಚ್.ಆರ್.ಸುದರ್ಶನರೆಡ್ಡಿ, ಎಪಿಎಸ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಪ್ರೊ.ಕೆ.ಪಿ. ನರಸಿಂಹಮೂರ್ತಿ, ಪ್ರಾಂಶುಪಾಲ ಎಂ.ಜಿ.ನಟರಾಜ್ ಇದ್ದರು

ಏಷ್ಯಾ ಜ್ಯುವೆಲ್ಸ್ ವತಿಯಿಂದ ದಸರಾ ಮತ್ತು ದೀಪಾವಳಿ ಹಬ್ಬದ ಪ್ರಯುಕ್ತ ಸೆಪ್ಟೆಂಬರ್ 30ರಿಂದ ಅಕ್ಟೋಬರ್ 2ರ ವರೆಗೆ ನಡೆಯುವ 'ಏಷ್ಯಾ ಜ್ಯುವೆಲ್ಸ್ ಶೋ–2022' ಪ್ರಚಾರ ಮೇಳದಲ್ಲಿ ನಟಿ ಪ್ರಿಯಾಂಕಾ ಉಪೇಂದ್ರ ಹಾಗೂ ರೂಪದರ್ಶಿಯರು ಆಭರಣಗಳನ್ನು ಪ್ರದರ್ಶಿಸಿದರು

ಸಿರಿ ಅಕಾಡೆಮಿ ಆಫ್ ಮ್ಯೂಸಿಕ್ ಆ್ಯಂಡ್ ಆರ್ಟ್ಸ್‌ನ (ಸಮಾ) 14ನೇ ವಾರ್ಷಿಕೋತ್ಸವದಲ್ಲಿ ಹೊಸಹಳ್ಳಿ ಕೇಶವ ಮೂರ್ತಿ ಅವರಿಗೆ 'ಸಮಾ ಜೀವನಮಾನ ಪ್ರಶಸ್ತಿ' ಪ್ರದಾನ ಮಾಡಲಾಯಿತು. ನ್ಯಾಯಮೂರ್ತಿ ಎನ್.ಕುಮಾರ್, ರಾಮ ಮೋಹನ್, ಆನೂರು ಅನಂತ ಕೃಷ್ಣ ಶರ್ಮಾ, ಆನಂದಮೂರ್ತಿ ರಾಜ್, ರಘುರಾಮ್ ಇದ್ದಾರೆ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
The General public is hereby informed that my client is intending purchase the below mentioned schedule of property from its owner Mr. Varghese Mathew and Smt. Bindu Varghese, residing at No.5, 6th Cross, GG Road, Near G V Hospital, Ejipura, Bangalore South, Viveknagar, Bangalore-560 047.
If anybody is having any objection, claim, interest; dispute for the above intended sale transaction, they may contact the undersigned with the documentary proof substantiating their objections/claims/details of dispute within Ten (10) days from the date of this publication, failing which, my client will proceed to complete the sale transaction with the above owner as if there are no third party claims/objections/disputes in respect of the Schedule Property and thereafter no claims/objections/disputes will not be entertained.
SCHEDULE PROPERTY
All the piece and parcel of the house property bearing Old site No.79, out of property No.79/3, of Suddaguntepalya, Bangalore City Corporation Division No.35, presently Corporation No.40, 1st Main Road, Bharathi Layout, Bangalore City Corporation Ward No.63, (PID No. 63-132-40).
Measuring East to West: 30' Ft. North to South: 40' Ft. Total 1200 Sq.Ft.
Bounded on: East by: Private Property, West by: Property No.78, North by: Road, South by: Property No.81.
Sd/- Mr. A.S. Narayana Reddy (B.A., L.L.B) Advocate & Notary (Ph: 99452 41275 / 79751 73165) Government of India, #824, 10th Main, IV Block, Koramangala, Bangalore-560034.

BUSINESS

Business Offers

Finance

NRI'S INVESTMENT
And Finance Available
On Low Interest
Against Properties,
Land&
Building,Sites,Flats,
Converted&
Agriculture Lands Call:
7411265189

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Multiple Vacancy

REQUIRED, TEAMLEADER, & FieldExecutive For BankLoan collection. direct recruitment to company. Contact: 9620206756, 9620200756.

PERSONAL

Change of Name

CHANGE OF NAME
I, HARIHARA SUBRAMANIAN SRINAGESH, Residing at No. 523, Surya, 7th main, 1st stage, 5-Block, H.B.R. Layout, Bengaluru, have changed my name to HARIHARA SUBRAMANIAN, vide affidavit dated 26.09.2022 before Notary N. Narayana Swamy, Bengaluru. Henceforth I shall be known as HARIHARA SUBRAMANIAN only.

I,RAMESH REDDY.H Residing at.House No.182, 18th Main, Sector-4,HSR Layout,near MTR Hotel, Bangalore-560102 have changed my minor_son Name_from SKANDHA.S.R.REDDY to SKANDHA R REDDY vide Affidavit dated.26-09-2022 Sworn_Before Notary B.M.Chandrashekar, Bangalore

I, MADHUKAR H.S S/o H N Subramanya, residing at No 1377/12 Kelagina Thotagalu, Near Sir MV Stadium, Chikkaballapur- 562101, changed the name of minor Daughter Purvi M aged 17 years and she shall hereafter be known as Purvi Hossuur for all purposes.

I, NITHYA M. @ JULIET JOSEPH, R/a #64/65, 9th main, 21st cross, BTM Layout, 2nd stage, Bangalore- 560076, declare that both the names pertain to me only and henceforth I shall be known as NITHYA M. only vide affidavit dated 09.09.2022 before Notary Y.V. Shankar, Bangalore.

6502330L SEP/ASH CHAUHAN SHAILESHKUMAR HIRABHAI ASC CENTRE & COLLEGE SON NAME RECORDS MITRAJSINH to CHAUHAN MITRAJSINH SHAILESHKUMAR NOTARY KV MANI

6502330L SEP/ASH CHAUHAN SHAILESHKUMAR HIRABHAI ASC CENTRE & COLLEGE DAUGHTER NAME RECORDS MAYABEN to CHAUHAN MAYABEN SHAILESHKUMAR NOTARY KV MANI

14845038N SEP VIKAS KUMAR ASC CENTRE & COLLEGE MOTHER NAME RECORDS KAILASH to KELASH DEVI NOTARY KV MANI

14882647P NK/CLK SADGIR YOGESH ANNASAHEB 2ATC MOTHER NAME RECORDS SAVITRIBAI to SAVITRIBAI ANNASAHEB SADGIR NOTARY KV MANI

JC671149H SUB KUMARESAN S ASC CENTRE & COLLEGE MY NAME RECORDS KUMARESAN S to S KUMARESAN NOTARY KV MANI

BIMLESH W/O 14837842A NK SARJEET KUMAR R/a MANDKOLA HATHIN PALWAL HR my name BIMLESH TO BIMLESH KUMARI NOTARY KV MANI

DH ಪ್ರಜಾವಾಣಿ Classifieds
Book Your Classifieds Ads
Online Log in to
dhclassifieds.com
DH DECCAN HERALD
ಪ್ರಜಾವಾಣಿ
Contact :
Jerry Louis : 9731810277
Vishal GM : 9845114560
Ravichandra : 9901641752
Tanveer : 9886213331

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ನಾಡಹಬ್ಬ ಮೈಸೂರು ದಸರಾ ಮಹೋತ್ಸವ 2022ರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಪ್ತಸ್ವರ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್ (ಮಂಜುಳಾ ಪರಮೇಶ್) ತಂಡದವರು 'ಅಮೃತ ಭಾರತಿಗೆ ಕನ್ನಡಧಾರತಿ' ನೃತ್ಯ ಪ್ರದರ್ಶಿಸಿದರು (ಎಡ ಚಿತ್ರ). ಅರಮನೆ ಆವರಣದಲ್ಲಿ ಆಯೋಜಿಸಲಾಗಿದ್ದ ಪುಷ್ಪ ಪ್ರದರ್ಶನವನ್ನು ಸಾರ್ವಜನಿಕರು ಸೋಮವಾರ ಸಂಜೆ ವೀಕ್ಷಿಸಿದರು– ಪ್ರಜಾವಾಣಿ ಚಿತ್ರಗಳು

ಮುಗಿಯದ ಸಿದ್ಧತೆ ನಡುವೆಯೇ ದಸರಾ ಶುರು • ಸಾಂಸ್ಕೃತಿಕ ನಗರಿಗೆ ವಿದ್ಯುದ್ದೀಪಗಳ ತೋರಣ

ನಾಡಕುಸ್ತಿ ರಂಗು, ಅದ್ಧೂರಿ ಗುಂಗು

ಪ್ರಜಾವಾಣಿ ವಾರ್ತೆ

ಮೈಸೂರು: ಮುಗಿಯದ ಸಿದ್ಧತೆಗಳ ನಡುವೆಯೇ ನಗರದಲ್ಲಿ ಅದ್ಧೂರಿ ದಸರಾ ಮಹೋತ್ಸವಕ್ಕೆ ಸೋಮವಾರ ಚಾಲನೆ ದೊರಕಿತು. ಅದ್ಧೂರಿಯ ಗುಂಗು ಸಿದ್ಧತೆಯ ಕೊರತೆಯನ್ನು ನುಂಗಿದ್ದರಿಂದ ಸಂಭ್ರಮಕ್ಕೆ ಮೇರೆ ಇರಲಿಲ್ಲ. 'ತಡವಾದರೇನಂತೆ ನಷ್ಟವಿಲ್ಲ' ಎಂಬ ಕವಿಸಾಲನ್ನು ಈ ಬಾರಿಯ ಉತ್ಸವದ ಮೊದಲ ದಿನ ಎಲ್ಲೆಡೆ ನೆನಪಿಸಿತ್ತು.

ಮಳಿಗೆಗಳ ಸಿದ್ಧತೆ ನಡುವೆಯೇ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಆಹಾರ ಮೇಳಕ್ಕೆ, ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ನಾಡ ಕುಸ್ತಿಗೆ ಚಾಲನೆ ದೊರಕಿತು. ನಟ ಶಿವರಾಜಕುಮಾರ್ ಗೈರುಹಾಜರಿ, ಯುವಜನರ ನೀರಸ ಪ್ರತಿಕ್ರಿಯೆಯ ನಡುವೆಯೇ ಕಲಾಮಂದಿರದಲ್ಲಿ ಚಲನಚಿತ್ರೋತ್ಸವವೂ ಆರಂಭವಾಯಿತು.

ಉತ್ಸವಕ್ಕೆ ಹೊಸ ಸೇರ್ಪಡೆಯಾದ ಕೈಗಾರಿಕಾ ದಸರಾದ ವಿಚಾರ ಸಂಕಿರಣವನ್ನು ವಿಜ್ಞಾನ ಭವನದಲ್ಲಿ ಉದ್ಘಾಟಿಸಿದ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಯುವ ಉದ್ಯಮಿಗಳಲ್ಲಿ ಉತ್ತೇಜನ ತುಂಬಿದರು. ಮತ್ತೊಂದು ಸೇರ್ಪಡೆಯಾದ ಯೋಗ ದಸರಾದ ಪ್ರಯುಕ್ತ ಓವಲ್ ಮೈದಾನದಲ್ಲಿ ನಡೆದ ಯೋಗ ನೃತ್ಯರೂಪಕಕ್ಕೆ ನೂರಾರು ಮಂದಿ ಸಾಕ್ಷಿಯಾದರು.

ಉತ್ಸವದ ಅಂಗವಾಗಿ ಕಲಾಮಂದಿರದ ಆವರಣದಲ್ಲಿ ಏರ್ಪಡಿಸಿದ್ದ ರಾಜ್ಯಮಟ್ಟದ ಶಿಲ್ಪ ಮತ್ತು ಚಿತ್ರಕಲೆ ಶಿಬಿರದಲ್ಲಿ ಮೂಡಿದ ಕಲಾಕೃತಿಗಳ ಪ್ರದರ್ಶನವೂ ಆರಂಭವಾಗಿದೆ.

ವೈರ್ ಮತ್ತು ಬಲ್ಬ್‌ಗಳ ಅಳವಡಿಕೆ ನಡುವೆಯೇ ಸಂಜೆ ವಿದ್ಯುತ್ ದೀಪಾಲಂಕಾರಕ್ಕೆ ಕನ್ನಡ ಸಂಸ್ಕೃತಿ ಸಚಿವ ವಿ.ಸುನೀಲ್‌ಕುಮಾರ್ ಸಯ್ಯಾಜಿ ರಾವ್ ರಸ್ತೆಯಲ್ಲಿ ಚಾಲನೆ ನೀಡಿದರು. ನಂತರ ಅರಮನೆಯ ಆವರಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ರಂಗಿನ ಲೋಕವನ್ನು ಸೃಷ್ಟಿಸಿತ್ತು.

ವೈದ್ಯಕೀಯ ವಸ್ತು ಪ್ರದರ್ಶನಕ್ಕೆ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ, ಯುವ ದಸರಾಕ್ಕೆ ಮಹಾರಾಜ ಕಾಲೇಜು ಮೈದಾನದಲ್ಲಿ ಮಂಗಳವಾರ ಚಾಲನೆ ದೊರಕಲಿದೆ.

3.5 ಲಕ್ಷ ಹೂವಿನಲ್ಲಿ ರಾಷ್ಟ್ರಪತಿ ಭವನ!

ಕುಪ್ಪಣ್ಣ ಉದ್ಯಾನದ ಗಾಜಿನ ಮನೆಯಲ್ಲಿ 3.5 ಲಕ್ಷ ಹೂವುಗಳನ್ನು ಬಳಸಿ 'ರಾಷ್ಟ್ರಪತಿ ಭವನ' ನಿರ್ಮಿಸಲಾಗಿದೆ. ರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್, ಗಾಜನೂರಿನ ಮನೆ ಪ್ರತಿಕೃತಿಯೂ ಇದೆ. ಮಕ್ಕಳನ್ನು ಆಕರ್ಷಿಸುವ 'ಹನಿ ಬೀ' ಕಾರ್ಟೂನ್ ಲೋಕವೂ ಅರಳಿದೆ.

ಅರಮನೆ ಎದುರು ಕೆಂಪುಕೋಟೆ, ನಾಲ್ವಡಿ ಕೃಷ್ಣರಾಜ ಒಡೆಯರ್, ಕಿತ್ತೂರು ರಾಣಿ ಚೆನ್ನಮ್ಮ, ಬಿಪಿನ್ ರಾವತ್, ಮಿಗ್ 21 ವಿಮಾನದೊಂದಿಗೆ ವಿಂಗ್ ಕಮಾಂಡರ್ ಅಭಿನಂದನ್, ಜಂಬೂಸವಾರಿ ಮೆರವಣಿಗೆ, ಐಎನ್‌ಎಸ್ ವಿಕ್ರಾಂತ್ ಯುದ್ಧನೌಕೆ, ಕಾರ್ಗಿಲ್ ಯುದ್ಧದ ವಿಜಯೋತ್ಸವದ ಮಾದರಿಗಳು ಹೂಗಳಲ್ಲಿ ಅರಳಿವೆ.

ಮೈಸೂರು ದಸರಾ
ಕ್ರಿಶ 1610 ರಿಂದ ಆಚರಣೆ

ಖಾಸಗಿ ದರ್ಬಾರ್

ಅರಮನೆಯಲ್ಲಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ 8ನೇ ಖಾಸಗಿ ದರ್ಬಾರ್ ನಡೆಸಿದರು. ಆಸನಕ್ಕೆ ಸಿಂಹಮುಖ ಅಳವಡಿಸಿ, ಚಾಮುಂಡಿ ತೊಟ್ಟಿಯಲ್ಲಿ ಅವರಿಗೆ ಕಂಕಣ ಕಟ್ಟಲಾಯಿತು. ಕಳಶ, ಗಣೇಶ ಪೂಜೆಯನ್ನು ಸಲ್ಲಿಸಿ ಸಿಂಹಾಸನವನ್ನೇರಿದರು. ಸಂಸ್ಥಾನ ಗೀತೆ 'ಕಾಯೌ ಶ್ರೀ ಗೌರಿ' ನುಡಿಸಲಾಯಿತು. ಅ.4ರ ವರೆಗೆ ದರ್ಬಾರ್ ನಡೆಯಲಿದ್ದು, ವಿಜಯಯಾತ್ರೆ ಅ.5ರ ವಿಜಯದಶಮಿಯಂದು ನಡೆಯಲಿದೆ. ನವರಾತ್ರಿ ಮುಗಿಯುವವರೆಗೂ ನಿತ್ಯ ಮಧ್ಯಾಹ್ನ 2ರವರೆಗೆ ದರ್ಬಾರ್ ಹಾಲ್‌ಗೆ ಪ್ರವಾಸಿಗರಿಗೆ ಪ್ರವೇಶವಿಲ್ಲ.

ಪೈಲ್ವಾನರ ಸೆಣಸು

ಡಿ.ದೇವರಾಜ ಅರಸು ಕ್ರೀಡಾಂಗಣದಲ್ಲಿ ನಾಡಕುಸ್ತಿ ಪಂದ್ಯಾವಳಿಯ ಮೊದಲ ದಿನ 39 ಜೊತೆ ಕುಸ್ತಿ ಪಂದ್ಯಗಳು ನಡೆದವು. ಉದ್ಘಾಟನಾ ಪಂದ್ಯದಲ್ಲಿ ಕೊಲ್ಹಾಪುರದ ಪೈಲ್ವಾನ್ ಸಿದ್ದೇಶ್ವರ ಮೌಲಿ ಜಮದಾಳೆ ಹಾಗೂ ಹರಿಯಾಣದ ವಿಕಾಸ್ ಕಾಳೆ ಪೈಪೋಟಿ ನಡೆಸಿ ಸಮಬಲ ಸಾಧಿಸಿದರು.

ಅ.2ರವರೆಗೆ ಪ್ರತಿ ದಿನ ಮಧ್ಯಾಹ್ನ 3.30ರಿಂದ ಪಂದ್ಯಗಳು ನಡೆಯಲಿವೆ. ಸೆ.30ರಂದು ರಾಜ್ಯಮಟ್ಟದ ಪುರುಷರು, ಮಹಿಳೆಯರ ಕುಸ್ತಿ ಪಂದ್ಯಾವಳಿ ನಡೆಯಲಿದೆ. ಅಂದು ಮಧ್ಯಾಹ್ನ 3.30ಕ್ಕೆ ಮಹಿಳೆಯರ ನಾಡಕುಸ್ತಿ, 30ರಿಂದ ಅ.2ರವರೆಗೆ ಬೆಳಿಗ್ಗೆ 8ರಿಂದ ದಸರಾ ಕಂಠೀರವ, ದಸರಾ ಕೇಸರಿ, ದಸರಾ ಕಿಶೋರಿ ಹಾಗೂ ದಸರಾ ಕುಮಾರ್ ಪ್ರಶಸ್ತಿಗಳಿಗಾಗಿ ಸೆಣಸಾಟ ನಡೆಯಲಿದೆ.

ಮಡಿಕೇರಿಯಲ್ಲಿ ಸೋಮವಾರ ವಿಜೃಂಭಣೆಯಿಂದ ನಡೆದ ಕರಗೋತ್ಸವದಲ್ಲಿ ಸಾವಿರಾರು ಮಂದಿ ಭಾಗಿಯಾದರು

ಮಡಿಕೇರಿ ದಸರೆಗೆ ಕರಗೋತ್ಸವದ ಮುನ್ನುಡಿ

ಪ್ರಜಾವಾಣಿ ವಾರ್ತೆ

ಮಡಿಕೇರಿ: 'ಮಂಜಿನ ನಗರಿ' ಮಡಿಕೇರಿಯ ದಸರಾ ಮಹೋತ್ಸವಕ್ಕೆ ಸೋಮವಾರ ವಿಜೃಂಭಣೆಯ ಕರಗೋತ್ಸವ ಮುನ್ನುಡಿ ಬರೆಯಿತು.

ಪಡುವಣದಲ್ಲಿ ಸೂರ್ಯ ಮುಳುಗುತ್ತಿದ್ದಂತೆ ಇಲ್ಲಿನ ಪಂಪಿನ ಕೆರೆಯ ಆವರಣದಲ್ಲಿ ನಗರದ ಶಕ್ತಿ ದೇವತೆಗಳಾದ ಕಂಚಿ ಕಾಮಾಕ್ಷಿಯಮ್ಮ, ಕೋಟೆ ಮಾರಿಯಮ್ಮ, ಕುಂದೂರು ಮೊಟ್ಟೆ ಚೌಟಿ ಮಾರಿಯಮ್ಮ, ದಂಡಿನ ಮಾರಿಯಮ್ಮನ ಕರಗಗಳು ನಗರ ಪ್ರದಕ್ಷಿಣೆಗೆ ಹೊರಟವು.

ಮಹದೇವಪೇಟೆಯ ಮೂಲಕ ಪೇಟೆ ಶ್ರೀರಾಮಮಂದಿರ ತಲುಪಿದ ಕರಗಗಳಿಗೆ ದಾರಿಯುದ್ದಕ್ಕೂ ಜನ ಪೂಜೆ ಸಲ್ಲಿಸಿದರು. ವಿವಿಧ ಕಲಾತಂಡಗಳೂ ಮೆರವಣಿಗೆಯಲ್ಲಿ ಭಾಗಿಯಾದವು. ಮಂಗಳವಾದ್ಯಗಳ ನಿನಾದಕ್ಕೆ ಕರಗಧಾರಿಗಳು ಹೆಜ್ಜೆ ಹಾಕಿದರು. ಶಾಸಕರಾದ ಕೆ.ಜಿ.ಬೋಪಯ್ಯ ಹಾಗೂ ಎಂ.ಪಿ.ಅಪ್ಪಚ್ಚುರಂಜನ್ ಕರಗೋತ್ಸವಕ್ಕೆ ಚಾಲನೆ ನೀಡಿದರು.

ಮಡಿಕೇರಿ ದಸರಾ ಅ. 5ರವರೆಗೂ ನಿತ್ಯ ಹಲವು ಬಗೆಯ ಕಾರ್ಯಕ್ರಮಗಳ ಮೂಲಕ ಪ್ರವಾಸಿಗರನ್ನು ಸೆಳೆಯಲಿದೆ.

ಸೆ. 27ರಿಂದ 29ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು, ಸೆ. 30ರಂದು ಮಹಿಳಾ ದಸರೆ, ಅ. 1ರಂದು ಯುವ ಕಲೋತ್ಸವ, ಅ. 2ರಂದು ಜನಪದ ದಸರೆ, 3ರಂದು ಮಕ್ಕಳ ದಸರೆ, 5ರಂದು ದಶಮಂಟಪಗಳ ಶೋಭಾಯಾತ್ರೆ ನಡೆಯಲಿದೆ.

ಗೋಣಿಕೊಪ್ಪಲಿನಲ್ಲಿ ಚಾಮುಂಡೇಶ್ವರಿ ವಿಗ್ರಹವನ್ನು ಪ್ರತಿಷ್ಠಾಪಿಸುವ ಮೂಲಕ ದಸರಾ ಉತ್ಸವ ಆರಂಭಗೊಂಡಿದೆ.



ನವರಾತ್ರಿ ಉತ್ಸವದ ಮೊದಲ ದಿನವಾದ ಸೋಮವಾರ ಮಂಗಳೂರಿನ ಕುದ್ರೋಳಿ ಶ್ರೀ ಗೋಕರ್ಣನಾಥೇಶ್ವರ ದೇವಸ್ಥಾನದಲ್ಲಿ ಶಾರದಾದೇವಿಯ ಮೂರ್ತಿ ಪ್ರತಿಷ್ಠಾಪನೆ ಸಂದರ್ಭದ ಮೆರವಣಿಗೆಯಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿದ್ದರು –ಪಿಟಿಐ ಚಿತ್ರ

'ಮಹಿಳಾ ಸಬಲೀಕರಣಕ್ಕೆ ಕರ್ನಾಟಕ ಮಾದರಿ'

ಒಂದನೇ ಪುಟದಿಂದ

'ಮಹಿಷಾಸುರನನ್ನು ದೇವಿ ಚಾಮುಂಡಿ ಕೊಂದ ನಂತರ ಅಧ್ಯಾತ್ಮಿಕ ಮಹತ್ವವನ್ನು ಪಡೆದಿರುವ ಕ್ಷೇತ್ರದಲ್ಲಿ ದಸರಾ ಉತ್ಸವವನ್ನು ಉದ್ಘಾಟಿಸಿ ಪರಂಪರೆಯೊಂದಿಗೆ ಮುನ್ನಡೆಯಲು ಅಪರೂಪದ ಅವಕಾಶ ದೊರಕಿದ್ದು ಸಂತಸ ತಂದಿದೆ' ಎಂದರು.

'ದೇವಿ ಚಾಮುಂಡೇಶ್ವರಿಗೆ, ನೆರೆದ ಎಲ್ಲ ಸಹೃದಯರಿಗೆ ಹೃದಯ ಪೂರ್ವಕ ನಮಸ್ಕಾರಗಳು' ಎಂದು ಕನ್ನಡದಲ್ಲೇ ಅವರು ಮಾತು ಶುರು ಮಾಡಿದ್ದಕ್ಕೆ ಸಭಿಕರು ಚಪ್ಪಾಳೆ ತಟ್ಟಿದರು. ಉದ್ಘಾಟನೆಗೂ ಮುನ್ನ ದೇಗುಲದಲ್ಲಿ ದೇವಿಯ ದರ್ಶನ ಪಡೆದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಶೋಭಾ ಕರಂದ್ಲಾಜೆ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಚಿವ ವಿ.ಸುನಿಲ್ ಕುಮಾರ್ ವೇದಿಕೆಯಲ್ಲಿದ್ದರು.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಕಾಣಲು ಹುಬ್ಬಳ್ಳಿಯ ಜಿಮ್ಖಾನಾ ಮೈದಾನಕ್ಕೆ ಬಂದಿದ್ದ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ಸಿದ್ದಿ ಜನಾಂಗದವರು ವಾದ್ಯಗಳನ್ನು ನುಡಿಸಿ, ಜನರನ್ನು ರಂಜಿಸಿದರು –ಪ್ರಜಾವಾಣಿ ಚಿತ್ರ

ಮೈಸೂರಿನ 'ಪ್ರಥಮ ಪ್ರಜೆ'ಗೂ ಸಿಗದ ಅವಕಾಶ

ಪ್ರಜಾವಾಣಿ ವಾರ್ತೆ

ಮೈಸೂರು: ಚಾಮುಂಡಿ ಬೆಟ್ಟದಲ್ಲಿ ನಡೆದ ದಸರಾ ಉತ್ಸವದ ಉದ್ಘಾಟನಾ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಬೇಕಿದ್ದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಹಾಗೂ ಮೇಯರ್ ಶಿವಕುಮಾರ್ ಅವರಿಗೆ ವೇದಿಕೆಯಲ್ಲಿ ಅವಕಾಶವಿರಲಿಲ್ಲ.

ರಾಷ್ಟ್ರಪತಿ ಕಚೇರಿಯ ಸೂಚನೆಯಂತೆ 13 ಗಣ್ಯರು ವೇದಿಕೆಯಲ್ಲಿರಲಿದ್ದಾರೆ ಎಂದು ಉಸ್ತುವಾರಿ ಸಚಿವರು ತಿಳಿಸಿದ್ದರು. ಆದರೆ, ವೇದಿಕೆಯಲ್ಲಿ ಎಂಟು ಕುರ್ಚಿಗಳನ್ನು ಹಾಕಲಾಗಿತ್ತು.

ಕಾರ್ಯಕ್ರಮ ಶುರುವಾಗುವಷ್ಟರಲ್ಲಿ ಆರು ಕುರ್ಚಿಗಳಷ್ಟೇ ಇದ್ದವು. 'ನಾಲ್ವರು ಕೇಂದ್ರ ಸಚಿವರು, ಇಬ್ಬರು ರಾಜ್ಯ ಸಚಿವರು ಬರಲಿಲ್ಲ. ದೇವೇಗೌಡರು ಹಾಗೂ ಮೇಯರ್ ವೇದಿಕೆಯೇರಲು ರಾಷ್ಟ್ರಪತಿ ಕಚೇರಿ ಸಮ್ಮತಿಸಿರಲಿಲ್ಲ' ಎಂದು ಮೂಲಗಳು ತಿಳಿಸಿವೆ.

ಆದಿವಾಸಿಗಳ ಸಂಭ್ರಮ: ಒಡಿಶಾದ ಬುಡಕಟ್ಟು ಮಹಿಳೆಯಾದ ರಾಷ್ಟ್ರಪತಿ ಮುರ್ಮು ಅವರ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಅವಕಾಶ ಪಡೆದ ಮೈಸೂರು ಭಾಗದ ಜಿಲ್ಲೆಗಳ ಆದಿವಾಸಿಗಳಲ್ಲಿ ಸಂಭ್ರಮ ಮನೆ ಮಾಡಿತ್ತು.

ಕಾರ್ಯಕ್ರಮದ ಬಳಿಕ, ರಾಷ್ಟ್ರಪತಿಯವರು ಹುಣಸೂರು, ಪಿರಿಯಾಪಟ್ಟಣ ಹಾಗೂ ಎಚ್.ಡಿ. ಕೋಟೆ ತಾಲ್ಲೂಕಿನ ಆದಿವಾಸಿಗಳೊಂದಿಗೆ ಫೋಟೊಸೆಷನ್‌ನಲ್ಲೂ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಮೈಸೂರಿನ ಚಾಮುಂಡಿಬೆಟ್ಟದಲ್ಲಿ ದಸರಾ ಮಹೋತ್ಸವಕ್ಕಾಗಿ ಸೋಮವಾರ ಅಣಿಗೊಂಡಿದ್ದ ಚಾಮುಂಡೇಶ್ವರಿ ತಾಯಿಯ ಉತ್ಸವ ಮೂರ್ತಿ. –ಪ್ರಜಾವಾಣಿ ಚಿತ್ರ.

ನೃತ್ಯ ರೂಪಕದಲ್ಲಿ ಹೊಳೆದ ಯೋಗ

ಪ್ರಜಾವಾಣಿ ವಾರ್ತೆ

ಮೈಸೂರು: ಆಟೋಟಗಳಿಗೆ ಅಂಕಣವಾಗುತ್ತಿದ್ದ ನಗರದ ಓವಲ್ ಮೈದಾನ ಸೋಮವಾರ ಯೋಗ ನೃತ್ಯ ರೂಪಕಗಳಿಗೆ ವೇದಿಕೆಯಾಗಿ ಯೋಗಾಭ್ಯಾಸದ ಮಹತ್ವವನ್ನು ಸಾರಿತು.

ಹಲವು ಯೋಗಪಟುಗಳು ಯೋಗಾಸನಗಳನ್ನು ನೃತ್ಯದ ಮೂಲಕ ಪ್ರದರ್ಶಿಸಿ ಗಮನಸೆಳೆದರು. ಇದರೊಂದಿಗೆ ನಗರದ ವಿವಿಧೆಡೆ ಯೋಗ ದಸರೆಗೆ ಚಾಲನೆ ದೊರೆಯಿತು.

ಇದೇ ಸಂದರ್ಭದಲ್ಲಿ ಯೋಗ ಗುರು ಯೋಗಿ ದೇವರಾಜ್ ಅವರಿಗೆ ಶಾಸಕ ಎಲ್.ನಾಗೇಂದ್ರ ಅವರು 'ಯೋಗ ಸಿರಿ ಪ್ರಶಸ್ತಿ'ಯನ್ನು ಪ್ರದಾನ ಮಾಡಿದರು.

'ಮಂಗಳೂರು ದಸರಾ' ಮೆರುಗು

ಪ್ರಜಾವಾಣಿ ವಾರ್ತೆ

ಮಂಗಳೂರು: 'ಮಂಗಳೂರು ದಸರಾ' ಖ್ಯಾತಿಯ ಕುದ್ರೋಳಿ ಗೋಕರ್ಣನಾಥ ಕ್ಷೇತ್ರದಲ್ಲಿ ದಸರಾ ಮಹೋತ್ಸವ ಅಂಗವಾಗಿ ಶಾರದೆ ಮೂರ್ತಿ ಸಹಿತ ನವದುರ್ಗೆಯರ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ.

ಕ್ಷೇತ್ರದ ನವೀಕರಣದ ರೂವಾರಿ ಬಿ. ಜನಾರ್ದನ ಪೂಜಾರಿ ಅವರು ಹರೇಕಳ ಹಾಜಬ್ಬ, ಮಹಾಲಿಂಗ ನಾಯ್ಕ್ ಅವರ ಉಪಸ್ಥಿತಿಯಲ್ಲಿ ಉತ್ಸವಕ್ಕೆ ಚಾಲನೆ ನೀಡಿದರು.

ಶತಮಾನೋತ್ಸವ ಸಂಭ್ರಮದಲ್ಲಿರುವ ರಥಬೀದಿ ವೆಂಕಟರಮಣ ದೇವಾಲಯದ ಶಾರದೋತ್ಸವ, ಮಂಗಳಾ ದೇವಿ ದೇವಾಲಯ, ಕಟೀಲು ದುರ್ಗಾಪರಮೇಶ್ವರಿ ದೇವಾಲಯಗಳಲ್ಲಿ ಅದ್ಧೂರಿ ನವರಾತ್ರಿ ಆರಂಭಗೊಂಡಿದೆ. ಇಡೀ ಜಿಲ್ಲೆಯಾದ್ಯಂತ ಶರನ್ನವರಾತ್ರಿಯ ವೈಭವ ಕಳೆಗಟ್ಟಿದೆ.

ಮಂಗಳೂರಿನ ವೆಂಕಟರಮಣ ದೇವಸ್ಥಾನದ ಮೂಲ ವೆಂಕಟರಮಣ, ಗೋಪಾಲಕೃಷ್ಣ ಹಾಗೂ ಹಯಗ್ರೀವ ದೇವರಿಗೆ ಸಮಾಜ ಬಾಂಧವರು ನೀಡಿದ ನೆರವಿನಲ್ಲಿ ತಯಾರಿಸಿರುವ ನೂತನ ಸ್ವರ್ಣ ಕವಚವನ್ನು ಕಾಶಿ ಮಠಾಧೀಶ ಸಂಯಮೀಂದ್ರ ತೀರ್ಥ ಸ್ವಾಮೀಜಿ ಅವರು ದೇವರಿಗೆ ಅರ್ಪಿಸಿದರು.

ಮಂಗಳಾದೇವಿ ದೇವಸ್ಥಾನದ ದೇವಿಗೆ ಅಂದಾಜು ₹1.25 ಕೋಟಿ ವೆಚ್ಚದ ಸುವರ್ಣ ಪಾದುಕೆ ಹಾಗೂ ಬಲಿಮೂರ್ತಿಯ ಪುಷ್ಪ ಕನ್ನಡಿಗೆ ಚಿನ್ನದ ಹೊದಿಕೆಯನ್ನು ಸಮರ್ಪಿಸಲಾಯಿತು.

'ಆತ್ಮನಿರ್ಭರದತ್ತ ದೇಶದ ಹೆಜ್ಜೆ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ದೇಶವು ಈಗ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸುತ್ತಿದ್ದು, ಶತಾಬ್ದಿ (100) ಆಚರಣೆಯ ವೇಳೆಗೆ ಅಭಿವೃದ್ಧಿ ಹೊಂದಿದ ಹಾಗೂ ಸ್ವಾವಲಂಬಿ (ಆತ್ಮನಿರ್ಭರ) ದೇಶವಾಗಲಿದೆ' ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರತಿಪಾದಿಸಿದರು.

ಹುಬ್ಬಳ್ಳಿ- ಧಾರವಾಡ ಮಹಾನಗರಪಾಲಿಕೆಯು ಸೋಮವಾರ ಇಲ್ಲಿನ ಜಿಮ್ಖಾನಾ ಮೈದಾನದಲ್ಲಿ ನೀಡಿದ ಪೌರ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

'ಒಡಿಶಾದ ಸಾಮಾನ್ಯ ಕುಟುಂಬದ ನನಗೆ ಸನ್ಮಾನಿಸುವ ಮೂಲಕ ಹುಬ್ಬಳ್ಳಿ-ಧಾರವಾಡ ಜನತೆಯು ರಾಷ್ಟ್ರಪತಿಗಷ್ಟೆ ಅಲ್ಲ, ದೇಶದ ಎಲ್ಲ ಹೆಣ್ಣುಮಕ್ಕಳಿಗೆ ಸನ್ಮಾನಿಸಿದ್ದಾರೆ' ಎಂದು ಪ್ರಶಂಸಿಸಿದರು.

'ಭಾರತದ ಸಾಂಸ್ಕೃತಿಕ ಕ್ಷೇತ್ರದಲ್ಲಿ ಈ ನೆಲದ ಸಾಧನೆ ಉಲ್ಲೇಖನೀಯ. ಪ್ರಾಚೀನತೆ ಮತ್ತು ಆಧುನಿಕತೆಯ ಸಂಗಮವಾದ ಹುಬ್ಬಳ್ಳಿ-ಧಾರವಾಡ ವಿದ್ಯಾಕಾಶಿಯೂ ಆಗಿದೆ. ಸಾಹಿತ್ಯ ಕ್ಷೇತ್ರದಲ್ಲಿ ದ.ರಾ.ಬೇಂದ್ರೆ, ವಿ.ಕೃ.ಗೋಕಾಕ, ಸಂಗೀತ ಕ್ಷೇತ್ರದಲ್ಲಿ ಭೀಮಸೇನ್ ಜೋಶಿ, ಪಂಡಿತ ಬಸವರಾಜ ರಾಜಗುರು ಇನ್ನಿತರರ ಕೊಡುಗೆ ಉಲ್ಲೇಖನೀಯ' ಎಂದು ಹೇಳಿದರು.

'ಬಸವೇಶ್ವರ, ಸಿದ್ಧಾರೂಢ ಸ್ವಾಮೀಜಿ ಅವರ ಆಧ್ಯಾತ್ಮಿಕ ಮಾರ್ಗದಿಂದ ಈ ಕ್ಷೇತ್ರವು ಧನ್ಯವಾಗಿದೆ. ಕಿತ್ತೂರು ಚೆನ್ನಮ್ಮ, ನರಗುಂದ ಬಾಬಾಸಾಹೇಬ್ ಅವರ ಹೋರಾಟ ಸ್ಮರಿಸದಿದ್ದರೆ ಸ್ವಾತಂತ್ರ್ಯ ಹೋರಾಟದ ಚರಿತ್ರೆ ಪೂರ್ಣಗೊಳ್ಳದು' ಎಂದರು.

'ಸಂಶೋಧನೆ ಗುಣಮಟ್ಟ ಅಗತ್ಯ'

ಧಾರವಾಡ: 'ನಾಲ್ಕನೇ ಕೈಗಾರಿಕಾ ಕ್ರಾಂತಿಯಾದ ಡಿಜಿಟಲ್ ತಂತ್ರಜ್ಞಾನದಲ್ಲಿ ಭಾರತ ಮುಂಚೂಣಿಯಲ್ಲಿದ್ದು, ಪ್ರತಿಭಾವಂತ ತಂತ್ರಜ್ಞರನ್ನುರೂಪಿಸಿದಲ್ಲಿ ಈ ಕ್ಷೇತ್ರದಲ್ಲಿ ಅಗ್ರಸ್ಥಾನಕ್ಕೇರಲು ಸಾಧ್ಯ' ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದರು.

ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ (ಐಐಐಟಿ) ಧಾರವಾಡ ಹಾಗೂ ಅದರ ನೂತನ ಕ್ಯಾಂಪಸ್ ಅನ್ನು ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು.

'ತಾಂತ್ರಿಕ ಕೌಶಲವುಳ್ಳ ಮಾನವ ಸಂಪನ್ಮೂಲ ಬೆಳೆಸಿದಲ್ಲಿ ಭವ್ಯ ಭಾರತ ಕಟ್ಟಬಹುದು. ತಾಂತ್ರಿಕ ಶಿಕ್ಷಣದಲ್ಲಿ ದೇಶ ಅಗ್ರಸ್ಥಾನದಲ್ಲಿದೆ. ಇನ್ನಷ್ಟು ಸಂಶೋಧನೆ ಹಾಗೂ ಅನ್ವೇಷಣೆಗಳು ನಡೆದಲ್ಲಿ ದೇಶದ ಅಭಿವೃದ್ಧಿ ಸಾಧ್ಯ. ಈ ನಿಟ್ಟಿನಲ್ಲಿ ಮೋದಿ ಅವರ ನೇತೃತ್ವದ ಸರ್ಕಾರ ಹೆಚ್ಚಿನ ಒತ್ತು ನೀಡಿದೆ' ಎಂದರು.

ಇಂದು ವಿಧಾನಸೌಧದ ಕಚೇರಿಗಳಿಗೆ ರಜೆ

ಬೆಂಗಳೂರು: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಪೌರ ಸನ್ಮಾನ ಕಾರ್ಯಕ್ರಮ ಹಮ್ಮಿಕೊಂಡಿರುವುದರಿಂದ ಮಂಗಳವಾರ (ಸೆ.27) ವಿಧಾನಸೌಧದ ಎಲ್ಲ ಕಚೇರಿಗಳಿಗೆ ಒಂದು ದಿನ ರಜೆ ನೀಡಲಾಗಿದೆ.

ಭದ್ರತೆ, ಸುರಕ್ಷತೆಯ ದೃಷ್ಟಿಯಿಂದ ರಜೆ ಘೋಷಿಸಲಾಗಿದೆ. ಉಳಿದ ಎಲ್ಲ ಸರ್ಕಾರಿ ಕಚೇರಿಗಳು ಎಂದಿನಂತೆ ಕಾರ್ಯನಿರ್ವಹಿಸಲಿವೆ ಎಂದು ಸರ್ಕಾರದ ಪ್ರಕಟಣೆ ತಿಳಿಸಿದೆ.

ಸಂತೃಪ್ತಿಯೇ ಜೀವನ

ಸಂತೃಪ್ತಿ ಎಂದರೆ ಕಡಿಮೆ ಸಲಕರಣೆಗಳಲ್ಲಿ ಜೀವನವನ್ನು ಸಾಗಿಸುವುದು ಎಂಬರ್ಥ ಬಂದಿದೆ. ಆದರೆ ನಿಜಾರ್ಥದಲ್ಲಿ ಸಂತೃಪ್ತಿಯೆಂದರೆ, ಸರಿಯಾದುದರಲ್ಲಿ, ಉದಾತ್ತವಾದುದರಲ್ಲಿ ನಾವು ನೆಲೆಗೊಳ್ಳುವುದು.

ಕಮಲೇಶ್ ಪಟೇಲ್ (ದಾಜಿ)

ಹೀಗೊಂದು ಸನ್ನಿವೇಶವನ್ನು ಕಲ್ಪಿಸಿಕೊಳ್ಳಿ: ಒಬ್ಬ ರೋಗಿಯ ಶುಶ್ರೂಷೆ ಮಾಡುತ್ತಿರುವ ಇಬ್ಬರು ದಾದಿಯರು. ಅವರಲ್ಲೊಬ್ಬಳು ಅನಾರೋಗ್ಯದಿಂದ ಚಿಂತಿತಳಾಗಿ, ಆತಂಕದಿಂದ ಕೂಡಿದ್ದಾಳೆ. ಮತ್ತೊಬ್ಬಳು ಶಾಂತ, ಸಮಚಿತ್ತದಿಂದಿದ್ದಾಳೆ. ಅವರಿಬ್ಬರಲ್ಲಿ ಯಾರು ತಮ್ಮ ಕರ್ತವ್ಯವನ್ನು ಉತ್ತಮವಾಗಿ ನಿರ್ವಹಿಸಬಲ್ಲರು? ಶಾಂತವಾಗಿದ್ದು, ಮನೋಸ್ತಿಮಿತವುಳ್ಳ ದಾದಿಯೇ ಉತ್ತಮ ಸೇವೆ ಸಲ್ಲಿಸುವಳೆಂದು ಬಹುತೇಕ ಎಲ್ಲರೂ ಒಪ್ಪುತ್ತೀರಿ. ನಮ್ಮ ಮನಃಸ್ಥಿತಿಯು ನಮ್ಮ ಕರ್ತವ್ಯ ನಿರ್ವಹಣೆಯನ್ನು ಪ್ರಭಾವಿತಗೊಳಿಸುತ್ತದೆ.

ಕಾರ್ಯಗಳ ಆದ್ಯತೆ ಪಟ್ಟಿಯಲ್ಲಿ ಕರ್ತವ್ಯವು ಜವಾಬ್ದಾರಿಗಿಂತ ಮುಂದಿದೆ. ಕರ್ತವ್ಯವೆಂದರೆ ಸ್ವಂತದೆಡೆಗಿನ ಬಾಧ್ಯತೆ. ಸ್ಪಷ್ಟ ಕರ್ತವ್ಯಪ್ರಜ್ಞೆಯಿದ್ದರೆ ಆದ್ಯತೆಗಳನ್ನು ಉತ್ತಮವಾಗಿ ನಿರ್ವಹಿಸಬಹುದು. ಆದ್ದರಿಂದ ನೀವು ಶಿಕ್ಷಕಿ, ಗೃಹಿಣಿ, ವೈದ್ಯ ಅಥವಾ ಸೈನಿಕನಾಗಿರಬಹುದು; ಎಲ್ಲರಿಗೂ ಕರ್ತವ್ಯ ಮತ್ತು ಜವಾಬ್ದಾರಿಗಳು ಇದ್ದೇ ಇರುತ್ತವೆ. ಮನದೊಳಗೆ ಸಂಘರ್ಷವಿದ್ದಾಗ, ಕರ್ತವ್ಯ ಮತ್ತು ಜವಾಬ್ದಾರಿಗಳ ನಡುವೆ ಗೊಂದಲವುಂಟಾಗುತ್ತದೆ.

ಐದು ಸಾವಿರ ವರ್ಷಗಳ ಹಿಂದೆ ಮಹಾಭಾರತದ ರಣರಂಗದಲ್ಲಿ. ಅರ್ಜುನನಿಗೆ ಕರ್ತವ್ಯದ ವಿಷಯದಲ್ಲಿ ದ್ವಂದ್ವ ಉಂಟಾಗಿತ್ತು. ಆತನ ಮನಸ್ಸು ಅಸ್ಥಿರಗೊಂಡು, ಆತನ ಕೈಗಳು ಬಿಲ್ಲನ್ನು ಎತ್ತಲಾರದಾದುವು. ಶ್ರೀಕೃಷ್ಣನಿಂದ ಅರ್ಜುನನಿಗೆ ಕರ್ತವ್ಯದ ಬಗ್ಗೆ ಜ್ಞಾನೋದಯ ಉಂಟಾಯಿತು. ತನ್ನೊಳಗೆಯೆ ಸ್ಥಿರಗೊಂಡ ನಿಶ್ಚಲ ಮನಸ್ಸಿನ ರಹಸ್ಯವನ್ನು ಅರ್ಜುನನಿಗೆ ಅನಾವರಣಗೊಳಿಸುವ ಮೂಲಕ ಕೃಷ್ಣನು ಅದನ್ನು ಸಾಧಿಸಿದನು. ಕೃಷ್ಣ ಹೇಳಿದ: 'ಅರ್ಜುನ, ಇಚ್ಛೆಗಳನ್ನು ಮೀರಿ ನಡೆ, ನಿನ್ನೊಳಗೆ ಸಂತೃಪ್ತಿಯನ್ನು ಕಾಣು. ಇದು ನಿನ್ನನ್ನು ಸ್ಥಿತಪ್ರಜ್ಞನನ್ನಾಗಿ ಮಾಡುವುದು.' ಅಂತಹ ವ್ಯಕ್ತಿಯು ತನ್ನ ಕರ್ತವ್ಯದ ಬಗ್ಗೆ ಸ್ಪಷ್ಟಕಲ್ಪನೆಯನ್ನು ಹೊಂದಿರುತ್ತಾನೆ; ಅದನ್ನು ಆಂತರಿಕ ಸಂಘರ್ಷಣೆಯಿಲ್ಲದೆ ನಿರ್ವಹಿಸುತ್ತಾನೆ. ಇಚ್ಛೆಗಳು ಸಂಘರ್ಷಣೆಗಳನ್ನು ಸೃಷ್ಟಿಸುತ್ತವೆ.



ಅತಿಯಾಸೆ ಬರದಂತೆ ಮನಸ್ಸನ್ನು ನಿಗ್ರಹಿಸಲು ವಿಶ್ವಾದ್ಯಂತದ ಬಹುಶಃ ಎಲ್ಲ ಸಂಸ್ಕೃತಿಗಳು ಆತ್ಮನಿರಾಕರಣೆಯನ್ನು ಸೂಚಿಸುತ್ತವೆ. ಧಾರ್ಮಿಕ ಆಚರಣೆಗಳ ಭಾಗವಾಗಿರುವ ಉಪವಾಸಗಳು, ವ್ರತಗಳು ನೈತಿಕತೆಯನ್ನು ಬಲಗೊಳಿಸುತ್ತವೆ. ಈ ವಿಧಾನಗಳು ಕೊಂಚ ನೆರವಾದರೂ, ಸ್ಥಿತಪ್ರಜ್ಞರಾಗಲು ಶಾಶ್ವತ ಪರಿಹಾರವೆಂದರೆ, ಇಚ್ಛೆಗಳನ್ನು ಮೀರಿ, ಸಂತೃಪ್ತಿಯನ್ನು ಬೆಳೆಸಿಕೊಳ್ಳುವುದು. ಸಂತೃಪ್ತಿಯು ವ್ಯಕ್ತಿತ್ವಕ್ಕೆ ಸ್ಪಷ್ಟತೆಯನ್ನೂ ನೀಡುತ್ತದೆ

ಸಂತೃಪ್ತಿ ಎಂದರೆ ಕಡಿಮೆ ಸಲಕರಣೆಗಳಲ್ಲಿ ಜೀವನವನ್ನು ಸಾಗಿಸುವುದು ಎಂಬರ್ಥ ಬಂದಿದೆ. ಆದರೆ ನಿಜಾರ್ಥದಲ್ಲಿ ಸಂತೃಪ್ತಿಯೆಂದರೆ, ಸರಿಯಾದುದರಲ್ಲಿ, ಉದಾತ್ತವಾದುದರಲ್ಲಿ ನಾವು ನೆಲೆಗೊಳ್ಳುವುದು. ಸಂತೃಪ್ತಿಯು ಇಚ್ಛೆಯ, ಎಂದರೆ ಬಯಕೆಗಳ ಬಿರುಗಾಳಿಯಿಂದ ನಮ್ಮನ್ನು ರಕ್ಷಿಸುತ್ತದೆ. ನಿಮ್ಮದೇ ಜೀವನವನ್ನು ನೋಡಿಕೊಳ್ಳಿರಿ, ನೀವು ಯಾವಾಗ ಸಂತೃಪ್ತಿಯಿಂದ ಇದ್ದಿರೊ, ಅವು ನಿಮ್ಮ ಅತ್ಯಂತ ಸಂತೋಷದ ಕ್ಷಣಗಳಾಗಿರುತ್ತವೆ. ಸಂತೃಪ್ತಿಯಿಂದ ಸಮಾಧಾನ, ಕರುಣೆ, ಧೈರ್ಯ ಮತ್ತು ಸ್ಪಷ್ಟತೆಗಳು ಬರುತ್ತವೆ.

ಸಂತೃಪ್ತ ವ್ಯಕ್ತಿ, ಬೇಡಿಕೆಗಳಿಂದ ಮುಕ್ತನಾಗಿರುತ್ತಾನೆ. ಯಾರಿಗೂ ಆಗ್ರಹ ಮಾಡುವುದಿಲ್ಲ. ಅವನೆಲ್ಲೇ ಇರಲಿ, ಸಂತೋಷವಾಗಿರುತ್ತಾನೆ. ಸಂತೋಷವು ನಮಗೆ ಯಶಸ್ಸನ್ನು ತರುತ್ತದೆಯೇ ಹೊರತು ಯಶಸ್ಸು ಸಂತೋಷವನ್ನು ತರಲಾರದು. ತಮ್ಮ ಉಪಸ್ಥಿತಿ, ವಿನಮ್ರತೆ ಮತ್ತು ತಿಳಿವಳಿಕೆಯಿಂದ ತೃಪ್ತ ಜನರು ತಾವೆಲ್ಲೇ ಹೋದರೂ ಅಲ್ಲೆಲ್ಲ ಸಂತೋಷವನ್ನು ಹರಡುತ್ತಾರೆ.

ಸ್ಥಿತಪ್ರಜ್ಞರ ಗುಣಲಕ್ಷಣವೆಂದರೆ, ಸಂತೃಪ್ತಿ. ನೀರಿನ ಲೋಟವೊಂದನ್ನು ಕಲಕಿದಾಗ, ಆ ಚಲನೆಯು ಅಲೆಗಳನ್ನು ಉಂಟುಮಾಡುತ್ತದೆ. ಆದರೆ ಸಾಗರದ ನೀರನ್ನು ಕಲಕಲು ಪ್ರಯತ್ನಿಸಿ. ನೀವು ಅದೆಷ್ಟೇ ಶ್ರಮವಹಿಸಿದರೂ, ಸಾಗರದ ತನ್ನದೇ ಲಯದಲ್ಲಿರುತ್ತದೆ. ಹಾಗೆಯೇ ಸ್ಥಿತಪ್ರಜ್ಞೆಯ ಸ್ಥಿತಿಯಲ್ಲಿರುವ ವ್ಯಕ್ತಿಯೂ ಸ್ಪಷ್ಟತೆಯುಳ್ಳವನಾಗಿ, ಕರ್ತವ್ಯಪಥದಿಂದ ಕಿಂಚಿತ್ತೂ ಕದಲುವುದಿಲ್ಲ. ಸಂತೃಪ್ತ ಹೃದಯಗಳಿಂದ ಹಾಗೂ ಸ್ಥಿರ ಮನಸ್ಸುಗಳಿಂದಲೇ ಧನಾತ್ಮಕ ಬದಲಾವಣೆ ಬರಲು ಸಾಧ್ಯ.

ಸಂತೃಪ್ತಿಯೊಡನೆ ಆಂತರಿಕ ಪರಿಶುದ್ಧತೆಯೂ ಸೇರಿದರೆ ವ್ಯಕ್ತಿಯು ಬಯಕೆಗಳನ್ನು ಮೀರಬಲ್ಲವನಾಗುತ್ತಾನೆ. ಹಾಗೆ ನಾವು ಬಯಕೆಗಳನ್ನು ಮೀರಿದಾಗ, ಮನಸ್ಸು ಕರ್ತವ್ಯದಲ್ಲಿ ಸ್ಥಿರಗೊಳ್ಳುತ್ತದೆ. ನಾವು ಇದ್ದಲ್ಲೇ ಇರುವಂತೆ, ನಮಗೆ ಬೇಕಾದುದನ್ನೆಲ್ಲ ನಮ್ಮೊಳಗೆ ಕಾಣುತ್ತೇವೆ. ಆಂತರ್ಯದ ಜ್ಯೋತಿ ತೇಜೋಮಯವಾಗಿ ಬೆಳಗುತ್ತ, ನಮಗೆ ಮುಂದಿನ ಪಥವನ್ನು ತೋರುತ್ತದೆ. ❖

ಹಾವಿನ ಕಡಿತಕ್ಕೆ ಬೇಕು ಸಂಶೋಧನೆಯ ಮಿಡಿತ

ಡಾ. ಕುಶ್ವಂತ್ ಕೋಳಿಬೈಲು

ಪ್ರತಿಯೊಂದು ರೋಗದ ಚಿಕಿತ್ಸೆಯನ್ನು ಉತ್ತಮಪಡಿಸಲು ಹೊಸ ಔಷಧಗಳು ಮತ್ತು ಚಿಕಿತ್ಸಾ ವಿಧಾನಗಳು ಕಾಲಾನುಕಾಲಕ್ಕೆ ಪ್ರಗತಿ ಸಾಧಿಸುವುದು ಅನಿವಾರ್ಯ. ಬಿಪಿ, ಶುಗರ್ ಮುಂತಾದ ರೋಗಗಳ ಚಿಕಿತ್ಸೆಗೆ ದೊಡ್ಡ ಆರ್ಥಿಕ ಮಾರುಕಟ್ಟೆಯಿರುವುದರಿಂದ ಫಾರ್ಮಾ ಕಂಪನಿಗಳು ಕೂಡ ಹೊಸ ಔಷಧಿಯ ಶೋಧಕ್ಕೆ ಮತ್ತು ಸಂಶೋಧನೆಗಳಿಗೆ ಕೋಟ್ಯಂತರ ರೂಪಾಯಿಗಳನ್ನು ವೆಚ್ಚಮಾಡುತ್ತವೆ. ಆದರೆ ದುರಾದೃಷ್ಟವಶಾತ್ ಕೆಲವು ರೋಗಗಳು ಸಮಾಜದ ಆರ್ಥಿಕ ದುರ್ಬಲ ವರ್ಗದವರಿಗೆ ಮತ್ತು ಗ್ರಾಮೀಣ ಭಾಗದವರಿಗೆ ಅತ್ಯಧಿಕವಾಗಿ ಬಾಧಿಸುವುದರಿಂದ ಅಂತಹ ರೋಗಗಳ ಚಿಕಿತ್ಸೆಯ ವಿಧಾನದಲ್ಲಿ ಹೊಸ ಆವಿಷ್ಕಾರಗಳು ಹುಟ್ಟುವ ಸಾಧ್ಯತೆಗಳು ತೀರಾ ಕಡಿಮೆ. ಭಾರತದಲ್ಲಿ ವಾರ್ಷಿಕವಾಗಿ ಹಾವಿನ ಕಡಿತಕ್ಕೆ ತುತ್ತಾಗುವ ಸರಾಸರಿ ಹತ್ತು ಲಕ್ಷ ಜನರಲ್ಲಿ ಸುಮಾರು ಐವತ್ತು ಸಾವಿರ ಜನರು ತಮ್ಮ ಜೀವವನ್ನು ಕಳೆದುಕೊಳ್ಳುತ್ತಾರೆ. ಇದರಲ್ಲಿ ಶೇ 95ರಷ್ಟು ಗ್ರಾಮೀಣ ರೈತಾಪಿ ಜನರು ಮತ್ತು ಕೂಲಿ ಕಾರ್ಮಿಕರೇ ಬಲಿಯಾಗುತ್ತಿದ್ದಾರೆ. ಹಾವಿನ ಕಡಿತವನ್ನು ನಿರ್ಲಕ್ಷಿತ ಉಷ್ಣವಲಯದ ಕಾಯಿಲೆಗಳ ಪಟ್ಟಿಗೂ ಸೇರಿಸಲಾಗಿದೆ (Neglected tropical disease).

ಭಾರತದಲ್ಲಿ ಪ್ರತಿ ವರ್ಷ ಸುಮಾರು ಐವತ್ತು ಸಾವಿರದಷ್ಟು ಜನರು ಹಾವಿನ ಕಡಿತದಿಂದ ಮೃತರಾಗುತ್ತಿರುವುದಕ್ಕೆ ಅನೇಕ ಕಾರಣಗಳಿವೆ.

ಭಾರತದಲ್ಲಿ ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಬಿಹಾರ, ತಮಿಳುನಾಡು, ಕರ್ನಾಟಕ ಮತ್ತು ಉತ್ತರ ಪ್ರದೇಶಗಳ ಗ್ರಾಮೀಣ ಭಾಗಗಳಲ್ಲಿ ಅಧಿಕ ಪ್ರಮಾಣದಲ್ಲಿ ಜನರು ಹಾವಿನ ಕಡಿತಕ್ಕೆ ಒಳಗಾಗುತ್ತಾರೆ. ಭಾರತದಲ್ಲಿ ಕಂಡುಬರುವ ಸುಮಾರು ಮುನ್ನೂರು ಬಗೆಯ ಹಾವುಗಳಲ್ಲಿ ಸುಮಾರು ಅರವತ್ತರಷ್ಟು ವಿಷಪೂರಿತ ಹಾವುಗಳಿವೆ. ಪ್ರಮುಖವಾದ ನಾಲ್ಕು ಹಾವುಗಳ ವಿಷದ ದೋಷವನ್ನು ಮಾತ್ರ ನಿವಾರಿಸುವ ಶಕ್ತಿಯನ್ನು ಈಗ ಮಾರುಕಟ್ಟೆಯಲ್ಲಿರುವ 'ಆ್ಯಂಟಿ ಸ್ನೇಕ್ ವೆನಮ್' (ASV) ಹೊಂದಿದೆ.

1.ಕೋಬ್ರಾ (ನಾಗರಹಾವು)
2. ಕ್ರೈಟ್ (ಕಟ್ಟು/ಕಂದಡಿ ಹಾವು)
3. ರಸಲ್ ವೈಪರ್ (ಕೊಳಕ ಮಂಡಲ)
4. ಸ್ವಾ ಸ್ಕೇಲ್ಡ್ ವೈಪರ್ (ಉರಿ ಮಂಡಲ ಹಾವು)

ಈ ನಾಲ್ಕು ವಿಷಯುಕ್ತ ಹಾವುಗಳು ಭಾರತದಲ್ಲಿ ಹೆಚ್ಚಾಗಿ ಜನರಿಗೆ ಕಡಿಯುತ್ತಿರುವುದು. ಹೀಗಾಗಿ 'ಆ್ಯಂಟಿ ಸ್ನೇಕ್ ವೆನಮ್'ಅನ್ನು ತಯಾರಿಸುವಾಗ ಈ ನಾಲ್ಕು ಜಾತಿಯ ಹಾವಿನ ವಿಷವನ್ನು ಮಾತ್ರ ಬಳಸಲಾಗುತ್ತದೆ. ಇದರಿಂದ ಇತರ ಪ್ರಬೇಧಗಳ ವಿಷಯುಕ್ತ ಹಾವುಗಳು ಕಚ್ಚಿದರೆ ಚಿಕಿತ್ಸೆಯಲ್ಲಿ ತೊಡಕುಂಟಾಗುತ್ತದೆ.

'ಆ್ಯಂಟಿ ಸ್ನೇಕ್ ವೆನಮ್' ತಯಾರಿಕೆ ಬಹಳ ಸಂಕೀರ್ಣವಾದ ಪ್ರಕ್ರಿಯೆ. ಈ ನಾಲ್ಕು ಪ್ರಮುಖ ಹಾವುಗಳ ವಿಷವನ್ನು ಕುದುರೆಯ ದೇಹಕ್ಕೆ ಲಘುವಾದ ಪ್ರಮಾಣದಲ್ಲಿ ನೀಡಿದಾಗ ಕುದುರೆಯ ರಕ್ತದಲ್ಲಿ ಈ ವಿಷಗಳ ವಿರುದ್ಧ 'ಆ್ಯಂಟಿಬಾಡಿಗಳ ಉತ್ಪಾದನೆಯಾಗುತ್ತದೆ. ಕುದುರೆಯ ರಕ್ತದಿಂದ ಈ ಆ್ಯಂಟಿಬಾಡಿಯಲ್ಲಿ ಸಂಗ್ರಹಿಸಿ ಅದರಿಂದ 'ಆ್ಯಂಟಿ ಸ್ನೇಕ್ ವೆನಮ್' ಅನ್ನು ತಯಾರಿಸಲಾಗುತ್ತದೆ. ಇದರ ಉತ್ಪಾದನೆಯು ಚೆನ್ನೈಯಲ್ಲಿ ನಡೆಯುತ್ತದೆ. ಕುದುರೆಯ ದೇಹದೊಳಗೆ ಹಾವಿನ ವಿಷವನ್ನು ಸೇರಿಸುವಾಗ ಸ್ಥಳೀಯವಾಗಿ ಸಿಗುವ ಈ ನಾಲ್ಕು ಪ್ರಮುಖ ಪ್ರಭೇದಗಳ ಹಾವುಗಳ ವಿಷವನ್ನು ಬಳಸುತ್ತಾರೆ. ಒಂದೇ ಪ್ರಭೇದದ ಹಾವುಗಳ ವಿಷವು ಕೂಡ ಭಾರತದ ವಿವಿಧ ಭಾಗಗಳಿಗೆ ಹೋದಂತೆ ಅಲ್ಪ ಸ್ವಲ್ಪ ಬದಲಾವಣೆಯಾಗುವ ಕಾರಣದಿಂದ ಉತ್ತರ ಹಾಗೂ ಪಶ್ಚಿಮ ಭಾರತದಲ್ಲಿ ಇದೇ ಆ್ಯಂಟಿ ಸ್ನೇಕ್ ವೆನಮ್ ದಕ್ಷಿಣ ಭಾರತದಲ್ಲಿರುವಷ್ಟು ಪರಿಣಾಮಕಾರಿಯಾಗಿರುವುದಿಲ್ಲ. ದಕ್ಷಿಣ ಭಾರತದ ಮತ್ತು ಕೇರಳದ ತೋಟಗಳಲ್ಲಿ ಕಾರ್ಮಿಕರಿಗೆ ಅತು ಹೆಚ್ಚು ಕಚ್ಚುವ ಹಾವಾಗಿರುವ ಮಲಾಬಾರ್ ಪಿಟ್ ವೈಪರಿನ ವಿಷವನ್ನು ಆ್ಯಂಟಿ ಸ್ನೇಕ್ ವೆನಮ್‌ನ ತಯಾರಿಕೆಯಲ್ಲಿ ಬಳಸಿರುವುದಿಲ್ಲ. ಪ್ರಮುಖ ನಾಲ್ಕು ವಿಷಪೂರಿತ ಹಾವುಗಳ ಸಾಲಿನಲ್ಲಿ ಬರದ ಹಾವುಗಳು ಕಚ್ಚಿದಾಗ ಕೆಲವೊಮ್ಮೆ ಸಮಸ್ಯೆಗಳು ಉಲ್ಬಣಗೊಳ್ಳುವ ಸಾಧ್ಯತೆಯಿರುತ್ತದೆ; ಮತ್ತು ಅಗಾಧ ಪ್ರಮಾಣದ ಆ್ಯಂಟಿ ಸ್ನೇಕ್ ವೆನಮ್ ಅನ್ನು ನೀಡಬೇಕಾಗಿ ಬರಬಹುದು.

ಭಾರತದಲ್ಲಿ ಪ್ರತಿ ವರ್ಷ ಸುಮಾರು ಐವತ್ತು ಸಾವಿರದಷ್ಟು ಜನರು ಹಾವಿನ ಕಡಿತದಿಂದ ಮೃತಪಡುತ್ತಿರುವುದರ ಹಿಂದೆ ಅನೇಕ ಕಾರಣಗಳಿವೆ. ಗ್ರಾಮೀಣ ಭಾಗದ ಜನರಿಗೆ ಹಾವು ಕಡಿದಾಗ ಆಸ್ಪತ್ರೆಗೆ ಹೋಗುವ ಬದಲು ಸಾಂಪ್ರದಾಯಿಕ ಔಷಧಿಗಳತ್ತ ಮುಖ ಮಾಡುವವರೂ ಇದ್ದಾರೆ. ಆ್ಯಂಟಿ ಸ್ನೇಕ್ ವೆನಮ್ ಸುಮಾರು ಶೇ 30ರಷ್ಟು ಜನರಲ್ಲಿ ಅಲರ್ಜಿಯನ್ನು ಉಂಟುಮಾಡುತ್ತಿದೆ. ಹೀಗಾಗಿ ಅನೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಆ್ಯಂಟಿ ಸ್ನೇಕ್ ವೆನಮ್ ಅನ್ನು ನೀಡಲು ವೈದ್ಯರು ಹಿಂದೆ ಮುಂದೆ ನೋಡುತ್ತಾರೆ. ರೋಗಿಗೆ ಶೀಘ್ರವಾಗಿ ಆ್ಯಂಟಿ ಸ್ನೇಕ್ ವೆನಮ್ ನೀಡಿದಲ್ಲಿ ಹಾವು ಕಡಿತದಿಂದ ಮೃತಪಡುವವರ ಸಂಖ್ಯೆಯನ್ನು ಗಣನೀಯವಾಗಿ ಕಡಿಮೆಮಾಡಬಹುದು. ಹಾವುಗಳು ಹೆಚ್ಚಿರುವ ಪ್ರದೇಶಗಳಲ್ಲಿ ಜನರು ಹೆಚ್ಚು ಎಚ್ಚರಿಕೆಯಿಂದ ಓಡಾಡುವುದರ ಜೊತೆಗೆ ಸೂಕ್ತವಾದ ಪಾದರಕ್ಷೆಗಳನ್ನು ಧರಿಸುವುದರಿಂದಲೂ ಕಡಿತದ ಪ್ರಮಾಣವನ್ನು ಕಡಿಮೆ ಮಾಡಬಹುದು.

ಮಂಡಲ ಹಾವುಗಳು ಕಚ್ಚಿದಾಗ ಸ್ಥಳೀಯ ಭಾಗವು ಊದಿಕೊಂಡು ಹಾವು ಕಚ್ಚಿದ ಗುರುತು ಸ್ಪಷ್ಟವಾಗಿ ಕಾಣಿಸುತ್ತದೆ. ನಾಗರಹಾವುಗಳ ವಿಷವು ದೇಹದ ನರಮಂಡಲವನ್ನು ಬಾಧಿಸುವುದರ ಜೊತೆಗೆ ಅದರ ಕಡಿತವೂ ದೇಹದಲ್ಲಿ ಗುರುತನ್ನು ಮೂಡಿಸುತ್ತದೆ. ರಾತ್ರಿ ವೇಳೆಯಲ್ಲಿ ಹೆಚ್ಚಾಗಿ ಹರಿದಾಡುವ ಕಟ್ಟು ಹಾವಿನ ಕಡಿತದ ಗುರುತು ನಿಖರವಾಗಿ ಕಚ್ಚಿದ ಜಾಗದಲ್ಲಿ ಮೂಡುವುದಿಲ್ಲ. ತೀವ್ರವಾಗಿ ಅನಾರೋಗ್ಯಕ್ಕೆ ಒಳಗಾಗುವ ಅಂತಹ ರೋಗಿಗಳನ್ನು ಅವರ ರೋಗಲಕ್ಷಣಗಳ ಆಧಾರದ ಮೇಲೂ ಆ್ಯಂಟಿ ಸ್ನೇಕ್ ವೆನಮ್ ಅನ್ನು ನೀಡಬೇಕಾಗುತ್ತದೆ. ಹಾವುಗಳ ಕಡಿತಕ್ಕೆ ಸಮಾಜದ ಕೆಳವರ್ಗದವರೇ ತುತ್ತಾಗುವುದರಿಂದ ಬಹುಶಃ ಆ್ಯಂಟಿ ಸ್ನೇಕ್ ವೆನಮ್‌ನ ಸಂಶೋಧನೆಯಲ್ಲಿ ದಶಕಗಳಿಂದ ಹೆಚ್ಚಿನ ಬದಲಾವಣೆಗಳಾಗಲಿಲ್ಲ ಎನಿಸುತ್ತದೆ. ಜಾನ್ ಎಫ್ ಕೆನಡಿ ಅಮೆರಿಕದ ಅಧ್ಯಕ್ಷರಾಗಿದ್ದಾಗ ಅವರ ಪ್ರೀಟರ್ಮ್ ಮಗುವು ಚಿಕಿತ್ಸೆ ಫಲಕಾರಿಯಾಗದ ಶ್ವಾಸಕೋಶದ ಸಮಸ್ಯೆಯಿಂದ ಮೃತಪಟ್ಟಿತು. ತದನಂತರ ಪ್ರೀಟರ್ಮ್ ಮಕ್ಕಳ ಶ್ವಾಸಕೋಶದ ಕಾಯಿಲೆಯ ಚಿಕಿತ್ಸೆ ಬಗೆಗೆ ಮಹತ್ತರವಾದ ಅನ್ವೇಷಣೆಗಳು ನಡೆದು, ನವಜಾತ ಶಿಶುಗಳ ಚಿಕಿತ್ಸಾ ಪದ್ಧತಿಗಳು ಉತ್ತಮಗೊಂಡವು.

'ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್' (ICMR) ಕಳೆದ ತಿಂಗಳು ಭಾರತದಲ್ಲಿ ಹಾವಿನ ಕಡಿತದಿಂದಾಗುವ ಸಮಸ್ಯೆಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕಲೆಹಾಕಲು ನಿರ್ದೇಶನವನ್ನು ನೀಡಿದೆ. ಹಾವಿನ ಕಡಿತಗಳು ಹೆಚ್ಚಾಗಿ ಕಂಡು ಬರುವ ಭಾರತದ ಹದಿಮೂರು ರಾಜ್ಯಗಳ ಮೂವತ್ತೊಂದು ಜಿಲ್ಲೆಗಳನ್ನು ಗುರುತು ಮಾಡಲಾಗಿದೆ. ಮುಂದಿನ ಹದಿನೆಂಟು ತಿಂಗಳುಗಳ ಕಾಲ ಈ ಜಿಲ್ಲೆಗಳಲ್ಲಿರುವ ಆಶಾ ಕಾರ್ಯಕರ್ತೆಯರು ಪ್ರತಿಯೊಂದು ಗ್ರಾಮದಿಂದಲೂ ಹಾವಿನ ಕಡಿತದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲಿದ್ದಾರೆ. ಈ ಪ್ರಕ್ರಿಯೆಯಿಂದ ನಮಗೆ ದೇಶದ ವಿವಿಧ ಭಾಗಗಳಲ್ಲಿರುವ ವಿಷಪೂರಿತ ಹಾವುಗಳ ಕಡಿತದ ಬಗೆಗಿನ ಸ್ಪಷ್ಟ ಚಿತ್ರಣ ದೊರಕಲಿದೆ. ನಂತರದ ದಿನಗಳಲ್ಲಾದರೂ ವಿವಿಧ ಪ್ರದೇಶಗಳಲ್ಲಿ ಬಳಸುವ ಆ್ಯಂಟಿ ಸ್ನೇಕ್ ವೆನಮ್‌ನ ತಯಾರಿಕೆಯಲ್ಲಿ ಬಳಸ್ಪಡುವ ಹಾವಿನ ವಿಷಗಳು ಬದಲಾಗಬಹುದು. ಹಾವಿನ ಕಡಿತದ ಕುರಿತಾಗಿ ಹೊಸ ಪಾಲಿಸಿಗಳು ಜಾರಿಯಾದಲ್ಲಿ, ಹಾವಿನ ಕಡಿತದಿಂದಾಗಿ ಸಾಯುವವರ ಸಂಖ್ಯೆಯೂ ಕಡಿಮೆಯಾಗಬಹುದು. ❖

ಹಿರಿಯರ ಮಾತಿನ ಹಸಿವು!

ಡಾ. ಕೆ. ಎಸ್. ಪವಿತ್ರ



ಅರವತ್ತು ವರ್ಷ ದಾಟಿದ ಹಿರಿಯರು ನಿಮ್ಮ ಮನೆಯಲ್ಲಿ ಇದ್ದಾರೆಯೇ? ಹಾಗಿದ್ದರೆ ನೀವು ಈ ಲೇಖನ ಓದಲೇಬೇಕು. ಹಾಗೆಯೇ ನೀವೇ ಅರವತ್ತು ವರ್ಷ ವಯಸ್ಸಿನ ಆಸುಪಾಸಿನಲ್ಲಿದ್ದರೂ ಇಲ್ಲಿನ ವಿಷಯ ನಿಮಗೆ ಅನ್ವಯಿಸುತ್ತದೆ.

ಒಮ್ಮೆ ಒಬ್ಬರು ತಮ್ಮ ತಾಯಿಯನ್ನು ಚಿಕಿತ್ಸೆಗೆಂದು ಕರೆತಂದಿದ್ದರು. 65 ವರ್ಷದ ಆ ಮಹಿಳೆಗಿದ್ದ ಸಮಸ್ಯೆಯೇನು?ಅವರ ಮಗಳ ಪ್ರಕಾರ 'ನಮ್ಮಮ್ಮ ಯಾವಾಗಲೂ ಮಾತಾಡ್ತಾನೇ ಇರ್ತಾರೆ ಡಾಕ್ಟ್ರೇ, ನನ್ನ ಮಕ್ಕಳಿಗೋ ಅವರವರ ಓದು -ಆಟ-ಟಿ.ವಿ. ನಮ್ಮಮ್ಮನಿಗೆ ಆ ಮೊಮ್ಮಕ್ಕಳು ತುಂಬ ಚಿಕ್ಕವರು ಎಂಬ ಭಾವನೆ. ಹಾಗಾಗಿ ಅವರಿಗಾಗಿ ಚಿಕ್ಕ ಚಿಕ್ಕ ಆಟದ ಸಾಮಾನು, ಯಾವುದಾದರೊಂದು ತಿಂಡಿ ತರದೆ ಸಮಾಧಾನವಿಲ್ಲ. ಆದರೆ ನನ್ನ ಮಕ್ಕಳು ಹೊರಗಿನ ದೃಷ್ಟಿಯಿಂದ ದೊಡ್ಡವರೇ. ಅವರಿಗೆ ಇವೆಲ್ಲ ಮಕ್ಕಳಾಟಿಕೆ - 'ಚೈಲ್ಡಿಷ್' ಎನಿಸಿಬಿಡುತ್ತದೆ. ಆ ತಕ್ಷಣಕ್ಕೆ ಕೊಂಚ ಉತ್ಸಾಹ ತೋರಿಸಿದಂತೆ ಮಾಡಿ, ಆಮೇಲೆ ಅದನ್ನು ಉಪಯೋಗಿಸದೇ ಹಾಗೆ ಮೂಲೆ ಸೇರಿಸುತ್ತಾರೆ. ನಾನು ಆ ಕಡೆ ಅಮ್ಮನಿಗೂ ಏನೂ ಹೇಳುವ ಹಾಗಿಲ್ಲ, ಈ ಕಡೆ ಈಗಿನ ಕಾಲದ ಮಕ್ಕಳಿಗೂ ಏನೂ ಮಾತನಾಡುವಂತಿಲ್ಲ. ನಮ್ಮಮ್ಮ ಹೇಳಿದ್ದನ್ನೇ ಮತ್ತೆ ಮತ್ತೆ ನೆನಪಿಸಿಕೊಂಡು ನನಗೆ ಹೇಳುವುದು, ಮಾತನಾಡುವುದನ್ನೇ ಮುಗಿಸದಿರುವುದು ಇವು 'ಡಿಮೆನ್ಷಿಯಾ' ಇರಬಹುದೇ ಅಂತ ಅನುಮಾನ ಬರ್ತಿದೆ ಡಾಕ್ಟ್ರೇ ಏನು ಮಾಡಬೇಕು?'

ಆ ಹಿರಿಯ, ಆರೋಗ್ಯವಂತ ಮಹಿಳೆಗೆ ಇದ್ದದ್ದು ಯಾವ ಕಾಯಿಲೆಯೂ ಅಲ್ಲ. ಅದು ವೃದ್ಧಾಪ್ಯದಲ್ಲಿ ಮನುಷ್ಯ ಸಹಜವಾಗಿ ಪ್ರತಿಯೊಬ್ಬರೂ ಅನುಭವಿಸುವ 'ಬೇಸರ'ದಿಂದ ಉಂಟಾಗುವ ಮಾತು-ಗಮನ-ಪ್ರೀತಿಗಳ ಹಸಿವು.

ದೇಹಕ್ಕೆ ವಯಸ್ಸಾದಂತೆ ಮನಸ್ಸಿಗೂ ವಯಸ್ಸಾಗುತ್ತದೆ. ಆದರೆ ಅದು ಚರ್ಮ, ತಲೆಕೂದಲು, ಹಲ್ಲು ಮೊದಲಾದವುಗಳಲ್ಲಿ ದೈಹಿಕವಾಗಿ ಸ್ಪಷ್ಟವಾಗಿ ಕಂಡಂತೆ ಹೊರಗೆ ತೋರುವುದಿಲ್ಲ. ದೇಹದ ಶಕ್ತಿ ಕುಂದಿದಂತೆ, ಮನಸ್ಸಿಗೂ ಧೈರ್ಯ-ಛಲ-ಉತ್ಸಾಹಗಳು ಕುಗ್ಗುತ್ತವೆ. ಅಲ್ಲಿಯವರೆಗೆ ಹೇಗೆ ಬೇಕಾದರೂ, ಏನು ಬೇಕಾದರೂ ಮಾಡಿಯೇನು ಎಂಬಂತಿರುವ ಮನೋಭಾವ ಸ್ವಲ್ಪ ತಗ್ಗಿ, 'ಈಗಲೂ ಈ ಕೆಲಸಗಳನ್ನು ಮಾಡಬೇಕು; ಆದರೆ ಜೊತೆಗೊಬ್ಬರು ಇರಬೇಕು' ಎನ್ನುವ ನಿರೀಕ್ಷೆಯಾಗಿ ಬದಲಾಗುತ್ತದೆ. ದೇಹದಲ್ಲಿ ಕಿವಿ-ಕಣ್ಣುಗಳ ಸಾಮರ್ಥ್ಯದ ಕುಂದುವಿಕೆ, ಆಗಾಗ ಮರೆವು ಇವುಗಳೂ ಈ ಛಲ ತಗ್ಗಲು, ನಿರೀಕ್ಷೆಯಾಗಿ ಬದಲಾಗಲು ಪ್ರಮುಖ ಕಾರಣಗಳೇ.

ವಯಸ್ಸಾದಂತೆ ಕಡಿಮೆಯಾಗದಿರುವ ಸಾಮರ್ಥ್ಯವೆಂದರೆ ಮಾತನಾಡುವ ಸಾಮರ್ಥ್ಯ. ಅವರ ಅನುಭವ, ದೀರ್ಘ ತಿಳಿವಳಿಕೆಗಳಿಂದ ಇತರರು ಗಮನಿಸದ ಸಂಗತಿಗಳನ್ನು ಹಿರಿಯರು ಗಮನಿಸಿ ಹೇಳಬಹುದು. ಅದರ ಪರಿಣಾಮವಾಗಿ ಮಕ್ಕಳ-ಮೊಮ್ಮಕ್ಕಳ ಕೋಪಕ್ಕೂ ಅವರು ತುತ್ತಾಗಬಹುದು. ನಿವೃತ್ತಿಯಾಗಿ ಮನೆಯಲ್ಲಿರುವ ಹಿರಿಯರಾಗಲಿ, ಮಕ್ಕಳ ಜವಾಬ್ದಾರಿಗಳನ್ನು ಮುಗಿಸಿರುವ ಹಿರಿಯರಿಗಾಗಲಿ ಕೈ ಖಾಲಿಯಾದಂತೆನಿಸಬಹುದು. ಆಗ ಉಂಟಾಗುವ ಬೇಸರ, ಉಳಿದಿರುವ ಅಪಾರ ಸಮಯಗಳಿಂದ ಹಿರಿಯರು ಯಾರೊಡನೆಯಾದರೂ ಮಾತನಾಡಬೇಕೆಂದು ಹಾತೊರೆಯುತ್ತಾರೆ. ಕಿರಿಯರು ಸಿಕ್ಕಾಗ ಅವರೊಡನೆ ಎಡೆಬಿಡದೆ ಮಾತನಾಡಿ, ನಂತರ ಅವಹೇಳನಕ್ಕೆ ಒಳಗಾಗುವ ಸಂದರ್ಭಗಳೂ ಸಾಮಾನ್ಯವೇ.

ಹಿರಿಯರಲ್ಲಿ ವಯಸ್ಸಿನೊಂದಿಗೆ ಮನಸ್ಸು ಮಾಗುವುದು ಗೊತ್ತಷ್ಟೆ. ಹಾಗೆಯೇ ಮನಸ್ಸು ತುಂಬಾ ಸೂಕ್ಷ್ಮವಾಗುವುದೂ ಹೌದು. ದಣಿವಾಗಿ ಬಂದ ಮಗ /ಸೊಸೆ/ಮಗಳು/ಇತರರು ಆ ಕ್ಷಣಕ್ಕೆ ಪ್ರತಿಕ್ರಿಯೆ ತೋರದಿದ್ದರೆ, ಸಿಡುಕಿದರೆ ಪುರುಷವಾಗಲಿ, ಮಹಿಳೆಯಾಗಲಿ ಹಿರಿಯರಲ್ಲಿ ಕಣ್ಣಲ್ಲಿ ನೀರು ಒಸರುತ್ತದೆ, ಮುಖ ಸಪ್ಪಗಾಗುತ್ತದೆ. ಅದೇ ಕಿಂಚಿತ್ ಗಮನ ಕೊಟ್ಟು ಕೇಳುವ ಯಾರು ಸಿಕ್ಕರೂ ಮಾತನಾಡುವ ಉತ್ಸಾಹ ಏರುತ್ತದೆ. ಇದು ಸಹಜ ಪ್ರಕ್ರಿಯೆ.

ಹಿರಿಯರು ಹೆಚ್ಚು ಮಾತನಾಡುವುದಕ್ಕೆ, ಹೇಳಿದ್ದೇ ವಿಷಯವನ್ನು ಮತ್ತೆ ಮತ್ತೆ ಹೇಳುವುದಕ್ಕೆ ಅಧ್ಯಯನಗಳು ನೀಡುವ ಕಾರಣ ಏನು? ನಾವು ಅವರು ಹೇಳಿದ್ದನ್ನು ಕೇಳುವ, ಗಮನ ನೀಡದಿದ್ದಾಗ, ಅದನ್ನು 'ಇವರು ಗಮನ ನೀಡುತ್ತಿಲ್ಲ' ಎಂದು ಹಿರಿಯರ ಮನಸ್ಸು ಗ್ರಹಿಸುತ್ತದೆ. ಮತ್ತೆ ಮತ್ತೆ ಮಾತನಾಡಲು ಹೇಳಿದ್ದನ್ನೇ ಹೇಳಲು ಪ್ರೇರಣೆ ನೀಡುತ್ತದೆ. ಅದೇ 'ಇವರು ಇನ್ನೂ ಎಷ್ಟು ಹೊತ್ತು ಮಾತಾಡ್ತಾರೋ' ಎಂದು ಹೆದರದೆ ಕಿಂಚಿತ್ ಗಮನವಿಟ್ಟು, ಸಹನೆಯಿಂದ ಕೇಳುವ ಧೋರಣೆ ನಮ್ಮದಾದರೆ, ಈ ಸಮಸ್ಯೆ ಮನೆಯಲ್ಲಿ ಮಾಯವಾಗುತ್ತದೆ. ಹಾಗೆ ಮಾಡದೇ ಹೋದಾಗ ಹಿರಿಯರಲ್ಲಿ ಮಾತು ಹೆಚ್ಚಾಗುತ್ತದೆ; ಪ್ರತಿಕ್ರಿಯೆ ಸಿಗದಾಗ ಒಂಟಿತನ, ಖಿನ್ನತೆಗಳು ಮೊದಲಾಗುತ್ತವೆ!

ಹಣ್ಣೆಲೆಯನ್ನು ನೋಡಿ ಚಿಗುರೆಲೆ ನಕ್ಕಿತಂತೆ! ಮೊಮ್ಮಕ್ಕಳು ಅಜ್ಜ-ಅಜ್ಜಿಯರನ್ನು ಗೇಲಿ ಮಾಡುವುದು, ಅವರ ಅನುಭವದ ಮಾತಗಳನ್ನು ನಿರ್ಲಕ್ಷಿಸುವುದು, ಅವರು 'ಚಿಕ್ಕವರು' ಎಂದು ಭಾವಿಸಿ ಅಜ್ಜ-ಅಜ್ಜಿ ಪ್ರೀತಿಯ ಕುರುಹಾಗಿ ಕೊಟ್ಟಿರುವ ವಸ್ತುಗಳನ್ನು ಮೂಲೆಗೆ ತಳ್ಳುವುದು – ಇವೆಲ್ಲವೂ ಆ ಮಕ್ಕಳ ಅಪ್ಪ-ಅಮ್ಮ ಸರಿಪಡಿಸಲೇಬೇಕಾದಂತಹವು. ನಮ್ಮ ತಂದೆ-ತಾಯಂದಿರ ಹತ್ತಿರ ನಾವು ಸಮಯ ಕಳೆಯುವ ರೂಢಿಯಿಂದ ಮಾತ್ರ ಮನೆಯ ಮಕ್ಕಳಿಗೆ ಸರಿ ಮಾದರಿ ಸಾಧ್ಯ. ಸಂವಹನ ಮಾತಿನ ಮೂಲಕ ಸಾಧ್ಯವಾದಾಗ ಕ್ರಮೇಣ ಹಿರಿಯರಿಗೆ ಬೇಸರವಾಗದಂತೆ, ಕಣ್ಣಲ್ಲಿ ನೀರು/ ಮುಖ ಚಿಕ್ಕದಾಗದಿರುವಂತೆ 'ಇಂತಹ ವಸ್ತುಗಳು ತರಬೇಕಿಲ್ಲ, ಮಕ್ಕಳು ನಾವು ನಿಮ್ಮೊಡನೆ ಮಾತನಾಡಿ, ಆಟವಾಡಿದರೆ ನಮಗೂ ನಿಮಗೂ ಸಂತಸ' ಎನ್ನುವ ಮಾತು ಮನಸ್ಸನ್ನು ಮುಟ್ಟಲು ಸಾಧ್ಯ.

ಅಂದರೆ ಹಿರಿಯರನ್ನು ಕಾಡುವುದು ಮಾತಿನ ಹಸಿವಲ್ಲ! ಭಾವನೆಗಳ ಮಹಾಪೂರ, ಕಿರಿಯರ ಗಮನದ ಕೊರತೆ! ಸ್ವಲ್ಪ ಗಮನ ಮತ್ತು ಸಮಯಗಳನ್ನು ನೀಡಿದರೆ ಹಿರಿಯರ ಮಾತಿನ ಹೆಚ್ಚಳದ ಸಮಸ್ಯೆ ಮಾಯ! ❖

‘ಟ್ವಿಟರ್ ಇನ್‌ಕಾರ್ಪೊರೇಟ್’ ಸಲ್ಲಿಸಿರುವ ಅರ್ಜಿ

1,474 ಖಾತೆಗಳು, 175 ಟ್ವೀಟ್‌ಗಳನ್ನು ಸಂಪೂರ್ಣವಾಗಿ ನಿರ್ಬಂಧಿಸಿ ಆದೇಶಿಸಿದೆ. ಇದು ಏಕಪಕ್ಷೀಯ ನಿರ್ಧಾರ ಆಗಿದ್ದು, ಐಟಿ ಕಾಯ್ದೆಗೆ ವಿರುದ್ಧವಾಗಿದೆ– ಟ್ವಿಟರ್

‘ಕಾನೂನುಬದ್ಧವಾಗಿಯೇ ಕಾರ್ಯನಿರ್ವಹಿಸುತ್ತಿದೆ’

ಬೆಂಗಳೂರು: ‘ಮಾಹಿತಿ ತಂತ್ರಜ್ಞಾನ ಕಾಯ್ದೆಯ ಅಡಿಯಲ್ಲೇ ಟ್ವಿಟರ್ ತನ್ನ ಕಾರ್ಯನಿರ್ವಹಿಸುತ್ತಿದ್ದು, ಯಾವುದೇ ನಿಯಮ ಉಲ್ಲಂಘನೆ ಮಾಡಿಲ್ಲ’ ಎಂದು ಟ್ವಿಟರ್ ಪರ ಸುಪ್ರೀಂ ಕೋರ್ಟ್‌ ಹಿರಿಯ ವಕೀಲ ಅರವಿಂದ ದಾತಾರ್ ಕರ್ನಾಟಕ ಹೈಕೋರ್ಟ್‌ಗೆ ತಿಳಿಸಿದರು.

‘ಮಾಹಿತಿ ತಂತ್ರಜ್ಞಾನ (ಐಟಿ) ಕಾಯ್ದೆ-2000ದ ಕಲಂ 69ಎಗೆ ವಿರುದ್ಧವಾಗಿರುವ 1,400ಕ್ಕೂ ಹೆಚ್ಚು ಟ್ವಿಟರ್ ಖಾತೆಗಳನ್ನು ಬ್ಲಾಕ್ ಮಾಡಬೇಕು’ ಎಂಬ ನೋಟಿಸ್‌ಗಳನ್ನು ಪ್ರಶ್ನಿಸಿ ‘ಟ್ವಿಟರ್ ಇನ್‌ಕಾರ್ಪೊರೇಟ್’ ಕಂಪನಿ ಸಲ್ಲಿಸಿರುವ ರಿಟ್ ಅರ್ಜಿಗೆ ಸಂಬಂಧಿಸಿದಂತೆ ಸಲ್ಲಿಸಲಾಗಿರುವ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಟ್ವಿಟರ್ ಪರ ವಾದ ಮಂಡಿಸಿದ ಅರವಿಂದ ದಾತಾರ್, ‘ಕಾನೂನಿನ ವ್ಯಾಪ್ತಿಯಲ್ಲಿ ಸರ್ಕಾರವನ್ನು ಟೀಕಿಸಬಹುದು. ಸಂವಿಧಾನದ 19 (1)(ಎ) ವಿಧಿಯ ಮೂಲ ಆಶಯವೇ ಟೀಕಿಸುವ ಹಕ್ಕು. ಆದರೆ, ಕೇಂದ್ರ ಸರ್ಕಾರದ ಈ ನಿರ್ಬಂಧದ ಆದೇಶವು ಟ್ವಿಟರ್ ಸಂಸ್ಥೆ ಮತ್ತು ನಿರ್ದಿಷ್ಟ ಖಾತೆ ಹೊಂದಿದವರಿಗೆ ಸಮಸ್ಯೆ ತಂದೊಡ್ಡಿದೆ’ ಎಂದು ಆಕ್ಷೇಪಿಸಿದರು.

‘ಇಂತಹುದೇ ಪ್ರಕರಣದಲ್ಲಿ ವಿಶ್ವದ ಬೇರೆಡೆ ಎಂತಹ ಕ್ರಮ ಕೈಗೊಳ್ಳಲಾಗಿದೆ ಎಂಬ ಬಗ್ಗೆ ತುಲನಾತ್ಮಕ ವಿಶ್ಲೇಷಣೆ ನಡೆಸಿ ವಿವರಣೆ ನೀಡಿ’ ಎಂದು ಅರ್ಜಿದಾರರಿಗೆ ಸೂಚಿಸಿದ ಪೀಠ ವಿಚಾರಣೆಯನ್ನು ಅಕ್ಟೋಬರ್ 17ಕ್ಕೆ ಮುಂದೂಡಿದೆ.

ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ ನಗರ ಜಿಲ್ಲಾಧಿಕಾರಿ ಪ್ರಮಾಣಪತ್ರ

ಚಂದಾಪುರ ಕೆರೆ: ಕೊಳಚೆ ನೀರು ತಡೆಗೆ ಕ್ರಿಯಾಯೋಜನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಚಂದಾಪುರ ಕೆರೆಗೆ ಸಂಪರ್ಕ ಕಲ್ಪಿಸುವ ಚರಂಡಿಗೆ ಕೈಗಾರಿಕಾ ತ್ಯಾಜ್ಯ ಸೇರದಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಸಂಬಂಧ ಕ್ರಿಯಾಯೋಜನೆ ಸಿದ್ಧಪಡಿಸಲಾಗಿದೆ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಅವರು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಪ್ರಧಾನ ಪೀಠಕ್ಕೆ ಪ್ರಮಾಣಪತ್ರ ಸಲ್ಲಿಸಿದ್ದಾರೆ.

ಸುತ್ತಮುತ್ತಲಿನ ಸ್ಥಳೀಯ ಸಂಸ್ಥೆಗಳ ಹಾಗೂ ಕೈಗಾರಿಕೆಗಳ ಕೊಳಚೆ ನೀರು ಚಂದಾಪುರ ಕೆರೆಗೆ ಸೇರುತ್ತಿದೆ ಎಂದು ಮಾಧ್ಯಮಗಳಲ್ಲಿ ವರದಿ ಪ್ರಕಟವಾಗಿತ್ತು. ಈ ಬಗ್ಗೆ ಎನ್‌ಜಿಟಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದು, ಪ್ರಕರಣದ ವಿಚಾರಣೆ ನಡೆಯುತ್ತಿದೆ. ಈ ವೇಳೆ ಜಿಲ್ಲಾಧಿಕಾರಿ ಅವರು ಕೈಗೊಂಡ ಕ್ರಮಗಳ ಪ್ರಮಾಣಪತ್ರ ಸಲ್ಲಿಸಿದ್ದಾರೆ.

ಹೆಬ್ಬಗೋಡಿ ನಗರಸಭೆ, ಜಿಗಣಿ ಪುರಸಭೆ, ಬೊಮ್ಮಸಂದ್ರ ಪುರಸಭೆ ಹಾಗೂ ಚಂದಾಪುರ ಪುರಸಭೆ ವ್ಯಾಪ್ತಿಯ ಕೊಳಚೆ ನೀರು ಚರಂಡಿಗಳ ಮೂಲಕ ಕೆರೆಗೆ ಸೇರುತ್ತಿದೆ. ಸಂಸ್ಕರಿಸದ ಕೊಳಚೆ ನೀರು ಜಲಕಾಯಕ್ಕೆ ಸೇರದಂತೆ ತುರ್ತಾಗಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಚಂದಾಪುರ ಕೆರೆಗೆ ಸಂಪರ್ಕ ಕಲ್ಪಿಸುವ ಚರಂಡಿಗಳಲ್ಲಿ ಸಂಸ್ಕರಿಸದ ನೀರು ಹರಿಯುತ್ತಿದ್ದು, ಇದಕ್ಕಾಗಿ ಇನ್‌ಲೈನ್ ವಾಟರ್ ಟ್ರೀಟ್‌ಮೆಂಟ್ ವ್ಯವಸ್ಥೆ ಆರಂಭಿಸಲು ಯೋಜಿಸಲಾಗಿದೆ. ಇದಕ್ಕಾಗಿ ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳ ಸಹಕಾರ ಕೋರಲಾಗಿದೆ ಎಂದು ಅವರು ತಿಳಿಸಿದ್ದಾರೆ.

‘ಬೆಂಗಳೂರು ನಗರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 38 ಕೆರೆಗಳು ಇವೆ ಈ ನಾಲ್ಕು ಸ್ಥಳೀಯ ಸಂಸ್ಥೆಗಳ ಸುತ್ತಮುತ್ತ 21 ಕೆರೆಗಳಿವೆ. ಈ ಜಲಕಾಯಗಳಿಗೆ ಕೊಳಚೆ ನೀರು ಸೇರದಂತೆ ಕ್ರಮ ಕೈಗೊಳ್ಳಲು ಸ್ಥಳೀಯ ಸಂಸ್ಥೆಗಳಿಗೆ ಸೂಚಿಸಲಾಗಿದೆ ಎಂದು ಹೇಳಿದ್ದಾರೆ.

ಚಂದಾಪುರ ಕೆರೆಯ ಜಲಾನಯನ ಪ್ರದೇಶದ ಎಲ್ಲ ಕೆರೆಗಳ ಪುನರುಜ್ಜೀವನಕ್ಕೆ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲಾಗುತ್ತಿದೆ. ಅಭಿವೃದ್ಧಿ ಕಾಮಗಾರಿಗಳನ್ನು ಖಾಸಗಿ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ ಹಾಗೂ ಸರ್ಕಾರದ ಅನುದಾನದ ನೆರವಿನಿಂದ ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಿದ್ದಾರೆ.

ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಹೆಬ್ಬಗೋಡಿ ನಗರ ಸ್ಥಳೀಯ ಸಂಸ್ಥೆಯಲ್ಲಿ ₹153 ಕೋಟಿ ವೆಚ್ಚದಲ್ಲಿ ಹಾಗೂ ಬೊಮ್ಮಸಂದ್ರ ಪುರಸಭೆಯಲ್ಲಿ ₹109 ಕೋಟಿ ವೆಚ್ಚದಲ್ಲಿ ಭೂಗತ ಒಳಚರಂಡಿ ವ್ಯವಸ್ಥೆ ರೂಪಿಸಲು ಕ್ರಿಯಾಯೋಜನೆ ಸಿದ್ಧಪಡಿಸಲಾಗಿದೆ. ನಾಲ್ಕು ಸ್ಥಳೀಯ ಸಂಸ್ಥೆಗಳಲ್ಲಿ ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪಿಸಲು ಜಾಗ ಒದಗಿಸಲಾಗಿದೆ ಎಂದು ಅವರು ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

ಮುಖ್ಯಾಂಶಗಳು
- ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದ ಎನ್‌ಜಿಟಿ
- ಇನ್‌ಲೈನ್ ವಾಟರ್ ಟ್ರೀಟ್‌ಮೆಂಟ್ ವ್ಯವಸ್ಥೆ ಆರಂಭಿಸಲು ಯೋಜನೆ

ಸುದ್ದಿ 2 ನಿಮಿಷ

ಇರಾನ್‌ನಲ್ಲಿ ಅನೈತಿಕ ಪೊಲೀಸ್‌ಗಿರಿ ನಿಲ್ಲಿಸಲು ಆಗ್ರಹ

ಬೆಂಗಳೂರು: ಇರಾನ್‌ನಲ್ಲಿ ಹಿಜಾಬ್ ಧರಿಸುವ ನೀತಿಯನ್ನು ಸರಿಯಾಗಿ ಅನುಸರಿಸದ ಕಾರಣ ಮಹಸಾ ಅಮೀನಿ ಅವರ ಮೇಲೆ ಪೊಲೀಸರು ನಡೆಸಿದ ಮಾರಣಾಂತಿಕ ಹಲ್ಲೆಯನ್ನು ಆಲ್ ಇಂಡಿಯಾ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಖಂಡಿಸಿದೆ.

ಇರಾನ್ ಸರ್ಕಾರದ ಮೂಲಭೂತವಾದಿ ಧೋರಣೆ, ವಸ್ತ್ರಸಂಹಿತೆ ನೀತಿ, ಮಹಿಳೆಯರ ಕುರಿತು ಇರುವ ಸಂಕುಚಿತ ಮನೋಭಾವನೆ ವಿರೋಧಿಸಿ, ಸೋಮವಾರ ಆನ್‌ಲೈನ್ ಪ್ರತಿಭಟನೆ ಕೈಗೊಳ್ಳಲಾಗಿತ್ತು. ಮಹಿಳೆಯರಿಗೆ ಸ್ವಾತಂತ್ರ್ಯ ಮತ್ತು ಆಯ್ಕೆಯ ಹಕ್ಕು ನೀಡಬೇಕು. ಈ ಕುರಿತು ಇರಾನ್ ಸರ್ಕಾರಕ್ಕೆ ಒತ್ತಾಯಿಸಬೇಕು ಎಂದು ಬೆಂಗಳೂರು ಜಿಲ್ಲಾಧಿಕಾರಿ ಕೆ. ಶ್ರೀನಿವಾಸ್ ಅವರ ಮೂಲಕ ರಾಷ್ಟ್ರಪತಿ ಅವರಿಗೆ ಮನವಿಪತ್ರ ಸಲ್ಲಿಸಲಾಯಿತು.

ಹಲ್ಲೆಯಾದ ಮೂರು ದಿನಗಳ ನಂತರ ಮಹಸಾ ಅಮೀನಿ ಮೃತಪಟ್ಟಿದ್ದಾರೆ. ನಂತರ ಈ ಹೋರಾಟ ಇರಾನ್‌ನ 80ಕ್ಕೂ ಹೆಚ್ಚು ನಗರಗಳಿಗೆ ವ್ಯಾಪಿಸಿದ್ದು, ಇದುವರೆಗೂ 35 ಜನ ಪ್ರತಿಭಟನಕಾರರು ಪ್ರಾಣ ಕಳೆದುಕೊಂಡಿದ್ದಾರೆ. ಇರಾನ್ ಸರ್ಕಾರ ಹೋರಾಟನಿರತ ಜನತೆಯ ಮೇಲಿನ ದಮನವನ್ನು ಕೂಡಲೇ ನಿಲ್ಲಿಸಬೇಕು.

ನಾಗರಿಕರ ಮೇಲೆ ನಡೆಸುತ್ತಿರುವ ದಾಳಿಗಳನ್ನು ನಿಲ್ಲಿಸಿ, ಅಂತರ್ಜಾಲ ನಿರ್ಬಂಧವನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು. ಸಂಘಟನೆಯ ಜಿಲ್ಲಾ ಉಪಾಧ್ಯಕ್ಷೆ ಭಾಗ್ಯ, ಅನುರಾಧ, ನಿರ್ಮಲಾ ಇದ್ದರು.

ಚೆನ್ನೈನಲ್ಲಿ ಪತ್ತೆಯಾದ ಬಾಲಕಿಯರು

ಬೆಂಗಳೂರು: ಪುಲಿಕೇಶಿನಗರ ಠಾಣೆ ವ್ಯಾಪ್ತಿಯ ಶಾಲೆಯೊಂದರ ಹಾಸ್ಟೆಲ್‌ನಿಂದ ನಾಪತ್ತೆಯಾಗಿದ್ದ ಮೂವರು ಬಾಲಕಿಯರು ಚೆನ್ನೈನಲ್ಲಿ ಪತ್ತೆಯಾಗಿದ್ದು, ಅವರನ್ನು ಪೊಲೀಸರು ಸುರಕ್ಷಿತವಾಗಿ ಪೋಷಕರ ಸುಪರ್ದಿಗೆ ಒಪ್ಪಿಸಿದ್ದಾರೆ.

‘15 ವರ್ಷದ ಬಾಲಕಿಯರು ಸೆ. 6ರಂದು ನಾಪತ್ತೆಯಾಗಿದ್ದರು. ಆತಂಕಗೊಂಡ ಪೋಷಕರು ಠಾಣೆಗೆ ದೂರು ನೀಡಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮೂವರು ಬಾಲಕಿಯರು ಒಂದೇ ದಿನ ನಾಪತ್ತೆಯಾಗಿದ್ದ ಪ್ರಕರಣ ಗಂಭೀರವಾಗಿತ್ತು. ವಿಶೇಷ ತಂಡ ರಚಿಸಿ, ಬೆಂಗಳೂರು ಹಾಗೂ ಹೊರ ಜಿಲ್ಲೆಗಳಲ್ಲಿ ಹುಡುಕಾಟ ನಡೆಸಲಾಗಿತ್ತು. ಬಾಲಕಿಯರ ಸುಳಿವು ಸಿಕ್ಕಿರಲಿಲ್ಲ. ತಮಿಳುನಾಡು, ಕೇರಳ, ತೆಲಂಗಾಣ ಹಾಗೂ ಮಹಾರಾಷ್ಟ್ರಗಳಲ್ಲೂ ಪೊಲೀಸರ ತಂಡಗಳು ಬಾಲಕಿಯರಿಗಾಗಿ ಶೋಧ ನಡೆಸಿದ್ದವು.’

‘ಬೆಂಗಳೂರಿನಿಂದ ಚೆನ್ನೈಗೆ ಹೋಗಿದ್ದ ಬಾಲಕಿಯರು, ವ್ಯಕ್ತಿಯೊಬ್ಬರ ಮನೆಯಲ್ಲಿರುವ ಮಾಹಿತಿ ಲಭ್ಯವಾಗಿತ್ತು. ಅಲ್ಲಿಗೆ ಹೋದ ವಿಶೇಷ ತಂಡ, ಬಾಲಕಿಯರನ್ನು ಸುರಕ್ಷಿತವಾಗಿ ನಗರಕ್ಕೆ ಕರೆತಂದಿದೆ’ ಎಂದೂ ಮೂಲಗಳು ತಿಳಿಸಿವೆ.

ಸಲಿಂಗಿ ಮದುವೆಗೆ ಸಿದ್ಧತೆ: ‘ಮೂವರ ಪೈಕಿ ಒಬ್ಬಾಕೆ ಚೆನ್ನೈನಲ್ಲಿ ಕೆಲಸಕ್ಕೆ ಹೋಗುತ್ತಿದ್ದಳು. ಇಬ್ಬರೂ ಬಾಲಕಿಯರು ಪರಸ್ಪರ ಪ್ರೀತಿಸಿ ಸಲಿಂಗಿ ಮದುವೆಯಾಗಲು ಸಿದ್ಧತೆ ಮಾಡಿಕೊಂಡಿದ್ದರೆಂದು ಗೊತ್ತಾಗಿದೆ. ಬಾಲಕಿಯರೆಂಬ ಕಾರಣಕ್ಕೆ ಮದುವೆ ಬಗ್ಗೆ ಹೆಚ್ಚಿನ ವಿಚಾರಣೆ ನಡೆಸಿಲ್ಲ’ ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿಗಳು

ಸಾರ್ವಜನಿಕರ ಅಡ್ಡಗಟ್ಟಿ ಸುಲಿಗೆ: ಆರೋಪಿ ಬಂಧನ

ಬೆಂಗಳೂರು: ರಸ್ತೆಯಲ್ಲಿ ಒಂಟಿಯಾಗಿ ನಡೆದುಕೊಂಡು ಹೋಗುವ ಸಾರ್ವಜನಿಕರನ್ನು ಅಡ್ಡಗಟ್ಟಿ ಸುಲಿಗೆ ಮಾಡುತ್ತಿದ್ದ ಆರೋಪದಡಿ ಸಾಕಿಬ್ ಪಾಷಾ (22) ಎಂಬುವರನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಆರೋಪಿ ಸಾಕಿಬ್ ಸೆ. 18ರಂದು ಬೆಳಿಗ್ಗೆ ಪ್ಯಾಲೆಸ್ ರಸ್ತೆಯಲ್ಲಿ ಮಹಿಳೆಯೊಬ್ಬರನ್ನು ಬೆದರಿಸಿ ಮೊಬೈಲ್ ಕಸಿದುಕೊಂಡು ಪರಾರಿಯಾಗಿದ್ದ. ಈ ಬಗ್ಗೆ ದಾಖಲಾದ ದೂರಿನಡಿ ಸಾಕಿಬ್‌ನನ್ನು ಬಂಧಿಸಲಾಗಿದೆ. ಮೊಬೈಲ್ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಒಂಟಿಯಾಗಿ ಸುತ್ತಾಡುವ ಸಾರ್ವಜನಿಕರನ್ನೇ ಗುರಿಯಾಗಿಸಿಕೊಂಡು ಆರೋಪಿ ಸುಲಿಗೆ ಮಾಡುತ್ತಿದ್ದ. ದುಶ್ಚಟಗಳಿಗೆ ಹಣ ಹೊಂದಿಸುವುದಕ್ಕಾಗಿ ಕೃತ್ಯ ಎಸಗುತ್ತಿದ್ದ. ಮತ್ತಷ್ಟು ಕಡೆಗಳಲ್ಲಿ ಸುಲಿಗೆ ಮಾಡಿರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿದರು.

ಮರ್ಮಾಂಗಕ್ಕೆ ಹೊಡೆದು ತಂದೆ ಕೊಲೆ

ಬೆಂಗಳೂರು: ಕಾಡುಗೋಡಿ ಠಾಣೆ ವ್ಯಾಪ್ತಿಯಲ್ಲಿ ಚನ್ನಬಸವರಾಜು (56) ಎಂಬುವರ ಕೊಲೆ ನಡೆದಿದ್ದು, ಈ ಸಂಬಂಧ ಮಗ ರಾಕೇಶ್‌ಕುಮಾರ್ (23) ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ಖಾಜಿಸೊನ್ನನಹಳ್ಳಿ ನಿವಾಸಿ ಚನ್ನಬಸವರಾಜು ಕೃಷಿಕ. ಜಮೀನಿನಲ್ಲಿ ಕೆಲಸ ಮಾಡುವ ವೇಳೆ ಅವರನ್ನು ಮಗ ರಾಕೇಶನೇ ಕೊಲೆ ಮಾಡಿದ್ದಾನೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ಮಗನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಚನ್ನಬಸವರಾಜು ಅವರಿಗೆ ಇಬ್ಬರು ಪುತ್ರರು. ಹಿರಿಯ ಮಗ ವಕೀಲ. ಕಿರಿಯ ಮಗ ರಾಕೇಶ್ 10ನೇ ತರಗತಿಗೆ ಶಾಲೆ ಬಿಟ್ಟಿದ್ದ. ಕೃಷಿ ಕೆಲಸದಲ್ಲಿ ತೊಡಗಿದ್ದ. ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ರಾಕೇಶ್ ಹಾಗೂ ತಂದೆ ಮಧ್ಯೆ ಪದೇ ಪದೇ ಮಾತಿನ ಚಕಮಕಿ ನಡೆಯುತ್ತಿತ್ತು’ ಎಂದು ತಿಳಿಸಿದರು.

‘ಇತ್ತೀಚೆಗೆ ಜಮೀನಿನಲ್ಲಿ ತಂದೆ–ಮಗ ಕೆಲಸ ಮಾಡುತ್ತಿದ್ದರು. ಮಗ ರಾಕೇಶ್‌ಗೆ ಬುದ್ಧಿವಾದ ಹೇಳಿದ್ದ ತಂದೆ ಚನ್ನಬಸವರಾಜು, ‘ಅಣ್ಣ ಚೆನ್ನಾಗಿ ಓದಿ ಕೆಲಸ ಮಾಡುತ್ತಿದ್ದಾನೆ. ನೀನೂ ಚೆನ್ನಾಗಿ ಓದಿದ್ದರೆ ಯಾವುದಾದರೂ ಅಧಿಕಾರಿ ಆಗಿ ಕೆಲಸ ಮಾಡಬಹುದಿತ್ತು. ಆದರೆ, ನೀನು ಅರ್ಧಕ್ಕೆ ಶಾಲೆ ಬಿಟ್ಟು ಹೀಗೆ ಕೆಲಸ ಮಾಡುತ್ತಿದ್ದೀಯಾ’ ಎಂದಿದ್ದರು. ಅಷ್ಟಕ್ಕೆ ಕೋಪಗೊಂಡಿದ್ದ ರಾಕೇಶ್, ಸಲಾಕೆಯಿಂದ ತಂದೆಯ ಮರ್ಮಾಂಗಕ್ಕೆ ಹೊಡೆದಿದ್ದ. ಇದರಿಂದಾಗಿ ತಂದೆ ಸ್ಥಳದಲ್ಲೇ ಮೃತಪಟ್ಟಿದ್ದಾರೆ’ ಎಂದು ಹೇಳಿದರು.

ಕಾರು ಕದ್ದೊಯ್ದಿದ್ದ ಆರೋಪ: ದಂಪತಿ ಬಂಧನ

ಬೆಂಗಳೂರು: ಪ್ರಯಾಣಿಕರ ಸೋಗಿನಲ್ಲಿ ಚಾಲಕನನ್ನು ಪರಿಚಯ ಮಾಡಿಕೊಂಡು ಕಾರು ಕದ್ದೊಯ್ದಿದ್ದ ಆರೋಪದಡಿ ಮೇಕೆ ಮಂಜ ಹಾಗೂ ಪತ್ನಿ ವೇದಾವತಿ ಅವರನ್ನು ಯಲಹಂಕ ನ್ಯೂ ಟೌನ್ ಪೊಲೀಸರು ಬಂಧಿಸಿದ್ದಾರೆ.

‘ದಂಪತಿ ಇತ್ತೀಚೆಗೆ ಓಲಾ ಕ್ಯಾಬ್ ಕಾಯ್ದಿರಿಸಿದ್ದರು. ದೂರುದಾರ ಚಾಲಕ ಸ್ಥಳಕ್ಕೆ ಹೋಗಿ ಕಾರಿನಲ್ಲಿ ದಂಪತಿಯನ್ನು ಹತ್ತಿಸಿಕೊಂಡಿದ್ದ. ಚಾಲಕನ ಜೊತೆ ಆತ್ಮೀಯವಾಗಿ ಮಾತನಾಡಿದ್ದ ದಂಪತಿ, ಮದ್ಯದ ಪಾರ್ಟಿ ಮಾಡಲೆಂದು ಬಾರ್‌ಗೆ ಕರೆದೊಯ್ದಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮದ್ಯದ ಅಮಲಿನಲ್ಲಿದ್ದ ಚಾಲಕನಿಂದ ಕೀ ತೆಗೆದುಕೊಂಡಿದ್ದ ದಂಪತಿ ಕಾರಿನ ಸಮೇತ ಪರಾರಿಯಾಗಿದ್ದರು. ಈ ಬಗ್ಗೆ ಚಾಲಕ ಠಾಣೆಗೆ ದೂರು ನೀಡಿದ್ದರು’ ಎಂದು ತಿಳಿಸಿವೆ.

ಗೂಂಡಾ ಕಾಯ್ದೆ: ರೌಡಿ ಸಂಜು ಬಂಧನ

ಬೆಂಗಳೂರು: ಅಪರಾಧ ಕೃತ್ಯಗಳನ್ನು ಎಸಗಿ ಸಾರ್ವಜನಿಕರಲ್ಲಿ ಭಯವನ್ನುಂಟು ಮಾಡುತ್ತಿದ್ದ ಆರೋಪದಡಿ ರೌಡಿ ಎಲ್. ಸಂಜಯ್ ಅಲಿಯಾಸ್ ಸಂಜು (26) ಎಂಬಾತನನ್ನು ಗೂಂಡಾ ಕಾಯ್ದೆಯಡಿ ಬಂಧಿಸಲಾಗಿದೆ.

‘ರೌಡಿ ಕುಳ್ಳ ರಿಜ್ವಾನ್ ಸಹಚರನಾದ ಸಂಜು, 11 ಅಪರಾಧ ಪ್ರಕರಣಗಳಲ್ಲಿ ಆರೋಪಿ. ಹಲವು ಬಾರಿ ಜೈಲಿಗೆ ಹೋಗಿ ಜಾಮೀನಿನ ಮೇಲೆ ಹೊರಬಂದಿದ್ದ. ವಿಜಯನಗರ ಠಾಣೆಯ ರೌಡಿಪಟ್ಟಿಯಲ್ಲಿ ಸಂಜು ಹೆಸರಿತ್ತು’ ಎಂದು ಸಿಸಿಬಿ ಪೊಲೀಸ್ ಮೂಲಗಳು ಹೇಳಿವೆ.

‘ವಿಜಯನಗರ, ರಾಜರಾಜೇಶ್ವರಿನಗರ, ಹನುಮಂತನಗರ, ಗಿರಿನಗರ, ರಾಜಗೋಪಾಲನಗರ, ಆರ್.ಎಂ.ಸಿ ಯಾರ್ಡ್, ಸಂಜಯನಗರ ಹಾಗೂ ಹುಳಿಮಾವು ಠಾಣೆಯಲ್ಲಿ ಸಂಜು ವಿರುದ್ಧ ಪ್ರಕರಣಗಳು ದಾಖಲಾಗಿದ್ದವು. ಕೆಲ ಪ್ರಕರಣಗಳ ವಿಚಾರಣೆಗೂ ಆರೋಪಿ ಗೈರಾಗಿರುತ್ತಿದ್ದ.’

‘ಸಂಜುವನ್ನು ಗೂಂಡಾ ಕಾಯ್ದೆಯಡಿ ಬಂಧಿಸಲು ಪ್ರಸ್ತಾವ ಸಿದ್ಧಪಡಿಸಲಾಗಿತ್ತು. ಇದನ್ನು ಪರಿಶೀಲಿಸಿದ್ದ ಕಮಿಷನರ್, ಗೂಂಡಾ ಕಾಯ್ದೆಯಡಿ ರೌಡಿಯನ್ನು ಒಂದು ವರ್ಷ ಜೈಲಿನಲ್ಲಿರಿಸಲು ಆದೇಶ ಹೊರಡಿಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಚಾಕುವಿನಿಂದ ಇರಿದು ಸುಲಿಗೆ: ಇಬ್ಬರ ಬಂಧನ

ಬೆಂಗಳೂರು: ಸಾರ್ವಜನಿಕರನ್ನು ಅಡ್ಡಗಟ್ಟಿ ಚಾಕುವಿನಿಂದ ಇರಿದು ಸುಲಿಗೆ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಅಶೋಕನಗರ ಪೊಲೀಸರು ಬಂಧಿಸಿದ್ದಾರೆ.

‘ನೀಲಸಂದ್ರದ ಫರ್ದೀನ್ (19) ಹಾಗೂ ಸೈಯದ್ ಅಬೂಬಕರ್ ಸಿದ್ದಿಕ್ ಬಂಧಿತರು. ಇವರಿಂದ ಮೂರು ಮೊಬೈಲ್ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕಂಪನಿಯೊಂದರ ಉದ್ಯೋಗಿ ಸೆ. 3ರಂದು ಕೆಲಸ ಮುಗಿಸಿಕೊಂಡು ಆನೆಪಾಳ್ಯದ 7ನೇ ಅಡ್ಡರಸ್ತೆಯಲ್ಲಿ ನಡೆದುಕೊಂಡು ಮನೆಗೆ ಹೊರಟಿದ್ದರು. ದ್ವಿಚಕ್ರ ವಾಹನದಲ್ಲಿ ಸ್ಥಳಕ್ಕೆ ಬಂದಿದ್ದ ಆರೋಪಿಗಳು ಉದ್ಯೋಗಿಯನ್ನು ಅಡ್ಡಗಟ್ಟಿ ಬೆದರಿಸಿದ್ದರು. ನಂತರ ಚಾಕುವಿನಿಂದ ಇರಿದು ಮೊಬೈಲ್ ಹಾಗೂ ಇತರೆ ವಸ್ತುಗಳನ್ನು ಕಿತ್ತುಕೊಂಡು ಪರಾರಿಯಾಗಿದ್ದರು’ ಎಂದು ತಿಳಿಸಿವೆ.

‘ಸುಲಿಗೆ ಪ್ರಕರಣ ದಾಖಲಿಸಿಕೊಂಡು, ಘಟನಾ ಸ್ಥಳದ ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮೆರಾ ಪರಿಶೀಲನೆ ನಡೆಸಿದಾಗ ಆರೋಪಿಗಳ ಸುಳಿವು ಲಭ್ಯವಾಗಿತ್ತು’ ಎಂದು ಹೇಳಿವೆ.

‘ಬಂಧಿತ ಆರೋಪಿಗಳು ಸಂಪಂಗಿರಾಮನಗರ ಹಾಗೂ ಕೋರಮಂಗಲ ಸೇರಿ ಹಲವು ಠಾಣೆಗಳ ವ್ಯಾಪ್ತಿಯಲ್ಲಿ ಸುಲಿಗೆ ಮಾಡಿರುವ ಮಾಹಿತಿ ಇದೆ’ ಎಂದು ತಿಳಿಸಿವೆ.

23 ಕೆ.ಜಿ. 300 ಗ್ರಾಂ ಗಾಂಜಾ ಜಪ್ತಿ

ಬೆಂಗಳೂರು: ಒಡಿಶಾದಿಂದ ಗಾಂಜಾ ತರಿಸಿ ನಗರದಲ್ಲಿ ಮಾರುತ್ತಿದ್ದ ಇಬ್ಬರು ಆರೋಪಿಗಳನ್ನು ಆರ್.ಎಂ.ಸಿ ಯಾರ್ಡ್ ಪೊಲೀಸರು ಬಂಧಿಸಿದ್ದಾರೆ.

‘ಮಾರಪ್ಪನಪಾಳ್ಯದ ಗೋವರ್ಧನ್ ಚಿತ್ರ ಮಂದಿರದ ಹಿಂಭಾಗದ ರಸ್ತೆಗೆ ದ್ವಿಚಕ್ರ ವಾಹನದಲ್ಲಿ ಬಂದಿದ್ದ ಆರೋಪಿಗಳು ಗಾಂಜಾ ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು. 23 ಕೆ.ಜಿ. 300 ಗ್ರಾಂ ಗಾಂಜಾ ಜಪ್ತಿ ಮಾಡಲಾಯಿತು’ ಎಂದು ಪೊಲೀಸರು ಹೇಳಿದರು.

‘ಒಡಿಶಾದ ವ್ಯಕ್ತಿಯೊಬ್ಬ ಗಾಂಜಾವನ್ನು ಚೀಲಗಳಲ್ಲಿ ಬಚ್ಚಿಟ್ಟುಕೊಂಡು ರೈಲಿನಲ್ಲಿ ಬೆಂಗಳೂರಿಗೆ ತರುತ್ತಿದ್ದ. ಅದೇ ಗಾಂಜಾವನ್ನು ಆರೋಪಿಗಳು ಪೊಟ್ಟಣಗಳಲ್ಲಿ ತುಂಬಿ ಮಾರುತ್ತಿದ್ದರು. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಕಾರ್ಮಿಕರು ಆರೋಪಿಗಳ ಬಳಿ ಗಾಂಜಾ ಖರೀದಿಸುತ್ತಿದ್ದರು’ ಎಂದು ತಿಳಿಸಿದರು.

ಕೊಳಚೆ ಮೇಲಿನ ನಡಿಗೆ

ಸೋಮವಾರ ಅಶೋಕನಗರದ ಫುಟ್‌ಬಾಲ್ ಕ್ರೀಡಾಂಗಣದ ಮುಂಭಾಗದ ಮಾರ್ಕಮ್ ರಸ್ತೆಯಲ್ಲಿ ಮಳೆ ಹಾಗೂ ಚರಂಡಿ ನೀರು ರಸ್ತೆಯಲ್ಲಿ ನಿಂತಿದ್ದು, ಪಾದಚಾರಿಗಳು, ವಾಹನ ಸವಾರರು ಪರದಾಡಿದರು.

ಪ್ರಜಾವಾಣಿ ಚಿತ್ರ: ಎಸ್.ಕೆ. ದಿನೇಶ್

ಮಾಜಿ ಸಚಿವ ರಮೇಶ ಜಾರಕಿಹೊಳಿ ಸಿಡಿ ಹಗರಣ

ಲಿಖಿತ ವಾದಾಂಶ ಸಲ್ಲಿಕೆಗೆ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಜಿ ಸಚಿವ ರಮೇಶ ಜಾರಕಿಹೊಳಿ ವಿರುದ್ಧದ ಲೈಂಗಿಕ ಹಗರಣದ ಸಿಡಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಮತ್ತು ಎಸ್ಐಟಿ ಈತನಕ ಲಿಖಿತ ವಾದ ಮತ್ತು ಪ್ರಕರಣದ ಸಾರಾಂಶ ಪಟ್ಟಿಯನ್ನು ಸಲ್ಲಿಸಿಲ್ಲ’ ಎಂಬ ಆಕ್ಷೇಪಣೆಗೆ ಹೈಕೋರ್ಟ್‌ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ‘ಲಿಖಿತ ವಾದ ಹಾಗೂ ಸಂಕ್ಷಿಪ್ತ ಸಾರಾಂಶ ಸಲ್ಲಿಸುವತನಕ ವಾದ-ಪ್ರತಿವಾದ ಆಲಿಸುವುದಿಲ್ಲ’ ಎಂದು ಉಭಯ ಪಕ್ಷಕಾರರಿಗೆ ಸ್ಪಷ್ಟಪಡಿಸಿದೆ.

ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡ (ಎಸ್ಐಟಿ) ರಚಿಸಿದ್ದನ್ನು ಪ್ರಶ್ನಿಸಿ ಹಾಗೂ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಜಾರಕಿಹೊಳಿ ದಾಖಲಿಸಿರುವ ಬ್ಲ್ಯಾಕ್‌ಮೇಲ್ ಪ್ರಕರಣದ ಎಫ್ಐಆರ್ ರದ್ದು ಕೋರಿ ಸಂತ್ರಸ್ತೆ, ಆರೋಪಿಗಳಾದ ಎಸ್. ಶ್ರವಣ್ ಕುಮಾರ್ ಹಾಗೂ ಬಿ.ಎಂ. ನರೇಶ್ ಸಲ್ಲಿಸಿರುವ ಪ್ರತ್ಯೇಕ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್. ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸಂತ್ರಸ್ತೆ ಪರ ಹಿರಿಯ ವಕೀಲೆ ಇಂದಿರಾ ಜೈಸಿಂಗ್, ‘ನಮ್ಮ ಲಿಖಿತ ವಾದವನ್ನು ಈಗಾಗಲೇ ಸಲ್ಲಿಸಲಾಗಿದೆ. ಆದರೆ, ಸರ್ಕಾರ, ಎಸ್ಐಟಿ, ಅಮಿಕಸ್ ಕ್ಯೂರಿ ಸೇರಿ ಪ್ರತಿವಾದಿಗಳು ಯಾರೂ ಲಿಖಿತ ವಾದ ಸಲ್ಲಿಸಿಲ್ಲ. ಆದ್ದರಿಂದ, ಅವರು ಮಂಡಿಸಲಿರುವ ಕಾನೂನಾತ್ಮಕ ಅಂಶಗಳ ಬಗ್ಗೆ ನಮಗೆ ಯಾವುದೇ ಮಾಹಿತಿ ಇಲ್ಲವಾಗಿದೆ’ ಎಂದು ಆಕ್ಷೇಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಹತ್ತು ದಿನಗಳ ಕಾಲಾವಕಾಶ ನೀಡಲಾಗುವುದು. ಅಷ್ಟರೊಳಗೆ ಎಲ್ಲರೂ ತಮ್ಮ ಲಿಖಿತ ವಾದ ಸಲ್ಲಿಸಬೇಕು. ಇನ್ನಷ್ಟು ವಿಳಂಬ ಮಾಡಬಾರದು’ ಎಂದು ಎಚ್ಚರಿಸಿ, ಅಕ್ಟೋಬರ್ ಮೂರನೇ ವಾರಕ್ಕೆ ವಿಚಾರಣೆ ಮುಂದೂಡಿದೆ. ಲಿಖಿತ ವಾದಾಂಶ ಸಲ್ಲಿಸುವಂತೆ ಅರ್ಜಿದಾರರು ಮತ್ತು ಪ್ರತಿವಾದಿಗಳಿಗೆ ನ್ಯಾಯಪೀಠ ಇದೇ 5ರಂದು ನ್ಯಾಯಾಲಯ ಸೂಚಿಸಿತ್ತು.

ಮುಖ್ಯಾಂಶಗಳು
- ಬ್ಲ್ಯಾಕ್‌ಮೇಲ್ ಪ್ರಕರಣದ ಎಫ್ಐಆರ್ ರದ್ದು ಕೋರಿ ಸಂತ್ರಸ್ತೆ ಅರ್ಜಿ
- ಸಾರಾಂಶ ಸಲ್ಲಿಸದ ಹೊರತು ವಿಚಾರಣೆ ಇಲ್ಲ ಎಂದ ನ್ಯಾಯಾಲಯ
- 10 ದಿನಗಳ ಕಾಲಾವಕಾಶ

ಚಿತ್ರಾವಳಿ

‘ಭಾಗವತರು‘ ಆಯೋಜಿಸಿದ್ದ ಕೆ. ರೇವಣ್ಣ (ಎಡದಿಂದ ಮೊದಲನೆಯವರು) ಸಂಪಾದಿಸಿದ ‘ಪಂಚರಂಗಿ ಐದು ಹೊಸ ನಾಟಕಗಳು’ ಸಂಗ್ರಹ ಕೃತಿಯನ್ನು ಪತ್ರಕರ್ತ ಮತ್ತು ಪ್ರಕಾಶಕ ಜಿ.ಎನ್. ಮೋಹನ್ (ಎಡದಿಂದ ಮೂರನೆಯವರು) ಸೋಮವಾರ ಬೆಂಗಳೂರಿನ ನಯನ ಸಭಾಂಗಣದಲ್ಲಿ ಬಿಡುಗಡೆ ಮಾಡಿದರು. ರಂಗಸಂಘಟಕ ಮತ್ತು ಪ್ರಕಾಶಕರು ಬಿ.ಎನ್. ವಿದ್ಯಾರಣ್ಯ, ಲೇಖಕರು ಮತ್ತು ರಾಜ್ಯಸಭಾ ಸದಸ್ಯರಾದ ಎಲ್.ಹನುಮಂತಯ್ಯ ಮತ್ತು ರಂಗ ನಿರ್ದೇಶಕರು ಶಶಿಧರ ಭಾರಿಘಾಟ್ ಇದ್ದಾರೆ. –ಪ್ರಜಾವಾಣಿ ಚಿತ್ರಗಳು

ದೊಮ್ಮಲೂರಿನ ‘ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್’ನಲ್ಲಿ ಸೋಮವಾರ ಆಯೋಜಿಸಿದ್ದ ದ್ವಿಭಾಷಾ ಕವನ ಸಂಕಲನದ ಚರ್ಚೆ ಕಾರ್ಯಕ್ರಮದಲ್ಲಿ ಪ್ರತಿಭಾ ನಂದಕುಮಾರ್ ಕವಿತೆ ಓದಿದರು. ಕವಯಿತ್ರಿ ಮಣಿ ರಾವ್ ಇದ್ದರು.

ಗೆಹಲೋತ್ ಮೇಲೆ ಸೋನಿಯಾ ಗರಂ?

ಒಂದನೇ ಪುಟದಿಂದ...

ಶಾಸಕಾಂಗ ಪಕ್ಷದ ಸಭೆಗೆ ಹಾಜರಾಗದ ಸುಮಾರು 90 ಶಾಸಕರ ವರ್ತನೆಯು ಮೇಲ್ನೋಟಕ್ಕೆ ಅಶಿಸ್ತಿನಂತೆ ಕಾಣಿಸುತ್ತಿದೆ ಎನ್ನುವ ಮೂಲಕ ಪಕ್ಷವು ತನ್ನ ಅಸಮಾಧಾನವನ್ನು ಸ್ಪಷ್ಟವಾಗಿಯೇ ಹೊರಹಾಕಿದೆ. ಅಧ್ಯಕ್ಷ ಸ್ಥಾನದ ಚುನಾವಣೆಗೆ ಸಂಬಂಧಿಸಿ ನೆಹರೂ–ಗಾಂಧಿ ಕುಟುಂಬದ ಒಲವನ್ನು ಗೆಹಲೋತ್ ಕಳೆದುಕೊಂಡಿದ್ದಾರೆ ಎಂದು ಪಕ್ಷದ ವಲಯದಲ್ಲಿ ಚರ್ಚೆಗಳು ನಡೆಯುತ್ತಿವೆ.

ಪಕ್ಷದ ಮೂಲಗಳ ಪ್ರಕಾರ, ಗಾಂಧಿ ಕುಟುಂಬಕ್ಕೆ ಹತ್ತಿರವಾಗಿರುವ ಹಿರಿಯ ಮುಖಂಡರು ನಾಮಪತ್ರದ ಎರಡು ಸೆಟ್‌ಗಳನ್ನು ತೆಗೆದುಕೊಂಡಿದ್ದಾರೆ. ಆದರೆ, ಯಾರ ಸ್ಪರ್ಧೆಯ ಪರವಾಗಿ ನಾಮಪತ್ರ ಪಡೆಯಲಾಗಿದೆ ಎಂದು ತಿಳಿದುಬಂದಿಲ್ಲ. ತಾನು ಸ್ಪರ್ಧೆಯಿಂದ ಹಿಂದೆ ಸರಿಯುವ ಅಥವಾ ಹೈಕಮಾಂಡ್ ಸೂಚನೆಗೆ ಕಾಯುವ ಕುರಿತಂತೆ ಗೆಹಲೋತ್ ತಕ್ಷಣಕ್ಕೆ ಯಾವುದೇ ಸೂಚನೆ ನೀಡಿಲ್ಲ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಅವರ ಜತೆಗೆ ಸೋನಿಯಾ ಅವರು ಸೋಮವಾರ ಸಭೆ ನಡೆಸಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ಮತ್ತು ಅಜಯ ಮಾಕನ್ ಅವರು ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ರಾಜಸ್ಥಾನದಲ್ಲಿನ ಬೆಳವಣಿಗೆಗಳ ಬಗ್ಗೆ ಸೋಮವಾರ ವಿವರಣೆ ಕೊಟ್ಟಿದ್ದಾರೆ. ಅಲ್ಲದೆ, ಹಿರಿಯ ಮುಖಂಡ ಕಮಲ್‌ನಾಥ್ ಅವರೂ ಕಾಂಗ್ರೆಸ್ ಅಧ್ಯಕ್ಷರ ಜೊತೆಗೆ ಪ್ರತ್ಯೇಕವಾಗಿ ಸಭೆ ನಡೆಸಿದ್ದಾರೆ.

ರಾಜಸ್ಥಾನ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯು ಭಾನುವಾರ ನಡೆಯಬೇಕಿತ್ತು. ರಾಜಸ್ಥಾನದ ಮುಂದಿನ ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವುದು ಈ ಸಭೆಯ ಉದ್ದೇಶವಾಗಿತ್ತು. ಪಕ್ಷದ ನಾಯಕತ್ವವು ಗೆಹಲೋತ್ ಅವರ ಪ್ರತಿಸ್ಪರ್ಧಿ ಸಚಿನ್ ಪೈಲಟ್ ಅವರನ್ನು ಮುಂದಿನ ಮುಖ್ಯಮಂತ್ರಿ ಮಾಡುವ ಒಲವು ಹೊಂದಿತ್ತು. ಆದರೆ, ಪಕ್ಷದ 108 ಶಾಸಕರ ಪೈಕಿ 92 ಶಾಸಕರು ಇದನ್ನು ವಿರೋಧಿಸಿದ್ದಾರೆ.

2020ರ ಬಿಕ್ಕಟ್ಟಿನ ಸಂದರ್ಭದಲ್ಲಿ ಗೆಹಲೋತ್ ಅವರಿಗೆ ನಿಷ್ಠರಾಗಿದ್ದ ಶಾಸಕರಲ್ಲಿ ಒಬ್ಬರನ್ನು ಮುಂದಿನ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಬೇಕು ಎಂಬ ಷರತ್ತನ್ನೂ ಶಾಸಕರು ಮುಂದಿಟ್ಟಿದ್ದಾರೆ. ನಿರ್ಣಯದ ಜತೆಗೆ ಷರತ್ತು ಒಡ್ಡುವಂತಿಲ್ಲ. ಆದರೆ ಈ ಎಲ್ಲ ವಿಚಾರಗಳನ್ನು ಸೋನಿಯಾ ಅವರ ಗಮನಕ್ಕೆ ತರಲಾಗಿದೆ ಎಂದು ಮಾಕನ್ ತಿಳಿಸಿದ್ದಾರೆ.

ಬಾಗಮನೆ: ಲೋಕಾಯುಕ್ತಕ್ಕೆ ಸಲ್ಲಿಸಿದ ಮನವಿ

ಪಿಐಎಲ್ ವಿಚಾರಣೆ 28ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಗಮನೆ ಟೆಕ್‌ಪಾರ್ಕ್‌ ಬಳಿಯ ಒತ್ತುವರಿ ತೆರವಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಕೈಗೊಂಡ ಕಾರ್ಯಾಚರಣೆ ವಿರುದ್ಧದ ದೂರಿನ ವಿಚಾರಣೆ ನಡೆಸಿರುವ ಲೋಕಾಯುಕ್ತದ ಕ್ರಮವನ್ನು ಪ್ರಶ್ನಿಸಿದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್‌ ಇದೇ 28ಕ್ಕೆ ಮುಂದೂಡಿದೆ.

ಈ ಕುರಿತಂತೆ ಧಾರವಾಡದ ಸಮಾಜ ಪರಿವರ್ತನಾ ಸಮುದಾಯದ (ಎಸ್‌ಪಿಎಸ್) ಸಂಸ್ಥಾಪಕ ಅಧ್ಯಕ್ಷ ಎಸ್. ಆರ್. ಹಿರೇಮಠ ಅವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠದ ಮುಂದೆ ಸೋಮವಾರ ವಿಚಾರಣೆಗೆ ನಿಗದಿಯಾಗಿತ್ತು.

ವಿಚಾರಣೆ ವೇಳೆ ಅರ್ಜಿಗೆ ಸಂಬಂಧಿಸಿದ ಕಚೇರಿ ಆಕ್ಷೇಪಣೆಗಳು ಬಾಕಿ ಇರುವುದನ್ನು ಗಮನಿಸಿದ ನ್ಯಾಯಪೀಠ, ಇವುಗಳನ್ನು ಪರಿಗಣಿಸುವಂತೆ ಅರ್ಜಿದಾರರ ಪರ ವಕೀಲರಿಗೆ ಸೂಚಿಸಿ ವಿಚಾರಣೆ ಮುಂದೂಡಿತು.

ಬಾಗಮನೆ ಟೆಕ್‌ಪಾರ್ಕ್‌ ಬಳಿಯ ರಾಜಕಾಲುವೆ ಒತ್ತುವರಿ ತೆರವಿಗಾಗಿ ಬಿಬಿಎಂಪಿ ಅಧಿಕಾರಿಗಳು ಗುರುತು ಮಾಡಿದ್ದರು. ಈ ಸಂಬಂಧ ಲೋಕಾಯುಕ್ತರಿಗೆ ದೂರು ನೀಡಿದ್ದ ಬಾಗಮನೆ, ‘ತೆರವು ಕಾರ್ಯಾಚರಣೆಗೂ ಮುನ್ನ ಬಿಬಿಎಂಪಿ ನಮಗೆ ನೋಟಿಸ್ ಜಾರಿ ಮಾಡಿಲ್ಲ’ ಎಂದು ಮನವಿಯಲ್ಲಿ ದೂರಿತ್ತು.

ಮನವಿ ಪರಿಗಣಿಸಿದ್ದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್, ‘ರಾಜಕಾಲುವೆ ಮೇಲೆ ಅಳವಡಿಸಿರುವ ಚರಂಡಿಗಳನ್ನು ಮುಕ್ತಗೊಳಿಸಿದರೆ ಪ್ರವಾಹದ ನೀರು ತುಂಬಿಕೊಳ್ಳಬಹುದು ಎಂಬ ಆತಂಕ ದೂರುದಾರರಲ್ಲಿದೆ. ಹಾಗಾಗಿ, ತೆರವು ಪ್ರಕ್ರಿಯೆಗೆ ಸ್ವಲ್ಪ ಕಾಲಾವಕಾಶ ಬೇಕಿದೆ’ ಎಂದು ಪ್ರಕರಣವನ್ನು ಮೂರು ವಾರಗಳ ಕಾಲ ಮುಂದೂಡಿ ಇದೇ 12ರಂದು ಆದೇಶಿಸಿದ್ದರು.

‘ಪರ್ಯಾಯ ಕಾರ್ಯನಿರ್ವಹಣೆ’

‘ಕರ್ನಾಟಕ ಲೋಕಾಯುಕ್ತ ಕಾಯ್ದೆ–1984ರ ಅನ್ವಯ ಲೋಕಾಯುಕ್ತವು, ಸಾರ್ವಜನಿಕ ಆಡಳಿತವನ್ನು ಅಭಿವೃದ್ಧಿಪಡಿಸುವ ದಿಸೆಯಲ್ಲಿ ಕಾರ್ಯನಿರ್ವಹಿಸಬೇಕು. ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಸರ್ಕಾರಿ ನೌಕರರ ವಿರುದ್ಧ ದಾಖಲಾಗುವ ದೂರುಗಳ ವಿಷಯದಲ್ಲಿ ಕ್ರಮ ಕೈಗೊಳ್ಳಬೇಕು. ಆದರೆ, ಈಗಿರುವ ಲೋಕಾಯುಕ್ತ ತನ್ನ ಮಿತಿಯನ್ನು ಮೀರಿ, ಅಸಾಂವಿಧಾನಿಕವಾಗಿ ನಡೆದುಕೊಂಡಿದೆ ಮತ್ತು ಸಾಂವಿಧಾನಿಕವಾಗಿ ಸ್ಥಾಪಿತವಾದ ಹೈಕೋರ್ಟ್‌ಗೆ ಪರ್ಯಾಯವಾಗಿ ಕಾರ್ಯನಿರ್ವಹಿಸಿದೆ. ಇದು ಹೈಕೋರ್ಟ್‌ಗಳ ಅಧಿಕಾರವನ್ನು ದುರ್ಬಲಗೊಳಿಸುವ ಅಥವಾ ಪ್ರಶ್ನೆ ಮಾಡುವ ರೀತಿಯಲ್ಲಿದೆ. ನ್ಯಾಯಾಲಯಕ್ಕೆ ಪರ್ಯಾಯವಾದ ಶಕ್ತಿ ರಚನೆಗೆ ಸಮನಾಗಿದೆ ’ ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

ಡಿಕೆಶಿ ವಿರುದ್ಧದ ಸಿಬಿಐ ಪ್ರಕರಣ: ವಿಚಾರಣೆ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯ ಮೀರಿ ಆಸ್ತಿ ಗಳಿಸಿರುವ ಆರೋಪಕ್ಕೆ ಸಂಬಂಧಿಸಿದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧದ ಪ್ರಕರಣದಲ್ಲಿ, ಸಿಬಿಐ ಸಲ್ಲಿಸಿರುವ ಆಕ್ಷೇಪಣೆಗೆ ಉತ್ತರಿಸಲು ಕಾಲಾವಕಾಶ ನೀಡುವಂತೆ ಕೋರಿದ ಶಿವಕುಮಾರ್ ಪರ ವಕೀಲರ ಮನವಿಯನ್ನು ಹೈಕೋರ್ಟ್‌ ಪರಿಗಣಿಸಿದ್ದು, ವಿಚಾರಣೆ ಮುಂದೂಡಿದೆ.

ಆದಾಯ ಮೀರಿದ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಸಿಬಿಐ ದಾಖಲಿಸಿರುವ ಎಫ್ಐಆರ್ ರದ್ದು ಕೋರಿ ಡಿ.ಕೆ.ಶಿವಕುಮಾರ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರ ಶಿವಕುಮಾರ್ ಪರ ವಕೀಲರು, ‘ಸಿಬಿಐ ಸಲ್ಲಿಸಿರುವ ಆಕ್ಷೇಪಣೆಗೆ ಉತ್ತರಿಸಲು ಒಂದಿಷ್ಟು ಕಾಲಾವಕಾಶ ನೀಡಬೇಕು’ ಎಂದು ಮನವಿ ಮಾಡಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ, ದಸರಾ ಹಬ್ಬದ ರಜೆಯ ಬಳಿಕ ಪ್ರಕರಣ ಕೈಗೆತ್ತಿಕೊಳ್ಳುವುದಾಗಿ ಹೇಳಿ ವಿಚಾರಣೆ ಮುಂದೂಡಿದೆ.

ಯಾವುದೀ ಅರ್ಜಿ?: ‘ನನ್ನ ವಿರುದ್ಧ ಭ್ರಷ್ಟಾಚಾರ ನಿಗ್ರಹ ತಡೆ ಕಾಯ್ದೆ–1988ರ ಕಲಂ 13 (2), 13 (1)(ಇ) ಅಡಿಯಲ್ಲಿ 2020ರ ಅಕ್ಟೋಬರ್ 3ರಂದು ಸಿಬಿಐ ದಾಖಲಿಸಿರುವ ಎಫ್ಐಆರ್ ಕಾನೂನು ಬಾಹಿರವಾಗಿದೆ. ಎಫ್ಐಆರ್‌ನಲ್ಲಿ ನನ್ನ ಕುಟುಂಬದ ಸದಸ್ಯರ ಹೆಸರನ್ನೂ ಸೇರ್ಪಡೆ ಮಾಡಿರುವುದು ತಪ್ಪು. ಭ್ರಷ್ಟಾಚಾರ ನಿಗ್ರಹ ತಡೆ ಕಾಯ್ದೆ ಕೇವಲ ಸಾರ್ವಜನಿಕ ಸೇವಕರಿಗೆ ಮಾತ್ರವೇ ಅನ್ವಯ ಆಗುತ್ತದೆ. ಹೀಗಾಗಿ, ನನ್ನ ಕುಟುಂಬದ ಸದಸ್ಯರ ವಿರುದ್ಧ ಸಿಬಿಐ ದಾಖಲಿಸಿರುವ ಈ ಪ್ರಕರಣ ಕಾನೂನಿಗೆ ವಿರುದ್ಧವಾಗಿದೆ’ ಎಂದು ಶಿವಕುಮಾರ್ ಅರ್ಜಿಯಲ್ಲಿ ಆಕ್ಷೇಪಿಸಿದ್ದಾರೆ.

ಭ್ರಷ್ಟಾಚಾರ ಗುರಿ ಹೊರತು, ಜಾತಿ ಅಲ್ಲ: ಡಿಕೆಶಿ

ಬೆಂಗಳೂರು: ‘ಮುಖ್ಯಮಂತ್ರಿ ಆದವರು ಸರ್ಕಾರದ ಮುಖ್ಯಸ್ಥರು. ಭ್ರಷ್ಟಾಚಾರ ವಿಚಾರದಲ್ಲಿ ನಾವು (ಕಾಂಗ್ರೆಸ್) ರಾಜ್ಯ ಬಿಜೆಪಿ ಸರ್ಕಾರವನ್ನು ಗುರಿ ಮಾಡುತ್ತಿದ್ದೇವೆಯೇ ಹೊರತು, ಇದರಲ್ಲಿ ಜಾತಿ ಪ್ರಶ್ನೆಯೇ ಇಲ್ಲ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

‘ಲಿಂಗಾಯತ ಮುಖ್ಯಮಂತ್ರಿಯನ್ನು ಕಾಂಗ್ರೆಸ್ ಗುರಿ ಮಾಡುತ್ತಿದೆ’ ಎಂಬ ಬಿಜೆಪಿ ಆರೋಪದ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಸಂವಿಧಾನದ ಪ್ರಕಾರ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದಾರೆ. ಆದರೆ, ಅವರು ಲಿಂಗಾಯತ ಜಾತಿಯನ್ನಷ್ಟೇ ಆಧರಿಸಿ ಮುಖ್ಯಮಂತ್ರಿ ಆಗಿಲ್ಲ’ ಎಂದರು.

ಎಫ್‌ಆರ್‌ಪಿ ನಿಗದಿಪಡಿಸಲು ಆಗ್ರಹ • ಆಡುಗೋಡಿ ಮೈದಾನದಲ್ಲಿ ಪ್ರತಿಭಟನಕಾರರು

ವಿಧಾನಸೌಧ ಚಲೊ: ರೈತರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಬ್ಬಿಗೆ ಕನಿಷ್ಠ ₹ 3,500 ಎಫ್‌ಆರ್‌ಪಿ (ನ್ಯಾಯಸಮ್ಮತ ಮತ್ತು ಪ್ರೋತ್ಸಾಹದಾಯಕ ದರ) ನಿಗದಿಪಡಿಸಬೇಕು' ಎಂದು ಒತ್ತಾಯಿಸಿ ನಗರದಲ್ಲಿ ವಿಧಾನಸೌಧ ಚಲೊ ಹಮ್ಮಿಕೊಂಡಿದ್ದ ರೈತರು ಹಾಗೂ ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದರು.

ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ), ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಸೋಮವಾರ ವಿಧಾನಸೌಧ ಚಲೊ ಹಮ್ಮಿಕೊಳ್ಳಲಾಗಿತ್ತು.

ರಾಜ್ಯದ ವಿವಿಧ ಜಿಲ್ಲೆಗಳು ಹಾಗೂ ಹೊರ ರಾಜ್ಯಗಳಿಂದ ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣಕ್ಕೆ (ಕೆಎಸ್‌ಆರ್) ಸೋಮವಾರ ಬೆಳಿಗ್ಗೆ ಬಂದಿಳಿದಿದ್ದ ರೈತರು ಹಾಗೂ ಮುಖಂಡರು, ನಿಲ್ದಾಣದ ಆವರಣದಲ್ಲಿ ಕೆಲ ನಿಮಿಷ ಪ್ರತಿಭಟನೆ ನಡೆಸಿದರು. ಕಬ್ಬು ಹಿಡಿದು ಹಸಿರು ಶಾಲು ಬೀಸಿ, ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿದರು.

ಮೆರವಣಿಗೆ ಮೂಲಕ ವಿಧಾನಸೌಧದತ್ತ ಹೋಗಲು ಮುಂದಾಗಿದ್ದರು. ಮೆಜೆಸ್ಟಿಕ್ ರಸ್ತೆಯಲ್ಲೇ ಪ್ರತಿಭಟನಕಾರರನ್ನು ತಡೆದ ಪೊಲೀಸರು, 'ಮೆರವಣಿಗೆಗೆ ಅನುಮತಿ ಇಲ್ಲ. ವಾಪಸು ಹೋಗಿ' ಎಂದರು. ಅದಕ್ಕೆ ಒಪ್ಪದ ರೈತರು, ಮೆರವಣಿಗೆ ನಡೆಸುವುದಾಗಿ ಹೇಳಿ ವಿಧಾನಸೌಧದತ್ತ ಮುನ್ನುಗ್ಗಲು ಯತ್ನಿಸಿದರು. ಇದೇ ವೇಳೆ ಪೊಲೀಸರು ಹಾಗೂ ಪ್ರತಿಭಟನಕಾರರ ನಡುವೆ ಮಾತಿನ ಚಕಮಕಿ ನಡೆಯಿತು.

ಮುಖಂಡ ಕುರುಬೂರು ಶಾಂತಕುಮಾರ್ ಸೇರಿ 100ಕ್ಕೂ ಹೆಚ್ಚು ರೈತರು ಹಾಗೂ ಮುಖಂಡರನ್ನು ವಶಕ್ಕೆ ಪಡೆದ ಪೊಲೀಸರು, 11 ಬಸ್‌ಗಳಲ್ಲಿ ಆಡುಗೋಡಿ ಸಿಎಆರ್ ಮೈದಾನಕ್ಕೆ ಕರೆದೊಯ್ದರು.

ಮೈದಾನದಲ್ಲೂ ಪ್ರತಿಭಟನೆ: ವಶಕ್ಕೆ ಪಡೆದ ಪೊಲೀಸರ ವರ್ತನೆಯನ್ನು ಖಂಡಿಸಿದ ರೈತರು, ಮೈದಾನದಲ್ಲಿ ರಾತ್ರಿಯವರೆಗೂ ಪ್ರತಿಭಟನೆ ಮುಂದುವರಿಸಿದರು.

ವಶಕ್ಕೆ ಪಡೆದಿದ್ದ ರೈತರು ಹಾಗೂ ಮುಖಂಡರನ್ನು ಸಂಜೆ ಬಿಟ್ಟು ಕಳುಹಿಸಲು ಪೊಲೀಸರು ಮುಂದಾಗಿದ್ದರು. ಇದಕ್ಕೆ ಒಪ್ಪದ ರೈತರು, 'ಹೋರಾಟದ ಹಕ್ಕು ಹತ್ತಿಕ್ಕಲಾಗುತ್ತಿದೆ. ಮುಖ್ಯಮಂತ್ರಿಯವರು ಸ್ಥಳಕ್ಕೆ ಬರುವವರೆಗೂ ಮೈದಾನದಿಂದ ಹೋಗುವುದಿಲ್ಲ' ಎಂದು ಪಟ್ಟು ಹಿಡಿದರು.

ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸೋಮವಾರ ವಿಧಾನಸೌಧದತ್ತ ಮೆರವಣಿಗೆ ಹೊರಟಿದ್ದ ರೈತರು ಹಾಗೂ ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದು ಬಸ್‌ನಲ್ಲಿ ಕರೆದೊಯ್ದರು – ಪ್ರಜಾವಾಣಿ ಚಿತ್ರ

ರೈತರ ಪ್ರಮುಖ ಬೇಡಿಕೆಗಳು

- ವಿದ್ಯುತ್ ಖಾಸಗೀಕರಣ ಕಾಯ್ದೆ ಕೈಬಿಡಬೇಕು
- ಡಾ. ಎಂ.ಎಸ್. ಸ್ವಾಮಿನಾಥನ್ ವರದಿಯನ್ವಯ ಕೃಷಿ ಉತ್ಪನ್ನಗಳಿಗೆ ಖಾತರಿ ಬೆಲೆ ಶಾಸನ ಜಾರಿಗೊಳಿಸಬೇಕು
- ರೈತ ವಿರೋಧಿ ಕಾಯ್ದೆಗಳನ್ನು ಖಂಡಿಸಿ ದೆಹಲಿಯಲ್ಲಿ ನಡೆಸಿದ್ದ ಹೋರಾಟದಲ್ಲಿ ಮಡಿದ ರೈತರ ಕುಟುಂಬಗಳಿಗೆ ಪರಿಹಾರ ನೀಡಬೇಕು
- ದೇಶದ ರೈತರ ಸಾಲ ಮನ್ನಾ ಮಾಡಬೇಕು
- ಕೃಷಿ ಉಪಕರಣ ಹಾಗೂ ಕೃಷಿ ಉತ್ಪನ್ನಗಳ ಮೇಲಿನ ಜಿಎಸ್‌ಟಿ ರದ್ದುಗೊಳಿಸಬೇಕು
- ಎಪಿಎಂಸಿ ಕಾಯ್ದೆ ವಾಪಸು ಪಡೆಯಬೇಕು

ಕೆ.ಸಿ ಜನರಲ್ ಆಸ್ಪತ್ರೆಯಲ್ಲಿ ಜಯದೇವ ಉಪಘಟಕ ಸಿದ್ಧ

ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯ ತುರ್ತು ನಿಗಾ ಘಟಕವೂ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದ ಕೆ.ಸಿ ಜನರಲ್ ಆಸ್ಪತ್ರೆಯಲ್ಲಿ ಉದ್ಘಾಟನೆಗೆ ಸಜ್ಜಾಗಿರುವ ಜಯದೇವ ಹೃದ್ರೋಗ ಸಂಸ್ಥೆಯ 50 ಹಾಸಿಗೆಗಳ ತುರ್ತು ಉಪಘಟಕವನ್ನು ಕ್ಷೇತ್ರದ ಶಾಸಕರೂ ಆಗಿರುವ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಸೋಮವಾರ ಪರಿಶೀಲಿಸಿದರು.

ಇದೇ ಆವರಣದಲ್ಲಿ ಆರಂಭಿಸಲಾಗುತ್ತಿರುವ ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯ 50 ಹಾಸಿಗೆಗಳ ತುರ್ತು ನಿಗಾ ಘಟಕವನ್ನೂ ವೀಕ್ಷಿಸಿದರು.

ಎರಡೂ ಆಸ್ಪತ್ರೆಗಳನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಕ್ಟೋಬರ್ 4ರಂದು ಉದ್ಘಾಟಿಸುವ ಸಾಧ್ಯತೆ ಇದೆ.

ಜಯದೇವ ಹೃದ್ರೋಗ ಆಸ್ಪತ್ರೆಯ ಉಪಘಟಕದಿಂದ ಬೆಂಗಳೂರು ಉತ್ತರ ಭಾಗದ ಜನರಿಗೆ ಸುಗಮವಾಗಿ ಮತ್ತು ಸುಲಭವಾಗಿ ಹೃದಯ ಚಿಕಿತ್ಸೆ ದೊರೆಯಲಿದೆ. ಇದಕ್ಕಾಗಿ ₹15 ಕೋಟಿ ವಿನಿಯೋಗಿಸಲಾಗಿದೆ ಎಂದರು.

ಕೋವಿಡ್ ಸಂದರ್ಭದಲ್ಲಿ ಸರ್ಕಾರವು ಕೊಟ್ಟು ಮಿಕ್ಕಿದ್ದ ಹಣವನ್ನು ಇದಕ್ಕೆ ಬಳಸಿಕೊಳ್ಳಲಾಗಿದೆ. ಉಪಕರಣಗಳಿಗೆ ಆಗುವ ವೆಚ್ಚವನ್ನು ಜಯದೇವ ಹೃದ್ರೋಗ ಸಂಸ್ಥೆಯೇ ಭರಿಸಿದೆ. ಈ ಉಪಘಟಕವನ್ನು ಆ ಸಂಸ್ಥೆಯೇ ನಿರ್ವಹಿಸಲಿದೆ ಎಂದು ಮಾಹಿತಿ ನೀಡಿದರು.

ಈ ಉಪಘಟಕದಲ್ಲಿ ಕ್ಯಾತ್ ಲ್ಯಾಬ್ ಸೇರಿದಂತೆ ಹೃದ್ರೋಗಕ್ಕೆ ಸಂಬಂಧಿಸಿದ ಎಲ್ಲಾ ಚಿಕಿತ್ಸೆಗಳಿಗೆ ಅನುಕೂಲವಿದೆ. ಎಳೆಯ ಮಕ್ಕಳಿಗೆ ಕಂಡುಬರುವ ಆರೋಗ್ಯ ಸಂಬಂಧಿ ಸಮಸ್ಯೆಗಳಿಗೂ ಇನ್ನು ಮುಂದೆ ಕೆ.ಸಿ. ಜನರಲ್ ಆಸ್ಪತ್ರೆಯ ಆವರಣದಲ್ಲೇ ಅತ್ಯುತ್ತಮ ಚಿಕಿತ್ಸೆ ಸಿಗಲಿದೆ ಎಂದರು.

ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್ ಮಂಜುನಾಥ್, ಕೆ.ಸಿ. ಜನರಲ್ ಆಸ್ಪತ್ರೆಯ ಅಧೀಕ್ಷಕಿ ಡಾ.ಇಂದಿರಾ, ಬಿಬಿಎಂಪಿ ಪಶ್ಚಿಮ ವಲಯದ ಆಯುಕ್ತ ದೀಪಕ್ ಸೇರಿ ಕೆಲವು ಅಧಿಕಾರಿಗಳು ಇದ್ದರು.

ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಸ್ಥಾಪನೆಯಾಗಿರುವ ಜಯದೇವ ಹೃದ್ರೋಗ ಉಪಘಟಕವನ್ನು ಸಚಿವ ಡಾ. ಅಶ್ವತ್ಥನಾರಾಯಣ ವೀಕ್ಷಿಸಿದರು. ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್ ಮಂಜುನಾಥ್, ಕೆ.ಸಿ. ಜನರಲ್ ಆಸ್ಪತ್ರೆಯ ಅಧೀಕ್ಷಕಿ ಡಾ.ಇಂದಿರಾ, ಬಿಬಿಎಂಪಿ ಪಶ್ಚಿಮ ವಲಯದ ಆಯುಕ್ತ ದೀಪಕ್ ಹಾಗೂ ಆಸ್ಪತ್ರೆಯ ಸಿಬ್ಬಂದಿ ಇದ್ದರು.

ಹೊಸದುರ್ಗ ಪುರಸಭೆಗೆ ಸ್ವಚ್ಛ ಸರ್ವೇಕ್ಷಣಾ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಹೊಸದುರ್ಗ: ಕೇಂದ್ರ ಸರ್ಕಾರದ 2022ನೇ ಸಾಲಿನ ಸ್ವಚ್ಛ ಸರ್ವೇಕ್ಷಣಾ ಪ್ರಶಸ್ತಿಗೆ ಹೊಸದುರ್ಗ ಪುರಸಭೆ ಆಯ್ಕೆಯಾಗಿದೆ.

ಸ್ವಚ್ಛತೆಗಾಗಿ ಪುರಸಭೆಗೆ ದೊರೆತಿರುವ ಮೂರನೇ ಪ್ರಶಸ್ತಿ ಇದು. 2018, 2021ರಲ್ಲೂ ಪ್ರಶಸ್ತಿ ದೊರೆತಿತ್ತು. ಅಕ್ಟೋಬರ್ 1ರಂದು ನವದೆಹಲಿಯಲ್ಲಿ ನಡೆಯಲಿರುವ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

'ಸ್ವಚ್ಛ ಭಾರತ್ ಮಿಷನ್ -2 ಅಡಿ ಪುರಸಭೆ ಆಯ್ಕೆಯಾಗಿದೆ. ಸಮೀಕ್ಷೆ ನಡೆಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಕಸವನ್ನು ಅಂದೇ ವಿಂಗಡಿಸುತ್ತಿರುವ ಏಕೈಕ ಪುರಸಭೆ ಹೊಸದುರ್ಗ' ಎಂದು ಪುರಸಭೆ ಅಧ್ಯಕ್ಷ ಶ್ರೀನಿವಾಸ ಹೇಳಿದರು.

'ಆಯಾ ದಿನವೇ ಮನೆಮನೆ ಕಸ ಸಂಗ್ರಹ, ವಿಂಗಡಣೆ, ವೈಜ್ಞಾನಿಕ ವಿಲೇವಾರಿಗೆ ಕ್ರಮ ಕೈಗೊಳ್ಳಲಾಗಿದೆ. ಹಸಿ ಕಸದಿಂದ 'ಹೊಸದುರ್ಗ ಗೋಲ್ಡ್' ಹೆಸರಿನ ಗೊಬ್ಬರ ತಯಾರಿಸಿ, ಕೆ.ಜಿ.ಗೆ ₹ 2ರಂತೆ ಮಾರಾಟ ಮಾಡಲಾಗುತ್ತಿದೆ. ಇದರಿಂದ ₹ 3 ಲಕ್ಷದವರೆಗೂ ಆದಾಯ ಬರುತ್ತಿದೆ. ಒಣಕಸವನ್ನು 10-15 ಭಾಗವನ್ನಾಗಿ ವಿಂಗಡಿಸಿ, ಅದರಲ್ಲಿನ ಪ್ಲಾಸ್ಟಿಕ್ ಅನ್ನು ಸಿಮೆಂಟ್ ಕಾರ್ಖಾನೆಯವರಿಗೆ ಉಚಿತವಾಗಿ ನೀಡಲಾಗುತ್ತಿದೆ. ಉಳಿದ ಕಸದಿಂದ ₹ 7 ಲಕ್ಷದಿಂದ ₹ 8 ಲಕ್ಷ ಆದಾಯ ಬರುತ್ತಿದೆ' ಎಂದು ಪುರಸಭೆ ಮುಖ್ಯಾಧಿಕಾರಿ ನರಸಿಂಹಮೂರ್ತಿ ತಿಳಿಸಿದರು.

ಭ್ರಷ್ಟಾಚಾರದಲ್ಲಿ ತೊಡಗಿದ್ದೀರಿ ಎನ್ನುವುದು ಡರ್ಟಿ ಪಾಲಿಟಿಕ್ಸಾ: ಸಿದ್ದರಾಮಯ್ಯ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಮೈಸೂರು: 'ನೀವು ಭ್ರಷ್ಟಾಚಾರ ಮಾಡುತ್ತಿದ್ದೀರಿ, ಶೇ 40ರಷ್ಟು ಕಮಿಷನ್ ತೆಗೆದುಕೊಳ್ಳುತ್ತಿದ್ದೀರಿ ಎಂದು ಹೇಳುವುದು ಡರ್ಟಿ ಪಾಲಿಟಿಕ್ಸಾ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಕ್ರೋಶದಿಂದ ಕೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಶೇ 40ರಷ್ಟು ಕಮಿಷನ್ ತೆಗೆದುಕೊಳ್ಳುತ್ತಿದ್ದೀರಿ ಎಂದು ಗುತ್ತಿಗೆದಾರರ ಸಂಘದವರು ಹೇಳಿದ್ದನ್ನೇ ಹೇಳುತ್ತಿದ್ದೇವೆ. ಭ್ರಷ್ಟಾಚಾರದಲ್ಲಿ ತೊಡಗಿರುವ ಸರ್ಕಾರವಿದು ಎಂದು ನಾಡಿನ ಜನರೇ ಚರ್ಚಿಸುತ್ತಿದ್ದಾರೆ' ಎಂದರು.

'ರಾಹುಲ್ ಗಾಂಧಿ ಹೋದಲ್ಲೆಲ್ಲಾ ಕಮಲ ಅರಳಿದೆ' ಎಂಬ ಮುಖ್ಯಮಂತ್ರಿ ಬೊಮ್ಮಾಯಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ರಾಜಕೀಯದಲ್ಲಿ ಸೋಲು–ಗೆಲುವು ಸಹಜ. ಅಷ್ಟಕ್ಕೂ ಈಗ ನಡೆಯುತ್ತಿರುವುದು ಚುನಾವಣೆಯಲ್ಲ. ಹಾಗಾದರೆ, ಪ್ರಧಾನಿ ಮೋದಿ ಹೋದ ಕಡೆಗಳಲ್ಲಿ ಸೋಲಾಗಿಲ್ಲವೇ? ಪಂಜಾಬ್, ಕೇರಳ, ತಮಿಳುನಾಡು, ತೆಲಂಗಾಣ, ಕೋಲ್ಕತ್ತದಲ್ಲಿ ಬಿಜೆಪಿಯವರು ಏಕೆ ಗೆಲ್ಲಲು ಆಗಿಲ್ಲ' ಎಂದು ಕೇಳಿದರು.

'ಟೀಕೆಗಳೆ ನನಗೆ ಟಾನಿಕ್' ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಟೀಕೆಗೂ–ನಮಗೂ ಸಂಬಂಧವಿಲ್ಲ ಎಂದು ಹೇಳುವವರು ಭಂಡ ಜನಗಳು' ಎಂದು ವ್ಯಂಗ್ಯವಾಡಿದರು.

ವರುಣಾ ಕ್ಷೇತ್ರದ ಚಿಕ್ಕಹೊಮ್ಮ ಗ್ರಾಮದಲ್ಲಿ ಕೆರೆಗೆ ಬಾಗಿನ ಅರ್ಪಿಸಿದ ಬಳಿಕ ಮಾತನಾಡಿದ ಅವರು, 'ವರುಣಾದಲ್ಲಿ ಮತ್ತೆ ಸ್ಪರ್ಧಿಸುವಂತೆ ಜನ ಕೇಳುತ್ತಿದ್ದಾರೆ. ಬಾದಾಮಿಯವರೂ ಅಲ್ಲೇ ಸ್ಪರ್ಧಿಸುವಂತೆ ಒತ್ತಾಯಿಸುತ್ತಿದ್ದಾರೆ. ಕೋಲಾರ, ಚಾಮರಾಜಪೇಟೆಯವರೂ ಕೇಳುತ್ತಿದ್ದಾರೆ. ಹೈಕಮಾಂಡ್ ಹೇಳಿದ ಕಡೆ ಸ್ಪರ್ಧಿಸುತ್ತೇನೆ, ವರುಣಾದಲ್ಲಿ ನಿಲ್ಲಿ ಎಂದರೂ ನಿಲ್ಲುತ್ತೇನೆ' ಎಂದು ಪ್ರತಿಕ್ರಿಯಿಸಿದರು.

'ಬಿಜೆಪಿಯವರು ಲೂಟಿ ಮಾಡುತ್ತಾ ಜನರಿಗೆ ಟೋಪಿ ಹಾಕುತ್ತಿದ್ದಾರೆ. ರಾಜ್ಯದಾದ್ಯಂತ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಬೇಕಾದ ವಾತಾವರಣ ಮೂಡಿದೆ' ಎಂದರು.

'ಬೊಮ್ಮಾಯಿ ದಾರಿ ತಪ್ಪಿದ್ದರೆ ಹೇಳಲಿ'

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಯಾವ ವಿಚಾರದಲ್ಲಿ ದಾರಿ ತಪ್ಪಿದ್ದಾರೆ ಎಂಬುದನ್ನು ಕಾಂಗ್ರೆಸ್ ಹೇಳಲಿ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಸವಾಲು ಹಾಕಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ಬೊಮ್ಮಾಯಿ ಅವರು ಸಮರ್ಥ ಆಡಳಿತ ನೀಡುತ್ತಿರುವುದರಿಂದ ತಮಗೆ ಉಳಿಗಾಲವಿಲ್ಲ ಎಂದು ಕಾಂಗ್ರೆಸ್‌ಗೆ ಅರ್ಥವಾಗಿದೆ. ಈ ಕಾರಣಕ್ಕೆ ಅವರ ವಿರುದ್ಧ ಕಾಂಗ್ರೆಸ್ ನಾಯಕರು ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದರು.

ಭ್ರಷ್ಟಾಚಾರಕ್ಕೂ ಜಾತಿಗೂ ಯಾವುದೇ ಸಂಬಂಧ ಇಲ್ಲ ಎಂಬುದು ಸತ್ಯ. ಆದರೆ ಪ್ರಬಲ ಸಮುದಾಯಕ್ಕೆ ಸೇರಿದವರು ಮುಖ್ಯಮಂತ್ರಿಯಾಗಿದ್ದಾಗ ಅವರನ್ನು ಗುರಿ ಮಾಡುವುದು ಕಾಂಗ್ರೆಸ್ ಸಂಪ್ರದಾಯ. ಆ ಪಕ್ಷ ಯಾವಾಗಲೂ ಪ್ರಬಲ ಸಮುದಾಯದ ವಿರುದ್ಧವೇ ಇದೆ. ಕಾಂಗ್ರೆಸ್ ಪಕ್ಷವು ಅಧಿಕಾರದಿಂದ ಕೆಳಕ್ಕಿಳಿಸಿದ ನಾಯಕರ ಪಟ್ಟಿಯನ್ನೇ ನೀಡಿದ್ದೇನೆ. ಇದರ ಬಗ್ಗೆ ಮೊದಲು ಉತ್ತರ ನೀಡಲಿ ಎಂದರು.

ಕಾಂಗ್ರೆಸ್‌ನವರು ಎಚ್.ಡಿ. ದೇವೇಗೌಡರನ್ನು ಪ್ರಧಾನಿ ಸ್ಥಾನದಿಂದ ಕೆಳಗಿಳಿಸಿದರು. ಪಿ.ವಿ. ನರಸಿಂಹರಾವ್, ರಾಜಶೇಖರಮೂರ್ತಿ, ಎಸ್.ನಿಜಲಿಂಗಪ್ಪ, ಎಸ್.ಎಂ.ಕೃಷ್ಣ ಮೊದಲಾದ ನಾಯಕರಿಗೆ ಕಾಂಗ್ರೆಸ್ ಏನು ಮಾಡಿದೆ ಎಂಬ ಪಟ್ಟಿಯೇ ಇದೆ. ಬಿಜೆಪಿಯು ಎಲ್ಲರಿಗೂ ಸ್ಥಾನಮಾನ ನೀಡಿದೆ. ಜಗದೀಶ ಶೆಟ್ಟರ್, ಬೊಮ್ಮಾಯಿ ಅವರಿಗೂ ಮುಖ್ಯಮಂತ್ರಿ ಸ್ಥಾನ ನೀಡಲಾಗಿದೆ ಎಂದರು.

ಆಂಬುಲೆನ್ಸ್ ಸೇವೆಯಲ್ಲಾದ ಸಮಸ್ಯೆಯನ್ನು ಕೆಲವೇ ಗಂಟೆಗಳಲ್ಲಿ ಸರಿಪಡಿಸಲಾಗಿದೆ. ಇಂತಹ ತ್ವರಿತ ಕಾರ್ಯವನ್ನು 'ತಳ್ಳುವ ಸರ್ಕಾರ' ಮಾಡುತ್ತದೆಯೇ ಅಥವಾ 'ಕ್ರಿಯಾಶೀಲ ಸರ್ಕಾರ' ಮಾಡುತ್ತದೆಯೇ ಎಂಬುದನ್ನು ಡಿ.ಕೆ.ಶಿವಕುಮಾರ್ ಅವರೇ ವಿಚಾರ ಮಾಡಬೇಕು ಎಂದರು.

'ಶಿಕ್ಷಣ ಇಲಾಖೆಯಲ್ಲಿ ಅಕ್ರಮ: ಕಠಿಣ ಕ್ರಮ'

ಔರಾದ್: 'ಶಿಕ್ಷಣ ಇಲಾಖೆಯ ಅಕ್ರಮ ನೇಮಕಾತಿಯಲ್ಲಿ ಭಾಗಿಯಾದವರಿಗೆ ಶಿಕ್ಷೆಯಾಗುವುದನ್ನು ಯಾರಿಂದಲೂ ತಪ್ಪಿಸಲು ಆಗದು' ಎಂದು ಸಚಿವ ಬಿ.ಸಿ.ನಾಗೇಶ್ ಹೇಳಿದರು.

'ಶಿಕ್ಷಕರ ಅಕ್ರಮ ನೇಮಕಾತಿಯಲ್ಲಿ ತೊಡಗಿದ ಆರೋಪದ ಮೇಲೆ ಬೀದರ್‌ನ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯ ನಾಲ್ವರು ಅಧಿಕಾರಿಗಳ ಪೈಕಿ ಮೂವರನ್ನು ಸಿಐಡಿ ಪೊಲೀಸರು ಬಂಧಿಸಿ, ವಿಚಾರಣೆಗೆ ಒಳಪಡಿಸಿದ್ದಾರೆ. ನಕಲಿ ದಾಖಲೆ ಸಲ್ಲಿಸಿ ಹುದ್ದೆ ಗಿಟ್ಟಿಸಿಕೊಂಡವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಅವರು ಸೋಮವಾರ ತಿಳಿಸಿದರು.

'ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ನೀಗಿಸಲು 40 ಸಾವಿರ ಶಿಕ್ಷಕರ ನೇಮಕಾತಿಗೆ ತೀರ್ಮಾನಿಸಲಾಗಿದೆ. ಈ ಪೈಕಿ ಈಗಾಗಲೇ 15 ಸಾವಿರ ಪದವೀಧರ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಎರಡು ದಿನದಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟವಾಗಲಿದೆ' ಎಂದರು.

ಯಕ್ಷಗಾನ ಪ್ರದರ್ಶನ... ಯಕ್ಷದೇಗುಲ ಸಂಸ್ಥೆ ವತಿಯಿಂದ ಭಾನುವಾರ ನಡೆದ ಬಾಲ ಯಕ್ಷೋತ್ಸವದಲ್ಲಿ ಸಂಸ್ಥೆಯ ಮಕ್ಕಳು ಯಕ್ಷಗಾನ ಪ್ರದರ್ಶನ ಮಾಡಿದರು.

ಮಹಿಳೆಯರು ಸೇರಿದಂತೆ ಇತರೆ ಧರ್ಮೀಯರ ಭೇಟಿ

ಸಹಬಾಳ್ವೆ ಮೂಡಿಸುವ 'ಮಸೀದಿ ದರ್ಶನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಸ್ಪರ ಅರಿತುಕೊಳ್ಳುವ ಮೂಲಕ ಅಪನಂಬಿಕೆ ಮತ್ತು ಅಪಪ್ರಚಾರಗಳನ್ನು ದೂರ ಮಾಡುವ ಪ್ರಯತ್ನವನ್ನು ಇಲ್ಲಿನ ಬಿಲಾಲ್ ಮಸೀದಿ ಕೈಗೊಂಡಿದೆ.

'ಮಸೀದಿ ದರ್ಶನ–ಮಸೀದಿಯಲ್ಲಿ ಏನಿದೆ ಎಂದು ಅರಿಯೋಣ' ಎನ್ನುವ ಕಾರ್ಯಕ್ರಮ ಆಯೋಜಿಸಿ ಎಲ್ಲ ಧರ್ಮೀಯರಿಗೂ ಮಸೀದಿಗೆ ಮುಕ್ತ ಪ್ರವೇಶ ಕಲ್ಪಿಸಲಾಗುತ್ತಿದೆ.

ಬನ್ನೇರುಘಟ್ಟ ರಸ್ತೆಯಲ್ಲಿರುವ ಈ ಮಸೀದಿಯು ಮುಸ್ಲಿಮೇತರರಿಗೂ ಬಾಗಿಲು ತೆರೆದಿಡುವ ಮೂಲಕ ಮಸೀದಿ ಒಳಗೆ ಏನಿದೆ, ಆಜಾನ್ ಏಕೆ, ನಮಾಜ್ ಏಕೆ ಎನ್ನುವ ಹತ್ತಾರು ಪ್ರಶ್ನೆಗಳಿಗೆ ಉತ್ತರ ನೀಡಿ ಅನುಮಾನಗಳನ್ನು ಪರಿಹರಿಸುತ್ತಿದೆ.

ಭಾನುವಾರ ಆಯೋಜಿಸಲಾಗಿದ್ದ 'ಮಸೀದಿ ದರ್ಶನ' ಕಾರ್ಯಕ್ರಮದಲ್ಲಿ ಮಹಿಳೆಯರು ಸೇರಿ 200ಕ್ಕೂ ಹೆಚ್ಚು ಮುಸ್ಲಿಮೇತರರು ಭಾಗವಹಿಸಿದ್ದರು. ನಮಾಜ್ ಮಾಡುವ ಜಾಗವೂ ಸೇರಿ ಮಸೀದಿಯ ಪೂರ್ಣ ಆವರಣದಲ್ಲಿ ಸುತ್ತಾಡಿ ಹಲವು ವಿಷಯಗಳನ್ನು ತಿಳಿದುಕೊಂಡರು.

ಕಾರ್ಯಕ್ರಮದ ಉದ್ದೇಶ ವಿವರಿಸಿದ ಜಮಾತ್–ಎ–ಇಸ್ಲಾಮಿ ಹಿಂದ್ ಕಾರ್ಯದರ್ಶಿ ಅಕ್ಬರ್ ಅಲಿ ಉಡುಪಿ, 'ಐದು ವರ್ಷಗಳಿಂದ ಮಸೀದಿ ದರ್ಶನ ಕಾರ್ಯಕ್ರಮವನ್ನು ರಾಜ್ಯದ ವಿವಿಧೆಡೆ ಮಾಡುತ್ತಿದ್ದೇವೆ. ಜನರಿಂದ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ. ಜನರ ಹೃದಯಗಳನ್ನು ಬೆಸೆಯುವುದೇ ಧರ್ಮ. ಅಪನಂಬಿಕೆಗಳನ್ನು ದೂರ ಮಾಡುವ ಮೂಲಕ ಸೌಹಾರ್ದದ ಸೇತುವೆ ನಿರ್ಮಿಸಬೇಕು ಎನ್ನುವುದು ಈ ಕಾರ್ಯಕ್ರಮದ ಆಶಯ' ಎಂದರು.

'ಹಿಂದೂಗಳನ್ನು ಮಸೀದಿಗೆ ಏಕೆ ಕರೆಯಬೇಕು ಎನ್ನುವ ಅಭಿಪ್ರಾಯಗಳನ್ನು ನಮ್ಮಲ್ಲೂ ಹಲವರು ವ್ಯಕ್ತಪಡಿಸಿದ್ದಾರೆ. ಅಂತಹವರಿಗೂ ನಾವು ಮನದಟ್ಟು ಮಾಡುತ್ತಿದ್ದೇವೆ. ನಾವು ಏನು ಮಾಡುತ್ತಿದ್ದೇವೆ ಎನ್ನುವುದನ್ನು ನೋಡಲಿ. ಎಲ್ಲ ಮಸೀದಿಗಳಲ್ಲಿ ವರ್ಷದಲ್ಲಿ ಒಂದು ಬಾರಿಯಾದರೂ ಇಂತಹ ಕಾರ್ಯಕ್ರಮ ಮಾಡಿದರೆ ಸಾಕು' ಎಂದು ವಿವರಿಸಿದರು.

'ಆಜಾನ್ ಕರೆ ಮತ್ತು ನಮಾಜ್ ಹೇಗೆ ಮಾಡುತ್ತೇವೆ ಎನ್ನುವುದನ್ನು ಜನರಿಗೆ ಪರಿಚಯಿಸಲಾಗಿದೆ. ಮಸೀದಿ ಅಂದರೆ ಕೇವಲ ನಾಲ್ಕು ಗೋಡೆಗಳು ಮತ್ತು ಕುರಾನ್ ಇರುತ್ತವೆ. ಸಂಕಷ್ಟಗಳು ಎದುರಾದಾಗ ಸಹ ಮಸೀದಿಯಲ್ಲಿ ಪ್ರಾರ್ಥಿಸುತ್ತೇವೆ. ಇಂತಹ ಹಲವು ವಿಷಯಗಳ ಬಗ್ಗೆ ಮನದಟ್ಟು ಮಾಡಲಾಗಿದೆ' ಎಂದು ತಿಳಿಸಿದರು.

'ಮಸೀದಿಯಲ್ಲಿ ಮಹಿಳೆಯರಿಗೂ ಪ್ರವೇಶ ಇದೆ. ಮಹಿಳೆಯರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಮಸೀದಿಗೆ ಭೇಟಿ ನೀಡಿದ್ದರು. ಬಾಂಧವ್ಯ ಮತ್ತು ಸೌಹಾರ್ದದ ವಾತಾವರಣಕ್ಕಾಗಿ ಈ ರೀತಿಯ ಕಾರ್ಯಕ್ರಮ ಆಯೋಜಿಸುವಂತೆ ಎಲ್ಲ ಮಸೀದಿಯವರನ್ನೂ ಕೋರಲಾಗಿದೆ. ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳುವ ಮೂಲಕ ನಮ್ಮ ಮಧ್ಯೆ ಇರುವ ಅಪನಂಬಿಕೆ ದೂರ ಮಾಡಬೇಕಾಗಿದೆ' ಎಂದು ವಿವರಿಸಿದರು.

'ಜನರು ಈ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ನಮ್ಮಲ್ಲಿ ಅಪನಂಬಿಕೆಗಳಿದ್ದವು. ಭಯ ಇತ್ತು. ಆದರೆ, ಇಲ್ಲಿ ಶಾಂತಿ, ನೆಮ್ಮದಿ ದೊರೆಯಿತು. ತಪ್ಪು ಕಲ್ಪನೆಗಳು ದೂರವಾಗಿವೆ' ಎಂದು ವಿವರಿಸಿದರು.

ಬನ್ನೇರುಘಟ್ಟ ರಸ್ತೆಯ ಬಿಲಾಲ್ ಮಸೀದಿಗೆ ಭೇಟಿ ನೀಡಿದ್ದ ಮಹಿಳೆಯರು

'ಹಿಂದಿ ವಿರೋಧಿಗಳು ದೇಶ ಒಡೆಯುವವರು'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ದೇಶ ಒಡೆಯುವ ರಾಜಕೀಯ ಕುತಂತ್ರ, ಷಡ್ಯಂತ್ರದ ಭಾಗವಾಗಿ ಹಿಂದಿಯನ್ನು ವಿರೋಧಿಸಲಾಗುತ್ತಿದೆ. ಹಿಂದಿ ರಾಷ್ಟ್ರ ಭಾಷೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ' ಎಂದು ವಿಧಾನ ಪರಿಷತ್ ಮುಖ್ಯ ಸಚೇತಕ ವೈ.ಎ. ನಾರಾಯಣಸ್ವಾಮಿ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಪ್ರೌಢಶಾಲಾ ಹಿಂದಿ ಶಿಕ್ಷಕರ ಸಂಘದಿಂದ ನಗರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಹಿಂದಿ ಶೈಕ್ಷಣಿಕ ಸಮ್ಮೇಳನದಲ್ಲಿ ಅವರು ಮಾತನಾಡಿದರು.

'ದೇಶದಲ್ಲಿ ಫ್ರೆಂಚ್, ಜರ್ಮನ್, ಜಪಾನೀಸ್, ಚೈನೀಸ್ ಭಾಷೆ ಕಲಿಸಲಾಗುತ್ತಿದೆ. ಆದರೆ, ಯಾವುದೇ ಭಾಷೆಗೂ ಇಲ್ಲದ ವಿರೋಧ ಹಿಂದಿ ವಿಚಾರದಲ್ಲಿ ಏಕೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. 30 ರಾಜ್ಯಗಳನ್ನು ಬೆಸೆಯುವ ಹಿಂದಿ ಭಾಷೆಯು ದೇಶಕ್ಕೆ ಗೌರವ ತಂದಿದೆ, ಒಗ್ಗಟ್ಟು ಕಾಪಾಡಿದೆ' ಎಂದು ಪ್ರತಿಪಾದಿಸಿದರು.

'ದೇಶಕ್ಕೆ ರಾಷ್ಟ್ರಧ್ವಜ, ರಾಷ್ಟ್ರಪಕ್ಷಿ, ರಾಷ್ಟ್ರೀಯ ಪ್ರಾಣಿ ಇದೆ. ಆದರೆ, ಈವರೆಗೆ ನಮ್ಮ ರಾಷ್ಟ್ರ ಭಾಷೆ ಕುರಿತಂತೆ ಗೊಂದಲ ಬಗೆಹರಿದಿಲ್ಲ. ಜವಾಹರಲಾಲ್ ನೆಹರೂರಿಂದ ನರೇಂದ್ರ ಮೋದಿವರೆಗೆ ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಘೋಷಿಸುವ ಪ್ರಯತ್ನಗಳಾದರೂ ದುರದೃಷ್ಟವಶಾತ್ ಸಾಧ್ಯವಾಗಿಲ್ಲ. ರಾಷ್ಟ್ರಭಾಷೆಯಾಗಿರುವ ಹಿಂದಿ ಹೇರಿಕೆ ತಪ್ಪೇನಲ್ಲ. ಈ ಸಮ್ಮೇಳನದ ಮೂಲಕ ಹಿಂದಿಯನ್ನು ರಾಷ್ಟ್ರ ಭಾಷೆ ಎಂಬುದಾಗಿ ಅಧಿಕೃತವಾಗಿ ಘೋಷಿಸಲು ಸಂದೇಶ ಹೋಗಬೇಕು' ಎಂದು ವಿಧಾನ ಪರಿಷತ್ ಸದಸ್ಯ ಎಂ.ಚಿದಾನಂದ ಗೌಡ ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಬಸವರಾಜ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸಂಘದ ರಾಜ್ಯಾಧ್ಯಕ್ಷ ಧರ್ಮರಾಜ ಎಂ.ರಾಠೋಡ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ರಾಜ್ಯ ಪ್ರಶಸ್ತಿ ಪಡೆದ ಹಿಂದಿ ಶಿಕ್ಷಕರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಜಿಲ್ಲೆಗೊಬ್ಬ ಶಿಕ್ಷಕರಿಗೆ 'ಹಿಂದಿರತ್ನ' ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ದಸರಾ ಕವಿಗೋಷ್ಠಿ: ಮೃತ ಕವಿಗೆ ಆಹ್ವಾನ!

ಮೈಸೂರು: ನಗರದಲ್ಲಿ ಅ.3ರಂದು ನಡೆಯಲಿರುವ ದಸರಾ ಕವಿಗೋಷ್ಠಿಯಲ್ಲಿ ಪಾಲ್ಗೊಳ್ಳುವ ಕವಿಗಳ ಪಟ್ಟಿಯಲ್ಲಿ ದಿವಂಗತ ಕವಿ ಜಿ.ಕೆ.ರವೀಂದ್ರಕುಮಾರ್ ಅವರ ಹೆಸರು ಸೇರಿರುವುದಕ್ಕೆ ಲೇಖಕರ ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿದೆ. ಸಾಮಾಜಿಕ ಜಾಲತಾಣದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದ್ದು ಟೀಕೆಗಳು ವ್ಯಕ್ತವಾಗಿವೆ.

'ಜಿ.ಕೆ.ರವೀಂದ್ರಕುಮಾರ್ ಕನ್ನಡದ ಅತ್ಯುತ್ತಮ ಕವಿ. ಅವರು ಈಗಿಲ್ಲ. ಕಣ್ಮರೆ ಆದವರನ್ನು ಎಲ್ಲರೂ ಮರೆಯುತ್ತಾರೆ. ಆದರೆ, ಸರ್ಕಾರ ಮರೆಯುವುದಿಲ್ಲ! ದತ್ತಿ ಸಂಸ್ಥೆ ಸದಸ್ಯರನ್ನಾಗಿಯೂ ಮಾಡುತ್ತದೆ. ಕವಿಗೋಷ್ಠಿಗೂ ಕರೆಯುತ್ತದೆ!' ಎಂದು ಅಣಕವಾಡಿದ್ದಾರೆ. ನಾಗರಾಜರಾವ್ ಕಲ್ಕಟ್ಟೆ ಅವರ ಹೆಸರನ್ನು 'ಕಲ್ಕತ್ತೆ' ಎಂದು ಪ್ರಕಟಿಸಿರುವುದಕ್ಕೂ ಆಕ್ಷೇಪ ವ್ಯಕ್ತವಾಗಿದೆ.

ಪ್ರತಿಕ್ರಿಯೆಗೆ ಕವಿಗೋಷ್ಠಿ ಉಪ ಸಮಿತಿಯವರು ಲಭ್ಯವಾಗಲಿಲ್ಲ.

ಬಾಶೆಟ್ಟಿಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಘಟನೆ

ಔಷಧಿ ಕಾರ್ಖಾನೆಯಲ್ಲಿ ಬೆಂಕಿ

ಪ್ರಜಾವಾಣಿ ವಾರ್ತೆ

ಬಾಶೆಟ್ಟಿಹಳ್ಳಿ (ದೊಡ್ಡಬಳ್ಳಾಪುರ): ಬಾಶೆಟ್ಟಿಹಳ್ಳಿ ಕೈಗಾರಿಕಾ ಪ್ರದೇಶದಲ್ಲಿನ ರೆಸೊನೆನ್ಸ್ ಲ್ಯಾಬೊರೇಟರೀಸ್ ಲಿಮಿಟೆಡ್ ಕಂಪನಿಯಲ್ಲಿ ಅನಿಲ ಸೋರಿಕೆಯಿಂದ ಸೋಮವಾರ ಬೆಂಕಿ ಅನಾಹುತ ಸಂಭವಿಸಿದೆ.

ಫಾರ್ಮಾಸೂಟಿಕಲ್ಸ್‌ನಲ್ಲಿ ಬಳಸುವ ಟಾಲ್ವಿನ್ ಅನಿಲ ಸೋರಿಕೆಯಿಂದ ಈ ಅನಾಹುತ ಸಂಭವಿಸಿದ್ದು, ಅಗ್ನಿಶಾಮಕ ದಳದ ಸಿಬ್ಬಂದಿ ಸತತ ಮೂರು ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಕಾರ್ಖಾನೆಯಲ್ಲಿದ್ದ ಎಲ್ಲ ಕಾರ್ಮಿಕರನ್ನು ರಕ್ಷಿಸಲಾಗಿದೆ.

200 ಲೀಟರ್ ಟಾಲ್ವಿನ್ ಅನಿಲ ಸಂಗ್ರಹಿಸಿದ್ದ ಸಿಲಿಂಡರ್‌ನಲ್ಲಿ ಬೆಂಕಿ ಹೊತ್ತಿಕೊಂಡಿದ್ದರಿಂದ ದಟ್ಟ ಹೊಗೆ ಆವರಿಸಿತ್ತು. ಕಾರ್ಖಾನೆ ಸುತ್ತಲೂ ಆತಂಕದ ವಾತಾವರಣ ಸೃಷ್ಟಿಯಾಗಿತ್ತು. ಅನಿಲ ಸಂಗ್ರಹಿಸಿದ್ದ ಕಟ್ಟಡಕ್ಕೆ ಹಾನಿಯಾಗಿದೆ. ಅನಿಲ ಸಂಗ್ರಹದ ವಾಲ್ವ್ ಬಂದ್ ಮಾಡಿದ್ದು, ಸಿಲಿಂಡರ್ ಅಳವಡಿಸಿರುವ ಪ್ರದೇಶವನ್ನು ಅಗ್ನಿಶಾಮಕ ನೊರೆ ಹಾಗೂ ನೀರು ತುಂಬಿಸಿ ತಂಪಾಗಿಸಲಾಗುತ್ತಿದೆ. ಸಿಲಿಂಡರ್‌ನಲ್ಲಿ ಅನಿಲ ಸಂಪೂರ್ಣ ಖಾಲಿಯಾಗುವವರೆಗೂ ಸಣ್ಣ ಪ್ರಮಾಣದಲ್ಲಿ ಬೆಂಕಿ ಉರಿಯಲಿದೆ ಎಂದು ಅಗ್ನಿಶಾಮಕ ಸಿಬ್ಬಂದಿ ಮಾಹಿತಿ ನೀಡಿದರು.

ತಹಶೀಲ್ದಾರ್ ಮೋಹನ ಕುಮಾರಿ, ಸರ್ಕಲ್‌ಇನ್‌ಸ್ಪೆಕ್ಟರ್‌ಹರೀಶ್, ಗ್ರಾಮಾಂತರ ಠಾಣೆ ಇನ್‌ಸ್ಪೆಕ್ಟರ್ ಮುನಿಕೃಷ್ಣ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಅನಿಲ ಸಂಗ್ರಹಾಗಾರದಲ್ಲಿ ಕೈಗೊಂಡಿದ್ದ ಸುರಕ್ಷತಾ ಕ್ರಮಗಳ ಬಗ್ಗೆ ತನಿಖೆ ನಡೆಯಲಿದೆ ಎಂದು ತಹಶೀಲ್ದಾರ್ ತಿಳಿಸಿದರು. ಟಾಲ್ವಿನ್ ಅನಿಲ ವಿಷಪೂರಿತವಲ್ಲ.ಇದೊಂದು ಹೈಡ್ರೋಕಾರ್ಬನ್ ಆರ್ಗ್ಯಾನಿಕ್. ಎಂದಿನಂತೆ ಅನಿಲ ಸಂಗ್ರಹ ಮಾಡಲಾಗುತ್ತಿತ್ತು. ಆದರೆ ಹೇಗೆ ಸೋರಿಕೆಯಾಯಿತು ಎಂಬುದು ಗಮನಕ್ಕೆ ಬಂದಿಲ್ಲ. ಹೊಗೆಯಿಂದ ಯಾವುದೇ ಅಪಾಯವಿಲ್ಲ. ಆದರೂ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ 80 ಮಂದಿಯ ಆರೋಗ್ಯ ತಪಾಸಣೆಗೆ ಸೂಚಿಸಲಾಗಿದೆ. ಈ ಬಗ್ಗೆ ಜಿಲ್ಲಾಧಿಕಾರಿಗೆ ಮಾಹಿತಿ ನೀಡಲಾಗುವುದು ಎಂದು ಕಂಪನಿಯ ಅಧಿಕಾರಿಗಳು ತಿಳಿಸಿದ್ದಾರೆ.

ಬೆಳಿಗ್ಗೆ 8.30ಕ್ಕೆ ಬ್ಯಾರೆನ್‌ನಲ್ಲಿ ಅನಿಲ ಸೋರಿಕೆಯಾಗಿ ಬೆಂಕಿ ಕಾಣಿಸಿಕೊಂಡಿದೆ. ತಕ್ಷಣಕ್ಕೆ ಅಗ್ನಿಶಾಮಕ ಸಿಬ್ಬಂದಿ ಧಾವಿಸಿ ಬೆಂಕಿ ನಂದಿಸಿದರು. ಕಟ್ಟಡಕ್ಕೆ ಹಾನಿ ಹಾಗೂ ಅನಿಲ ಸೋರಿಕೆಗೆ ಕಾರಣವಾದ ಅಂಶಗಳನ್ನು ಪರಿಶೀಲಿಸಿ, ಪೊಲೀಸ್ ಹಾಗೂ ಅಗ್ನಿಶಾಮಕ ಇಲಾಖೆಗೆ ವರದಿ ನೀಡಲಾಗುವುದು ಎಂದು ಕಂಪನಿಯ ಪ್ರೊಡಕ್ಷನ್ ಮ್ಯಾನೇಜರ್ ಅರುಣ್‌ಕುಮಾರ್ ಅವರು ಮಾಹಿತಿ ನೀಡಿದರು.

ಮಾಧ್ಯಮ ಪ್ರತಿನಿಧಿಗಳಿಗೆ ಅಡ್ಡಿ

ವರದಿಗಾಗಿ ಘಟನಾ ಸ್ಥಳಕ್ಕೆ ತೆರಳಿದ್ದ ಮಾಧ್ಯಮ ಪ್ರತಿನಿಧಿಗಳನ್ನು ಕಂಪನಿಯ ಸಿಬ್ಬಂದಿ ಸುಂದರ್‌ರಾಜ್ ಎಂಬುವವರು ಎಳೆದಾಡಿದರು. ಕಾರ್ಖಾನೆಯ ಆವರಣದ ಹೊರಗೆ ನಿಂತು ವರದಿ ಮಾಡುವುದಕ್ಕೂ ಆಕ್ಷೇಪ ವ್ಯಕ್ತಪಡಿಸಿದರು. ಮಾಧ್ಯಮ ಪ್ರತಿನಿಧಿಗಳಿಂದ ಪ್ರತಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಸುರಕ್ಷತೆಯ ನೆಪ ಹೇಳಿ ನುಣುಚಿಕೊಂಡರು.

ಬೆಂಕಿ ನಂದಿಸುತ್ತಿರುವ ಅಗ್ನಿಶಾಮಕ ಸಿಬ್ಬಂದಿ

ಏರ್ ಆಂಬುಲೆನ್ಸ್: ಬೆಂಗಳೂರಿನಲ್ಲಿ ಇಲ್ಲಾಳಗೆ ಚಿಕಿತ್ಸೆ

ಕಲಬುರಗಿ: ಬೀದರ್ ಜಿಲ್ಲೆಯ ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿರುವ ಹೊನ್ನಳ್ಳಿ ಗ್ರಾಮದಲ್ಲಿ ಗಾಂಜಾ ಮಾರಾಟಗಾರರಿಂದ ತೀವ್ರ ಸ್ವರೂಪದಲ್ಲಿ ಹಲ್ಲೆಗೆ ಒಳಗಾಗಿ, ನಗರದ ಯುನೈಟೆಡ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕಲಬುರಗಿ ಗ್ರಾಮೀಣ ಠಾಣೆಯ ಸರ್ಕಲ್ ಇನ್‌ಸ್ಪೆಕ್ಟರ್ ಶ್ರೀಮಂತ ಇಲ್ಲಾಳ ಅವರನ್ನು ಸೋಮವಾರ ಏರ್ ಆಂಬುಲೆನ್ಸ್ ಮೂಲಕ ಬೆಂಗಳೂರಿನ ಮಣಿಪಾಲ ಆಸ್ಪತ್ರೆಗೆ ತಲುಪಿಸಲಾಯಿತು.

ಬೆಳಿಗ್ಗೆ 9.10ರ ಸುಮಾರಿಗೆ ಆಸ್ಪತ್ರೆಯಿಂದ ಜೀರೊ ಟ್ರಾಫಿಕ್ ಮೂಲಕ ಸಾಗಿದ ಆಂಬುಲೆನ್ಸ್ ನಗರದ ವಿಮಾನ ನಿಲ್ದಾಣಕ್ಕೆ 9.25ಕ್ಕೆ ತಲುಪಿತು.

ಅಲ್ಲಿಂದ ವಿಶೇಷ ಏರ್ ಆಂಬುಲೆನ್ಸ್ ಮೂಲಕ ಬೆಂಗಳೂರಿಗೆ ಕರೆತರಲಾಯಿತು. ಇಲ್ಲಾಳ ಅವರೊಂದಿಗೆ ಪುತ್ರ ಕಿರಣ, ಪತ್ನಿ ಮತ್ತು ಇಬ್ಬರು ವೈದ್ಯರು ಇದ್ದರು.

13 ಮಂದಿ ಬಂಧನ: ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ 13 ಜನರನ್ನು ಬಸವಕಲ್ಯಾಣ ತಾಲ್ಲೂಕಿನ ಮಂಠಾಳ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

50 ಜನರ ವಿರುದ್ಧ ಪ್ರಕರಣ ದಾಖಲಾಗಿದೆ. ಗಡಿ ಗ್ರಾಮಗಳಲ್ಲಿ ಹುಡುಕಾಟ ನಡೆಸಿ, ಪೊಲೀಸರು 13 ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ' ಎಂದು ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಟ್ವೀಟ್ ಮಾಡಿದ್ದಾರೆ.

₹12 ಕೋಟಿ ವೆಚ್ಚ: ಸಾಂಸ್ಕೃತಿಕ ಚಟುವಟಿಕೆಗೆ ಅವಕಾಶ ಕಲ್ಪಿಸುವ ಉದ್ದೇಶ

ಬಹರೇನ್ ಕನ್ನಡ ಭವನ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಪನಾಮ (ಬಹರೇನ್): ಬಹರೇನ್ ಕನ್ನಡ ಸಂಘದ ಕನ್ನಡ ಭವನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಡಿಯೊ ಸಂದೇಶದ ಮೂಲಕ ಉದ್ಘಾಟಿಸಿದರು.

ಬಹರೇನ್‌ನಲ್ಲಿರುವ ಕನ್ನಡಿಗರು ₹12 ಕೋಟಿ ವೆಚ್ಚದಲ್ಲಿ ಈ ಭವನವನ್ನು ನಿರ್ಮಿಸಿದ್ದಾರೆ. ವಿಶಾಲ ಸಭಾಭವನ, ಕನ್ನಡ ಕಲಿಕಾ ಕೇಂದ್ರ, ಸುಸಜ್ಜಿತ ಯೋಗ ಕೇಂದ್ರ, ಗ್ರಂಥಾಲಯ ಸೇರಿದಂತೆ ಕನ್ನಡ ಸಾಹಿತ್ಯ, ಕಲೆ ಮತ್ತು ಸಾಂಸ್ಕೃತಿಕ ಚಟುವಟಿಕೆಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಕನ್ನಡ ಭವನ ನಿರ್ಮಿಸಲಾಗಿದೆ.

'ಪುಟ್ಟ ದ್ವೀಪರಾಷ್ಟ್ರವಾದ ಬಹರೇನ್ ಕನ್ನಡ ಸಂಘ ಕನ್ನಡ ನಾಡಿಗೆ ಸಾಕಷ್ಟು ಕೊಡುಗೆ ನೀಡಿದ್ದು, ರಾಜ್ಯೋತ್ಸವ ಪ್ರಶಸ್ತಿಯನ್ನೂ ಪಡೆದಿದೆ. ಕನ್ನಡದ ಬೆಳವಣಿಗೆಗೆ ದುಡಿಯುತ್ತಿರುವ ಸಂಸ್ಥೆ ಮುಂದೆಯೂ ಅನೇಕ ಸಾಧನೆಗಳನ್ನು ಮಾಡಲಿ' ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹಾರೈಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಮನು ಬಳಿಗಾರ್ ಮಾತನಾಡಿ, 'ವಿಶ್ವದಲ್ಲೇ ಮೊದಲ ಬಾರಿ ಕನ್ನಡ ಸಂಘವೊಂದು ಭಾರತದ ನೆಲದಾಚೆಗೆ ಸ್ವಂತ ಭವನ ಕಟ್ಟಿಸಿದೆ. ಬಹರೇನ್ ಕನ್ನಡ ಸಂಘದ ನೆರವಿನೊಂದಿಗೆ ಕನ್ನಡ ಸಾಹಿತ್ಯ ಪರಿಷತ್ತು ಬಹರೇನ್‌ನಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ಆಯೋಜಿಸಿತ್ತು. ಈ ಭವನದ ಸಭಾಂಗಣ ನಿರ್ಮಾಣಕ್ಕಾಗಿ ಸಾಹಿತ್ಯ ಪರಿಷತ್ತು ₹25 ಲಕ್ಷ ನೀಡಿದೆ' ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ, 'ಬಹರೇನ್ ಕನ್ನಡಿಗರಿಗೆ ಸಾಹಿತ್ಯ ಪರಿಷತ್ತು ಸದಸ್ಯತ್ವ ನೀಡಲು ಮುಂದಾಗಿದೆ. ಕನ್ನಡ ಸಂಘದ ಎಲ್ಲ ಸಮಸ್ಯೆಗಳ ಪರಿಹಾರಕ್ಕೆ ಮತ್ತು ಅಭಿವೃದ್ಧಿಗೆ ಪರಿಷತ್ ಬದ್ಧವಾಗಿದೆ' ಎಂದರು. ಶಾಸಕ ಬಿ.ಎಸ್. ಯಡಿಯೂರಪ್ಪ ವಿಡಿಯೊ ಸಂದೇಶದ ಮೂಲಕ ಶುಭ ಹಾರೈಸಿದರು.

ಬಹರೇನ್ ಸಂಸ್ಥಾನದ ಭಾರತದ ರಾಯಭಾರಿ ಪಿಯೂಷ್ ಶ್ರೀವಾಸ್ತವ, ಬಹರೇನ್ ಕನ್ನಡ ಸಂಘದ ಅಧ್ಯಕ್ಷ ಪ್ರದೀಪ್ ಶೆಟ್ಟಿ, 'ವಿಶ್ವವಾಣಿ' ಸಂಪಾದಕ ವಿಶ್ವೇಶ್ವರ ಭಟ್, ಕನ್ನಡಪ್ರಭ ಮತ್ತು ಸುವರ್ಣ ನ್ಯೂಸ್ ಪ್ರಧಾನ ಸಂಪಾದಕ ರವಿ ಹೆಗಡೆ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ, ಉದ್ಯಮಿ ವಕ್ವಾಡಿ ಪ್ರವೀಣ್ ಶೆಟ್ಟಿ, ಕನ್ನಡಪ್ರಭ ಪುರವಣಿ ಸಂಪಾದಕ ಜೋಗಿ, ಬಹರೇನ್ ಸಂಸ್ಥಾನದ ವಾರ್ತಾ ಇಲಾಖೆಯ ನಿರ್ದೇಶಕ ಯೂಸುಫ್ ಲೋರಿ, ಡಾ. ಆರತಿ ಕೃಷ್ಣ ಇದ್ದರು.

ಬಹರೇನ್‌ನಲ್ಲಿ ನಿರ್ಮಿಸಿರುವ ಕನ್ನಡ ಭವನ

2015–20ರ ಅವಧಿ: ಖರ್ಚಾಗದ ಅನುದಾನ– ಸಿಎಜಿ

ಸರ್ಕಾರದ ‘ಜಡತೆ’: ಪುಟಿದೆದ್ದ ಐಟಿ

• ಎಸ್.ರವಿಪ್ರಕಾಶ್

ಮುಖ್ಯಾಂಶಗಳು

- ಹಣಕಾಸಿನ ನಿರ್ವಹಣೆಯಲ್ಲಿ ನ್ಯೂನತೆ
- ಬ್ಯಾಂಕ್ ಖಾತೆಗಳಲ್ಲಿ ಹಣ ಇಟ್ಟ ಏಜೆನ್ಸಿಗಳು
- ತರಬೇತಿ ಕಾರ್ಯಕ್ರಮಗಳೂ ಮಾನ್ಯತೆ ಕೊರತೆ ಹೊಂದಿವೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಗಾಗಿ ರಾಜ್ಯ ಸರ್ಕಾರ ಪ್ರಕಟಿಸಿದ ನೀತಿಯ ಅನ್ವಯ (2015-2020) ಐದು ವರ್ಷಗಳ ಅವಧಿಯಲ್ಲಿ 20 ಸಾವಿರ ನವೋದ್ಯಮಗಳ ಸ್ಥಾಪನೆಗೆ ಉತ್ತೇಜನ ಮತ್ತು 18 ಲಕ್ಷ ಜನರಿಗೆ ಉದ್ಯೋಗ ನೀಡುವ ಗುರಿ ಈಡೇರಿಲ್ಲ.

2000 ದಿಂದ ಈಚೆಗೆ ಒಟ್ಟು ನಾಲ್ಕು ನೀತಿಗಳನ್ನು ಜಾರಿ ಮಾಡಲಾಗಿದೆ. ಇವುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಲ್ಲಿ ಸರ್ಕಾರ ಎಡವಿದೆ ಮತ್ತು ನಿರಾಸಕ್ತಿ ತೋರಿದೆ. ಆದರೆ, ಖಾಸಗಿ ಕಂಪನಿಗಳು ಸ್ವಂತ ಪ್ರಯತ್ನದಿಂದಾಗಿ ರಾಜ್ಯದಲ್ಲಿ ಹೆಚ್ಚಿನ ಬೆಳವಣಿಗೆ ಸಾಧಿಸಿವೆ ಎಂದು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ ಹೇಳಿದೆ.

2015-16 ರಿಂದ 2019- 20ರ ಅವಧಿಯಲ್ಲಿ ಎವಿಜಿಸಿ ಪಾರ್ಕ್‌ಗಳು, ವೆಂಚರ್ ಕ್ಯಾಪಿಟಲ್ ಫಂಡ್‌ಗಳು, ಬೃಹತ್ ಯೋಜನೆಗಳು (ಮೆಗಾ ಪ್ರಾಜೆಕ್ಟ್‌ಗಳು), ರಾಜ್ಯಕ್ಕೆ ಹೂಡಿಕೆಗಳನ್ನು ಆಹ್ವಾನಿಸಲು ವಿಶ್ವದ 50 ಉನ್ನತ ಇಎಸ್‌ಟಿಎಂ ಕಂಪನಿಗಳೊಂದಿಗೆ ಸಹಭಾಗಿತ್ವ ಸೇರಿ ಯಾವುದೇ ಸಮಗ್ರ ವಾರ್ಷಿಕ ಯೋಜನೆಗಳನ್ನೂ ಇಲಾಖೆ ಮಾಡಿಲ್ಲ. ಸಮಗ್ರ ಕ್ರಿಯಾ ಯೋಜನೆ ಹೊಂದಿಲ್ಲದೇ ಇದ್ದುದರಿಂದ ನೀತಿಯ ಆಶಯ ಅನುಷ್ಠಾನವಾಗಿಲ್ಲ ಎಂದೂ ವರದಿ ಅಭಿಪ್ರಾಯಪಟ್ಟಿದೆ.

2015-16 ರಿಂದ 2019-20ರ ಅವಧಿಯಲ್ಲಿ ₹920 ಕೋಟಿ ಅನುದಾನವನ್ನು ಅಭಿವೃದ್ಧಿಗೆ ನಿಗದಿ ಮಾಡಿದ್ದರೂ ಬಿಡುಗಡೆ ಮಾಡಿದ್ದು ₹457.30 ಕೋಟಿ. ಆದರೆ, ಈ ಅವಧಿಯಲ್ಲಿ ಖಾಸಗಿ ಐಟಿ ಕಂಪನಿಗಳು ಸ್ವಂತ ಶ್ರಮದಿಂದ ಹೆಚ್ಚಿನ ಬೆಳವಣಿಗೆ ಸಾಧಿಸಿವೆ. ಇದರ ಪರಿಣಾಮ 2014-15 ರಲ್ಲಿದ್ದ ಕಂಪನಿ ಸಂಖ್ಯೆ 2,560 ರಿಂದ 2019-20 ರ ವೇಳೆಗೆ 5,500ಕ್ಕೂ ಹೆಚ್ಚಾಗಿದೆ. ರಫ್ತು ಆದಾಯ ₹1.80 ಲಕ್ಷ ಕೋಟಿಯಿಂದ ₹5.8 ಲಕ್ಷ ಕೋಟಿಗೆ ಏರಿಕೆ ಆಗಿದ್ದು, ದೇಶದ ಐಟಿ ರಫ್ತು ಪಾಲು ಶೇ 38 ರಿಂದ ಶೇ 40 ಕ್ಕೆ ಏರಿಕೆ ಆಗಿದೆ ಎಂಬುದನ್ನು ವರದಿ ಬೊಟ್ಟು ಮಾಡಿದೆ.

ಅಚ್ಚರಿಯ ಸಂಗತಿ ಎಂದರೆ ಸರ್ಕಾರವು ಬೇಡಿಕೆ ಸಲ್ಲಿಸಿದ ₹920.06 ಕೋಟಿಯಲ್ಲಿ ಶೇ 50 ರಷ್ಟು (₹457.36 ಕೋಟಿ) ಬಿಡುಗಡೆ ಆಗಿದೆ. ಅದರೆ ಅದನ್ನು ಅನುಷ್ಠಾನ ಏಜೆನ್ಸಿಗಳು ಬಳಸಿಕೊಂಡಿಲ್ಲ. ಈ ಏಜೆನ್ಸಿಗಳು ಐದು ವರ್ಷಗಳಲ್ಲಿ ನಾಲ್ಕು ವರ್ಷಗಳ ಆರಂಭಿಕ ಶಿಲ್ಕಿಗೆ (ಬ್ಯಾಲೆನ್ಸ್‌ಗೆ) ಸಮನಾದ ಮೊತ್ತವನ್ನು ಖರ್ಚು ಮಾಡಲು ಸಾಧ್ಯವಾಗಲಿಲ್ಲ. ನವೋದ್ಯಮ ನೀತಿಯಡಿ 2018-19 ರಲ್ಲಿ ಖರ್ಚು ಮಾಡದ ಬಾಕಿ ₹52.48 ಕೋಟಿ ಇತ್ತು, 2018-19 ನೇ ಸಾಲಿಗೆ ₹44.04 ಕೋಟಿ ಹಣಕಾಸಿನ ಹಂಚಿಕೆಯನ್ನು ₹11.01 ಕೋಟಿಯಂತೆ ನಾಲ್ಕು ಸಮಾನ ಕಂತುಗಳಲ್ಲಿ ಬಿಡುಗಡೆ ಮಾಡಿದ್ದರೂ ಸಂಪೂರ್ಣ ಅನುದಾನ ಬಳಕೆ ಆಗಿಲ್ಲ ಎಂದು ಸಿಎಜಿ ಹೇಳಿದೆ.

ಒಂದು ನೀತಿಯಿಂದ ಇನ್ನೊಂದು ನೀತಿಗೆ ₹66.61 ಕೋಟಿ ಹಣವನ್ನು ಅನಗತ್ಯವಾಗಿ ಮರು ವಿನಿಯೋಗ ಮಾಡಿದ ಹಲವಾರು ನಿದರ್ಶನಗಳಿವೆ. ₹8.85 ಕೋಟಿ ಮೊತ್ತವನ್ನು ಗ್ರಾಮೀಣ ವೈ-ಫೈನಿಂದ ನವೋದ್ಯಮ ನೀತಿಗೆ ಮರು ವಿನಿಯೋಗಿಸಲಾಗಿದೆ. ನವೋದ್ಯಮ ನೀತಿಗೆ ಸಂಬಂಧಿಸಿದಂತೆ 2017-18 ರ ಖರ್ಚು ಮಾಡದ ಬಾಕಿ ₹52.48 ಕೋಟಿ, 2018-19ರಲ್ಲಿ ₹67.10 ಕೋಟಿ ಬಳಕೆಯಾಗದೇ ಉಳಿದಿದೆ. 2019-20 ರಲ್ಲಿ ₹35.60 ಕೋಟಿ ಬಳಕೆಯಾಗದೆ ಉಳಿದಿದೆ. ಹಣ ಬಿಡುಗಡೆ ಮಾಡಿದ್ದೇ ಅನಗತ್ಯ ಎಂದು ಸಿಎಜಿ ಅಭಿಪ್ರಾಯಪಟ್ಟಿದೆ.

ಖಾಸಗಿ ಕಂಪನಿಗಳ ಪಾತ್ರವೇ ಹಿರಿದು

ಕಳೆದ ಆರು ವರ್ಷಗಳ ಅವಧಿಯಲ್ಲಿ ಕರ್ನಾಟಕದ ಐಟಿ–ಬಿಟಿ ವಲಯವು ಖಾಸಗಿಯವರಿಂದಲೇ ನಡೆಸಲ್ಪಟ್ಟದ್ದರಿಂದಲೇ ರಾಜ್ಯವು ಐಟಿ ಮತ್ತು ಐಟಿಇಎಸ್ ವಲಯದಿಂದ ರಫ್ತು ಆದಾಯದಲ್ಲಿ ಅಗ್ರ ಸ್ಥಾನ ಉಳಿಸಿಕೊಂಡಿದೆ.

ಐಟಿ ವಲಯ ಆರ್ಥಿಕ ಸಮೀಕ್ಷೆ ದತ್ತಾಂಶ

ಸೂಚಕ	2014-15	2019-20
ಕಂಪನಿಗಳ ಸಂಖ್ಯೆ	2,560	5,500+
ದೇಶದ ಐಟಿ ರಫ್ತಿನಲ್ಲಿ ಪಾಲು	ಶೇ 38	ಶೇ40
ರಾಜ್ಯದ ಜಿಡಿಪಿ ಪಾಲು	ಶೇ 25	25
ನೇರ ಉದ್ಯೋಗ(ಲಕ್ಷ)	10	12
ಪರೋಕ್ಷ ಉದ್ಯೋಗ(ಲಕ್ಷ)	30	31

ಸಾಂದರ್ಭಿಕ ಚಿತ್ರ



ತಾಲ್ಲೂಕು, ಜಿಲ್ಲಾ ಪಂಚಾಯಿತಿ ಚುನಾವಣೆಗೆ 12 ವಾರ ಗಡುವು

ಒಂದನೇ ಪುಟದಿಂದ...

‘ರಾಜ್ಯದ ವಿವಿಧ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳ ಅವಧಿ ಈಗಾಗಲೇ ಪೂರ್ಣಗೊಂಡು ವರುಷವೇ ಕಳೆದಿದೆ. ಇವುಗಳಿಗೆ ಚುನಾವಣೆ ನಡೆಸಲು ಆಯೋಗವು ಎಲ್ಲ ರೀತಿಯ ಸಿದ್ಧತೆ ಮಾಡಿಕೊಂಡಿದೆ. ಶೀಘ್ರ ಚುನಾವಣೆ ನಡೆಸದೇ ಹೋದಲ್ಲಿ ಆಯೋಗ ಇಷ್ಟು ದಿನ ನಡೆಸಿರುವ ಎಲ್ಲ ಸಿದ್ಧತೆಗಳೂ ವ್ಯರ್ಥವಾಗಲಿವೆ’ ಎಂಬ ಅಂಶವನ್ನು ನ್ಯಾಯಪೀಠಕ್ಕೆ ಆಯೋಗವು ತಿಳಿಸಿದೆ.

ಜನಸಂಖ್ಯೆ ಅನುಪಾತದ ಆಧಾರದಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಲ್ಲಿ ಸ್ಥಾನ ಮತ್ತು ಅಭ್ಯರ್ಥಿಗಳ ಹೆಚ್ಚಳಕ್ಕೆ ಸಂಬಂಧಿಸಿದಂತೆ ಕರ್ನಾಟಕ ಪಂಚಾಯತ್ ರಾಜ್ ಹಾಗೂ ಗ್ರಾಮ ಸ್ವರಾಜ್ (ತಿದ್ದುಪಡಿ) ಕಾಯ್ದೆ-2021ರ ಜಾರಿಗೆ ರಾಜ್ಯ ಸರ್ಕಾರ 2021ರ ಸೆಪ್ಟೆಂಬರ್ 18ರಂದು ಗೆಜೆಟ್ ಅಧಿಸೂಚನೆ ಹೊರಡಿಸಿತ್ತು.

> ಹೈಕೋರ್ಟ್ ಆದೇಶದ ಅನುಸಾರ ಕ್ಷೇತ್ರ ಪುನರ್ ವಿಂಗಡಣೆ ಆಯೋಗವು ಮೂರು ತಿಂಗಳಲ್ಲಿ ತನ್ನ ವರದಿ ಸಲ್ಲಿಸುವ ನಿರೀಕ್ಷೆಯಿದೆ. ಬಹುಶಃ ಈ ಪ್ರಕ್ರಿಯೆ ಡಿಸೆಂಬರ್ ಅಂತ್ಯದ ವೇಳೆಗೆ ಪೂರ್ಣಗೊಳ್ಳಲಿದ್ದು, 2023ರ ಜನವರಿಯಲ್ಲಿ ವರದಿ ಸರ್ಕಾರದ ಕೈಸೇರಲಿದೆ. ಸರ್ಕಾರ ತದನಂತರ ಮುಂದಿನ ಕ್ರಮ ಕೈಗೊಂಡು ಚುನಾವಣೆ ನಡೆಸುವ ಸಿದ್ಧತೆ ಮಾಡಿಕೊಳ್ಳಬೇಕು.
>
> **ಪ್ರಭುಲಿಂಗ ಕೆ.ನಾವದಗಿ,** ಅಡ್ವೊಕೇಟ್ ಜನರಲ್, ಹೈಕೋರ್ಟ್

> ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ನಿಗದಿ ಕಾರ್ಯ ಆರಂಭಿಸಿಲ್ಲ. ಈ ಸಂಬಂಧ ರಚಿಸಲಾಗಿರುವ ಆಯೋಗವು ತನ್ನ ವರದಿ ನೀಡಿದ ಬಳಿಕವಷ್ಟೇ ಆ ಕಾರ್ಯ ಆರಂಭಿಸಲಾಗುವುದು.
>
> **ಎಲ್.ಕೆ.ಅತೀಕ್,** ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಪಂಚಾಯತ್ ರಾಜ್ ಇಲಾಖೆ

> ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಶೀಘ್ರವೇ ಚುನಾವಣೆ ನಡೆಸಬೇಕು ಎಂಬುದು ರಾಜ್ಯ ಚುನಾವಣಾ ಆಯೋಗದ ಆಶಯ. ಇವುಗಳನ್ನು ದೀರ್ಘಕಾಲದವರೆಗೆ ಜನಪ್ರತಿನಿಧಿಗಳಿಲ್ಲದೆ ಖಾಲಿ ಇಡುವುದು ಪ್ರಜಾಪ್ರಭುತ್ವದಲ್ಲಿ ಸರಿಯಲ್ಲ.
>
> **ಕೆ.ಎನ್.ಫಣೀಂದ್ರ,** ಆಯೋಗದ ಪರ ಹಿರಿಯ ವಕೀಲ

ಜೆಡಿಎಸ್ ಪಂಚರತ್ನ ರಥ ಯಾತ್ರೆ

ನ.1ರಿಂದ ಪ್ರಾರಂಭ • ಜಲಧಾರೆ ಯಶಸ್ಸಿನಿಂದ ಪ್ರೇರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್, ಬಿಜೆಪಿ ಪರಸ್ಪರ ಆರೋಪ-ಪ್ರತ್ಯಾರೋಪದಲ್ಲಿ ತೊಡಗಿರುವ ಸಮಯದಲ್ಲೇ ಸದ್ದಿಲ್ಲದೇ ಚುನಾವಣಾ ಪ್ರಚಾರಕ್ಕೆ ಅಣಿಯಾಗುತ್ತಿರುವ ಜೆಡಿಎಸ್, ನ.1ರಿಂದ ಪಂಚರತ್ನ ರಥ ಯಾತ್ರೆ ಆರಂಭಿಸಲಿದೆ.

ಪಕ್ಷವನ್ನು ಸಂಘಟಿಸುವ ಉದ್ದೇಶದಿಂದ ರಾಜ್ಯ ಕಾರ್ಯಕಾರಿಣಿ ಸದಸ್ಯರು ಹಾಗೂ ಪದಾಧಿಕಾರಿಗಳ ಜತೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹಾಗೂ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಸರಣಿ ಸಭೆ ನಡೆಸಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಕುಮಾರಸ್ವಾಮಿ, ‘ಕನ್ನಡಿಗರು ಸಂಭ್ರಮಿಸುವ ಕರ್ನಾಟಕ ರಾಜ್ಯೋತ್ಸವದ ದಿನವೇ ಯಾತ್ರೆಗೆ ಚಾಲನೆ ನೀಡಲಾಗುವುದು. ಪಕ್ಷ ಅಧಿಕಾರಕ್ಕೆ ಬಂದರೆ ಏನು ಮಾಡಲಿದೆ ಎನ್ನುವುದನ್ನು ಯಾತ್ರೆ ಮೂಲಕ ಜನರಿಗೆ ಮನವರಿಕೆ ಮಾಡಲು ಯಾತ್ರೆ ಹಮ್ಮಿಕೊಳ್ಳಲಾಗುತ್ತಿದೆ. ರಾಷ್ಟ್ರೀಯ ಪಕ್ಷಗಳಂತೆ ಅಬ್ಬರವಿಲ್ಲದೆ ಯಾತ್ರೆಯ ರೂಪುರೇಷೆಗಳನ್ನು ಶೀಘ್ರ ಬಿಡುಗಡೆ ಮಡಲಾಗುವುದು’ ಎಂದರು.

‘ಪಂಚರತ್ನ ರಥಯಾತ್ರೆ ಆಗಸ್ಟ್ ತಿಂಗಳು ಆರಂಭವಾಗಬೇಕಿತ್ತು. ಮಳೆಯಿಂದಾಗಿ ಮುಂದೂಡಲಾಗಿತ್ತು. ಕೆಲ ತಿಂಗಳ ಹಿಂದೆ ಹಮ್ಮಿಕೊಂಡಿದ್ದ ಜನತಾ ಜಲಧಾರೆ ಸಮಾವೇಶಗಳು ಯಶಸ್ವಿಯಾಗಿದ್ದವು. ನೀರಾವರಿ ಯೋಜನೆಗಳ ಜಾರಿಗೆ ₹ 4 ಲಕ್ಷ ಕೋಟಿ ಬೇಕಿದೆ. ಯೋಜನೆ ಜಾರಿಗೆ ದೂರದೃಷ್ಟಿಯ ಅಗತ್ಯವಿದೆ. ಈ ಕುರಿತು ಜನರಿಗೆ ಮನವರಿಕೆ ಮಾಡಲಾಗುವುದು’ ಎಂದೂ ಅವರು ವಿವರ ನೀಡಿದರು.

8ಕ್ಕೆ ಜನತಾ ಮಿತ್ರ ಸಮಾರೋಪ: ‘ಜನತಾ ಮಿತ್ರ ಕಾರ್ಯಕ್ರಮವೂ ಯಶಸ್ವಿಯಾಗಿದೆ. ಅ.8ರಂದು ಬೆಂಗಳೂರಿನಲ್ಲಿ ಸಮಾರೋಪ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಬೆಂಗಳೂರಿನ ಜನರಿಗೆ ಪಕ್ಷದ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಲಾಗುವುದು’ ಎಂದರು.

‘ಸಿ.ಎಂ.ಇಬ್ರಾಹಿಂ ಅವರು ಪಕ್ಷದ ಸಂಘಟನೆ ಬಲಪಡಿಸುತ್ತಿದ್ದಾರೆ. ರಾಜ್ಯ ಕಾರ್ಯಕಾರಿಣಿ ಸಮಿತಿಗೆ ಆಯ್ಕೆ ನಡೆದ ಮೇಲೆ ಕೆಲವರಿಗೆ ಜಿಲ್ಲಾ ಉಸ್ತುವಾರಿ ವಹಿಸುವ ನಿರ್ಧಾರ ಮಾಡಲಾಗಿದೆ. ನೇಮಕ ಮಾಡುವ ಸಂಪೂರ್ಣ ಅಧಿಕಾರವನ್ನು ಅಧ್ಯಕ್ಷರಿಗೇ ನೀಡಲಾಗಿದೆ’ ಎಂದರು.

ಪಕ್ಷ ಸಂಘಟನೆ ನಿರ್ಲಕ್ಷ್ಯ: ಕ್ರಮದ ಎಚ್ಚರಿಕೆ

ಪಕ್ಷದ ಕೆಲಸ ಮಾಡದೆ ನಿರ್ಲಕ್ಷ್ಯ ಮಾಡುವವರಿಗೆ ಪಕ್ಷದಲ್ಲಿ ಜಾಗವಿಲ್ಲ ಎಂದು ಜೆಡಿಎಸ್ ನಾಯಕರಾದ ಎಚ್.ಡಿ.ಕುಮಾರಸ್ವಾಮಿ, ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಎಚ್ಚರಿಕೆ ನೀಡಿದರು.

ನಗರದಲ್ಲಿ ಸೋಮವಾರ ನಡೆದ ರಾಜ್ಯ ಕಾರ್ಯಕಾರಿಣಿ ಮತ್ತು ಪದಾಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಪದಾಧಿಕಾರಿಗಳು ಬದ್ಧತೆಯಿಂದ ಕೆಲಸ ಮಾಡಬೇಕು. ನಿರ್ಲಕ್ಷ್ಯ ಸಹಿಸುವುದಿಲ್ಲ. ಕೆಲಸ ಮಾಡದವರು ಬೇರೆಯವರಿಗೆ ಜಾಗ ಬಿಡಬೇಕು. ಇದು ಚುನಾವಣೆ ವರ್ಷ, ಎಲ್ಲರೂ ಸಂಘಟನೆ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ಕನಿಷ್ಠ ತಿಂಗಳಿಗೆ 15 ದಿನವಾದರೂ ರಾಜ್ಯ ಪ್ರವಾಸ ಮಾಡಬೇಕು. ಜನರು ಹಾಗೂ ಕಾರ್ಯಕರ್ತರನ್ನು ಭೇಟಿ ಮಾಡಬೇಕು. ಸರಿಯಾಗಿ ಕೆಲಸ ಮಾಡದ ಪದಾಧಿಕಾರಿಗಳನ್ನು ಮುಲಾಜಿಲ್ಲದೆ ಕಿತ್ತು ಹಾಕಲಾಗುವುದು ಎಂದರು.

ಯುವ ಜನತಾದಳ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಶಾಸಕರಾದ ಸಿ.ಎಸ್.ಪುಟ್ಟರಾಜು, ವೆಂಕಟರಾವ್ ನಾಡಗೌಡ, ಕೆ.ಎಂ.ಕೃಷ್ಣಾರೆಡ್ಡಿ, ವೀರಭದ್ರಪ್ಪ, ವಿಧಾನ ಪರಿಷತ್ ಸದಸ್ಯ ಕೆ.ಎ. ತಿಪ್ಪೇಸ್ವಾಮಿ, ಟಿ.ಎ.ಶರವಣ, ಮಾಜಿ ಸಚಿವ ಎನ್.ಎಂ.ನಬಿ, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಫ್ರುಲ್ಲಾ ಖಾನ್ ಉಪಸ್ಥಿತರಿದ್ದರು.

ಎಸ್ಸಿ, ಎಸ್ಟಿ ಮೀಸಲು ಹೆಚ್ಚಳ ಅ. 8ರಂದು ಸರ್ವಪಕ್ಷ ಸಭೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ‘ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಮೀಸಲಾತಿ ಪ್ರಮಾಣ ಹೆಚ್ಚಿಸಬೇಕೆಂಬ ಬೇಡಿಕೆ ಬಗ್ಗೆ ಚರ್ಚಿಸಲು ಸರ್ಕಾರ ಅ. 8ರಂದು ಬೆಂಗಳೂರಿನಲ್ಲಿ ಸರ್ವಪಕ್ಷಗಳ ಸಭೆ ಕರೆದಿದೆ. ಎಲ್ಲ ಪಕ್ಷಗಳ ಮುಖಂಡರ ಸಲಹೆ, ಅಭಿಪ್ರಾಯ ಪಡೆದು, ಆದಷ್ಟು ಶೀಘ್ರ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು’ ಎಂದು ಸಾರಿಗೆ ಮತ್ತು ಪರಿಶಿಷ್ಟ ವರ್ಗಗಳ ಇಲಾಖೆ ಸಚಿವ ಬಿ. ಶ್ರೀರಾಮುಲು ತಿಳಿಸಿದರು.

ಜಿಲ್ಲೆಯ ಕೂಡ್ಲಿಗಿಯಲ್ಲಿ ಸೋಮವಾರ ನಡೆದ ಮಿನಿ ವಿಧಾನಸೌಧ ಉದ್ಘಾಟನಾ ಸಮಾರಂಭದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬಿಜೆಪಿ ಹಾಗೂ ಸರ್ಕಾರ ಕೊಟ್ಟ ಮಾತಿನಂತೆ ಮೀಸಲು ಕಲ್ಪಿಸಲು ಬದ್ಧವಾಗಿದೆ. ಕೊಟ್ಟ ಮಾತು ಉಳಿಸಿಕೊಳ್ಳುತ್ತೇವೆ’ ಎಂದರು.

‘ಮಹರ್ಷಿ ವಾಲ್ಮೀಕಿ ಜಯಂತಿಯಲ್ಲಿ ಯಾರೂ ಪಾಲ್ಗೊಳ್ಳಬಾರದು ಎಂದು ಕಾಂಗ್ರೆಸ್ ಶಾಸಕ ಸತೀಶ ಜಾರಕಿಹೊಳಿ ಹೇಳಿದ್ದಾರೆ. ಇದರಿಂದ ಸಮಾಜಕ್ಕೆ ನಷ್ಟ . ಅವರು ಕಾನೂನಿನ ಅರಿವು ಇದ್ದ ರಾಜಕಾರಣಿ. ಹೀಗೆಲ್ಲ ಮಾತನಾಡಬಾರದು. ವಾಲ್ಮೀಕಿ ಜಯಂತಿ ಹೆಸರಿನಲ್ಲಿ ಸ್ವಾಮೀಜಿ, ಸತೀಶ ಸೇರಿದಂತೆ ಬೇರೆ ಮುಖಂಡರು ರಾಜಕೀಯ ಮಾಡಬಾರದು’ ಎಂದು ಹೇಳಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ರಮೇಶ್‌ಕುಮಾರ್ ವಿರುದ್ಧ ಕ್ರಮ ಇಲ್ಲ– ಮುನಿಯಪ್ಪ ಸಿಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಾಸಕ ಕೆ.ಆರ್. ರಮೇಶ್‌ಕುಮಾರ್ ವಿರುದ್ಧ ಹೈಕಮಾಂಡ್‌ಗೆ ದೂರು ನೀಡಿ ಕ್ರಮತೆಗೆದುಕೊಳ್ಳಲು ಒಂದು ತಿಂಗಳ ಗಡುವು ನೀಡಿದ್ದೆ. ಎಲ್ಲವನ್ನೂ ಸರಿಪಡಿಸುವ ಭರವಸೆ ನೀಡಿದ್ದ ವರಿಷ್ಠರು ಈವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದು ಕಾಂಗ್ರೆಸ್ ಮಾಜಿ ಸಂಸದ ಕೆ.ಎಚ್. ಮುನಿಯಪ್ಪ ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಪಕ್ಷ ವಿರೋಧಿ ಚಟುವಟಿಕೆ ನಡೆಸಿದವರ ವಿರುದ್ಧ ದೂರು ನೀಡಿದ್ದೇನೆ. ಎಲ್ಲವನ್ನೂ ನಾನು ಹೈಕಮಾಂಡ್ ಗಮನಕ್ಕೆ ತಂದಿದ್ದೇನೆ. ಚುನಾವಣೆಯಲ್ಲಿ ನನ್ನ ವಿರುದ್ಧ ಕೆಲಸ ಮಾಡಿದವರ ಮೇಲೆ ಇನ್ನೂ ಕ್ರಮ ಕೈಗೊಂಡಿಲ್ಲ. ಏನೇ ಇದ್ದರೂ ನಮಗೆ ಬಿಡಿ ಎಂದಷ್ಟೆ ನಾಯಕರು ಹೇಳುತ್ತಿದ್ದಾರೆ’ ಎಂದರು.

‘ಕೋಲಾರ ಜಿಲ್ಲೆ ವಿಚಾರವಾಗಿ ನಾನು ಹೆಚ್ಚೇನೂ ಹೇಳುವುದಿಲ್ಲ. ಶತ್ರು ಯಾರು, ಮಿತ್ರ ಯಾರು ಎಂದೂ ಹೇಳುವುದಿಲ್ಲ. ಪಕ್ಷದ ಭಾರತ್ ಜೋಡೊ ಯಾತ್ರೆಯಲ್ಲಿ ಭಾಗಿಯಾಗುತ್ತೇನೆ. ಎಲ್ಲಿ ಯಾತ್ರೆಗೆ ಸೇರಬೇಕೆಂದು ಪಕ್ಷದ ನಾಯಕರು ಹೇಳುತ್ತಾರೊ ಅಲ್ಲಿ ಭಾಗಿಯಾಗುತ್ತೇನೆ’ ಎಂದರು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30 ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ಪ್ರಜಾವಾಣಿ ಕನ್ನಡ ಧ್ವನಿ
ಪ್ರಜಾವಾಣಿ ಅರ್ಪಿಸುವ
ನವರಾತ್ರಿ ಸಾಂಸ್ಕೃತಿಕ ಉತ್ಸವ- 2022 Live
ಸಹಯೋಗ: ಕಾಸ್ಮೋಪಾಲಿಟನ್ ಕ್ಲಬ್, ಜಯನಗರ, ಬೆಂಗಳೂರು
ಸೆಪ್ಟೆಂಬರ್ 26ರಿಂದ ಅಕ್ಟೋಬರ್ 4, 2022. ಪ್ರತಿ ರಾತ್ರಿ 9.30 ರಿಂದ
ನವರಾತ್ರಿ ವರ್ಣ ವೈಭವ ಗರ್ಬಾ ನೃತ್ಯ
ನಂದಿನಿ ಕೆ. ಮೆಹ್ತಾ ಮತ್ತು ಕೆ.ಮುರಳಿ ಮೋಹನ್ ನಿರ್ದೇಶನದ ಸಮೂಹ ನೃತ್ಯ. ನಾದಂ ತಂಡ ಮತ್ತು ಕ್ಲಬ್ ಸದಸ್ಯರಿಂದ ನಿರ್ವಹಣೆ: ಮಮತಾ ಶ್ರೀನಿವಾಸ್
ನಾಳೆ ದಾಂಡಿಯಾ - ಗರ್ಬಾ ನೃತ್ಯ
ನರ್ತನ ಅಕಾಡೆಮಿ ಆಫ್ ಡ್ಯಾನ್ಸ್ ಆ್ಯಂಡ್ ಮ್ಯೂಸಿಕ್ ಮತ್ತು ಕ್ಲಬ್ ಸದಸ್ಯರಿಂದ. ನಿರ್ವಹಣೆ: ಸೌಮ್ಯಾ ಪ್ರಭು

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.00	4,414	7,113
ಹಾರಂಗಿ	2,859	2,857.42	745	1,450
ಕಬಿನಿ	2284	2,282.87	1,920	1,000
ಹೇಮಾವತಿ	2,922	2,921.95	3,289	3,225
ಲಿಂಗನಮಕ್ಕಿ	1,819	1,816	2,816	8,918
ಸೂಪಾ (ಮೀ)	564	553.98	1,293	3,840
ಮಾಣಿ	595	590	330	721
ತುಂಗಭದ್ರಾ	1,633	1,633	13,514	13,008
ಮಲಪ್ರಭಾ	2079.5	2,079.50	1,094	1,094
ಘಟಪ್ರಭಾ	2175	2,175	2,205	2,205
ಭದ್ರಾ	186	184	3,441	2,550
ಆಲಮಟ್ಟಿ (ಮೀ)	519.6	519.60	9,136	9,136
ನಾರಾಯಣಪುರ (ಮೀ)	492.25	492.07	9,400	9,300

* ನೆಲಮಟ್ಟದಿಂದ

ಇಸ್ರೊದಲ್ಲಿ ರಾಷ್ಟ್ರಮಟ್ಟದ ಸಭೆ ಇಂದು

ಸಕ್ರಿಯವಾಗಿರುವ ‘ಮಂಗಳ ಯಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ‘ಮಂಗಳಯಾನ’ದ ಕಕ್ಷೆಗಾಮಿ (ಆರ್ಬಿಟರ್ ಕ್ರಾಫ್ಟ್) ಮಂಗಳ ಗ್ರಹದ ಕಕ್ಷೆಯಲ್ಲಿ ಪರಿಭ್ರಮಣ ಆರಂಭಿಸಿ ಎಂಟು ವರ್ಷ ಪೂರ್ಣಗೊಂಡಿದೆ. ಆರು ತಿಂಗಳ ಅವಧಿಗೆ ಕಾರ್ಯ ನಿರ್ವಹಿಸಲು ಇದನ್ನು ಅಭಿವೃದ್ಧಿಪಡಿಸಲಾಗಿತ್ತು. ಆದರೆ, ತನ್ನ ಅವಧಿ ಮೀರಿ ಈ ಕಕ್ಷೆಗಾಮಿ ಕಾರ್ಯನಿರ್ವಹಿಸುತ್ತಿದೆ.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಚೊಚ್ಚಲ ಅಂತರ್ ಗ್ರಹ ಯಾನ ಇದಾಗಿದ್ದು, ಮೊದಲ ಪ್ರಯತ್ನದಲ್ಲೇ ಅದ್ಭುತ ಸಾಧನೆ ತೋರಿಸಿದೆ. 2013 ರ ನವೆಂಬರ್ 3 ರಂದು ಬಾಹ್ಯಾಕಾಶ ನೌಕೆಯನ್ನು ಶ್ರೀಹರಿಕೋಟದಿಂದ ಉಡಾವಣೆ ಮಾಡಲಾಗಿತ್ತು. 2014 ರ ಸೆಪ್ಟೆಂಬರ್ 24 ರಂದು ಮಂಗಳ ಗ್ರಹದ ಕಕ್ಷೆಗೆ ಕಕ್ಷೆಗಾಮಿಯನ್ನು ಮೊದಲ ಪ್ರಯತ್ನದಲ್ಲೇ ಯಶಸ್ವಿಯಾಗಿ ಸೇರಿಸಲಾಗಿತ್ತು.

ಇಸ್ರೊ ಬಾಹ್ಯಾಕಾಶ ನೌಕೆಯು ಕಳುಹಿಸಿದ್ದ ಮಂಗಳ ಗ್ರಹದ ಚಿತ್ರ

ಕಕ್ಷೆಗಾಮಿ ಎಂಟು ವರ್ಷ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿರುವ ಇಸ್ರೊ ಕೇಂದ್ರ ಕಚೇರಿಯಲ್ಲಿ ಮಂಗಳವಾರ ರಾಷ್ಟ್ರೀಯ ಮಟ್ಟದ ಸಭೆಯೊಂದನ್ನು ಹಮ್ಮಿಕೊಳ್ಳಲಾಗಿದೆ. ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಅವರು ಉದ್ಘಾಟನಾ ಭಾಷಣ ಮಾಡಲಿದ್ದಾರೆ. ಅಲ್ಲದೇ, ಬಾಹ್ಯಾಕಾಶ ಆಯೋಗದ ಸದಸ್ಯ ಕೆ. ರಾಧಾಕೃಷ್ಣನ್ ಮತ್ತು ಎ.ಎಸ್.ಕಿರಣ್ ಕುಮಾರ್ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ. ವಿಶೇಷವಾಗಿ ‘ಮಂಗಳ ಕಕ್ಷೆಗಾಮಿಯ ಒಂದು ನೋಟ’, ‘ವೈಜ್ಞಾನಿಕ ಸಾಧನೆಗಳು’ ಮತ್ತು ‘ನಮ್ಮ ಸೌರ ವ್ಯವಸ್ಥೆಯೊಳಗಿನ ಅನ್ವೇಷಣೆಯಲ್ಲಿ ಭವಿಷ್ಯದ ದಿಕ್ಸೂಚಿ’ ವಿಷಯಗಳ ಕುರಿತು ಚರ್ಚೆ ನಡೆಯಲಿದೆ.

ಮಂಗಳ ಗ್ರಹದಲ್ಲಿನ ವಾತಾವರಣ, ಅದರ ಮೇಲ್ಮೈ ಲಕ್ಷಣ, ಅಲ್ಲಿ ಇರಬಹುದಾದ ಸೂಕ್ಷ್ಮ ಜೀವ ಕಣಗಳು, ಜೀವಿಗಳ ಹುಟ್ಟಿಗೆ ಕಾರಣವಾಗುವ ಮಿಥೇನ್ ಅನಿಲ ಇದೆಯೇ ಎಂಬುದನ್ನು ಪತ್ತೆ ಹಚ್ಚುವುದು ಮಾರ್ಸ್ ಆರ್ಬಿಟ್ ಮಿಷನ್ ಯೋಜನೆಯ ಮೂಲ ಉದ್ದೇಶವಾಗಿತ್ತು. ಈಗಾಗಲೇ ಸಾಕಷ್ಟು ಮಾಹಿತಿಗಳನ್ನು ಕಲೆ ಹಾಕಿದೆ. ಇಸ್ರೊ ಕೈಗೊಂಡಿದ್ದ ಅಂತರ ಗ್ರಹ ಯಾನ ಯೋಜನೆಗಳಲ್ಲಿ ಮಂಗಳಯಾನ ಅತ್ಯಂತ ಕಡಿಮೆ ವೆಚ್ಚದ್ದು. ಇದಕ್ಕೆ ₹450 ಕೋಟಿ ವೆಚ್ಚವಾಗಿತ್ತು.

IN THE COURT OF THE XCI ADDI, CITY CIVIL, AND SESSIONS JUDGE AND SPECIAL JUDGE FOR KPIDFE ACT AT BENGALURU
Misc. No. 996/2022

BETWEEN
The Competent Authority for M/s The Krantiveera Sangolli Rayanna Urban Co-operative Society Ltd., Belgavi, 3rd floor, Podium Block, V.V. Tower, Bengaluru-560 001.
Petitioner

And:
1) M/s The Krantiveera Sangolli Rayanna Urban Co-operative Society Ltd., Regd Office No. 3258, Shri Shakti Building, Resaladhara Galli, Vivekanada Marga, Belagavi-590 001. Represented By its President, Anand Balakrishna Appugol S/o Balakrishna Appugol.
And Another
Respondents

Notice to Respondent No.1 & 2
1) M/s The Krantiveera Sangolli Rayanna Urban Co-operative Society Ltd., Regd Office No. 3258, Shri, Shakti Building, Resaladhara Galli, Vivekanada Marga, Belagavi-590 001. Represented By its President, Anand Balakrishna Appugol S/o Balakrishna Appugol.
2) Anand Balakrishna Appugol S/o Balakrishna Appugol, President of Respondent No. 1 Company, Residing at: Flat No, 23, Near Pawate Building, Hunuman Nagar, Belagavi-590 001.
AND
Plot No. 1, 2nd Main, 2nd Stage, Hunuman Nagar, Belagavi-590 001.
AND
At Plot No. 2, Govt Housing Society, Hunuman Nagar, Belagavi.

Whereas, the Petitioner has filed the above Petition under section 5(2) of the KPIDFE Act 2004 against Respondents.

The Respondent No. 1 and 2 are hereby issued show cause notice u/s 12(1) of the KPIDEF Act 2004, to appear in court of the XCI Addl City Civil & Sessions Judge (CCH-92) at Bengaluru, in person or by a pleader duly instructed and able answer all material questions relating to above petition on 19.10.2022 at 11:00 Clock in the forenoon

Take notice that in default of your appearance on the date above mentioned Petition will be heard and determined in your absence.

Given under my hand and seal of the court on this day of 21.09.2022.
Sri Venkatesh P. Dalwai
Special Public Prosecutor.
By Order of the Court
Sd/-
Assistant Registrar
City Civil Court Benglauru
DIPR/CP/JA/2376/2022-23

IN THE COURT OF THE XCI ADDI, CITY CIVIL, AND SESSIONS JUDGE AND SPECIAL JUDGE FOR KPIDFB ACT AT BENGALURU
Misc. No. 717/2022

BETWEEN
The Competent Authority for M/s Easy mind Marketing India Private Ltd, 3rd floor, Podium Block, V.V. Tower, Bengaluru-560 001.
Petitioner

And:
1) M/s Eazy Mind Marketing India Pvt. Ltd, Regd office: No. 1 & 2, Block-3, HMS Complex, Ashoka Road, Tumkur Represented by its Managing Director, Mohammed Aslam Syed Pacha Makan, KEB Road, Behind VRL Office, Kothithopu, Tumakuru, Someswarapuram-572102.
2) Mohammed Aslam S/o Late Mohammed Ibrahim, 45 years, Managing Director, M/s Eazy Mind Marketing India Pvt. Ltd.
3) Suphiya Khanum, W/o Mohammed Aslam, 37 years, Branch Manager, M/s Eazy Mind Marketing India Pvt. Ltd.
Respondents 2 and 3 are Residing at : Syed Pacha Makan, KEB Road, Behind VRL Office, Kothithopu, Tumakuru, Someswarapuram-572102.
And
10 cross, BB Road, P.H. Colony, Tumakuru Town, Tumakuru District-572102.
4) Mohammed Roushan Shabber S/o Mohammed Shabber, Major Director, 7th Cross, Near Azad Park, P.H. Colony, Tumakuru-572 101.
5) Ibrahim Khaleel Ulla Khan M S/o Mahaboob Khan, Major, Employee M/s Eazy Mind Marketing India Pvt. Ltd, Nida Ashaihayana 5th Cross, Behind Indira College Good Shed Colony, SSM C Post, Tumakuru-572102.
6) Shumaz Ahamed S/o Musthfaq Ahamed, Major, Employee M/s Eazy Mind Marketing India Pvt. Ltd, Aljuf Manzil, 5th main, P.H. Colony, Tumkur-572102.
AND
6th Cross, Sadhashivanagara, Tumkur Town, Tumakuru District-572102.
7) M/s Chnas Eazy Marketing India Pvt. Ltd, Having its Regd. office at 1 and 2, Block-3, HMS Complex, Ashok Road, (Near Bus Stand), Tumkur-572101.
Represented by its director Mohamed Aslam S/o Mohamed Ibrahim, No. 82, 10th Cross, B.B. Road, P.H. Colony, Tumkur-572201.
8) M. Prakash S/o Muneshwarappa, Major, No. 38, 7th Cross, Gangppa Garden, Bhuvaneshwari Nagar, Bengaluru-560 23.

Notice to Respondent No.02 and 07
2) Mohammed Aslm S/o Late Ibrahim, Aged 45 years, Managing Director, M/s Eazy Mind Marketing India Pvt. Ltd. Residing at Syed Pacha Makan, KEB Road, Behind VRL Office, Kothithopu, Tumkuru, Someswarapuram-572102.
7) M/s Chnas Eazy Marketing India Pvt. Ltd, Represented by its Director Mohammed Aslm S/o Late Mohamed Ibrahim, No. 82, 10th Cross, BB Road, PH Colony, Tumkur-572 201

Whereas, the Petitioner has filed the above Petition under section 5(2) of the KPIDFE Act 2004 against Respondents.

The Respondent No. 01 & 07 are hereby issued show cause notice u/s 12(1) of KPIDEF Act 2004, to appear in court of the XCI Addl City Civil & Sessions Judge (CCH-92) at Bengaluru, in person or by a pleader duly instructed and able answer all material questions relating to above petition on 12.10.2022 at 11:00 Clock in the forenoon

Take notice that in default of your appearance on the date above mentioned Petition will be heard and determined in your absence.

Given under my hand and seal of the court on this day of 17.09.2022.
Sri Venkatesh P. Dalwai
Special Public Prosecutor.
By Order of the Court
Sd/-
Assistant Registrar
City Civil Court Benglauru
DIPR/CP/JA/2373/2022-23

IN THE COURT OF THE XCI ADDI, CITY CIVIL, AND SESSIONS JUDGE AND SPECIAL JUDGE FOR KPIDFB ACT AT BENGALURU
Misc. No. 726/2021

BETWEEN
The Competent Authority for M/s IMA and its group entities, 3rd floor, Podium Block, V.V. Tower, Bengaluru-560 001.
Petitioner

And:
1) I Monetary Advisory and its group Entities, Represented by its promoter / Managing Director, Sri. Mohammed Mansoor Khan, R/at No. 56/4, Nandi Building Hospital Road, Shivajinagar, Bengaluru-560 001.
2) Smt Tabsum Bhanu divorced w/o Sri Mohammed Mansoor Khan and D/o Sri Mohammed Arif, No. 63, S.R. Krishnappa Garden (Changaiah Compound) Jayanagar, Bengaluru-560 041.
Respondents

Notice to Respondent No.1
1) I Monetary Advisory and its group Entities, Represented by its promoter / Managing Director, Sri. Mohammed Mansoor Khan, R/at No. 56/4, Nandi Building Hospital Road, Shivajinagar, Bengaluru-560 001.

Whereas, the Petitioner has filed the above Petition under section 5(2) of the KPIDFE Act 2004 against Respondents.

The Respondent No. 1 is hereby issued show cause notice u/s 12(1) of KPIDFE Act 2004, to appear in court of the XCI Addl City Civil & Sessions Judge (CCH-92) at Bengaluru, in person or by a pleader duly instructed and able answer all material questions relating to above petition on 13.10.2022 at 11:00 Clock in the forenoon

Take notice that in default of your appearance on the date above mentioned Petition will be heard and determined in your absence.

Given under my hand and seal of the court on this day of 17.09.2022.
Sri Venkatesh P. Dalwai
Special Public Prosecutor.
By Order of the Court
Sd/-
Assistant Registrar
City Civil Court Benglauru
DIPR/CP/JA/2372/2022-23

IN THE COURT OF THE XCI ADDI, CITY CIVIL, AND SESSIONS JUDGE AND SPECIAL JUDGE FOR KPIDFB ACT AT BENGALURU
Misc. No. 224/2022

BETWEEN
The Competent Authority for M/s IMA and its group entities, 3rd floor, Podium Block, V.V. Tower, Bengaluru-560 001.
Petitioner

And:
1) I Monetary Advisory and its group Entities, Represented by its Managing Director, Sri. Mohammed Mansoor Khan, No. 56/4, 1st floor, Nandi Building Hospital Road, Shivajinagar, Bengaluru-560 001.
And another
Respondents

Notice to Respondent No.1 & 2
1) I Monetary Advisory and its group Entities, Represented by its Managing Director, Sri. Mohamed Mansoor Khan, No. 56/4, 1st floor, Nandi Building Hospital Road, Shivajinagar, Bengaluru-560 001.
2) Sri. Mohamed Mansoor Khan S/o Abid Ali Khan, R/at No. 9, Pent house Bythal Mariyam Apartments, 5th floor, Park Road, Tasker Town, Bengaluru-560 001.

Whereas, the Petitioner has filed the above Petition under section 5(2) of the KPIDFE Act 2004 against Respondents.

The Respondent No. 1 and 2 are hereby issued show cause notice u/s 12(1) of the KPIDEF Act 2004, to appear in court of the XCI Addl City Civil & Sessions Judge (CCH-92) at Bengaluru, in person or by a pleader duly instructed and able answer all material questions relating to above petition on 19.10.2022 at 11:00 Clock in the forenoon

Take notice that in default of your appearance on the date above mentioned Petition will be heard and determined in your absence.

Given under my hand and seal of the court on this day of 21.09.2022.
Sri Venkatesh P. Dalwai
Special Public Prosecutor.
By Order of the Court
Sd/-
Assistant Registrar
City Civil Court Benglauru
DIPR/CP/JA/2375/2022-23

IN THE COURT OF THE XCI ADDI, CITY CIVIL, AND SESSIONS JUDGE AND SPECIAL JUDGE FOR KPIDFB ACT AT BENGALURU
Misc. No. 27/2022

BETWEEN
The Competent Authority for M/s Aala Ventures Ltd. Deputy Commissioner (Urber) Bengaluru, Kandaya Bhavana, K.G. Road, Bengaluru-560 009.
Petitioner

And:
1) M/s Aala Ventures Ltd. No. 403, 3rd floor, 5th cross, 5th main, 1st stage 3rd block, HBR layout, Kalyan nagar post, bengaluru-560 043.
2) Nadeem Ahmed S/o late Nizaar Ahmed, No. 403, 3rd floor, 5th cross, 5th main, 1st stage 3rd block, HBR layout, Kalyan nagar post, bengaluru-560 043.
3) Mr. Anees Khan S/o A. Ameer Jan, No. 33, 3rd cross, railway layout, Pillanna Garden 3rd Stage, Bengaluru-560 045.
4) Mr. Sabir Sharieff M.I. S/o Imam Ulla Sharieff M. 23, Vinayakanagar layout, Geddala Halli, Railway track, Bengaluru-560077.
5) Mr. Azeez Khan S/o Mr. A. Ameer Jan Residing at No. railway layout, Pillanna Garden 3rd Stage, Bengaluru-560 045.
6) Mrs. Merajunnisa D/o Mr. Abdul Hameed Residing at No. 1032, 19th cross, 1st stage, 2nd block, HBR Layout, Opp. Lidkar colony, Arabic College Post, Bengaluru-560 045.
7) Mr. Mohammed Ibrahim S/o Mr. Late Nanhe Sahed, Residing at No. 543, 11th cross, Near Ganesh Temple, Mukthi Nagar, Hidayath Nagar, K.G. Halli, Arabic College Post, Bengaluru-560 045.
8) Mr. Mohammed Aftar S/o Mr. Mohammed Ishaq, Residing at No. 165, 1st cross, 2nd main, Khushal Nagar Arabic College post, Bengaluru-560 045.
9) Mr. Anser Sharieff S/o Mr. G. Ismail Sharieff, Residing at No. 648, Ground Floor, 7th Cross, 5th block, 1st Stage, Near Govindapura Signal, HBR Layout, Kalyan Nagar post, Bengaluru-560 043.
10) Mr. Kareemulla Sharieff S/o Mr. Fazlullah Sharief, Previous Address No. 98, Ameen Residency, Hanifia Mosque Road, Khushal Nagar, Kadugondanahalli, Bengaluru-560045.
11) Mr. Anser Khan S/o Mr. Ghouse Khan, Residing at No. 8, Old No. 245/1, 2nd Main, 2nd cross, Anwar layout, Venkateshpuram, Bengaluru-560045.
12) Mr. Renuka Naik H. S/o Mr. Hanumantha Naik, Residing at No. 22, K.G. Halli Police Quarters, Nagawara Main Road, Bengaluru-560045.
13) Mr. Jameel Ahmed S/o Abdul Wajid Residing at No. 155/1, Near New Noble School, Rashad Nagar, Ibrahim Sahed Street, Arabic College Post, Bengaluru-560045.
14) Mr. Javeed ulla Sharief S/o H.S. Aleemulla Shariff, Residing at No. 1, Taj Complex, Dr. APJ Abdul Kalam (Govindapura) Main Road, Arabic College Post, Bengaluru-560045.
15) Mr. T.R. Rizwan Ali S/o Late T. Abdul Rahim, Residing at No. 29, 2nd cross,, Anwar layout, Bengaluru-560 045.
16) Mr. Syed Salahuddin S/o Mr. T. Meet Moyeenuddin, Residing at No. 1844, 9th Main, 10th cross, 3rd Block, HBR Layout, Bengaluru-560 043.
17) Mr. Nasir Ansari S/o Mr. Rafeeq Ansari, Residing at No. 202, Nehrupuram, Thimmaiah Road, Shivajinagar, Bengaluru-560 001.
18) Mr. Waseem Shariff S/o Mr. Late Gaffoor Shariff, Residing at No. 12, Old No. 29 'E' Street, Krishna Rajendra Wodeyarnagar, Cleveland Town, Frazer Town, Bengaluru-560 005.
Respondents

Notice to Respondent No.10
10) Mr. Kareemulla Sharieff Aged about 31 years S/o Mr. Fazlullah Sharief, Previous Address No. 98, Ameen Residency, Hanifia Mosque Road, Khushal Nagar, Kadugondanahalli, Bengaluru-560045.

Whereas, the Petitioner has filed the above Petition under section 5(2) of the KPIDFE Act 2004 against Respondents.

The Respondent No. 10 is hereby issued show cause notice u/s 12(1) of the KPIDEF Act 2004, to appear in court of the XCI Addl City Civil & Sessions Judge (CCH-92) at Bengaluru, in person or by a pleader duly instructed and able answer all material questions relating to above petition on 13.10.2022 at 11:00 Clock in the forenoon

Take notice that in default of your appearance on the date above mentioned Petition will be heard and determined in your absence.

Given under my hand and seal of the court on this day of 17.09.2022.
Sri Venkatesh P. Dalwai
Special Public Prosecutor.
By Order of the Court
Sd/-
Assistant Registrar
City Civil Court Benglauru
DIPR/CP/JA/2374/2022-23

ಗ್ರ್ಯಾಂಡ್ ವಿಟಾರಾ ಮಾರುಕಟ್ಟೆಗೆ

ನವದೆಹಲಿ (ಪಿಟಿಐ): ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಮಧ್ಯಮ ಗಾತ್ರದ ಎಸ್‌ಯುವಿ ವಾಹನ ಮಾರುಕಟ್ಟೆಯಲ್ಲಿ ಹೆಚ್ಚಿನ ಪಾಲು ಹೊಂದುವ ಉದ್ದೇಶದಿಂದ ಮಾರುತಿ ಸುಜುಕಿ ಇಂಡಿಯಾ ಕಂಪನಿಯು 'ಗ್ರ್ಯಾಂಡ್ ವಿಟಾರಾ'ವನ್ನು ಸೋಮವಾರ ಬಿಡುಗಡೆ ಮಾಡಿದೆ.

ಈ ವಾಹನದ ಎಕ್ಸ್‌ಷೋರೂಂ (ದೆಹಲಿ) ಬೆಲೆ ₹ 10.45 ಲಕ್ಷದಿಂದ ₹ 19.65 ಲಕ್ಷದವರೆಗೆ ಇದೆ. 1.5 ಲೀಟರ್ ಸಾಮರ್ಥ್ಯದ ಪೆಟ್ರೋಲ್ ಎಂಜಿನ್ ಹೊಂದಿದೆ. ಇದು ಹುಂಡೈ ಕ್ರೆಟಾ, ಕಿಯಾ ಸೆಲ್ಟೋಸ್, ಟಾಟಾ ಹ್ಯಾರಿಯರ್ ಎಸ್‌ಯುವಿಗೆ ಪೈಪೋಟಿ ನೀಡುವ ನಿರೀಕ್ಷೆ ಇದೆ.

'ಗ್ರ್ಯಾಂಡ್ ವಿಟಾರಾ ಬಿಡುಗಡೆಯು ಸುಸ್ಥಿರ ಜಗತ್ತಿನೆಡೆ ಇರಿಸಿರುವ ಒಂದು ಹೆಜ್ಜೆ. ಈ ವಾಹನದ ಆರಂಭಿಕ ಬೆಲೆಯನ್ನು ನಾವು ₹ 10.45 ಲಕ್ಷ ಇರಿಸಿದ್ದೇವೆ' ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಹಿಸಾಷಿ ಟಕೆಯುಚಿ ಹೇಳಿದ್ದಾರೆ. ಗ್ರ್ಯಾಂಡ್ ವಿಟಾರಾ ವಾಹನ ಬಯಸಿ 57 ಸಾವಿರಕ್ಕೂ ಹೆಚ್ಚು ಬುಕಿಂಗ್ ಬಂದಿವೆ.

ಈ ವಾಹನವನ್ನು ಮಾರುತಿ ಸುಜುಕಿ ಕಂಪನಿಯು ತನ್ನ ನೆಕ್ಸಾ ಡೀಲರ್‌ಶಿಪ್ ಮೂಲಕ ಮಾರಾಟ ಮಾಡಲಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,327
ಇಂದಿನ ಅಂತ್ಯ	17,016
▼	311
ದಿನದ ಕನಿಷ್ಠ	16,978

ವಿನಿಮಯ ದರ

$ ಡಾಲರ್	81.67
£ ಪೌಂಡ್	87.84
€ ಯುರೊ	79
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹442

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1640)
ಸೋಯಾ (ರಿಫೈನ್ಡ್)	₹1140 (1152)
ಸೂರ್ಯಕಾಂತಿ (ರಿಫೈನ್ಡ್)	₹1310 (1330)
ಪಾಮೋಲಿನ್	₹872 (907)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹145.50
ಆರ್‌ಎಸ್‌ಎಸ್-5	₹135.50
ಗುಡ್ ಲಾಟ್	₹131.50

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1000-1400
ಮಧ್ಯಮ	₹600-1000
ಸಣ್ಣ	₹200-600

ಟಾಟಾದಿಂದ ಹೊಸ ಪಿಕಪ್

• ಆದಿತ್ಯ ಕೆ.ಎ.

ಹೈದರಾಬಾದ್: ಟಾಟಾ ಮೋಟರ್ಸ್ ಕಂಪನಿಯು ಹೊಸ ಮಾದರಿಯ ಪಿಕಪ್ ವಾಹನಗಳನ್ನು ಸೋಮವಾರ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಇಲ್ಲಿನ ಜಿ.ಎಂ.ಆರ್. ಅರೆನಾ ಸೆಂಟರ್‌ನಲ್ಲಿ ನಡೆದ ಸಮಾರಂಭದಲ್ಲಿ ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ಗಿರೀಶ್ ವಾಘ್ ಅವರು, ಟಾಟಾ ಯೋಧ 2.0, ಇಂಟ್ರಾ ವಿ50 ಹಾಗೂ ಇಂಟ್ರಾ ವಿ20 (ಸಿಎನ್‌ಜಿ ಮತ್ತು ಪೆಟ್ರೋಲ್) ವಾಹನಗಳನ್ನು ಮಾರುಕಟ್ಟೆಗೆ ಪರಿಚಯಿಸಿದರು.

'ಪಿಕಪ್‌ನಲ್ಲಿ ಕೃಷಿ ಉತ್ಪನ್ನಗಳನ್ನು ರೈತರು ಹಾಗೂ ಮಾರಾಟಗಾರರು ಸುರಕ್ಷಿತವಾಗಿ ಮಾರುಕಟ್ಟೆಗೆ ಒಯ್ಯಬಹುದು. ಚಾಲಕರ ಸುರಕ್ಷತೆಗೆ ಆದ್ಯತೆ ನೀಡಲಾಗಿದೆ. ವಾಹನಗಳು ಆಧುನಿಕ ಸೌಲಭ್ಯವನ್ನು ಒಳಗೊಂಡಿವೆ' ಎಂದು ವಾಘ್ ಮಾಹಿತಿ ನೀಡಿದರು.

'ಬಿಡುಗಡೆಗೆ ಮುನ್ನವೇ ಒಂದು ಸಾವಿರ ವಾಹನಗಳ ಬುಕಿಂಗ್ ಸ್ವೀಕರಿಸಲಾಗಿತ್ತು. ಸೋಮವಾರ ದೇಶದ 200 ಸ್ಥಳಗಳಲ್ಲಿ ವಾಹನಗಳನ್ನು ಗ್ರಾಹಕರಿಗೆ ಹಸ್ತಾಂತರಿಸಲಾಗಿದೆ. ಟಾಟಾ ಯೋಧ ವಾಹನಕ್ಕೆ ₹ 10.74 ಲಕ್ಷ ಹಾಗೂ ಇಂಟ್ರಾ ವಿ-50ಗೆ ₹ 8.67 ಲಕ್ಷ ಬೆಲೆ ನಿಗದಿಪಡಿಸಲಾಗಿದೆ' ಎಂದು ಅವರು ವಿವರಿಸಿದರು.

'ವಿದ್ಯುತ್ ಚಾಲಿತ ವಾಹನಗಳನ್ನು ತಯಾರಿಸಲು ಗಮನ ಹರಿಸಲಾಗುತ್ತಿದೆ. ಈ ವಾಹನಗಳಿಗೆ ಬ್ಯಾಟರಿಗಳನ್ನು ಆಮದು ಮಾಡಿಕೊಳ್ಳಬೇಕಿದ್ದು, ಮೇ ಅಂತ್ಯಕ್ಕೆ ಹೊಸ ಮಾದರಿಯ ಇ.ವಿ. ಬಿಡುಗಡೆ ಮಾಡುತ್ತೇವೆ' ಎಂದು ಹೇಳಿದರು.

'ಯೋಧ 2.0ದಲ್ಲಿ ಎರಡು ಟನ್‌ವರೆಗೆ ಸರಕು ಸಾಗಿಸಲು ಸಾಧ್ಯವಿದೆ. ಇದು 2.2 ಲೀಟರ್ ಸಾಮರ್ಥ್ಯದ ಡೀಸೆಲ್ ಎಂಜಿನ್ ಹೊಂದಿದ್ದು, ಕ್ಯಾಬಿನ್‌ನಲ್ಲಿ ಹವಾನಿಯಂತ್ರಣ ವ್ಯವಸ್ಥೆಯಿದೆ. ಗ್ರಾಮೀಣ ಹಾಗೂ ದುರ್ಗಮ ಪ್ರದೇಶಗಳ ರಸ್ತೆಯಲ್ಲೂ ಸರಕು ಸಾಗಣೆಯ ಸಾಮರ್ಥ್ಯ ಹೊಂದಿದೆ. ಇಂಟ್ರಾದಲ್ಲಿ ಒಂದೂವರೆ ಟನ್ ಸರಕು ಸಾಗಣೆ ಸಾಧ್ಯ. ಸಿಎನ್‌ಜಿ ವಾಹನದಲ್ಲಿ ಸೋರಿಕೆ ಅಲರ್ಟ್ ಸೌಲಭ್ಯ ನೀಡಲಾಗಿದೆ. ಕ್ಯಾಬಿನ್‌ನಲ್ಲಿ ಹವಾನಿಯಂತ್ರಭ ವ್ಯವಸ್ಥೆಯಿದೆ' ಎಂದರು.

(ಕಂಪನಿಯ ಆಹ್ವಾನದ ಮೇರೆಗೆ ವರದಿಗಾರ ಹೈದರಾಬಾದ್‌ಗೆ ಭೇಟಿ ನೀಡಿದ್ದರು)

ತನಿಷ್ಕ್‌ನಿಂದ ಅಲೇಖ್ಯಾ ಸಂಗ್ರಹ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಾಟಾ ಸಮೂಹದ ಆಭರಣ ರಿಟೇಲ್ ಬ್ರ್ಯಾಂಡ್ 'ತನಿಷ್ಕ್', 'ಅಲೇಖ್ಯಾ' ಹೆಸರಿನ ಆಭರಣಗಳ ಸಂಗ್ರಹವನ್ನು ಅನಾವರಣ ಮಾಡಿದೆ.

ಈ ಸಂಗ್ರಹವು ಗಮನ ಸೆಳೆಯುವ ಮಿನಿಯೇಚರ್ ಮತ್ತು ಪಿಚ್ವಾಯಿ ವರ್ಣಚಿತ್ರಗಳಿಂದ ಸ್ಫೂರ್ತಿ ಪಡೆದ ಅತ್ಯಂತ ಪ್ರಾಚೀನ ಹಾಗೂ ಶ್ರೀಮಂತವಾದ ಭಾರತೀಯ ಕಲಾ ಪ್ರಕಾರಗಳ ಸೌಂದರ್ಯವನ್ನು ನೆನಪಿಸುತ್ತದೆ ಎಂದು ಪ್ರಕಟಣೆ ಹೇಳಿದೆ.

ಅಲೇಖ್ಯಾ ಸಂಗ್ರಹವು ಸಂಕೀರ್ಣ ಕರಕುಶಲತೆ ಮತ್ತು ಎದ್ದುಕಾಣುವ ವರ್ಣಗಳನ್ನು ಒಳಗೊಂಡಿದ್ದು, ವಿಶಿಷ್ಟವಾಗಿದೆ. ಇದು ಆಧುನಿಕ ಸಂವೇದನೆಗಳೊಂದಿಗೆ ಪರಂಪರೆ ಮತ್ತು ಸಾಂಪ್ರದಾಯಿಕ ವಿನ್ಯಾಸಗಳ ಸುಲಲಿತ ಮಿಶ್ರಣ ಎಂದು ಕೂಡ ಪ್ರಕಟಣೆಯು ತಿಳಿಸಿದೆ.

ಹಬ್ಬದ ಸಂಗ್ರಹ ಬಿಡುಗಡೆಯ ಕುರಿತು ಮಾತನಾಡಿರುವ ಟೈಟನ್ ಕಂಪನಿಯ ವಿನ್ಯಾಸ ವಿಭಾಗದ ಮುಖ್ಯಸ್ಥ ಅಭಿಷೇಕ್ ರಸ್ತೋಗಿ 'ನಮ್ಮ ಗ್ರಾಹಕರಿಗೆ ಪರಿಪೂರ್ಣವಾಗಿ ವಿನ್ಯಾಸಗೊಳಿಸಿದ ಉತ್ಪನ್ನಗಳನ್ನು ನೀಡಲು ನಮ್ಮ ಪ್ರಯತ್ನ ಇದು. ಹೊಸ ಸಂಗ್ರಹವು ಅದ್ಭುತವಾದ ನೆಕ್‌ವೇರ್, ಕಿವಿಯೋಲೆಗಳು ಮತ್ತು ಕರಕುಶಲ ಆಭರಣದ ತುಣುಕುಗಳನ್ನು ಹೊಂದಿದೆ' ಎಂದು ಹೇಳಿದ್ದಾರೆ.

ಅಲೇಖ್ಯಾ ಸಂಗ್ರಹದ ಉತ್ಪನ್ನಗಳ ಬೆಲೆಯು ₹ 70,000ದಿಂದ ಪ್ರಾರಂಭವಾಗುತ್ತದೆ. ಹೆಚ್ಚಿನ ಮಾಹಿತಿಗೆ www.Tanishq.co.in ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

ಐಫೋನ್ 14 ತಯಾರಿಕೆ ಭಾರತದಲ್ಲಿ

ನವದೆಹಲಿ (ರಾಯಿಟರ್ಸ್): ಈಚೆಗೆ ಬಿಡುಗಡೆ ಮಾಡಿರುವ 'ಐಫೋನ್ 14' ಭಾರತದಲ್ಲಿ ತಯಾರಾಗಲಿದೆ ಎಂದು ಆ್ಯಪಲ್ ಕಂಪನಿಯು ಸೋಮವಾರ ತಿಳಿಸಿದೆ. ಕಂಪನಿಯು ತನ್ನ ಕೆಲವು ಉತ್ಪನ್ನಗಳ ತಯಾರಿಕೆಯನ್ನು ಚೀನಾದಿಂದ ಬೇರೆಡೆಗೆ ಸ್ಥಳಾಂತರಿಸುತ್ತಿದೆ.

ಐಫೋನ್ 14 ಸುರಕ್ಷತೆಗೆ ಹೆಚ್ಚಿನ ಗಮನ ನೀಡಿದೆ. ಈ ವರ್ಷದ ಕೊನೆಯ ವೇಳೆಗೆ ಆ್ಯಪಲ್ ಕಂಪನಿಯು ಐಫೋನ್ 14 ಉತ್ಪಾದನೆಯ ಶೇಕಡ 5ರಷ್ಟನ್ನು ಭಾರತಕ್ಕೆ ಸ್ಥಳಾಂತರಿಸುವ ಸಾಧ್ಯತೆ ಇದೆ ಎಂದು ಜೆ.ಪಿ. ಮಾರ್ಗನ್ ಅಂದಾಜಿಸಿದೆ.

2025ರ ಸುಮಾರಿಗೆ ಆ್ಯಪಲ್ ಕಂಪನಿಯು ಪ್ರತಿ ನಾಲ್ಕು ಐಫೋನ್‌ಗಳಲ್ಲಿ ಒಂದನ್ನು ಭಾರತದಲ್ಲಿಯೇ ತಯಾರಿಸಬಹುದು ಎಂದು ಜೆ.ಪಿ. ಮಾರ್ಗನ್ ಅಂದಾಜು ಮಾಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-47500
ಹಳತು	46000-56000
ಚಿತ್ರದುರ್ಗ	
ಅಪಿ	48619-49059
ಬೆಟ್ಟೆ	38129-38599
ಕೆಂಪುಗೋಟು	29609-30010
ರಾಶಿ	48139-48569
ಕುಮಟ	
ಚಿಪ್ಪು	29089-33089
ಕೋಕ	19509-32229
ಫ್ಯಾಕ್ಟರಿ	11089-21299
ಹೊಸಚಾಲಿ	38509-42699
ಹಳೆಚಾಲಿ	45599-46299
ಪುತ್ತೂರು	
ಕೋಕ	11000-26000
ಹೊಸತು	34500-47500
ಸಾಗರ	
ಬಿಳಿಗೋಟು	26111-34299
ಚಾಲಿ	32210-40119
ಕೋಕ	18510-34949
ಕೆಂಪುಗೋಟು	24899-39299
ರಾಶಿ	40899-50269
ಸಿಪ್ಪೆಗೋಟು	10290-22503
ಶಿವಮೊಗ್ಗ	
ಬೆಟ್ಟೆ	50220-54010
ಗೊರಬಲು	16850-37519
ರಾಶಿ	46899-50821
ಸರಕು	58100-79896
ಸಿದ್ದಾಪುರ	
ಬಿಳಿಗೋಟು	27889-35099
ಚಾಲಿ	38109-41599
ಕೋಕ	27009-33911
ಕೆಂಪುಗೋಟು	33009-35889
ರಾಶಿ	47209-50399
ತಟ್ಟಿಬೆಟ್ಟೆ	39889-47899
ಶಿರಸಿ	
ಬೆಟ್ಟೆ	39869-47669
ಬಿಳಿಗೋಟು	24699-38199
ಚಾಲಿ	38899-43561
ಕೆಂಪುಗೋಟು	31799-36109
ರಾಶಿ	46699-50399
ಯಲ್ಲಾಪುರ	
ಬಿಳಿಗೋಟು	26151-36310
ಚಾಲಿ	37369-42499
ಕೋಕ	21015-30899
ಕೆಂಪುಗೋಟು	28899-36733
ರಾಶಿ	48799-54299
ತಟ್ಟಿಬೆಟ್ಟೆ	37369-47819

ಮೂಡಿಗೆರೆ ಕಾಫಿ (50 ಕೆ.ಜಿಗೆ)

	ಮುದ್ರಮನೆ
ಎಪಿ	16000
ಎಸಿ	9100
ಆರ್‌ಪಿ	9800
ಆರ್‌ಸಿ	4800

ಮುಂಬೈ ಧಾರಣೆ

ಶೇಂಗಾ

26–9–2022

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	10250-10300
ದಪ್ಪ ಗುಜರಾತ್(ಹೊಸ)	10850-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1650)
ಒಂದು ವಾರದ ಡೆಲಿವರಿ	1625 (1645)
ಸೋಯಾ ಕಚ್ಚಾ	1080 (1110)
ಪಾಮ್ ವಾರದ ಡೆಲಿವರಿ	870 (905)
ಸೂರ್ಯಕಾಂತಿ ಎಣ್ಣೆ ಕಚ್ಚಾ	1220 (1250)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
49,350 (49,300)
ಬೆಳ್ಳಿ ಕೆ.ಜಿ 55,400 (55,500)

ಆವರಣದಲ್ಲಿ ಶನಿವಾರದ ಧಾರಣೆ

ಬಡ್ಡಿದರ ಹೆಚ್ಚಳ • ತೀವ್ರವಾಗುತ್ತಿರುವ ಆರ್ಥಿಕ ಹಿಂಜರಿತದ ಭೀತಿ

4ನೇ ದಿನವೂ ಕುಸಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಜಾಗತಿಕ ಆರ್ಥಿಕ ಹಿಂಜರಿತದ ಭೀತಿ ಮತ್ತು ಅಮೆರಿಕದಲ್ಲಿ ಬಡ್ಡಿ ದರ ಏರಿಕೆಯ ಕಾರಣಗಳಿಂದಾಗಿ ಜಾಗತಿಕ ಮಾರುಕಟ್ಟೆಗಳ ವಹಿವಾಟು ಇಳಿಕೆ ಕಂಡಿತು. ಇದರಿಂದಾಗಿ ಭಾರತದ ಷೇರುಪೇಟೆಗಳಲ್ಲಿಯೂ ಸೋಮವಾರ ನಕಾರಾತ್ಮಕ ವಹಿವಾಟು ನಡೆಯಿತು.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಕುಸಿದಿರುವುದು ಹಾಗೂ ವಿದೇಶಿ ಬಂಡವಾಳ ಹೊರಹರಿವು ಕೂಡ ಹೂಡಿಕೆ ಮೇಲೆ ಪರಿಣಾಮ ಬೀರಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 954 ಅಂಶ ಇಳಿಕೆ ಕಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 311 ಅಂಶ ಇಳಿಕೆ ಕಂಡಿತು.

'ಜಾಗತಿಕ ಮಟ್ಟದಲ್ಲಿ ನಡೆದ ಇಳಿಮುಖ ವಹಿವಾಟು ಮತ್ತು ರೂಪಾಯಿ ಕುಸಿತದಿಂದಾಗಿ ಸತತ ನಾಲ್ಕನೇ ದಿನವೂ ನಿಫ್ಟಿ ಇಳಿಕೆ ಕಂಡಿತು' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ರಿಟೇಲ್ ವಿಭಾಗದ ಮುಖ್ಯಸ್ಥ ದೀಪಕ್ ಜಸನಿ ಹೇಳಿದ್ದಾರೆ.

ಅಮೆರಿಕದ ಫೆಡರಲ್ ರಿಸರ್ವ್ ಹಣಕಾಸು ನೀತಿಯನ್ನು ಇನ್ನಷ್ಟು ಬಿಗಿಗೊಳಿಸುತ್ತಿದೆ. ಇದರಿಂದಾಗಿ ಡಾಲರ್ ಮೌಲ್ಯ ಏರಿಕೆ ಕಾಣುತ್ತಿದೆ. ಇದರ ಜೊತೆಗೆ ಮಂದಗತಿಯ ಆರ್ಥಿಕ ಬೆಳವಣಿಗೆಯು ಹೂಡಿಕೆದಾರರನ್ನು ಎಚ್ಚರಿಕೆಯಿಂದ ವಹಿವಾಟು ನಡೆಸುವಂತೆ ಮಾಡಿದೆ. ಇದು, ಜಾಗತಿಕ ಮಾರುಕಟ್ಟೆಗಳಲ್ಲಿ ಏರಿಳಿತಕ್ಕೆ ಕಾರಣವಾಗಿದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ತಿಳಿಸಿದ್ದಾರೆ.

ಏಷ್ಯಾದಲ್ಲಿ, ಸೋಲ್, ಟೋಕಿಯೊ, ಶಾಂಘೈ ಮತ್ತು ಹಾಂಗ್‌ಕಾಂಗ್ ಷೇರುಪೇಟೆಗಳು ಹೆಚ್ಚಿನ ಇಳಿಕೆ ಕಂಡವು. ಯುರೋಪ್ ಮಾರುಕಟ್ಟೆಗಳಲ್ಲಿ ಸಹ ವಹಿವಾಟು ಇಳಿಮುಖವಾಗಿತ್ತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ0.75ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 85.50 ಡಾಲರ್‌ನಂತೆ ಮಾರಾಟವಾಯಿತು.

₹ 13.30 ಲಕ್ಷ ಕೋಟಿ ನಷ್ಟ: ನಾಲ್ಕು ದಿನಗಳಲ್ಲಿ ಹೂಡಿಕೆದಾರರ ಸಂಪತ್ತು ₹ 13.30 ಲಕ್ಷ ಕೋಟಿಯಷ್ಟು ಕರಗಿದೆ. ಇದರಿಂದಾಗಿ ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯವು ಸೋಮವಾರದ ವಹಿವಾಟಿನ ಅಂತ್ಯಕ್ಕೆ ₹ 270.11 ಲಕ್ಷ ಕೋಟಿಗೆ ಇಳಿಕೆ ಕಂಡಿದೆ.



ರೂಪಾಯಿ ದಾಖಲೆ ಕುಸಿತ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಸೋಮವಾರ 58 ಪೈಸೆ ಇಳಿಕೆ ಕಂಡು ಒಂದು ಡಾಲರ್‌ಗೆ ₹ 81.67 ಡಾಲರ್‌ಗೆ ತಲುಪಿತು. ಸಾರ್ವಕಾಲಿಕ ಕನಿಷ್ಠ ಮಟ್ಟ ಇದಾಗಿದೆ.

ಡಾಲರ್ ಮೌಲ್ಯ ವೃದ್ಧಿ ಮತ್ತು ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಒತ್ತಡದಿಂದ ರೂಪಾಯಿ ಮೌಲ್ಯ ಇಳಿಕೆ ಕಂಡಿತು. ನಾಲ್ಕು ದಿನಗಳ ವಹಿವಾಟು ಅವಧಿಯಲ್ಲಿ ಡಾಲರ್ ಎದುರು ರೂಪಾಯಿ 193 ಪೈಸೆಯಷ್ಟು ಇಳಿಕೆ ಕಂಡಿದೆ.

ಕುಂಠಿತಗೊಳ್ಳಲಿದೆ ಜಾಗತಿಕ ಆರ್ಥಿಕ ಬೆಳವಣಿಗೆ: ಒಇಸಿಡಿ

ಪ್ಯಾರಿಸ್ (ಎಎಫ್‌ಪಿ): ರಷ್ಯಾ–ಉಕ್ರೇನ್ ಯುದ್ಧದ ಪರಿಣಾಮವಾಗಿ ವಿಶ್ವದ ಆರ್ಥಿಕ ವ್ಯವಸ್ಥೆಯು ಈ ಮೊದಲು ಅಂದಾಜಿಸಿದ್ದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ತೊಂದರೆಗೆ ಒಳಗಾಗಲಿದೆ ಎಂದು ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಘಟನೆ (ಒಇಸಿಡಿ) ಹೇಳಿದೆ.

'ಯುದ್ಧಕ್ಕೆ ತೆರುತ್ತಿರುವ ಬೆಲೆ' ಹೆಸರಿನ ವರದಿಯನ್ನು ಬಿಡುಗಡೆ ಮಾಡಿರುವ ಸಂಘಟನೆಯು, 'ಕೋವಿಡ್ ಸಾಂಕ್ರಾಮಿಕವು ಜಾಗತಿಕ ಅರ್ಥ ವ್ಯವಸ್ಥೆಯ ಮೇಲೆ ಈಗಲೂ ಪರಿಣಾಮ ಉಂಟುಮಾಡುತ್ತಿದೆ. ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರ ಹೆಚ್ಚಿಸುತ್ತಿರುವುದು ಕೂಡ ಬೆಳವಣಿಗೆ ಮೇಲೆ

ಪರಿಣಾಮ ಉಂಟುಮಾಡಿದೆ' ಎಂದು ಹೇಳಿದೆ.

ಜಗತ್ತಿನ ಆರ್ಥಿಕ ಬೆಳವಣಿಗೆಯು ಈ ವರ್ಷದ ಎರಡನೆಯ ತ್ರೈಮಾಸಿಕದಲ್ಲಿ ಕುಂಠಿತವಾಗಿದೆ. ಬೇರೆ ಬೇರೆ ದೇಶಗಳಿಂದ ಸಿಗುತ್ತಿರುವ ಅಂಕಿ–ಅಂಶಗಳು, ಬೆಳವಣಿಗೆಯು ಬಹುಕಾಲದವರೆಗೆ ಕಡಿಮೆ ಪ್ರಮಾಣದಲ್ಲಿರುತ್ತದೆ ಎಂಬುದನ್ನು ಸೂಚಿಸುತ್ತಿವೆ ಎಂದು ಸಂಘಟನೆ ಹೇಳಿದೆ.

ಗುಂಪು ಕರೆ ಸೌಲಭ್ಯ: ಪರೀಕ್ಷೆ ಆರಂಭಿಸಿದ ವಾಟ್ಸ್‌ಆ್ಯಪ್

ನವದೆಹಲಿ (ಪಿಟಿಐ): ಒಂದೇ ಬಾರಿಗೆ ಒಟ್ಟು 32 ಜನರಿಗೆ ವಿಡಿಯೊ ಕರೆ ಮಾಡುವ ಸೌಲಭ್ಯದ ಪರೀಕ್ಷಾರ್ಥ ಬಳಕೆಯನ್ನು ವಾಟ್ಸ್‌ಆ್ಯಪ್ ಕಂಪನಿ ಆರಂಭಿಸಿದೆ.

ಅಲ್ಲದೆ, ವಿಡಿಯೊ ಅಥವಾ ಧ್ವನಿ ಕರೆಯನ್ನು ಸೇರಿಕೊಳ್ಳಲು ಅವಕಾಶ ಕಲ್ಪಿಸುವ ಕೊಂಡಿಯನ್ನು (ಲಿಂಕ್) ವಾಟ್ಸ್‌ಆ್ಯಪ್ ಇನ್ನು ಮುಂದೆ ನೀಡಲಿದೆ ಎಂದು ಮೆಟಾ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಮಾರ್ಕ್ ಝುಕರ್‌ಬರ್ಗ್ ಹೇಳಿದ್ದಾರೆ.

'ಧ್ವನಿ ಹಾಗೂ ವಿಡಿಯೊ ಕರೆ ಲಿಂಕ್ ಸೌಲಭ್ಯವು ಈ ವಾರದಿಂದ ಸಿಗಲಿದೆ. ಆಗ ನೀವು ಲಿಂಕ್‌ಅನ್ನು ಇತರರ ಜೊತೆ ಹಂಚಿಕೊಂಡಾಗ, ಅವರು ಆ ಲಿಂಕ್ ಬಳಸಿ ಕರೆ ಮಾಡಬಹುದು. ಇನ್ನೂ ಹೆಚ್ಚಿನ ಸೌಲಭ್ಯಗಳು ಶೀಘ್ರದಲ್ಲಿಯೇ ಬರಲಿವೆ' ಎಂದು ಝುಕರ್‌ಬರ್ಗ್ ತಿಳಿಸಿದ್ದಾರೆ.

ವಾಟ್ಸ್‌ಆ್ಯಪ್‌ಗೆ ಭಾರತ ಅತಿದೊಡ್ಡ ಮಾರುಕಟ್ಟೆ. ಜೂನ್‌ವರೆಗಿನ ಮಾಹಿತಿ ಪ್ರಕಾರ ದೇಶದಲ್ಲಿ ಸರಿಸುಮಾರು 48.75 ಕೋಟಿ ಜನ ವಾಟ್ಸ್‌ಆ್ಯಪ್ ಬಳಸುತ್ತಾರೆ.

ವಾಟ್ಸ್‌ಆ್ಯಪ್ ಬಳಕೆದಾರರು ಹೊಸ ಸೌಲಭ್ಯವನ್ನು ಬಳಸಲು ತಮ್ಮ ಆ್ಯಪ್ ಅಪ್‌ಡೇಟ್ ಮಾಡಿಕೊಳ್ಳಬೇಕು. ವಾಟ್ಸ್‌ಆ್ಯಪ್ ಹೊಸ ಸೌಲಭ್ಯವನ್ನು ಬಳಕೆದಾರರಿಗೆ ಮುಕ್ತವಾಗಿಸಿದ ನಂತರದಲ್ಲಿ, ಗುಂಪು ಕರೆ ಹಾಗೂ ವಿಡಿಯೊ ಕಾನ್ಫರೆನ್ಸಿಂಗ್ ಆ್ಯಪ್‌ಗಳ ನಡುವೆ ಸ್ಪರ್ಧೆ ಹೆಚ್ಚುವ ಸಾಧ್ಯತೆ ಇದೆ.

ಚಾಟಿ ಬೀಸಿದ ಸುಪ್ರೀಂ ಕೋರ್ಟ್ • ಬಾಂಬೆ ಹೈಕೋರ್ಟ್ ಆದೇಶಕ್ಕೆ ತಡೆ ನೀಡಲು ನಿರಾಕರಣೆ

ದೇಗುಲದ ಟ್ರಸ್ಟ್‌ಗಳಲ್ಲಿ ರಾಜಕಾರಣಿಗಳಿಗೇನು ಕೆಲಸ?

ಪ್ರಜಾವಾಣಿ ವಾರ್ತೆ

ನವದೆಹಲಿ: ದೇವಾಲಯ ಟ್ರಸ್ಟ್‌ಗಳ ನಿರ್ವಹಣಾ ಸಮಿತಿಗೆ ರಾಜಕಾರಣಿಗಳ ನೇಮಕ ಮಾಡುವುದಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಆರೋಪಗಳನ್ನು ಎದುರಿಸುತ್ತಿರುವವರು, ಏಕತೆ ಮತ್ತು ನಂಬಿಕೆಯ ಕೊರತೆ ಇರುವವರು ಹೇಗೆ ಇಂತಹ ಸಮಿತಿಗಳಿಗೆ ನೇಮಕವಾಗುತ್ತಾರೆ ಎಂದು ಉನ್ನತ ನ್ಯಾಯಾಲಯ ಆಶ್ಚರ್ಯಪಟ್ಟಿದೆ.

ಶ್ರೀ ಸಾಯಿಬಾಬಾ ಸಂಸ್ಥಾನ ಆಡಳಿತ ಮಂಡಳಿಗೆ ಧರ್ಮದರ್ಶಿಗಳ ನೇಮಕಕ್ಕೆ ಸಂಬಂಧಿಸಿದ ಅರ್ಜಿ ವಿಚಾರಣೆಗೆ ಕೈಗೆತ್ತಿಕೊಂಡ ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಮತ್ತು ಸಿ.ಟಿ. ರವಿಕುಮಾರ್ ಅವರಿದ್ದ ಪೀಠವು, ಕೆಲವು ದೇವಸ್ಥಾನಗಳ ಆಡಳಿತ ನಿರ್ವಹಣೆಯನ್ನು ತಮ್ಮ ಸುಪರ್ದಿಗೆ ಪಡೆಯಲು ರಾಜಕಾರಣಿಗಳು ಯಾಕಿಷ್ಟು ಸಕ್ರಿಯರಾಗಿದ್ದಾರೆ ಎಂದು ಪ್ರಶ್ನಿಸಿತು.

ಸೆಪ್ಟೆಂಬರ್ 13ರಂದು ಬಾಂಬೆ ಹೈಕೋರ್ಟ್ ರದ್ದುಪಡಿಸಿದ ಟ್ರಸ್ಟ್‌ನ ವ್ಯವಸ್ಥಾಪಕ ಸಮಿತಿಯು ಎನ್‌ಸಿಪಿ, ಕಾಂಗ್ರೆಸ್ ಮತ್ತು ಶಿವಸೇನಾದ ಸದಸ್ಯರನ್ನು ಒಳಗೊಂಡಿತ್ತು ಎನ್ನುವುದನ್ನು ಪೀಠವು ಗಮನಿಸಿತು. 'ಪಕ್ಷವನ್ನು ಮೀರುವ ಸಮಯ ಬಂದಿದೆ. ಪಕ್ಷದ ಹೆಸರಿನಲ್ಲಿ ಇದೆಲ್ಲ ಇನ್ನು ಮುಂದೆ ನಡೆಯುವುದಿಲ್ಲ' ಎಂದು ಪೀಠ ಚಾಟಿ ಬೀಸಿದೆ.

'ಜನರು ಧರ್ಮ, ವರ್ಗ, ಪಂಥ, ಜಾತಿ ಮೀರಿ ದೇವಾಲಯಗಳ ಮೇಲೆ ನಂಬಿಕೆ ಇರಿಸಿಕೊಂಡಿದ್ದಾರೆ. ಭಕ್ತಿಯಿಂದ ಪೂಜಿಸುತ್ತಾರೆ. ಅಂತಹ ದೇವಾಲಯಗಳ ಆಡಳಿತ ಸುಧಾರಿಸಲು ವಿವಿಧ ಕ್ಷೇತ್ರಗಳ ಪರಿಣತರನ್ನು, ಉತ್ತಮ ನಡತೆಯುಳ್ಳವರನ್ನು ನೇಮಿಸುವ ಅಗತ್ಯವಿದೆ. ಆಗ ದೇಗುಲಗಳಲ್ಲಿ ಶೋಷಣೆ ಇರುವುದಿಲ್ಲ. ಭಕ್ತಾದಿಗಳಿಗೂ ಉತ್ತಮ ಸೌಕರ್ಯಗಳು ಲಭಿಸುತ್ತವೆ' ಎಂದು ಪೀಠ ಹೇಳಿದೆ.

ಮಹಾರಾಷ್ಟ್ರ ಸರ್ಕಾರದ ಪರ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ಪೀಠದ ಅಭಿಪ್ರಾಯವನ್ನು ಒಪ್ಪಿಕೊಂಡು, 'ಧಾರ್ಮಿಕ ಸ್ಥಳಗಳ ಸಮಿತಿಗಳು ರಾಜಕೀಯ ಪಕ್ಷಗಳ ಉಂಬಳಿಗಳಾಗಬಾರದು' ಎಂದರು.

ಸಾರ್ವಜನಿಕ ಹಿತಾಸಕ್ತಿ ಅರ್ಜಿ ಪರ ವಾದಿಸಿದ ಹಿರಿಯ ವಕೀಲ ಶೇಖರ್ ನಾಫಾಡೆ ಅವರು, ಸಿದ್ಧಿವಿನಾಯಕ ದೇವಾಲಯ ಸೇರಿ ಮಹಾರಾಷ್ಟ್ರದ ಇತರ ಎಲ್ಲ ದೇವಾಲಯಗಳಲ್ಲಿ ಇಂತಹ ನೇಮಕಾತಿಗೆ ಯಾವುದೇ ಮಾನದಂಡಗಳನ್ನು ಸರ್ಕಾರ ರೂಪಿಸಿಲ್ಲವೆಂದು ಪೀಠದ ಗಮನಕ್ಕೆ ತಂದರು.

ಪೀಠವು ಹೈಕೋರ್ಟ್ ಆದೇಶಕ್ಕೆ ತಡೆ ನೀಡದೆ, ಸಂಬಂಧಿಸಿದವರಿಗೆ ನೋಟಿಸ್ ನೀಡಿ, ನವೆಂಬರ್‌ನಲ್ಲಿ ಅರ್ಜಿ ವಿಚಾರಣೆಯನ್ನು ಪರಿಗಣಿಸುವುದಾಗಿ ಹೇಳಿತು. ಹೊಸ ಸಮಿತಿ ರಚನೆ ಆಗುವವರೆಗೆ ಅಹಮದ್ ನಗರದ ಪ್ರಧಾನ ಜಿಲ್ಲಾ ನ್ಯಾಯಾಧೀಶರು ಶಿರಡಿ ಟ್ರಸ್ಟ್‌ನ ತಾತ್ಕಾಲಿಕ ಸಮಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿರಲಿದ್ದಾರೆ ಎಂದು ಬಾಂಬೆ ಹೈಕೋರ್ಟ್ ಆದೇಶ ನೀಡಿತ್ತು.

ಬಂಧಿತ ಸಚಿವರ ವಜಾ: ಅರ್ಜಿ ತಿರಸ್ಕರಿಸಿದ 'ಸುಪ್ರೀಂ'

ನವದೆಹಲಿ: 48 ಗಂಟೆಗಳ ಕಾಲ ಸೆರೆವಾಸ ಅನುಭವಿಸಿದ ಸಚಿವರನ್ನು ಸಂಪುಟದಿಂದ ವಜಾಗೊಳಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಯೊಂದನ್ನು ಸುಪ್ರೀಂ ಕೋರ್ಟ್ ಸೋಮವಾರ ತಿರಸ್ಕರಿಸಿದೆ.

ಮುಖ್ಯ ನ್ಯಾಯಮೂರ್ತಿ ಯು.ಯು.ಲಲಿತ್, ನ್ಯಾಯಮೂರ್ತಿಗಳಾದ ಎಸ್.ರವೀಂದ್ರ ಭಟ್ ಹಾಗೂ ಜೆ.ಬಿ.ಪಾರ್ದಿವಾಲಾ ಅವರನ್ನೊಳಗೊಂಡ ತ್ರಿಸದಸ್ಯ ನ್ಯಾಯಪೀಠವು, 'ಅಧಿಕಾರ ವಿಭಜನೆ ತತ್ವದ ದೃಷ್ಟಿಯಿಂದ ಈ ವಿಚಾರದಲ್ಲಿ ನ್ಯಾಯಾಲಯವು ಯಾವುದೇ ಬಗೆಯ ನಿರ್ದೇಶನ ನೀಡಲು ಸಾಧ್ಯವಿಲ್ಲ' ಎಂದು ತಿಳಿಸಿತು.

'ಸಚಿವರು ಜನಸೇವಕರಷ್ಟೇ ಅಲ್ಲ, ಶಾಸಕರು ಕೂಡ ಆಗಿರುತ್ತಾರೆ. ಅಂತಹವರು ಕನಿಷ್ಠ ಎರಡು ದಿನ ನ್ಯಾಯಾಂಗ ಬಂಧನದಲ್ಲಿದ್ದರೆ ಅವರನ್ನು ತಾತ್ಕಾಲಿಕವಾಗಿ ಸಚಿವ ಸ್ಥಾನದಿಂದ ಉಚ್ಚಾಟಿಸಬೇಕು' ಎಂದು ಬಿಜೆಪಿ ಮುಖಂಡ ಹಾಗೂ ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅರ್ಜಿಯಲ್ಲಿ ತಿಳಿಸಿದ್ದರು.

ಕೇಂದ್ರಕ್ಕೆ 'ಸುಪ್ರೀಂ' ನೋಟಿಸ್

ನವದೆಹಲಿ: ಸರ್ಕಾರದ ಜಾಹೀರಾತುಗಳಿಗೆ ಸಾರ್ವಜನಿಕ ಹಣ ಬಳಕೆ ಸಂಪೂರ್ಣ ಅಸಮರ್ಪಕ, ಸ್ವೇಚ್ಛಾಚಾರ ಮತ್ತು ನಂಬಿಕೆ ದ್ರೋಹ ಎಂದು ಪ್ರತಿಪಾದಿಸಿರುವ ಸರ್ಕಾರೇತರ ಸಂಸ್ಥೆ 'ಕಾಮನ್ ಕಾಸ್' ಸಲ್ಲಿಸಿರುವ ಅರ್ಜಿ ಸಂಬಂಧ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಸೋಮವಾರ ನೋಟಿಸ್ ನೀಡಿದೆ.

ಸರ್ಕಾರದ ಜಾಹೀರಾತುಗಳಲ್ಲಿ ನ್ಯಾಯಾಲಯದ ಮಾರ್ಗಸೂಚಿ ಮತ್ತು ನಿರ್ದೇಶಗಳನ್ನು ಹಾಗೂ ನಾಗರಿಕರ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಲಾಗಿದೆ ಎಂದು ಅರ್ಜಿದಾರರು ಆರೋಪಿಸಿದ್ದು, ಇದಕ್ಕೆ ಪ್ರತಿಕ್ರಿಯೆ ಸಲ್ಲಿಸುವಂತೆ ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಹಿಮಾ ಕೊಹ್ಲಿ ಅವರಿದ್ದ ಪೀಠ ಸೂಚಿಸಿತು.

ವಕೀಲರಾದ ಪ್ರಶಾಂತ್ ಭೂಷಣ್ ಮತ್ತು ಚೆರಿಲ್ ಡಿಸೋಜಾ ನೇತೃತ್ವದಲ್ಲಿ ಅರ್ಜಿದಾರರು ವಾಣಿಜ್ಯ ಶೃಂಗಸಭೆಗಳು, ಸಮಾಲೋಚನೆ ಅಥವಾ ಪ್ರವಾಸೋದ್ಯಮ ಆಕರ್ಷಣೆ ಮತ್ತು ಖಾಸಗಿ ಹೂಡಿಕೆಗಳಿಗಾಗಿ ಪಾಲುದಾರರನ್ನು ಆಹ್ವಾನಿಸಲು ನೀಡುವ ಜಾಹೀರಾತುಗಳನ್ನು ಹೊರತುಪಡಿಸಿ, ರಾಜ್ಯ ಸರ್ಕಾರಗಳು ತಮ್ಮ ವ್ಯಾಪ್ತಿಯ ಹೊರಗೆ ಜಾಹೀರಾತು ಪ್ರಕಟಿಸುವುದನ್ನು ನಿಷೇಧಿಸುವ ಆದೇಶ ಹೊರಡಿಸುವಂತೆ ಕೋರಿದರು.

ಅಡ್ವಟೋರಿಯಲ್ ರೂಪದಲ್ಲಿ ಸರ್ಕಾರಿ ಜಾಹೀರಾತುಗಳನ್ನು ಪ್ರಕಟಿಸುವುದನ್ನು ನಿಷೇಧಿಸಬೇಕು. ಚುನಾವಣೆಗೆ ಮೂರು ತಿಂಗಳ ಮೊದಲು ಸರ್ಕಾರಿ ಜಾಹೀರಾತುಗಳು ಮತ್ತು ಸರ್ಕಾರಿ ಇಲಾಖೆಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಪ್ರಕಟಿಸುವುದನ್ನು ನಿಷೇಧಿಸಬೇಕು ಎಂದು ಪೀಠಕ್ಕೆ ಮನವಿ ಮಾಡಿದ್ದಾರೆ.

ನೇಮಕಾತಿ ಅಕ್ರಮ: ನಿರ್ದೇಶಕರ ಸೆರೆ

ಒಂದನೇ ಪುಟದಿಂದ...

'ಕೋಲಾರ, ವಿಜಯಪುರ, ತುಮಕೂರು ಸೇರಿದಂತೆ ಹಲವು ಜಿಲ್ಲೆಗಳ ವ್ಯಾಪ್ತಿಯಲ್ಲಿ ಸಹ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ನಡೆದಿತ್ತು. ಜಿಲ್ಲಾವಾರು ಹೆಚ್ಚುವರಿ ಆಯ್ಕೆಪಟ್ಟಿ ಸಿದ್ಧಪಡಿಸಲಾಗಿತ್ತು. ಈ ಪಟ್ಟಿಯಲ್ಲಿದ್ದ ಬಹುತೇಕ ಅಭ್ಯರ್ಥಿಗಳನ್ನು ಈಗಾಗಲೇ ಬಂಧಿಸಲಾಗಿದೆ. ಇವರೆಲ್ಲರಿಗೂ ನಿರ್ದೇಶಕರು ಹಾಗೂ ಇತರರು ನೇಮಕಾತಿ ಆದೇಶ ನೀಡಿದ್ದರು. ಅವುಗಳ ಪ್ರತಿಗಳನ್ನೂ ಈಗಾಗಲೇ ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿವೆ.

ಶಿಕ್ಷಣ ಇಲಾಖೆಗೆ ಮಾಹಿತಿ: 'ಅಕ್ರಮದಲ್ಲಿ ಭಾಗಿಯಾದ ಬಗ್ಗೆ ಪುರಾವೆಗಳನ್ನು ಸಂಗ್ರಹಿಸಿ, ನಿರ್ದೇಶಕರಾದ ಮಾದೇಗೌಡ ಹಾಗೂ ಗೀತಾ ಅವರನ್ನು ಬಂಧಿಸಲಾಗಿದೆ. ಈ ಬಗ್ಗೆ ಸಂಬಂಧಪಟ್ಟ ಉನ್ನತ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದ್ದು, ಅಮಾನತು ಬಗ್ಗೆ ಅವರೇ ಕ್ರಮ ಕೈಗೊಳ್ಳಲಿದ್ದಾರೆ' ಎಂದು ಸಿಐಡಿ ಮೂಲಗಳು ಹೇಳಿವೆ.

ನ್ಯಾಯಾಲಯ ಕಲಾಪ ನೇರಪ್ರಸಾರಕ್ಕೆ ಸ್ವಂತ ವೇದಿಕೆ: ಸುಪ್ರೀಂ ಕೋರ್ಟ್

ನವದೆಹಲಿ(ಪಿಟಿಐ): 'ವಿಚಾರಣೆಯ ಕಲಾಪಗಳ ನೇರಪ್ರಸಾರಕ್ಕೆ ಸ್ವಂತ ವೇದಿಕೆಗಳನ್ನು ಹೊಂದಿದ್ದು, ಈಗ ಯೂಟ್ಯೂಬ್‌ನಲ್ಲಿ ಆಗುತ್ತಿರುವ ಕಲಾಪದ ನೇರ ಪ್ರಸಾರ ತಾತ್ಕಾಲಿಕ' ಎಂದು ಸುಪ್ರೀಂಕೋರ್ಟ್ ಮಂಗಳವಾರ ಹೇಳಿದೆ.

ಯೂಟ್ಯೂಬ್‌ನಂತಹ ಖಾಸಗಿ ಸಾಮಾಜಿಕ ಜಾಲತಾಣಗಳಿಗೆ ಉನ್ನತ ನ್ಯಾಯಾಲಯದ ವಿಚಾರಣೆಯ ಹಕ್ಕುಸ್ವಾಮ್ಯ ಒಪ್ಪಿಸಬಾರದು ಎಂದು ಬಿಜೆಪಿ ನಾಯಕ ಕೆ.ಎನ್. ಗೋವಿಂದಾಚಾರ್ಯ ಅವರ ವಕೀಲರು ವಾದಿಸಿದಾಗ, ಮುಖ್ಯನ್ಯಾಯಮೂರ್ತಿ ಯು.ಯು. ಲಲಿತ್, ಎಸ್. ರವಿಂದ್ರ ಭಟ್ ಮತ್ತು ಜೆ.ಬಿ. ಪಾರ್ದೀವಾಲಾ ಅವರಿದ್ದ ಪೀಠವು ಸ್ವಂತ ವಾಹಿನಿ ಹೊಂದಲಿದೆ ಎಂದು ಮಾಹಿತಿ ನೀಡಿತು.

2018ರ ತೀರ್ಪು ಉಲ್ಲೇಖಿಸಿ, ಈ ನ್ಯಾಯಾಲಯದಲ್ಲಿ ದಾಖಲಾದ ಮತ್ತು ಪ್ರಸಾರವಾಗುವ ಎಲ್ಲ ವಿಷಯಗಳ ಮೇಲಿನ ಹಕ್ಕುಸ್ವಾಮ್ಯವು ಈ ನ್ಯಾಯಾಲಯಕ್ಕೇ ಮಾತ್ರ ಇರಬೇಕು. ಆದರೆ, ಯುಟ್ಯೂಬ್ ಜಾಲತಾಣವು ಕಲಾಪ ನೇರ ಪ್ರಸಾರದ ಹಕ್ಕುಸ್ವಾಮ್ಯವನ್ನು ಸ್ಪಷ್ಟವಾಗಿ ಕೇಳಿದೆ ಎಂದು ವಕೀಲ ವಿರಾಗ್ ಗುಪ್ತಾ ಅವರು ಪೀಠಕ್ಕೆ ಮಾಹಿತಿ ನೀಡಿದರು.

ಗೋವಿಂದಾಚಾರ್ಯ ಅವರು ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ಅ.17ಕ್ಕೆ ನಡೆಸಲು ಪಟ್ಟಿಮಾಡಿದ ಪೀಠವು, 'ಇವು ಆರಂಭಿಕ ಹಂತಗಳು. ನ್ಯಾಯಾಲಯ ಕಲಾಪದ ನೇರ ಪ್ರಸಾರಕ್ಕೆ ನಾವು ಖಂಡಿತವಾಗಿಯೂ ನಮ್ಮದೇ ಆದ ಪ್ರಸಾರ ವೇದಿಕೆಗಳನ್ನು ಹೊಂದಿದ್ದೇವೆ. ಹಕ್ಕುಸ್ವಾಮ್ಯ ವಿಷಯದ ಬಗ್ಗೆ ನಾವು ನೋಡಿಕೊಳ್ಳುತ್ತೇವೆ' ಎಂದು ತ್ರಿಸದಸ್ಯ ಪೀಠವು ಹೇಳಿತು.

ಸಂಕ್ಷಿಪ್ತ ಸುದ್ದಿ

ಹಣ್ಣಿನ ವ್ಯಾಪಾರಿ ವಶ, ಬಿಡುಗಡೆ

ಗಂಗಾವತಿ (ಕೊಪ್ಪಳ ಜಿಲ್ಲೆ): ಗಂಗಾವತಿಯ ಮೆಹಬೂಬ್ ನಗರದ ನಿವಾಸಿ, ಬಾಳೆಹಣ್ಣಿನ ವ್ಯಾಪಾರಿ ಶಬ್ಬೀರ್ ಎಂಬುವರನ್ನು ಶಿವಮೊಗ್ಗ ಜಿಲ್ಲಾ ಪೊಲೀಸರು ಭಾನುವಾರ ರಾತ್ರಿ ವಶಕ್ಕೆ ಪಡೆದು, ಸೋಮವಾರ ಮಧ್ಯಾಹ್ನ ಬಿಡುಗಡೆ ಮಾಡಿದರು.

'ನಿಷೇಧಿತ ಐಎಸ್ ಜೊತೆ ನಂಟು ಹೊಂದಿದ ಆರೋಪದಡಿ ಶಿವಮೊಗ್ಗ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪ್ರಮುಖ ಆರೋಪಿ ಪತ್ತೆಗೆ ದೂರವಾಣಿ ಕರೆ ಮಾಹಿತಿ ಸಂಗ್ರಹಿಸುವಾಗ ಶಬ್ಬೀರ್ ದೂರವಾಣಿ ಸಂಖ್ಯೆ ಸಿಕ್ಕಿದೆ. ಹೀಗಾಗಿ ವಶಕ್ಕೆ ಪಡೆಯಲಾಗಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಶಬ್ಬೀರ್ ವಶಕ್ಕೆ ಪಡೆದು ವಾಪಸು ಕಳುಹಿಸಿದ್ದು ನಿಜ. ಯಾವ ಪ್ರಕರಣ ಎಂಬುದು ಶಿವಮೊಗ್ಗ ಪೊಲೀಸರು ತಿಳಿಸಿಲ್ಲ' ಎಂದು ಎಸ್‌ಪಿ ಅರುಣಾಂಗ್ಶು ಗಿರಿ ತಿಳಿಸಿದರು. ಆದರೆ ಇದನ್ನು ಪೊಲೀಸರು ಖಚಿತಪಡಿಸಿಲ್ಲ.

ಸಿಯುಇಟಿ–ಪಿಜಿ ಫಲಿತಾಂಶ ಪ್ರಕಟ

ನವದೆಹಲಿ (ಪಿಟಿಐ): ವಿಶ್ವವಿದ್ಯಾಲಯಗಳ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಯುಇಟಿ–ಪಿಜಿ) ಫಲಿತಾಂಶವು ಸೋಮವಾರ ಪ್ರಕಟವಾಗಿದೆ.

'ಬಿಎಚ್‌ಯು ವಿಶ್ವವಿದ್ಯಾಲಯದಿಂದ 3.5 ಲಕ್ಷ ಅಭ್ಯರ್ಥಿಗಳು, ಜೆಎನ್‌ಯುನಿಂದ 2.3 ಲಕ್ಷ ಅಭ್ಯರ್ಥಿಗಳು ಸೇರಿ ಒಟ್ಟು 6.07 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. ಈ ಪರೀಕ್ಷೆಯನ್ನು ಆನ್‌ಲೈನ್ ಮೂಲಕ ನಡೆಸಲಾಗಿತ್ತು ಮತ್ತು ಪರೀಕ್ಷೆಯಲ್ಲಿ ಬಹುಆಯ್ಕೆ ಪ್ರಶ್ನೆಗಳನ್ನು ಕೇಳಲಾಗಿತ್ತು' ಎಂದು ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿಯ ಹಿರಿಯ ನಿರ್ದೇಶಕ (ಪರೀಕ್ಷೆ) ಸಾಧನಾ ಪರಾಶರ್ ಹೇಳಿದರು.

ಸಿಯುಇಟಿ–ಯುಜಿ ಅಂತೆಯೇ ಇಲ್ಲಿಯೂ ವಿಷಯಾವಾರು ಅತ್ಯಧಿಕ ಅಂಕ ಪಡೆದವರ ಪಟ್ಟಿಯನ್ನು ಪ್ರಕಟಿಸಲಾಗಿದೆ. ಸಿಯುಇಟಿ–ಪಿಜಿ ಅಡಿಯಲ್ಲಿ ಪ್ರವೇಶಾತಿ ನಡೆಸಲು ಕೇಂದ್ರ, ರಾಜ್ಯ ಮತ್ತು ಖಾಸಗಿ ಸೇರಿ ಒಟ್ಟು 66 ವಿಶ್ವವಿದ್ಯಾಲಯಗಳು ನಿರ್ಧರಿಸಿವೆ. ಆದ್ದರಿಂದ ದಾಖಲಾತಿ ಪ್ರಕ್ರಿಯೆ ಆರಂಭಿಸುವಂತೆ ಈ ವಿ.ವಿಗಳಿಗೆ ಯುಜಿಸಿ ಸೂಚಿಸಿದೆ.

ನವರಾತ್ರಿ ಹಬ್ಬ

ಪಂಜಾಬ್‌ನ ಅಮೃತಸರದಲ್ಲಿ ನವರಾತ್ರಿ ಹಬ್ಬದ ಮೊದಲ ದಿನವಾದ ಸೋಮವಾರ ಮಹಿಳೆಯೊಬ್ಬರು ಮಾತಾ ಲೊಂಗಾ ವಾಲಿ ದೇವಸ್ಥಾನಕ್ಕೆ ಭೇಟಿ ನೀಡಿ, ದೇವಿಗೆ ಪ್ರಾರ್ಥನೆ ಸಲ್ಲಿಸಿದ ನಂತರ ಮಗುವಿನ ಹಣೆಗೆ ತಿಲಕವಿರಿಸಿದರು –ಪಿಟಿಐ ಚಿತ್ರ

ಅಪಾರ ಬೆಂಬಲ: ತರೂರ್ ವಿಶ್ವಾಸ

ಎಐಸಿಸಿ ಅಧ್ಯಕ್ಷರ ಚುನಾವಣೆ: ನಾಮಪತ್ರ ಸಲ್ಲಿಸಲು ಸಿದ್ಧತೆ

ಪಾಲಕ್ಕಾಡ್ (ಪಿಟಿಐ): ದೇಶದಾದ್ಯಂತ ಪಕ್ಷದ ಕಾರ್ಯಕರ್ತರ ಭಾರಿ ಬೆಂಬಲ ತಮಗೆ ಇದೆ ಎಂದು ಸಂಸದ ಶಶಿ ತರೂರ್ ಸೋಮವಾರ ಹೇಳಿದ್ದಾರೆ. ಎಐಸಿಸಿ ಅಧ್ಯಕ್ಷ ಹುದ್ದೆಗಾಗಿ ನಡೆಯಲಿರುವ ಚುನಾವಣೆಯಲ್ಲಿ ತರೂರ್ ಪ್ರಬಲ ಸ್ಪರ್ಧಿಯಾಗಿದ್ದಾರೆ. ರಾಜಸ್ಥಾನ ಕಾಂಗ್ರೆಸ್‌ನಲ್ಲಿ ಬಿಕ್ಕಟ್ಟು ತಲೆದೋರಿರುವುದರಿಂದ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಚುನಾವಣೆಯಲ್ಲಿ ಸ್ಪರ್ಧಿಸುವ ಕುರಿತು ಸ್ಪಷ್ಟತೆ ಇಲ್ಲ.

ಭಾರತ್ ಜೋಡೊ ಯಾತ್ರೆ ನಡೆಸುತ್ತಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಪಟ್ಟಾಂಬಿ ಎಂಬಲ್ಲಿ ತರೂರ್ ಅವರು ಭೇಟಿಯಾಗಿ ಮಾತುಕತೆ ನಡೆಸಿದರು. ತಮ್ಮ ತವರು ಜಿಲ್ಲೆಗೆ ಬಂದಿರುವ ರಾಹುಲ್ ಅವರನ್ನು ಭೇಟಿ ಮಾಡಿದೆ ಎಂದು ತರೂರ್ ಹೇಳಿದ್ದಾರೆ.

'ನಾನು ನಾಮಪತ್ರ ಸಲ್ಲಿಸುವಾಗ, ನನಗಿರುವ ಜನಬೆಂಬಲ ಎಷ್ಟು ಎಂಬುದು ತಿಳಿಯುತ್ತದೆ. ಹೆಚ್ಚು ರಾಜ್ಯಗಳಿಂದ ತಮಗೆ ಬೆಂಬಲ ಸಿಕ್ಕರೆ ಚುನಾವಣಾ ಕಣದಲ್ಲಿ ಮುಂದುವರಿಯುತ್ತೇನೆ. ದೇಶದ ಹಲವು ಭಾಗಗಳ ಜನರು ಸ್ಪರ್ಧೆಗೆ ಇಳಿಯುವಂತೆ ನನ್ನನ್ನು ಒತ್ತಾಯಿಸಿದ್ದಾರೆ' ಎಂದು ತರೂರ್ ಹೇಳಿದ್ದಾರೆ.

ಚುನಾವಣೆಯಲ್ಲಿ ಸ್ಪರ್ಧಿಸಲು ತಮಗೆ ಇಚ್ಛೆಯಿದ್ದು, ನಾಮಪತ್ರ ಸಲ್ಲಿಕೆಗೆ ಕಡೆಯ ದಿನವಾಗಿರುವ ಸೆ.30ರಂದು ಸ್ಪಷ್ಟ ಚಿತ್ರಣ ಸಿಗಲಿದೆ ಎಂದು ಅವರು ಹೇಳಿದ್ದಾರೆ. ಕಾಂಗ್ರೆಸ್ ಕೇಂದ್ರ ಕಚೇರಿಯಿಂದ ನಾಮಪತ್ರದ ಅರ್ಜಿಯನ್ನು ಅವರು ಶನಿವಾರ ಪಡೆದುಕೊಂಡಿದ್ದಾರೆ.

ಗಾಂಧಿ–ನೆಹರೂ ಕುಟುಂಬದ ಬೆಂಬಲ ಸಿಕ್ಕಿದೆಯೇ ಎಂಬ ಸುದ್ದಿಗಾರರ ಪ್ರಶ್ನೆಗೆ, 'ಸೋನಿಯಾ ಗಾಂಧಿ, ರಾಹುಲ್ ಹಾಗೂ ಪ್ರಿಯಾಂಕಾ ಅವರ ಜೊತೆ ಮಾತನಾಡಿದ್ದೇನೆ. ನನ್ನ ಸ್ಪರ್ಧೆಯಿಂದ ಯಾವುದೇ ತೊಂದರೆಯಿಲ್ಲ ಎಂದು ಅವರು ನೇರವಾಗಿ ಹೇಳಿದ್ದಾರೆ. ಕೇರಳದಲ್ಲಿ ಪಕ್ಷದ ಕಾರ್ಯಕರ್ತರ ಬೆಂಬಲವೂ ಇದೆ' ಎಂದು ಅವರು ಉತ್ತರಿಸಿದರು.

ನಟಿ ಜಾಕ್ವೆಲಿನ್‌ಗೆ ಮಧ್ಯಂತರ ಜಾಮೀನು

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಾಲಿವುಡ್ ನಟಿ ಜಾಕ್ವೆಲಿನ್ ಫರ್ನಾಂಡೀಸ್ ಅವರಿಗೆ ದೆಹಲಿ ಹೈಕೋರ್ಟ್ ಸೋಮವಾರ ಮಧ್ಯಂತರ ಜಾಮೀನು ನೀಡಿದೆ.

ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಶೈಲೇಂದ್ರ ಮಲಿಕ್ ಅವರು ಜಾಕ್ವೆಲಿನ್ ಅವರಿಗೆ ₹ 50 ಸಾವಿರ ವೈಯಕ್ತಿಕ ಬಾಂಡ್ ಆಧಾರದಲ್ಲಿ ಮಧ್ಯಂತರ ಜಾಮೀನು ಮಂಜೂರು ಮಾಡಿ, ಅಕ್ಟೋಬರ್ 22ಕ್ಕೆ ಮುಂದಿನ ವಿಚಾರಣೆಯನ್ನು ನಿಗದಿಪಡಿಸಿದರು.

ಆರೋಪಿ ಸುಕೇಶ್ ಚಂದ್ರಶೇಖರ್ ವಿರುದ್ಧದ ₹ 200 ಕೋಟಿ ಸುಲಿಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾಕ್ವೆಲಿನ್ ಅವರು ಸೋಮವಾರ ಪಟಿಯಾಲಾ ಹೌಸ್ ಕೋರ್ಟ್‌ಗೆ ಹಾಜರಾಗಿದ್ದರು.

ಹಿಂದಿನ ನ್ಯಾಯಾಧೀಶ ಪ್ರವೀಣ್ ಸಿಂಗ್ ಅವರು ಜಾರಿ ನಿರ್ದೇಶನಾಲಯವು ಸಲ್ಲಿಸಿದ ಪೂರಕ ಚಾರ್ಜ್‌ಶೀಟ್ ಅನ್ನು ಗಮನದಲ್ಲಿಟ್ಟುಕೊಂಡು ಫರ್ನಾಂಡಿಸ್ ಅವರನ್ನು ನ್ಯಾಯಾಲಯಕ್ಕೆ ಹಾಜರಾಗುವಂತೆ ಆಗಸ್ಟ್ 31ರಂದು ಸೂಚಿಸಿದ್ದರು.

ತನಿಖೆಗೆ ಸಂಬಂಧಿಸಿದಂತೆ ಇ.ಡಿಯಿಂದ ಹಲವು ಬಾರಿ ಸಮನ್ಸ್ ಪಡೆದಿದ್ದ ಜಾಕ್ವೆಲಿನ್ ಅವರನ್ನು ಪೂರಕ ಚಾರ್ಜ್‌ಶೀಟ್‌ನಲ್ಲಿ ಇದೇ ಮೊದಲ ಬಾರಿಗೆ ಆರೋಪಿ ಎಂದು ಹೆಸರಿಸಲಾಗಿದೆ. ಕಳೆದ ಡಿಸೆಂಬರ್‌ನಲ್ಲಿ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯಕ್ಕೆ ಇ.ಡಿ ತನ್ನ ಮೊದಲ ಚಾರ್ಜ್‌ಶೀಟ್ ಸಲ್ಲಿಸಿತ್ತು. ನಂತರ, ಫೆಬ್ರುವರಿಯಲ್ಲಿ ಸುಕೇಶ್ ಶೇಖರ್ ಅವರನ್ನು ಜಾಕ್ವೆಲಿನ್‌ಗೆ ಪರಿಚಯಿಸಿದ್ದ ಪಿಂಕಿ ಇರಾನಿ ಎಂಬುವವರ ವಿರುದ್ಧವೂ ಪೂರಕ ಚಾರ್ಜ್‌ಶೀಟ್ ಸಲ್ಲಿಸಿತ್ತು.

ಆಜಾದ್ ಹೊಸ ಪಕ್ಷ 'ಡಿಎಪಿ'

ಜಮ್ಮುವಿನಲ್ಲಿ ಸೋಮವಾರ ಗುಲಾಂ ನಬಿ ಆಜಾದ್ ಅವರು ತಮ್ಮ ಹೊಸ ಪಕ್ಷ ಡಿಎಪಿಯ ಬಾವುಟವನ್ನು ಪ್ರದರ್ಶಿಸಿದರು – ಪಿಟಿಐ ಚಿತ್ರ

ಶ್ರೀನಗರ (ಪಿಟಿಐ): ಕಾಂಗ್ರೆಸ್ ತೊರೆದ ಒಂದು ತಿಂಗಳ ನಂತರ ಹಿರಿಯ ನಾಯಕ ಗುಲಾಂ ನಬಿ ಆಜಾದ್ ಅವರು ತಮ್ಮ ಹೊಸ ರಾಜಕೀಯ ಪಕ್ಷ 'ಡೆಮಾಕ್ರಟಿಕ್ ಆಜಾದ್ ಪಾರ್ಟಿ' (ಡಿಎಪಿ)ಯನ್ನು ಜಮ್ಮುವಿನಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಅಧಿಕೃತವಾಗಿ ಘೋಷಿಸಿದರು. ಇದೇ ವೇಳೆ ತಮ್ಮ ಪಕ್ಷದ ಹೊಸ ಧ್ವಜವನ್ನೂ ಅವರು ಅನಾವರಣಗೊಳಿಸಿದರು.

ಆಜಾದ್ ಅವರು ಆಗಸ್ಟ್ 26 ರಂದು ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡಿದ್ದರು.

ಪಕ್ಷದ ಹೊಸ ಬಾವುಟದಲ್ಲಿ ಹಳದಿ, ಬಿಳಿ ಮತ್ತು ಕಡುನೀಲಿ ಬಣ್ಣಗಳ ಮೂರು ಪಟ್ಟೆಗಳು ಇವೆ. 'ಹಳದಿ ಬಣ್ಣವು ಸೃಜನಶೀಲತೆ ಮತ್ತು ವಿವಿಧತೆಯಲ್ಲಿ ಏಕತೆ ಸೂಚಿಸುತ್ತದೆ. ಬಿಳಿ ಶಾಂತಿ ಮತ್ತು ಭ್ರಾತೃತ್ವ ಸೂಚಿಸುತ್ತದೆ ಮತ್ತು ಕಡು ನೀಲಿ ಸ್ವಾತಂತ್ರ್ಯ, ಮುಕ್ತ ಯೋಚನಾ ಶಕ್ತಿ ಹಾಗೂ ಸಹಿಷ್ಣುತೆಯ ಕಲ್ಪನೆ ಹೊಂದಿದೆ ಎಂದು ಅವರು ತಿಳಿಸಿದರು.

'ನನಗೆ ಯಾವುದೇ ರಾಜಕೀಯ ಶತ್ರುಗಳಿಲ್ಲ, ಏನಿದ್ದರೂ ರಾಜಕೀಯ ಎದುರಾಳಿಗಳು ಅಷ್ಟೇ. ನಮ್ಮ 'ಡಿಎಪಿ'ಗೆ ಸೇರಲು ವಯೋಮಾನದ ಮಿತಿಯೂ ಇಲ್ಲ. ಯುವಜನರು ಮತ್ತು ಹಿರಿಯ ಅನುಭವಿಗಳು ನಮ್ಮ ಪಕ್ಷದಲ್ಲಿದ್ದು, ಪಕ್ಷವನ್ನು ಸದೃಢವಾಗಿ ಸಂಘಟಿಸಲಿದ್ದಾರೆ. ಹೊಸ ಪಕ್ಷ ನೋಂದಣಿ ಮಾಡಿಸುವುದು ಆದ್ಯತೆಯಾಗಿದೆ. ಕಣಿವೆ ರಾಜ್ಯದಲ್ಲಿ ಚುನಾವಣೆಗಳು ಯಾವಾಗ ಬೇಕಾದರೂ ನಡೆಯಬಹುದು' ಎಂದು ಆಜಾದ್ ಹೇಳಿದರು.

' ಪಕ್ಷದ ತತ್ವವು ಮಹಾತ್ಮಾ ಗಾಂಧಿ ಅವರ ವಿಚಾರಗಳನ್ನು ಆಧರಿಸಿರುತ್ತದೆ. ಯಾವುದೇ ರಾಜಕೀಯ ಪಕ್ಷದೊಂದಿಗೆ ಡಿಎಪಿ ಸ್ಪರ್ಧೆ ನಡೆಸುವುದಿಲ್ಲ. ಜಮ್ಮು ಮತ್ತು ಕಾಶ್ಮೀರದಲ್ಲಿ ಶಾಂತಿ ಮತ್ತು ಸಹಜ ಸ್ಥಿತಿಯನ್ನು ಬಲಪಡಿಸುವತ್ತ ಪಕ್ಷವು ಗಮನಹರಿಸಲಿದೆ' ಎಂದು ಆಜಾದ್ ತಿಳಿಸಿದರು.

ಗರ್ಭಿಣಿ ಮೇಲೆ ಅತ್ಯಾಚಾರ

ಮೇದಿನಿನಗರ, ಜಾರ್ಖಂಡ್ (ಪಿಟಿಐ): 22 ವರ್ಷ ವಯಸ್ಸಿನ ಗರ್ಭಿಣಿಯ ಮೇಲೆ ಆಕೆಯ ಗಂಡನ ಎದುರೇ ಆರು ಜನರ ಗುಂಪು ಅತ್ಯಾಚಾರ ಎಸಗಿದೆ ಎನ್ನಲಾದ ಘಟನೆ ಜಾರ್ಖಂಡ್‌ನ ಪಲಾಮು ಜಿಲ್ಲೆಯ ಬಕೊರಿಯ ಭಲುವಾಹಿ ಕಣಿವೆ ಬಳಿ ನಡೆದಿದೆ ಎಂದು ಸೋಮವಾರ ಪೊಲೀಸರು ತಿಳಿಸಿದ್ದಾರೆ.

ಆರು ಆರೋಪಿಗಳನ್ನು ಬಂಧಿಸಲಾಗಿದೆ. ಸಂತ್ರಸ್ತೆ ಮೂರು ತಿಂಗಳ ಗರ್ಭಿಣಿ ಆಗಿದ್ದಳು. ಆಕೆಯನ್ನು ಮೇದಿನಿನಗರ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದರು.

ಶಿಂಜೊ ಅಬೆ ಅಂತ್ಯಕ್ರಿಯೆಗೆ ಪ್ರಧಾನಿ ಮೋದಿ

ನವದೆಹಲಿ: ಜುಲೈನಲ್ಲಿ ಹಂತಕನ ಗುಂಡಿಗೆ ಬಲಿಯಾದ ಜಪಾನ್‌ನ ಮಾಜಿ ಪ್ರಧಾನಿ ಶಿಂಜೊ ಅಬೆ ಅವರ ಅಂತ್ಯಕ್ರಿಯೆ ಮಂಗಳವಾರ ನಡೆಯಲಿದ್ದು, ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಟೋಕಿಯೊಗೆ ತೆರಳಿ ಅಂತಿಮ ನಮನ ಸಲ್ಲಿಸಲಿದ್ದಾರೆ.

ಅಂತ್ಯಕ್ರಿಯೆಯಲ್ಲಿ ವಿಶ್ವದ ಸುಮಾರು 100 ದೇಶಗಳ ಪ್ರತಿನಿಧಿಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ.

'ಆತ್ಮೀಯ ಸ್ನೇಹಿತ ಮತ್ತು ಭಾರತ-ಜಪಾನ್ ಸ್ನೇಹದ ಶ್ರೇಷ್ಠ ಚಾಂಪಿಯನ್ ಮಾಜಿ ಪ್ರಧಾನಿ ಶಿಂಜೊ ಅಬೆ ಅವರ ಅಂತಿಮ ಸಂಸ್ಕಾರದಲ್ಲಿ ಭಾಗವಹಿಸಲು ನಾನು ಟೋಕಿಯೊಕ್ಕೆ ಪ್ರಯಾಣಿಸುತ್ತಿದ್ದೇನೆ' ಎಂದು ಮೋದಿ ಅವರು ಸೋಮವಾರ ಟ್ವೀಟ್ ಮಾಡಿದ್ದಾರೆ.

'ಅಬೆ ಅವರ ಕಲ್ಪನೆಯಂತೆ ಭಾರತ ಮತ್ತು ಜಪಾನ್ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು ನಾವು ಕೆಲಸ ಮಾಡುವುದನ್ನು ಮುಂದುವರಿಸುತ್ತೇವೆ' ಎಂದೂ ಅವರು ಟ್ವೀಟ್‌ನಲ್ಲಿ ಹೇಳಿದ್ದಾರೆ.

'ಬುಡೊಕಾನ್‌ನಲ್ಲಿ ನಡೆಯಲಿರುವ ಅಬೆ ಅಂತ್ಯಕ್ರಿಯೆಯಲ್ಲಿ ಪ್ರಧಾನಿ ಪಾಲ್ಗೊಳ್ಳುವರು. ನಂತರ ಅಕಾಸಾಕಾ ಅರಮನೆಯಲ್ಲಿ ಪ್ರಧಾನಿ ಫುಮಿಯೊ ಕಿಶಿದಾ ಅವರ ಹಾಗೂ ಅಬೆ ಅವರ ಪತ್ನಿ ಅಕಿ ಅವರನ್ನು ಭೇಟಿಯಾಗಲಿದ್ದಾರೆ' ಎಂದು ವಿದೇಶಾಂಗ ಕಾರ್ಯದರ್ಶಿ ವಿನಯ್ ಕ್ವಾತ್ರಾ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಅಪಘಾತ: 7 ಸಾವು

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದ ಕುಲು ಜಿಲ್ಲೆಯಲ್ಲಿ ಟೆಂಪೊ ಕಣಿವೆಗೆ ಬಿದ್ದು 7 ಜನರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತಿರುಚಿದ ವಿಷಯ: ಯೂಟ್ಯೂಬ್‌ನಿಂದ 45 ವಿಡಿಯೊಗಳು ಬ್ಲಾಕ್‌ಗೆ ಆದೇಶ

ನವದೆಹಲಿ (ಪಿಟಿಐ): 'ಸುಳ್ಳು ಸುದ್ದಿ ಹಾಗೂ ತಿರುಚಿದ ವಿಷಯಗಳನ್ನು ಒಳಗೊಂಡಿದ್ದ ಒಟ್ಟು 45 ವಿಡಿಯೊಗಳನ್ನು 10 ಯೂಟ್ಯೂಬ್ ಚಾನೆಲ್‌ಗಳಿಂದ ಬ್ಲಾಕ್ ಮಾಡಲು ಸರ್ಕಾರ ಆದೇಶಿಸಿದೆ' ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಸೋಮವಾರ ಹೇಳಿದ್ದಾರೆ.

'ಸಮುದಾಯಗಳ ನಡುವೆ ಭೀತಿ ಹುಟ್ಟಿಸುವ ಹಾಗೂ ತಪ್ಪು ಕಲ್ಪನೆ ಮೂಡಿಸುವ ವಿಷಯಗಳನ್ನು ಈ ವಿಡಿಯೊಗಳು ಹೊಂದಿದ್ದವು' ಎಂದು ಅವರು ತಿಳಿಸಿದ್ದಾರೆ.

'ಈ ವಿಡಿಯೊಗಳನ್ನು ಒಟ್ಟಾರೆ 1.30 ಕೋಟಿಗೂ ಅಧಿಕ ಮಂದಿ ವೀಕ್ಷಿಸಿದ್ದರು. ಕೆಲವು ಸಮುದಾಯಗಳ ಧಾರ್ಮಿಕ ಹಕ್ಕುಗಳನ್ನು ಗೌರವಿಸುವ ಉದ್ದೇಶದಿಂದ ಸರ್ಕಾರ ಈ ತೀರ್ಮಾನ ಕೈಗೊಂಡಿದೆ' ಎಂದು ಅಧಿಕೃತ ಪ್ರಕಟಣೆ ಹೇಳಿದೆ.

'ಬ್ಲಾಕ್ ಮಾಡಲಾಗಿರುವ ವಿಡಿಯೊಗಳ ಪೈಕಿ ಕೆಲವು ವಿಡಿಯೊಗಳು ಅಗ್ನಿಪಥ್ ಯೋಜನೆ, ಭಾರತೀಯ ಸೇನೆ ಹಾಗೂ ಕಾಶ್ಮೀರಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ತಪ್ಪು ಮಾಹಿತಿಗಳನ್ನು ಒದಗಿಸುವ ವಿಷಯಗಳನ್ನು ಹೊಂದಿದ್ದವು. ರಾಷ್ಟ್ರೀಯ ಭದ್ರತೆಯ ನೆಲೆಯಲ್ಲಿ ನೋಡಿದಾಗ ಈ ವಿಷಯಗಳು ಅತಿಸೂಕ್ಷ್ಮ ಹಾಗೂ ಸುಳ್ಳು ಎಂಬುದು ಗೊತ್ತಾಗಿತ್ತು' ಎಂದು ವಿವರಿಸಿದೆ.

'ಮಾಹಿತಿ ತಂತ್ರಜ್ಞಾನ ನಿಯಮ–2021ರ ಅಡಿಯಲ್ಲಿ ಈ ವಿಡಿಯೊಗಳನ್ನು ಬ್ಲಾಕ್ ಮಾಡಲು ಸೆಪ್ಟೆಂಬರ್ 23ರಂದು ಆದೇಶ ಹೊರಡಿಸಲಾಗಿತ್ತು' ಎಂದೂ ಪ್ರಕಟಣೆ ಹೇಳಿದೆ.

ಏಕನಾಥ ಶಿಂದೆ ಬಣ ಸೇರಿದ ಬಾಳಾ ಠಾಕ್ರೆ ನಂಬಿಕಸ್ಥರು

ಠಾಣೆ (ಪಿಟಿಐ): ಶಿವಸೇನಾ ಸಂಸ್ಥಾಪಕ ಬಾಳಾ ಠಾಕ್ರೆ ಅವರ ಮನೆಯಲ್ಲಿ ಕಳೆದ ಮೂವತ್ತು ವರ್ಷಗಳಿಂದ ಕೆಲಸ ಮಾಡುತ್ತಿದ್ದ ಚಂಪಾ ಸಿಂಗ್ ಥಾಪಾ ಹಾಗೂ ಮೋರೇಶ್ವರ್ ರಾಜೆ ಅವರು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರ ನೇತೃತ್ವದ ಬಣವನ್ನು ಸೋಮವಾರ ಸೇರಿಕೊಂಡರು.

ಥಾಪಾ ಅವರು ಬಾಳಾ ಠಾಕ್ರೆ ಅವರ ನಂಬಿಕಸ್ಥ ವ್ಯಕ್ತಿಯಾಗಿದ್ದರು. 27 ವರ್ಷಗಳ ಕಾಲ ಬಾಳ ಠಾಕ್ರೆ ಅವರ ಸೇವೆ ಮಾಡಿದ್ದರು. ರಾಜೆ ಅವರು 35 ವರ್ಷಗಳಿಂದ ಠಾಕ್ರೆ ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ಬಾಳಾ ಠಾಕ್ರೆ ಅವರ ಕರೆಗಳನ್ನು ರಾಜೆ ಅವರೇ ಸ್ವೀಕರಿಸುತ್ತಿದ್ದರು.

> **ಹಲವು ನಾಯಕರು ನಮ್ಮ ಬಣದ ಹಲವರೊಂದಿಗೆ ಸಂಪರ್ಕದಲ್ಲಿದ್ದಾರೆ. ನಾಯಕರು ನಮ್ಮ ಬಣವನ್ನು ಸೇರಿರುವ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ**
> **ಏಕನಾಥ ಶಿಂದೆ**
> ಮಹಾರಾಷ್ಟ್ರ ಮುಖ್ಯಮಂತ್ರಿ

'ಬಾಳ ಠಾಕ್ರೆ ಅವರ ಹಿಂದುತ್ವದ ಪರಿಕಲ್ಪನೆಯನ್ನು ಸಾಕಾರಗೊಳಿಸುತ್ತಿರುವ 'ನಿಜ' ಶಿವಸೇನಾವನ್ನು ಪ್ರತಿನಿಧಿಸುವ ಬಣವನ್ನು ಈ ಇಬ್ಬರೂ ಸೇರಿಕೊಂಡಿದ್ದಾರೆ. ಇಬ್ಬರ ಆಗಮನವು ನವರಾತ್ರಿಯ ಹಬ್ಬ ಚೈತನ್ಯ ತಂದುಕೊಟ್ಟಿದೆ' ಎಂದು ಮುಖ್ಯಮಂತ್ರಿ ಏಕನಾಥ ಶಿಂದೆ ಪ್ರತಿಕ್ರಿಯಿಸಿದರು.

ಈ ಇಬ್ಬರನ್ನೂ ಶಿಂದೆ ಅವರು ಶಾಲು ಹೊದಿಸಿ ತಮ್ಮ ಬಣಕ್ಕೆ ಬರಮಾಡಿಕೊಂಡರು.

ಬಾಲಕಿ ಮೇಲೆ ಅತ್ಯಾಚಾರ: ಎಂಟು ಮಂದಿಗೆ ಜೀವಾವಧಿ

ಚೆನ್ನೈ (ಪಿಟಿಐ): ಬಾಲಕಿ ಮೇಲೆ ಅತ್ಯಾಚಾರ ನಡೆಸಿ ವೇಶ್ಯಾವಾಟಿಕೆಗೆ ತಳ್ಳಿದ ಪ್ರಕರಣದ ವಿಚಾರಣೆ ನಡೆಸಿದ ಪೋಕ್ಸೊ ವಿಶೇಷ ನ್ಯಾಯಾಲಯವು ಬಾಲಕಿಯ ಮಲತಂದೆ ಹಾಗೂ ಮಲತಾಯಿ ಸೇರಿ ಒಟ್ಟು 8 ಮಂದಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ.

ಪ್ರಕರಣದಲ್ಲಿ ಭಾಗಿಯಾಗಿದ್ದ (ಇತರ ನಾಲ್ಕು ಮಂದಿ) ಪೊಲೀಸ್ ಇನ್‌ಸ್ಪೆಕ್ಟರ್, ಬಿಜೆಪಿಯ ಇಬ್ಬರು ಕಾರ್ಯಕರ್ತರು ಹಾಗೂ ಖಾಸಗಿ ಸುದ್ದಿವಾಹಿನಿಯೊಂದರ ಪತ್ರಕರ್ತನಿಗೆ ತಲಾ 20 ವರ್ಷ ಸೆರೆವಾಸ ವಿಧಿಸಿದೆ. ಸರ್ಕಾರದ ವತಿಯಿಂದ ಸಂತ್ರಸ್ತೆಗೆ ₹5 ಲಕ್ಷ ನೆರವು ನೀಡಬೇಕು. ಆರೋಪಿಗಳಿಗೆ ವಿಧಿಸಲಾಗಿರುವ ಸುಮಾರು ₹2 ಲಕ್ಷ ದಂಡದ ಮೊತ್ತವನ್ನೂ ಆಕೆಗೆ ಒದಗಿಸಬೇಕು ಎಂದು ನ್ಯಾಯಾಲಯ ಹೇಳಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,

ಆಯುಕ್ತರವರ ಕಛೇರಿ,
ನಂ. 16–ಡಿ, ದೇವರಾಜ ಅರಸು ಭವನ, 3ನೇ ಮಹಡಿ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052.

ಸಂಖ್ಯೆ: BCWD-16019/15/20222-TRAINING(C.No.889191) ದಿನಾಂಕ: 21.09.2022

ಪ್ರಕಟಣೆ

2022ರಲ್ಲಿ ನಡೆದ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ.ಯು.ಸಿ. ಯ ವಾರ್ಷಿಕ ಪರೀಕ್ಷೆಗಳಲ್ಲಿ ಶೇಕಡ 90 ಮತ್ತು ಅದಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿರುವ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಹಾಗೂ 3ಬಿ ಗಳಿಗೆ ಸೇರಿದ ಅರ್ಹ ವಿದ್ಯಾರ್ಥಿಗಳಿಂದ "**ಡಿ. ದೇವರಾಜ ಅರಸು ಪ್ರತಿಭಾ ಪುರಸ್ಕಾರ**"ಕ್ಕಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಆನ್–ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆನ್–ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಲು ಕೊನಯ **ದಿನಾಂಕ: 21.10.22ರ ಸಂಜೆ 5:00 ಗಂಟೆ ಆಗಿರುತ್ತದೆ.** ಹೆಚ್ಚಿನ ವಿವರಗಳಿಗಾಗಿ ಇಲಾಖಾ ವೆಬ್‌ಸೈಟ್: **https://bcwd.karnataka.gov.in** ಗೆ ಸಂಪರ್ಕಿಸುವುದು.

ಸಹಾಯವಾಣಿ ಸಂಖ್ಯೆ: 8050770004 (ಸಮಯ ಬೆಳಗ್ಗೆ 10:00 ರಿಂದ ಸಂಜೆ 5:30ರ ವರೆಗೆ ಸಾರ್ವಜನಿಕ ರಜಾ ದಿನಗಳನ್ನು ಹೊರತುಪಡಿಸಿ)

ಸಹಿ/–
ಆಯುಕ್ತರು

ವಾಸಾಸಂಇ/ವಾಪ್ರ/ಜಿಎ/2380/2022–23

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ಸಂಖ್ಯೆ: 16ಸಿ-1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು-52.
ದೂರವಾಣಿ: 080-22268677/78/79 ಫ್ಯಾಕ್ಸ್: 080-22268667
ಇ-ಮೇಲ್ : kerc-ka@nic.in ವೆಬ್‌ಸೈಟ್: www.kerc.karnataka.gov.in

ಸಂಖ್ಯೆ : ಕವಿನಿಆ/ಸಿಒಎಸ್/ಟೆಕ್/1029/21/ಡಿಡಿಡಿ/22–23/988, ಬೆಂಗಳೂರು ದಿ: 26.09.2022

ಸೂಚನೆ

ವಿಷಯ: ಕರಡು–ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳು. (ಸಿಓಎಸ್)(ಹನ್ನೊಂದನೇ ತಿದ್ದುಪಡಿ), 2022.

ಮೇಲ್ಕಂಡ ವಿಷಯದಲ್ಲಿ ಪ್ರಸ್ತಾಪಿಸಿರುವ ಷರತ್ತುಗಳ ಕರಡು ತಿದ್ದುಪಡಿಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ 11.08.2022ರಂದು ಪ್ರಕಟಗೊಳಿಸಲಾಗಿದ್ದು, ಸದರಿ ಪ್ರತಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಂತರ್ಜಾಲ **www.kerc.karnataka.gov.in**ನಲ್ಲಿ ಲಭ್ಯವಿರಿಸಲಾಗಿದೆ.

ಆಯೋಗವು **ದಿನಾಂಕ 20.10.2022 ರಂದು ಬೆಳಿಗ್ಗೆ 11.00 ಘಂಟೆಗೆ** ಆಯೋಗದ ನ್ಯಾಯಾಂಗ ಸಭಾಂಗಣದಲ್ಲಿ ಸಾರ್ವಜನಿಕ ವಿಚಾರಣೆಯನ್ನು ಏರ್ಪಡಿಸಿದ್ದು, ಆಸಕ್ತರು, ಈ ವಿಚಾರಣೆಯಲ್ಲಿ ಭಾಗವಹಿಸಿ ಆಯೋಗದ ಮುಂದೆ ಖುದ್ದಾಗಿ ಹಾಜರಾಗಬಹುದು ಮತ್ತು ಮೌಖಿಕ ಸಲ್ಲಿಕೆಗಳನ್ನು ಮಾಡಬಹುದು.

ಸಹಿ/–ಕಾರ್ಯದರ್ಶಿ, ಕವಿನಿಆ, ಬೆಂಗಳೂರು.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೊಡಗು ಜಿಲ್ಲೆ, ಮಡಿಕೇರಿ

ಜಿಲ್ಲಾ ನಗರಾಭಿವೃದ್ಧಿ ಕೋಶ
ದೂರವಾಣಿ ಮತ್ತು ಫ್ಯಾಕ್ಸ್: 08272–295551 ಇ–ಮೇಲ್: dudc_kdg@yahoo.co.in
ವೆಬ್‌ಸೈಟ್: www.kodagududc.mrc.gov.in

ಸಂಖ್ಯೆ: ಡಿಯುಡಿಸಿ/ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4/95/2022–23 ದಿನಾಂಕ: 26–09–2022

ಟೆಂಡರ್ ಪ್ರಕಟಣೆ (2ನೇ ಕರೆ)

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೊಡಗು ಜಿಲ್ಲೆಯ ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4ರ ಯೋಜನೆಯಡಿ ರಸ್ತೆ, ಚರಂಡಿ, ತಡೆಗೋಡೆ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿ (DMA/2022-23/OW/WORK-INDENT132583 Call-2) ಗಾಗಿ Standard tender document KW-4ರ ಷರತ್ತುಗಳ ಪ್ರಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ 3ನೇ ದರ್ಜೆ ಮೇಲ್ಪಟ್ಟು (ಸಿವಿಲ್) ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ವಿವರಗಳು ಈ ಕೆಳಕಂಡಂತೆ ಇರುತ್ತದೆ.

1	ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	ದಿನಾಂಕ: 12–10–2022 ಸಂಜೆ 5.00 ಗಂಟೆಗೆ
2	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	ದಿನಾಂಕ: 14–10–2022 ಪೂರ್ವಾಹ್ನ 11.00 ಗಂಟೆಗೆ

ಆಸಕ್ತಿಯುಳ್ಳ ಗುತ್ತಿಗೆದಾರರು ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ www.eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಂಡು, ವಿದ್ಯುನ್ಮಾನ ಮೂಲಕವೇ ಟೆಂಡರ್ ಸಲ್ಲಿಸುವುದು. ಇ.ಎಂ.ಡಿ ಹಾಗೂ ಇತರೆ ವಿವರಗಳನ್ನು ಇ–ಪೋರ್ಟಲ್ ಮೂಲಕ ಪಡೆಯಬಹುದಾಗಿದ್ದು, ಅವಧಿ ವಿಸ್ತರಣೆ ಇದ್ದಲ್ಲಿ ಇ–ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಚೇರಿ, ಕೊಡಗು ಜಿಲ್ಲೆ, ಮಡಿಕೇರಿ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001.
ದೂರವಾಣಿ: 080–22215601, 22211246, ಫ್ಯಾಕ್ಸ್: 080–22215602

ಸಂಖ್ಯೆ: ಜೇತನಾ/42/2021–22 ದಿನಾಂಕ: 26–09–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಉಪ–ನಿರ್ದೇಶಕರು (ಆಡಳಿತ), ಇವರು ಈ ಕೆಳಗೆ ತಿಳಿಸಿರುವ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರಸಂ.	ಕಾಮಗಾರಿ ವಿವರ	ಟೆಂಡರ್ ಮೊತ್ತ	ಇ.ಎಂ.ಡಿ ಮೊತ್ತ
1	ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕಿನ ಅಂಬಿಗರಹಳ್ಳಿಯಲ್ಲಿನ ಯಾತ್ರಿ ನಿವಾಸ ಕಟ್ಟಡದ ಆವರಣದಲ್ಲಿ ಅಡುಗೆ ಕೋಣೆ ನಿರ್ಮಿಸುವುದು, ಹಾಲಿ ಇರುವ ಕಟ್ಟಡದ ಮೊದಲನೇ ಮಹಡಿಯಲ್ಲಿ ಮಂಗಳೂರು ಹೆಂಚಿನಿಂದ ಮೇಲ್ಛಾವಣಿಯನ್ನು ಅಳವಡಿಸುವ ಕಾಮಗಾರಿಯನ್ನು ಕೈಗೊಳ್ಳುವ ಕುರಿತು.	ರೂ. 50.29 ಲಕ್ಷಗಳು	ರೂ. 1,00,577/–

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **http://eproc.karnataka.gov.in** ರಲ್ಲಿ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.

1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **03–10–2022ರಂದು ಸಮಯ: 16.30 ಗಂಟೆಯವರೆಗೆ.**
2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **06–10–2022ರಂದು ಸಮಯ: 11.30 ಗಂಟೆಗೆ.**
3) ಹಣಕಾಸು ಬಿಡ್ ತೆರೆಯುವ ದಿನಾಂಕ: **ನಂತರ ತಿಳಿಸಲಾಗುವುದು.**

ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/– ಉಪ ನಿರ್ದೇಶಕರು (ಆಡಳಿತ) ಹಾಗೂ
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ವಾಸಾಸಂಇ/ವಾ.ಪ್ರ/2384/ಅಡ್ವರ್ಟೋ/2022–23

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ

ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು ಗ್ರಾಮಾಂತರ, ಬೊಮ್ಮವಾರ,
ದೇವನಹಳ್ಳಿ ತಾಲ್ಲೂಕು – 562110 ದೂ.ಸಂಖ್ಯೆ: 080–29599998
ಇ–ಮೇಲ್: forest.brzp@gmail.com

ಸಂಖ್ಯೆ: ಎ2/ಬಿಯುಡಿ/ಬೆಂಗ್ರಾಸಾ/ಟೆಂಡರ್/ಸಿಆರ್–04/2022–23 ದಿನಾಂಕ: 21.09.2022

ಇ–ಟೆಂಡರ್ ಪ್ರಕಟಣೆ

2022–23ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಯ ವಲಯಗಳಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿ ರಸ್ತೆಬದಿಗಳಲ್ಲಿ ಮುಂಗಡ ಗುಂಡಿ ತೆಗೆಯುವ ಕಾಮಗಾರಿಗಳನ್ನು ಕೈಗೊಳ್ಳಲು ಬೆಂಗಳೂರು ಗ್ರಾಮಾಂತರ ಪ್ರಾದೇಶಿಕ ಅರಣ್ಯ ವಿಭಾಗ / ಗ್ರಾಮಾಂತರ ಸಾಮಾಜಿಕ ಅರಣ್ಯ ವಿಭಾಗದಲ್ಲಿ ನೋಂದಾಯಿತ ಅರಣ್ಯ ಗುತ್ತಿಗೆದಾರರಿಂದ ಮಾತ್ರ ಕರ್ನಾಟಕ ಸರ್ಕಾರದ ಇ–ಪೋರ್ಟಲ್ **https://eproc.karnataka.gov.in** ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಫಾರಂಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **18.10.2022**ರ **ಸಂಜೆ 4.00** ರವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **20.10.2022**ರ **ಅಪರಾಹ್ನ 4.00 ಗಂಟೆ**ಗೆ. ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು ಹಾಗೂ ಷರತ್ತುಗಳನ್ನು ಪೂರೈಕೆಯಿಲ್ಲದೆ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಆರ್ಥಿಕ ಬಿಡನ್ನು ದಿನಾಂಕ: **21.10.2022**ರಂದು **ಅಪರಾಹ್ನ 4.00 ಗಂಟೆ**ಗೆ ತೆರೆಯಲಾಗುವುದು.

ಮೇಲ್ಕಂಡ ದಿನಾಂಕಗಳಂದು ಯಾವುದೇ ಟೆಂಡರ್ ಬಾರದಿದ್ದರೆ ಅಥವಾ ಕಾರಣಾಂತರಗಳಿಂದ ಟೆಂಡರ್ ನಡೆಯದೇ ಇದ್ದರೆ ಇದೇ ಪ್ರಕಟಣೆಯ ಷರತ್ತಿಗೊಳಪಟ್ಟು ದಿನಾಂಕ: **07.11.2022**ರ **ಅಪರಾಹ್ನ 4.00 ಗಂಟೆ**ವರೆಗೆ ಮರು ಟೆಂಡರ್ ಮುಂದುವರೆಸಲಾಗುವುದು. ತಾಂತ್ರಿಕ ಬಿಡನ್ನು ದಿನಾಂಕ: **09.11.2022**ರಂದು ತೆರೆಯಲಾಗುವುದು. ಆರ್ಥಿಕ ಬಿಡನ್ನು ದಿನಾಂಕ: **10.11.2022**ರಂದು ತೆರೆಯಲಾಗುವುದು. ಮೇಲಿನ ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬೊಮ್ಮವಾರ, ದೇವನಹಳ್ಳಿ ತಾಲ್ಲೂಕು ಇಲ್ಲಿ ಸಂಪರ್ಕಿಸಬಹುದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ವಿಭಾಗ,
ಬೆಂಗಳೂರು ಗ್ರಾಮಾಂತರ

ವಾಸಾಸಂ/ಬೆಂ.ನ/ಎಎಎ/2359/2022–23

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ

(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
ಪೋಡಿಯಂ ಬ್ಲಾಕ್, 3ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು–560 001. ದೂ. ಸಂ.: 080–29565353, 29566556, 29604556. ಇ–ಮೇಲ್: splocaima-21@ka.gov.in

ಸಂಖ್ಯೆ: SPLOCA/ADM/Gen/6/2022-23 ದಿನಾಂಕ: 23.09.2022

ಪ್ರಕಟಣೆ

ವಿಷಯ: ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐಎಂಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ರವರ ಕಛೇರಿಗೆ ಮಾನವ ಸಂಪನ್ಮೂಲ ಸೇವೆ ಪಡೆಯಲು ದರಪಟ್ಟಿಯನ್ನು (Inviting Quotation) ಆಹ್ವಾನಿಸುತ್ತಿರುವ ಬಗ್ಗೆ.

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐಎಂಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ಯವರ ಸೂಚನೆಯ ಮೇರೆಗೆ ಈ ಕಛೇರಿಗೆ ವಿವಿಧ ಸರ್ಕಾರದ ಆದೇಶಗಳಂತೆ ಮಂಜೂರಿಯಾಗಿ ನೇಮಕಾತಿ ಆಗದೇ ಬಾಕಿ ಇರುವ ಈ ಕೆಳಕಂಡ ಹುದ್ದೆಗಳಿಗೆ ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಆಸಕ್ತ ಏಜೆನ್ಸಿಗಳಿಂದ / ಆಸಕ್ತ ವೈಯಕ್ತಿಕ ವ್ಯಕಿಗಳಿಂದ ದರಪಟ್ಟಿಯನ್ನು ಮತ್ತು Resume ಆಹ್ವಾನಿಸಲಾಗಿದ್ದು Resume / ದರಪಟ್ಟಿಯನ್ನು **ದಿನಾಂಕ: 15.10.2022ರ** ಒಳಗಾಗಿ ಈ ಕಛೇರಿಗೆ ಸಲ್ಲಿಸುವುದು.

Sl. No.	Post/ Designation	Qualification		Relevant Experience		No. of Post	Contract / Outsource wage per month
		Basic	Preference	Basic	Preference		
1	Legal Advisor/ Head of Legal Cell (Retd. Dist Judge)	LLB, registered at Bar Council of Karnataka	LLM, registered at Bar Council of India	Former SPP/ judge of District Court	Legal Advisor to RBI/ CBI/ED	1	150000/-
2	Law Officer	LLB, Registered at Bar Council of Karnataka	LLM,	5 years Advocacy at Bar, Knowledge of Corporate & Criminal law	10 years Advocacy at Bar, Knowledge of Corporate & Criminal law	1	75000/-
3	Administrative Officer/ Section Officer	MBA / PG Diploma in Personnel Management	LLM,	10 Years in Accounting Firm / Bank/ Government Agencies	20 Years in Accounting Firm / Bank/ Government Agencies	1	60000/-
4	Retd DGM from scheduled Banks (Banking Expert)	M. Com	CA / LLB	10 Years in Bank	20 Years in Bank	1	100000/-
5	Finance and Audit Officer	M. Com	CA	10 Years in Bank/ Government Agencies	20 Years in Bank/ Government Agencies	1	52000/-
6	Shirestedar	BCom / LLB with Diploma in Computer Applications	M.Com / LLM	5 Years in Accounting Firm / Bank/ Government Agencies	10 Years in Accounting Firm / Bank/ Government Agencies	1	45000/-
7	FDA/ Assistant	BCom, Diploma in Computer Applications / COPA	LLB	5 Years in Accounting Firm / Bank/ Government Agencies	10 Years in Accounting Firm / Bank/ Government Agencies	1	34000/-
8	Stenographer	Graduate with Certificate in Steno, Typing & Shorthand	LLB with Certificate in Steno, Typing & Shorthand	5 Years in legal firm/Court	10 Years in legal firm/Court	1	33000/-
9	Private Secretary(Junior)	Graduate with diploma in Computer Application	Typing and Steno Qualifications	1 Year as DEO/ Steno & PA in Govt/ Govt. Agencies	2 Year as DEO/ Steno & PA in Govt/ Govt. Agencies	1	30000/-

ಸಹಿ/– ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿ,
ಐಎಂಎ ಹಾಗೂ ಇತರೆ ಕೆಪಿಐಡಿ ಪ್ರಕರಣ, ಬೆಂಗಳೂರು

ವಾಸಾಸಂಇ/ವಾಪ್ರ/ಜಿಎ/2366/2022–23

ಕರ್ನಾಟಕ ಸರ್ಕಾರ

ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಯವರ ಕಾರ್ಯಾಲಯ,

"ಎ" ಬ್ಲಾಕ್, ನೆಲ ಮಹಡಿ, ಕೊಠಡಿ ಸಂಖ್ಯೆ: 101, ರಜತಾದ್ರಿ, ಮಣಿಪಾಲ ಉಡುಪಿ–576104.
ದೂರವಾಣಿ: 0820–257433. ಇಮೈಲ್: dudc_udupi @yahoo.co.in

ಜಿನಕೋ (3) DC UDP-21016/20/2022-UDPDC-DUDC-UDUPI DC (E-89132) ದಿನಾಂಕ: 26.09.2022

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ.

ಉಡುಪಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಾದ ಕಾರ್ಕಳ ಪುರಸಭೆ, ಕಾಪು ಪುರಸಭೆ, ಕುಂದಾಪುರ ಪುರಸಭೆ ಮತ್ತು ಬೈಂದೂರು ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ **"ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–04 ರ"** ಯೋಜನೆಯಡಿ ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ.

ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ **(www.eproc.karnataka.gov.in)** ಮುಖಾಂತರ ಅಲ್ಪಾವಧಿ ಮರು ಟೆಂಡರ್ ಆಹ್ವಾನಿಸಲಾಗಿರುತ್ತದೆ. ಆದ್ದರಿಂದ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ **Work Indent** ನಂಬರ್ ಮುಖಾಂತರ ದಸ್ತಾವೇಜುಗಳನ್ನು (Document) ಡೌನ್‌ಲೋಡ್ ಮಾಡಿಕೊಂಡು ವಿದ್ಯುನ್ಮಾನ ಮೂಲಕವೇ **(www.eproc.karnataka.gov.in)** ಸಲ್ಲಿಸುವುದು. ಪ್ರೀ ಬಿಡ್ ಮೀಟಿಂಗ್, ಪೂರ್ಣಗೊಳಿಸಿದ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಹಾಗೂ ಟೆಂಡರ್ ತೆರೆಯುವ ದಿನಾಂಕಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪ್ರಚುರಪಡಿಸಲಾಗಿರುತ್ತದೆ. ಅವಶ್ಯವಿದ್ದಲ್ಲಿ ಇದರ ಬಗ್ಗೆ ಯಾವುದೇ ತಿದ್ದುಪಡಿ ಹಾಗೂ Addendum ನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಲಕವೇ ಪ್ರಚುರಪಡಿಸಲಾಗುವುದು. ಆಸಕ್ತಿಯುಳ್ಳ ಅರ್ಹ ಟೆಂಡರ್‌ದಾರರು ಎಲ್ಲಾ ಅಗತ್ಯ ದಾಖಲಾತಿಗಳೊಂದಿಗೆ ಭಾಗವಹಿಸುವಂತೆ ತಿಳಿಸಿದೆ.

ಕ್ರ. ಸಂ	ನಗರ ಸ್ಥಳೀಯ ಸಂಸ್ಥೆಯ ಹೆಸರು	ಇಂಡೆಂಟ್ ಸಂಖ್ಯೆ: (Work Indent Code)	ಟೆಂಡರಿಗಿಟ್ಟ ಮೊತ್ತ	ಇ.ಎಂ.ಡಿ ಮೊತ್ತ	ಕಾಮಗಾರಿಗಳನ್ನು ಪೂರ್ಣಗೊಳಿಸುವ ಅವಧಿ	ಗುತ್ತಿಗೆದಾರರ ವರ್ಗ
01	ಕಾರ್ಕಳ ಪುರಸಭೆ	DMA/2022-23/ RD/WORK_ INDENT133339/CALL-2	ರೂ.346.65 ಲಕ್ಷ	ರೂ.5.20ಲಕ್ಷ	09 ತಿಂಗಳು	Class-II & above KPWD
02	ಕಾಪು ಪುರಸಭೆ	DMA/2022-23/RD / WORK_ INDENT132728/CALL-2	ರೂ. 411.96 ಲಕ್ಷ	ರೂ.6.18ಲಕ್ಷ	11 ತಿಂಗಳು	Class-II & above KPWD
03	ಕುಂದಾಪುರ ಪುರಸಭೆ	DMA/2022-23/OW/WORK_ INDENT132594/CALL-2	ರೂ.139.07 ಲಕ್ಷ	ರೂ.2.09ಲಕ್ಷ	09 ತಿಂಗಳು	KPWD Class-III & above
04		DMA/2022-23 /RD/ WORK_ INDENT 132595/CALL-2	ರೂ.213.05 ಲಕ್ಷ	ರೂ.3.20ಲಕ್ಷ	09 ತಿಂಗಳು	KPWD Class-III & above
05		DMA/2022-23/OW/WORK_ INDENT 132596/CALL-2	ರೂ.204.76 ಲಕ್ಷ	ರೂ.3.08ಲಕ್ಷ	09 ತಿಂಗಳು	KPWD Class-III & above
06	ಬೈಂದೂರು ಪಟ್ಟಣ ಪಂಚಾಯತ್	DMA/2022-23 / OW / WORK _ INDENT 132118 / CALL-3	ರೂ.140.76 ಲಕ್ಷ	ರೂ.2.11ಲಕ್ಷ	06 ತಿಂಗಳು	Class-III & above K PWD

ಸಹಿ/–ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಉಡುಪಿ ಜಿಲ್ಲೆ, ಉಡುಪಿ.

ವಾಸಾಇ/ಸನಿಉ/ಎಂಸಿಎ/451/22–23 ದಿ: 26.09.2022

ಕರ್ನಾಟಕ ಗೃಹ ಮಂಡಳಿ

ಕರ್ನಾಟಕ ಗೃಹ ಮಂಡಲಿ – ಸಮುದಾಯದ ನಿರ್ಮಾಣದತ್ತ

ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ,
ಕೆ.ಜಿ.ರಸ್ತೆ, ಬೆಂಗಳೂರು – 560009 ದೂರವಾಣಿ: 080–22273511–16

ಸಂಖ್ಯೆ: ಕಗೃಮಂ/ಕಾ.ಪಾ.ಅ(ಹಂಚಿಕೆ)/ಬೇ.ಸ.ಪ್ರ/2022–23 ದಿನಾಂಕ: 23.09.2022

ಬೇಡಿಕೆ ಸಮೀಕ್ಷೆ ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ, ಧಾರವಾಡ ಜಿಲ್ಲೆ, ಧಾರವಾಡ ತಾಲ್ಲೂಕು, ಧಾರವಾಡ ಹೋಬಳಿ, ಅತ್ತಿಕೊಳ್ಳ ಗ್ರಾಮದ ಸರ್ವೆ ನಂ 17, 18 ಮತ್ತು ಇತರೆ ರಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಸುಮಾರು 31 ಎಕರೆ 28 ಗುಂಟೆ ಜಮೀನಿನಲ್ಲಿ 50:50ರ ಅನುಪಾತದಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳನ್ನೊಳಗೊಂಡ ವಸತಿ ಯೋಜನೆಯನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದ್ದು, ಸದರಿ ಸಂಯುಕ್ತ ವಸತಿ ಯೋಜನೆಯಲ್ಲಿ ವಿವಿಧ ವರ್ಗದ ನಿವೇಶನ ಹೊಂದಲು ಬಯಸುವ ಸಾರ್ವಜನಿಕರಿಂದ ಬೇಡಿಕೆ ಸಮೀಕ್ಷೆಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಸಾರ್ವಜನಿಕರು ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಹಣವನ್ನು e-payment ಮೂಲಕ ಪಾವತಿ ಮಾಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

ದಿನಾಂಕ: 01–10–2022 ರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30–10–2022 ಆಗಿರುತ್ತದೆ.

ನಿವೇಶನದ ತಾತ್ಕಾಲಿಕ ಅಂದಾಜು ಬೆಲೆ ರೂ. 1500/– ಪ್ರತಿ ಚದರ ಅಡಿಗಳಿಗೆ

ಸೂಚನೆ: ಸದರಿ ನಿವೇಶನದ ಬೆಲೆಯು ತಾತ್ಕಾಲಿಕವಾಗಿದ್ದು, ಅಂತಿಮ ಬೆಲೆಗೆ ಒಳಪಟ್ಟಿರುತ್ತದೆ.

ಕ್ರ. ಸಂ	ವರ್ಗ	ನಿವೇಶನದ ಅಳತೆ (ಚ.ಮೀ)	ಮಂಡಳಿ ವತಿಯಿಂದ ಹಂಚಿಕೆಗೆ ಲಭ್ಯವಿರುವ ಅಂದಾಜು ನಿವೇಶನಗಳು	ನೋಂದಣಿ ಶುಲ್ಕ	ಆರಂಭಿಕ ಠೇವಣಿ
1.	EWS	6 x 9	26	300/-	10,000/-
	LIG	9 x 12	49	500/-	20,000/-
	MIG	9 x 15	25	1000/-	30,000/-
	HIG I	12 x 18	23	1500/-	50,000/-
	HIG II	15 x 24	15	1500/-	50,000/-
ಹಂಚಿಕೆಗೆ ಲಭ್ಯವಿರುವ ಒಟ್ಟು ನಿವೇಶನಗಳು			138		

ಅರ್ಜಿಗಳ ನೊಂದಣಿಗೆ ನಿಯಮ ಮತ್ತು ಷರತ್ತುಗಳು

1) ಈ ಅಧಿಕೃತ ಪ್ರಕಟಣೆಯನ್ನು ನಿಖರ ಬೇಡಿಕೆ ಸಮೀಕ್ಷೆಗಾಗಿ ಸಾರ್ವಜನಿಕರ ಹಿತದೃಷ್ಟಿಯಿಂದ ಕರೆಯಲಾಗಿದೆ.
2) ಅರ್ಜಿ ಸಲ್ಲಿಸಬಯಸುವವರು ಮಂಡಳಿಯ ವೆಬ್‌ಸೈಟ್ https://www.khb.karnataka.gov.in ರಲ್ಲಿ ನೊಂದಣಿ ಶುಲ್ಕ ಮತ್ತು ನಿಗಧಿಪಡಿಸಿರುವ ಆರಂಭಿಕ ಠೇವಣಿ ಮೊತ್ತವನ್ನು e-payment ಮೂಲಕ ಪಾವತಿ ಮಾಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ.
3) ನಿವೇಶನ ಹಂಚಿಕೆಗಾಗಿ ಅರ್ಜಿ ಸಲ್ಲಿಸಿ ನೋಂದಣಿ ಪಡೆದ ಅರ್ಜಿದಾರರಿಗೆ ನೋಂದಣಿ ಶುಲ್ಕವನ್ನು ಮರುಪಾವತಿ ಮಾಡಲಾಗುವುದಿಲ್ಲ.
4) ಇದೊಂದು ಬೇಡಿಕೆ ಸಮೀಕ್ಷೆ ಪ್ರಕಟಣೆಯಾಗಿದ್ದು, ಈ ಸಮೀಕ್ಷೆಗೆ ಅನುಗುಣವಾಗಿ ನಿರೀಕ್ಷಿತ ಬೇಡಿಕೆ ಬಂದಲ್ಲಿ ಮಂಡಳಿಯ ಹಂಚಿಕೆ ನಿಯಮಗಳಂತೆ ಯೋಜನೆಯನ್ನು ಹಮ್ಮಿಕೊಳ್ಳಲಾಗುವುದು.
5) ನಿವೇಶನಗಳನ್ನು ಒಂದೇ ಇಡಿಗಂಟಿನ (Outright sale) ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು.
6) ಅರ್ಜಿದಾರರು ನಗರ, ಪುರಸಭೆ ವ್ಯಾಪ್ತಿಯಲ್ಲಿ ಗಂಡ/ಹೆಂಡತಿ ಅಪ್ರಾಪ್ತ ವಯಸ್ಕ ಮಕ್ಕಳ ಹೆಸರಿನಲ್ಲಿ ಮನೆ ಅಥವಾ ನಿವೇಶನವನ್ನು ಹೊಂದಿರಬಾರದು. ಮತ್ತು ಕರ್ನಾಟಕ ಗೃಹ ಮಂಡಳಿಯಿಂದಾಗಲಿ ಅಥವಾ ಇನ್ನಿತರೆ ಯಾವುದೇ ಪ್ರಾಧಿಕಾರದಿಂದಾಗಲಿ ಮನೆ/ನಿವೇಶನ ಪಡೆದಿರುವುದಿಲ್ಲವೆಂದು ಹಾಗೂ ಅರ್ಜಿದಾರರು ಅರ್ಜಿ ಸಲ್ಲಿಸುವುದಕ್ಕೆ ಮೊದಲು 10 ವರ್ಷಗಳಿಗೆ ಕಡಿಮೆ ಇಲ್ಲದಷ್ಟು ಕಾಲ ಕರ್ನಾಟಕ ರಾಜ್ಯದ ಸಾಮಾನ್ಯ ನಿವಾಸಿಯಾಗಿರುವ ಬಗ್ಗೆ ನೋಟರಿ ಮೂಲಕ ಪ್ರಮಾಣೀಕರಿಸಿದ ಪ್ರಮಾಣಪತ್ರ (ಅಫಿಡವಿಟ್) ಅಪ್‌ಲೋಡ್ ಮಾಡಬೇಕು.
7) ಸ್ವತ್ತುಗಳನ್ನು ಇ–ಲಾಟರಿ ಮೂಲಕ ಹಂಚಿಕೆ ಮಾಡಲಾಗುವುದು.
8) ಹಂಚಿಕೆ ನಂತರ ಹಂಚಿಕೆದಾರರ ಕೋರಿಕೆ ಅಥವಾ ನಿಗದಿತ ಸಮಯದಲ್ಲಿ ಹಣ ಸಂದಾಯ ಮಾಡದ ಸಂದರ್ಭದಲ್ಲಿ ಹಂಚಿಕೆಯನ್ನು ರದ್ದುಪಡಿಸಿ ಆರಂಭಿಕ ಠೇವಣಿ ಹಣದಲ್ಲಿ ಶೇ.25 ರಷ್ಟು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
9) ಮಂಡಳಿಯು ಯಾವುದೇ ಕಾರಣದಿಂದ ಬಡಾವಣೆಯನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗದಿದ್ದಲ್ಲಿ, ಅರ್ಜಿದಾರರು ಪಾವತಿಸಿರುವ ಆರಂಭಿಕ ಠೇವಣಿ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ನೀಡದೇ ಹಿಂತಿರುಗಿಸಲಾಗುವುದು.
10) ಅರ್ಜಿದಾರರು ಇಚ್ಛಿಸಿದಲ್ಲಿ ಯಾವುದೇ ಸಂದರ್ಭದಲ್ಲಿ ಮಂಡಳಿಗೆ ಕೋರಿಕೆ ಸಲ್ಲಿಸಿ ಆರಂಭಿಕ ಠೇವಣಿ ಮೊತ್ತವನ್ನು ಹಿಂಪಡೆಯಬಹುದು.
11) ಕರ್ನಾಟಕ ಗೃಹ ಮಂಡಳಿ 1983ರ ಹಂಚಿಕೆ ನಿಯಮಾವಳಿ ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
12) ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಗೃಮಂ, ಜಿಲ್ಲಾ ಯೋಜನಾ ಕಛೇರಿ, ಹುಬ್ಬಳ್ಳಿ ಇವರನ್ನು ಮೊಬೈಲ್ ಸಂಖ್ಯೆ: 9844176497 ರಲ್ಲಿ ಸಂಪರ್ಕಿಸಬಹುದು ಮತ್ತು ಸಹಾಯಕ ಅಭಿಯಂತರರು, ಕಗೃಮಂ, ಜಿಲ್ಲಾ ಯೋಜನಾ ಕಛೇರಿ, ಹುಬ್ಬಳ್ಳಿ ಇವರನ್ನು ಮೊಬೈಲ್ ಸಂಖ್ಯೆ: 9663123396 ಅಥವಾ ಕಾರ್ಯಪಾಲಕ ಅಭಿಯಂತರರು, ಕಂದಾಯ ಅಧಿಕಾರಿಗಳು ಹಂಚಿಕೆ ಶಾಖೆ ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: 080–22273511 ext.335/309, ಅಲ್ಲದೇ ಹೆಚ್ಚಿನ ಮಾಹಿತಿಗಾಗಿ ಅಂತರಜಾಲ https://www.khb.karnataka.gov.in ಅನ್ನು ಸಂಪರ್ಕಿಸುವುದು.

ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/CP/2378/Zenkar/2022-23

❦ ಸುಭಾಷಿತ ❦
ಕಟಿಬದ್ಧರಾಗಿದ್ದು ಶ್ರಮವಹಿಸಿ ದುಡಿದರೆ ಪ್ರತಿಯೊಬ್ಬರ ಕನಸೂ ನನಸಾಗಲು ಸಾಧ್ಯ.
-ಸೆರೆನಾ ವಿಲಿಯಮ್ಸ್

ವಿ.ವಿಗಳ ಶೈಕ್ಷಣಿಕ ಗುಣಮಟ್ಟ ಪಾತಾಳಕ್ಕೆ ಭಗೀರಥ ಸ್ಪರ್ಶ ಬೇಕು ಕಾಯಕಲ್ಪಕ್ಕೆ

ಶೈಕ್ಷಣಿಕ ಚಟುವಟಿಕೆಗಳು ಹಾಗೂ ಸೃಜನಶೀಲ ಕಲಾಭಿವ್ಯಕ್ತಿಯ ಗಂಗೋತ್ರಿಗಳ ರೂಪದಲ್ಲಿ ಜನಮನ್ನಣೆ ಪಡೆಯಬೇಕಾದ ವಿಶ್ವವಿದ್ಯಾಲಯಗಳು ಭ್ರಷ್ಟಾಚಾರ ಹಾಗೂ ಹಗರಣಗಳ ಮೂಲಕವೇ ಹೆಚ್ಚು ಚರ್ಚೆಯಲ್ಲಿವೆ. ಸಾಮಾಜಿಕ ಸೌಹಾರ್ದಕ್ಕೆ ಪೂರಕವಾದ ಸಂವಾದಗಳಿಗೆ ವೇದಿಕೆಯಾಗುವ ಬದಲು ಅನಾರೋಗ್ಯಕರ ಸಂಘರ್ಷಗಳ ತಾಣವಾಗುತ್ತಿವೆ. ಈ ಹಿನ್ನೆಲೆಯಲ್ಲಿ, ಶೈಕ್ಷಣಿಕ ವಾತಾವರಣ ಕ್ಷೀಣಗೊಂಡು, ವಿಶ್ವವಿದ್ಯಾಲಯಗಳ ಶೈಕ್ಷಣಿಕ ಗುಣಮಟ್ಟ ಕುಸಿದಿರುವುದರ ಬಗ್ಗೆ ವಿಧಾನಸಭೆಯಲ್ಲಿ ಶಾಸಕರು ಪಕ್ಷಾತೀತವಾಗಿ ಧ್ವನಿ ಎತ್ತಿರುವುದು ಸ್ವಾಗತಾರ್ಹ. ವಿಶ್ವವಿದ್ಯಾಲಯಗಳಲ್ಲಿನ ಅವ್ಯವಸ್ಥೆಯ ಬಗ್ಗೆ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿದ್ದ ವರದಿಗಳು ವಿಧಾನಸಭೆಯಲ್ಲೂ ಪ್ರತಿಧ್ವನಿಸುವ ಮೂಲಕ, ಉನ್ನತ ಶಿಕ್ಷಣ ಕ್ಷೇತ್ರದ ಅವ್ಯವಸ್ಥೆ ಅಧಿಕೃತವಾಗಿ ಸರ್ಕಾರದ ಗಮನಕ್ಕೆ ಬಂದಂತಾಗಿದೆ. ಕುಲಪತಿ ಹುದ್ದೆ ₹ 5 ಕೋಟಿಯಿಂದ ₹ 10 ಕೋಟಿಗೆ ಬಿಕರಿಯಾಗುತ್ತಿದ್ದು, ಈಗ ಆ ಹುದ್ದೆಗಳಿಗೆ ಪಾವಿತ್ರ್ಯವೇ ಉಳಿದಿಲ್ಲ; ಸರ್ಕಾರದಲ್ಲಿ ಇರುವವರ ಕಾಲು ಹಿಡಿದು ಕುಲಪತಿ ಹುದ್ದೆಯನ್ನು ಖರೀದಿಸುವವರಿಂದ ವಿದ್ಯಾರ್ಥಿಗಳ ಹಿತಾಸಕ್ತಿ ರಕ್ಷಣೆ ಹೇಗೆ ಸಾಧ್ಯ ಎನ್ನುವ ಆತಂಕವೂ ವಿಧಾನಸಭೆಯಲ್ಲಿ ವ್ಯಕ್ತವಾಗಿದೆ. ನೇಮಕಾತಿ, ಬಡ್ತಿ, ಖರೀದಿ ಪ್ರಕ್ರಿಯೆಗಳಲ್ಲಿನ ಅಕ್ರಮಗಳ ಬಗ್ಗೆಯೂ ಚರ್ಚೆ ನಡೆದಿದೆ. ಅನುಭವ, ಅರ್ಹತೆ ಮತ್ತು ಯೋಗ್ಯತೆ ಇಲ್ಲದವರನ್ನು ನೇಮಿಸಿಕೊಳ್ಳಲಾಗುತ್ತಿದೆ. ಯುಜಿಸಿ ಸಂಬಳ ಪಡೆಯುವ ಬೋಧಕರು ವಾರಕ್ಕೆ ಒಂದೆರಡು ಗಂಟೆಯಷ್ಟೇ ಬೋಧಿಸುತ್ತಿದ್ದಾರೆ ಮತ್ತು ನಕಲು ಮಾಡಲು ಅವಕಾಶ ಕಲ್ಪಿಸಿ ಸ್ನಾತಕೋತ್ತರ ಪದವಿ ಹಾಗೂ ಪಿಎಚ್.ಡಿ ಪದವಿ ನೀಡುವ ಪರಿಸ್ಥಿತಿಯಿದೆ ಎಂದು ಶಾಸಕರು ಕಳವಳ ವ್ಯಕ್ತಪಡಿಸಿದ್ದಾರೆ.

ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ವಿಶ್ವವಿದ್ಯಾಲಯಗಳನ್ನು ಸಬಲಗೊಳಿಸುವುದು ಸರ್ಕಾರದ ಆದ್ಯತೆ ಆಗಬೇಕೇ ವಿನಾ ವಿಶ್ವವಿದ್ಯಾಲಯಗಳ ಸಂಖ್ಯೆ ಹೆಚ್ಚಿಸುವುದಲ್ಲ

ವಿಶ್ವವಿದ್ಯಾಲಯಗಳ ವ್ಯವಸ್ಥೆ ಸರಿಯಿಲ್ಲ ಎನ್ನುವುದು ತಡವಾಗಿಯಾದರೂ ಶಾಸಕರಿಗೆ ಅರ್ಥವಾದಂತಿದ್ದು, ತಮ್ಮ ಆತಂಕವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಶಾಸಕರ ಮಾತುಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಹಾಗೂ ವಿಶ್ವವಿದ್ಯಾಲಯಗಳಲ್ಲಿನ ಅವ್ಯವಸ್ಥೆಯನ್ನು ಸರಿಪಡಿಸಲು ಎಲ್ಲ ಪ್ರಯತ್ನ ನಡೆಸಬೇಕಾಗಿದೆ. ವಿಶ್ವವಿದ್ಯಾಲಯ ಕಾಯ್ದೆ ರೂಪುಗೊಂಡು 22 ವರ್ಷಗಳಾಗಿದ್ದು, ರಾಜ್ಯದ ವಿಶ್ವವಿದ್ಯಾಲಯಗಳಿಗೆ ಕಾಯಕಲ್ಪ ನೀಡಲು ಹೊಸ ಕಾನೂನು ತರಲಾಗುವುದು ಎಂದು ಉನ್ನತ ಶಿಕ್ಷಣ ಸಚಿವರು ಹೇಳಿದ್ದಾರೆ. ವಿಶ್ವವಿದ್ಯಾಲಯಗಳ ಸುಧಾರಣೆಗೆ ಆಸ್ಪದ ಕಲ್ಪಿಸುವ ಹೊಸ ಕಾನೂನನ್ನು ಜಾರಿಗೊಳಿಸುವುದು ಅಗತ್ಯ. ಆದರೆ, ಸರ್ಕಾರಿ ಮತ್ತು ಖಾಸಗಿ ವಿಶ್ವವಿದ್ಯಾಲಯಗಳಿಗೂ ಅನ್ವಯಗೊಳ್ಳುವ ಉದ್ದೇಶಿತ ಕಾಯ್ದೆಯನ್ನು ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಸವಾಲುಗಳಿಗೆ ಪರಿಹಾರದ ರೂಪದಲ್ಲಿ ಸಚಿವರು ಬಿಂಬಿಸುತ್ತಿರುವುದು ಪ್ರಶ್ನಾರ್ಹ. ಪ್ರಸ್ತುತ ವಿಶ್ವವಿದ್ಯಾಲಯಗಳ ಅವ್ಯವಸ್ಥೆಗೆ ಸಂಬಂಧಿಸಿದಂತೆ ಸರ್ಕಾರದ ನಿರ್ಲಕ್ಷ್ಯ ಎದ್ದುಕಾಣುತ್ತಿದೆಯೇ ಹೊರತು ಕಾನೂನಿನಲ್ಲಿ ಇರಬಹುದಾದ ಲೋಪಗಳಲ್ಲ. ವಿಶ್ವವಿದ್ಯಾಲಯಗಳನ್ನು ಶೈಕ್ಷಣಿಕ ಚೌಕಟ್ಟಿನಲ್ಲಿ ನೋಡುವ ಬದಲು, ರಾಜಕಾರಣದ ಅಖಾಡಗಳಂತೆ ನೋಡುವುದರಲ್ಲಿ ಸಮಸ್ಯೆಯ ಮೂಲ ಅಡಗಿದೆ. ವಿದ್ಯಾರ್ಥಿಗಳ ವ್ಯಕ್ತಿತ್ವದೊಂದಿಗೆ ವೈಚಾರಿಕ ಪ್ರಜ್ಞೆ ಮತ್ತು ನೈತಿಕತೆಯನ್ನು ಕಸಿ ಮಾಡಬೇಕಾದ ವಿದ್ಯಾಸಂಸ್ಥೆಗಳು ದುಡ್ಡು ಮಾಡಲು ಅವಕಾಶವಿರುವ ಹುಲ್ಲುಗಾವಲುಗಳಾಗಿ ರೂಪುಗೊಂಡಿರುವುದರಲ್ಲಿ ರಾಜಕಾರಣಿಗಳ ಪಾತ್ರ ದೊಡ್ಡದಾಗಿಯೇ ಇದೆ.

ವಿಶ್ವವಿದ್ಯಾಲಯಗಳ ಗುಣಮಟ್ಟದ ಚರ್ಚೆಯ ನಡುವೆಯೂ ಏಳು ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಮಸೂದೆಗೆ ವಿಧಾನಸಭೆ ಒಪ್ಪಿಗೆ ನೀಡಿದೆ. ಬೀದರ್, ಹಾವೇರಿ, ಕೊಡಗು, ಚಾಮರಾಜನಗರ, ಹಾಸನ, ಕೊಪ್ಪಳ ಮತ್ತು ಬಾಗಲಕೋಟೆ ವಿಶ್ವವಿದ್ಯಾಲಯಗಳ ಸ್ಥಾಪನೆಗಾಗಿ 'ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ತಿದ್ದುಪಡಿ ಮಸೂದೆ- 2022'ಕ್ಕೆ ವಿಧಾನಸಭೆಯಲ್ಲಿ ಅಂಗೀಕಾರ ದೊರೆತಿದೆ. ಇದರಿಂದ ವಿದ್ಯಾರ್ಥಿಗಳ ಸಬಲೀಕರಣವಾಗಲಿದ್ದು, ಮುಂಬರುವ ದಿನಗಳಲ್ಲಿ ಬೇರೆ ಜಿಲ್ಲೆಗಳಲ್ಲೂ ವಿಶ್ವವಿದ್ಯಾಲಯ ಸ್ಥಾಪಿಸಲಾಗುವುದು ಎಂದು ಸರ್ಕಾರ ಹೇಳಿದೆ. ಜಿಲ್ಲೆಗೊಂದು ವಿಶ್ವವಿದ್ಯಾಲಯ ಎನ್ನುವ ಪರಿಕಲ್ಪನೆ ಚೆನ್ನಾಗಿದೆಯಾದರೂ, ಅದರ ಸಾಧಕ ಬಾಧಕಗಳ ಕುರಿತು ಸರ್ಕಾರ ಗಂಭೀರವಾಗಿ ಚಿಂತಿಸಿದಂತಿಲ್ಲ. ಒಂದಷ್ಟು ಜನರಿಗೆ ಅಧಿಕಾರ ಕೇಂದ್ರಗಳನ್ನು ಒದಗಿಸಿಕೊಡುವ ಕಾರಣಕ್ಕಾಗಿ ಹೊಸ ವಿಶ್ವವಿದ್ಯಾಲಯಗಳನ್ನು ಸೃಷ್ಟಿಸಲಾಗುತ್ತಿದೆ ಎನ್ನುವುದಕ್ಕೆ ಮೂಲ ಸೌಕರ್ಯಗಳ ಕೊರತೆಯಿಂದ ಬಳಲುತ್ತಿರುವ ವಿಶ್ವವಿದ್ಯಾಲಯಗಳು ನಿದರ್ಶನದಂತಿವೆ. ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವಲ್ಲಿ ತೋರುವ ಉತ್ಸಾಹವು ಮೂಲ ಸೌಕರ್ಯಗಳನ್ನು ರೂಪಿಸಿಕೊಡುವಲ್ಲಿ ಸರ್ಕಾರಕ್ಕೆ ಇರುವಂತೆ ಕಾಣುತ್ತಿಲ್ಲ. ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ವಿಶ್ವವಿದ್ಯಾಲಯಗಳಲ್ಲಿ ನಿವೃತ್ತರಿಂದ ತೆರವಾದ ಸ್ಥಾನಗಳನ್ನು ತಕ್ಷಣ ತುಂಬುವುದೂ ಇಲ್ಲ. ಹಾಗಾಗಿ, ಕಾಯಂ ಬೋಧಕರ ಅನುಪಸ್ಥಿತಿಯಲ್ಲಿಯೇ ವಿದ್ಯಾರ್ಥಿಗಳು ಶೈಕ್ಷಣಿಕ ವರ್ಷವನ್ನು ಮುಗಿಸಬೇಕಾದ ಸ್ಥಿತಿ ಕೆಲವು ವಿಶ್ವವಿದ್ಯಾಲಯಗಳಲ್ಲಿದೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿಗೆ ಮೊದಲು ತೆರೆದುಕೊಂಡ ರಾಜ್ಯ ಕರ್ನಾಟಕ. ಅದರಿಂದ ಉನ್ನತ ಶಿಕ್ಷಣ ಕ್ಷೇತ್ರದಲ್ಲೇನಾದರೂ ಸುಧಾರಣೆಯಾಗಿದೆಯೇ ಎಂದು ನೋಡಿದರೆ ನಿರಾಶೆ ಕಟ್ಟಿಟ್ಟ ಬುತ್ತಿ. ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ವಿಶ್ವವಿದ್ಯಾಲಯಗಳನ್ನು ಸಬಲಗೊಳಿಸುವುದು ಸರ್ಕಾರದ ಆದ್ಯತೆ ಆಗಬೇಕೇ ಹೊರತು, ವಿಶ್ವವಿದ್ಯಾಲಯಗಳ ಸಂಖ್ಯೆ ಹೆಚ್ಚಿಸುವುದಲ್ಲ.

ದಿನದ ಟ್ವೀಟ್

ಛಾಪು ಒತ್ತಿದ ನಾಯಕ

ನಿಜವಾದ 'ಕೆಲಸಗಾರ' ಪ್ರಧಾನಿಗೆ ಜನ್ಮದಿನದ ಶುಭಾಶಯ: ಅಬ್ಬರವಿಲ್ಲದೆ, ದಣಿವರಿಯದೆ ಪಾಂಡಿತ್ಯ ಮತ್ತು ಘನತೆಯೊಂದಿಗೆ ಕೆಲಸ ಮಾಡಿದವರು. ತಮ್ಮ ಕುಟುಂಬವನ್ನು ಎಂದಿಗೂ ಪ್ರಚಾರಕ್ಕೆ ತರದವರು. ತಪ್ಪುಗಳಲ್ಲಿ ತಮ್ಮ ಪಾಲು ಇದ್ದರೂ ಸಾರ್ವಜನಿಕ ಜೀವನದಲ್ಲಿ ಸಭ್ಯತೆ ಕಾಯ್ದುಕೊಂಡವರು. 'ನವ' ಭಾರತವನ್ನು ನಿರ್ಮಿಸುವಲ್ಲಿ 1991 ಒಂದು ತಿರುವಿನ ಘಟ್ಟವಾಗಿಯೇ ಉಳಿಯುತ್ತದೆ. ಧನ್ಯವಾದಗಳು ಡಾ. ಸಿಂಗ್! #Manmohansingh

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ

ಅಶೋಕ್ ಗೆಹಲೋತ್- ಕಾಯ್ದುನೋಡಿ, ಸಚಿನ್ ಪೈಲಟ್- ಕಾಯ್ದುನೋಡಿ, ಬಂಡಾಯ ಶಾಸಕರು- ಕಾಯ್ದುನೋಡಿ, ಹೈಕಮಾಂಡ್- ಕಾಯ್ದುನೋಡಿ, ರಾಜಸ್ಥಾನ ವಿರೋಧ ಪಕ್ಷ- ಕಾಯ್ದುನೋಡಿ, ರಾಜಸ್ಥಾನದ ಜನ- ಇಂದಿನಿಂದ ಗರ್ಬಾ– ದಾಂಡಿಯಾ ನೃತ್ಯ ಶುರು! #RajasthanCM#RajasthanCongressCrisis

ಶಿವಾಂಗಿ ಠಾಕೂರ್, ಪತ್ರಕರ್ತೆ

25 ವರ್ಷಗಳ ಹಿಂದೆ
ಶನಿವಾರ, 27-9-1997

• ಇಂಡೊನೇಷ್ಯಾ ವಿಮಾನ ದುರಂತ 234 ಪ್ರಯಾಣಿಕರ ಸಾವು

ಜಕಾರ್ತ, ಸೆ. 26 (ಎಪಿ, ಎಎಫ್‌ಪಿ)– ಇಂಡೊನೇಷ್ಯಾದ ಉತ್ತರಕ್ಕಿರುವ ಸುಮಾತ್ರಾ ದ್ವೀಪದಲ್ಲಿ ಇಂದು ಸಂಭವಿಸಿದ ಭೀಕರ ವಿಮಾನ ದುರಂತದಲ್ಲಿ ಚಾಲಕ ವರ್ಗದ 12 ಮಂದಿ ಸೇರಿದಂತೆ ಎಲ್ಲ 234 ಪ್ರಯಾಣಿಕರು ಮೃತಪಟ್ಟಿದ್ದಾರೆ. ಪೊಲೊನಿಯಾ ನಿಲ್ದಾಣದಲ್ಲಿ ಇಳಿಯುವಾಗ ಭಾರಿ ಕಾಳ್ಗಿಚ್ಚಿನಿಂದ ಆವರಿಸಿದ್ದ ದಟ್ಟ ಹೊಗೆಯಿಂದಾಗಿ ಮರಕ್ಕೆ ಅಪ್ಪಳಿಸಿ ಸ್ಫೋಟಗೊಂಡಿತು ಎಂದು ತಿಳಿದುಬಂದಿದೆ.

• ಬೆಂಗಳೂರು ವಿಜ್ಞಾನಿ ಡಾ. ಎ. ಶ್ರೀಕೃಷ್ಣಗೆ ಭಟ್ನಾಗರ್ ಪ್ರಶಸ್ತಿ

ನವದೆಹಲಿ, ಸೆ. 26 (ಪಿಟಿಐ)– ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್ ಇಂದು ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿಯನ್ನು ವಿಜ್ಞಾನದ ಐದು ಕ್ಷೇತ್ರಗಳಿಗೆ ಪ್ರಕಟಿಸಿದ್ದು, ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಡಾ. ಎ. ಶ್ರೀಕೃಷ್ಣ ಹಾಗೂ ಕೋಲ್ಕತ್ತದ ಕಂಕನ್ ಭಟ್ಟಾಚಾರ್ಯ ಅವರಿಗೆ ರಾಸಾಯನಿಕ ವಿಜ್ಞಾನದಲ್ಲಿ ಪ್ರಶಸ್ತಿ ದೊರೆತಿದೆ.

50 ವರ್ಷಗಳ ಹಿಂದೆ
ಬುಧವಾರ, 27-9-1972

• 'ಕರ್ನಾಟಕ' ಹೆಸರಿಗೆ ಕೇಂದ್ರದ ಒಪ್ಪಿಗೆ

ನವದೆಹಲಿ, ಸೆ. 26– ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಪುನರ್ ನಾಮಕರಣ ಮಾಡಬೇಕೆಂಬ ಬೇಡಿಕೆಗೆ ಕೇಂದ್ರ ಸಂಪುಟ ಇಂದು ಒಪ್ಪಿಗೆ ನೀಡಿತೆಂದು ತಿಳಿದುಬಂದಿದೆ.

ಹೆಸರನ್ನು ಬದಲಾಯಿಸುವುದಕ್ಕೆ ಸಂಬಂಧಿಸಿದ ವಿಧೇಯಕವೊಂದನ್ನು ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲಾಗುವುದು.

ಕೇಂದ್ರ ಸಂಪುಟವು ಇಲ್ಲಿ ಇಂದು ಈ ನಿರ್ಧಾರವನ್ನು ಕೈಗೊಂಡಿತು.

ಕರ್ನಾಟಕ ಎಂದು ರಾಜ್ಯದ ಹೆಸರು ಬದಲಾಯಿಸಲು ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಪಡಿಸುವ ನಿರ್ಣಯವೊಂದನ್ನು ಮೈಸೂರು ವಿಧಾನಸಭೆ ಇತ್ತೀಚೆಗೆ ಅಂಗೀಕರಿಸಿತ್ತು.

• ಕಾವೇರಿ ಜಲವಿವಾದ: ವಿವರಗಳ ಸಂಗ್ರಹಕ್ಕೆ ಇನ್ನೂ 3 ತಿಂಗಳು ಕಾಲಾವಕಾಶ ನೀಡಿಕೆ

ನವದೆಹಲಿ, ಸೆ. 26– 'ಸ್ವಾತಂತ್ರ್ಯದ ರಜತೋತ್ಸವ ವರ್ಷದಲ್ಲೇ ಅಂತರರಾಜ್ಯ ನದಿ ನೀರು ವಿವಾದಗಳನ್ನು ಬಗೆಹರಿಸಲು ಕೇಂದ್ರ ನೀರಾವರಿ ಮತ್ತು ವಿದ್ಯುಚ್ಛಕ್ತಿ ಸಚಿವ ಶಾಖೆ ಸಕಲ ಪ್ರಯತ್ನಗಳನ್ನೂ ನಡೆಸಿದೆ.

ಪರಸ್ಪರ ಚರ್ಚೆ ಮೂಲಕ ವಿವಾದಗಳನ್ನು ಇತ್ಯರ್ಥಪಡಿಸಿಕೊಳ್ಳುವಂತೆ ಸಂಬಂಧಪಟ್ಟ ರಾಜ್ಯಗಳನ್ನು ಒತ್ತಾಯಪಡಿಸಲು ಪ್ರಧಾನಮಂತ್ರಿ ಇಂದಿರಾ ಗಾಂಧಿ ಮತ್ತು ನೀರಾವರಿ ಸಚಿವ ಕೆ.ಎಲ್. ರಾವ್ ಅವರು ಅಗತ್ಯವಾದ ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ ಎಂದು ನೀರಾವರಿ ಸಚಿವ ಶಾಖೆ ವಕ್ತಾರರು ತಿಳಿಸಿದ್ದಾರೆ.

ಮಾಹಿತಿ ಆಯೋಗದ ಬಗ್ಗೆ ಸಾರ್ವಜನಿಕರಲ್ಲಿ ಅವಿಶ್ವಾಸ, ಅನುಮಾನ ಏಕೆ?

ಕಳೆಗುಂದಿದ ಮಾಹಿತಿ ಹಕ್ಕು

ವಿಶ್ಲೇಷಣೆ

ವೈ.ಜಿ.ಮುರಳೀಧರನ್

ಪ್ರತಿವರ್ಷ ಸೆಪ್ಟೆಂಬರ್ 28ನೆಯ ತಾರೀಕನ್ನು 'ಅಂತರರಾಷ್ಟ್ರೀಯ ಮಾಹಿತಿ ದಿನ'ವನ್ನಾಗಿ ಆಚರಿಸಬೇಕೆಂಬ ನಿರ್ಣಯವನ್ನು ಯುನೆಸ್ಕೊ 2015ರಲ್ಲಿ ಕೈಗೊಂಡಿತು. ಇದಕ್ಕೂ ಮುನ್ನ ಬಲ್ಗೇರಿಯಾ, ದಕ್ಷಿಣ ಆಫ್ರಿಕಾದಂತಹ ಕೆಲವು ರಾಷ್ಟ್ರಗಳಲ್ಲಿ 2002ರಿಂದ ಈ ದಿನವನ್ನು 'ರೈಟ್ ಟು ನೊ ಡೆ' (Right to know day) ಎಂದು ಕೆಲವು ಸಂಸ್ಥೆಗಳು ಆಚರಿಸು ತ್ತಿದ್ದವು. ಸರ್ಕಾರದ ಬಳಿ ಇರುವ ಮಾಹಿತಿ ಸಾರ್ವಜನಿಕ ರಿಗೆ ಸುಲಭವಾಗಿ ದೊರೆಯುವಂತೆ ಕ್ರಮ ಕೈಗೊಳ್ಳಲು ಸರ್ಕಾರವನ್ನು ಒತ್ತಾಯಿಸುವುದೇ ಈ ದಿನಾಚರಣೆಯ ಮುಖ್ಯ ಉದ್ದೇಶ.

ಸಾರ್ವಜನಿಕರ ಒತ್ತಾಯ ಮತ್ತು ಹೋರಾಟದ ಫಲವಾಗಿ 17 ವರ್ಷಗಳ ಹಿಂದೆ ನಮ್ಮ ಕೇಂದ್ರ ಸರ್ಕಾರವು ಮಾಹಿತಿ ಹಕ್ಕು ಕಾಯ್ದೆ ಜಾರಿಗೊಳಿಸಿತು. ಆರಂಭಿಕ ವರ್ಷಗಳಲ್ಲಿ ನಾಗರಿಕರು ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ಅರ್ಜಿ ಸಲ್ಲಿಸುವ ಮೂಲಕ ಸಾರ್ವಜನಿಕ ಪ್ರಾಧಿಕಾರದ ಮೇಲೆ ಒತ್ತಡ ತಂದು ಆಡಳಿತದಲ್ಲಿ ಪಾರದರ್ಶಕತೆಗೆ ಕಾರಣರಾಗಿದ್ದರು. ಸರ್ಕಾರದ ಕಾರ್ಯವೈಖರಿ, ಸಾರ್ವಜನಿಕ ಹಣದ ದುರುಪಯೋಗ, ಯೋಜನೆಗಳ ಅನುಷ್ಠಾನದಲ್ಲಿ ಲೋಪದೋಷದಂತಹ ಸಂಗತಿಗಳ ಬಗ್ಗೆ ಮಾಹಿತಿ ಪಡೆದು ಸರ್ಕಾರದ ಮತ್ತು ಸಾರ್ವಜನಿಕರ ಗಮನ ಸೆಳೆಯುತ್ತಿದ್ದರು. ಮಾಹಿತಿ ಹಕ್ಕು ಕಾಯ್ದೆಯ ಕಾರಣದಿಂದಾಗಿ ಭ್ರಷ್ಟಾಚಾರದ ಅನೇಕ ಪ್ರಕರಣಗಳು ಹೊರಬಂದಿದ್ದವು. ಕೇಂದ್ರ ಮತ್ತು ರಾಜ್ಯ ಮಾಹಿತಿ ಆಯೋಗಗಳು ಸಹ ದಕ್ಷವಾಗಿ ಕಾರ್ಯನಿರ್ವಹಿಸುತ್ತಿದ್ದವು. ಮಾಹಿತಿ ಬಯಸಿ ಸಾರ್ವಜನಿಕರಿಂದ ಅರ್ಜಿಗಳ ಮಹಾಪೂರವೇ ಬರುತ್ತಿತ್ತು.

ಆದರೆ ಕಳೆದ ಐದಾರು ವರ್ಷಗಳಿಂದ ಮಾಹಿತಿ ಹಕ್ಕಿನ ಬಗ್ಗೆ, ವಿಶೇಷವಾಗಿ ಕಾಯ್ದೆಯ ಅನುಷ್ಠಾನದ ಜವಾಬ್ದಾರಿ ಹೊತ್ತಿರುವ ಮಾಹಿತಿ ಆಯೋಗದ ಬಗ್ಗೆ ಸಾರ್ವಜನಿಕರಲ್ಲಿ ಅವಿಶ್ವಾಸ, ಅನುಮಾನ ಮತ್ತು ಜುಗುಪ್ಸೆ ವ್ಯಕ್ತವಾಗುತ್ತಿದೆ. ಮಾಹಿತಿ ಆಯೋಗಗಳ ಅವಶ್ಯಕತೆ ಇದೆಯೇ ಎಂಬ ಪ್ರಶ್ನೆ ಕೇಳಿಬರುತ್ತಿದೆ. ಈ ಅಪಾಯಕಾರಿ ಬೆಳವಣಿಗೆಗೆ ಮುಖ್ಯ ಕಾರಣ ಸರ್ಕಾರ ಹಾಗೂ ಮಾಹಿತಿ ಆಯೋಗದ ಕಾರ್ಯವೈಖರಿ.

ಕಾಯ್ದೆಯ ಯಶಸ್ಸು ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು ಮಾಹಿತಿ ಆಯುಕ್ತರನ್ನು ಅವಲಂಬಿಸಿದೆ. ಆದರೆ, ಮಾಹಿತಿ ಹಕ್ಕು ಕಾಯ್ದೆಯ ಅನುಷ್ಠಾನಕ್ಕೆ ಅಧಿಕಾರಿಗಳನ್ನು ನೇಮಕ ಮಾಡಿದ್ದರೂ ಕಚೇರಿಯ ಪ್ರಥಮ ದರ್ಜೆ ಸಹಾಯಕ, ಕೇಸ್‌ವರ್ಕರ್ ಹುದ್ದೆಯಲ್ಲಿರುವವರೇ ಎಲ್ಲವನ್ನೂ ನೋಡಿಕೊಳ್ಳುತ್ತಿದ್ದಾರೆ. ಹಲವು ಸಂದರ್ಭಗಳಲ್ಲಿ ಮೇಲ್ಮನವಿ ವಿಚಾರಣೆಯಲ್ಲಿ ಸಹ ಮಾಹಿತಿ ಅಧಿಕಾರಿಗಳು ಭಾಗವಹಿಸುತ್ತಿಲ್ಲ.

ಕಾಯ್ದೆಯ ಪ್ರಕಾರ, ಸಾರ್ವಜನಿಕ ಪ್ರಾಧಿಕಾರವು ಕೆಲವು ಮಾಹಿತಿಯನ್ನು ಒಳಗೊಂಡ ಕೈಪಿಡಿಯನ್ನು ತನ್ನ ವೆಬ್‌ಸೈಟ್‌ನಲ್ಲಿ ಸ್ವಯಂಪ್ರೇರಿತವಾಗಿ ಅಳವಡಿಸಬೇಕು ಹಾಗೂ ಪ್ರಕಟಿಸಬೇಕು. ಸಾರ್ವಜನಿಕ ಪ್ರಾಧಿಕಾರಗಳು ಇದನ್ನು ಮಾಡಿದ್ದರೆ ಮಾಹಿತಿ ಹಕ್ಕು ಇವತ್ತಿನ ದುಃಸ್ಥಿತಿಗೆ ಬರುತ್ತಿರಲಿಲ್ಲ. ಕೆಲವು ಇಲಾಖೆಗಳು ಕೈಪಿಡಿ ಪ್ರಕಟಿಸಿದ್ದರೂ ಅದನ್ನು ನವೀಕರಿಸಿಲ್ಲ. ಮಾಹಿತಿ ಹಕ್ಕು ಜಾರಿಗೆ ಬಂದ ಹೊಸದರಲ್ಲಿ ಸಿದ್ಧಪಡಿಸಿದ್ದ ಕೈಪಿಡಿಯನ್ನೇ ಈಗಲೂ ವೆಬ್‌ಸೈಟ್‌ನಲ್ಲಿ ಕಾಣಬಹುದು. ಅದರಲ್ಲಿ ನಮೂದಿಸಿರುವ ಅಧಿಕಾರಿಗಳ ಪೈಕಿ ಅನೇಕರು ನಿವೃತ್ತಿ ಹೊಂದಿದ್ದಾರೆ, ಬೇರೊಂದು ಇಲಾಖೆಗೆ ವರ್ಗವಾಗಿದ್ದಾರೆ, ಅಂಕಿ ಅಂಶಗಳು ಬದಲಾಗಿವೆ. ಇದಾವುದನ್ನೂ ಪರಿಷ್ಕರಿಸಿಲ್ಲ. ಉದಾಹರಣೆಗೆ, ಕರ್ನಾಟಕ ಕಾನೂನು ಮಾಪನಶಾಸ್ತ್ರ ಇಲಾಖೆಯ ವೆಬ್‌ಸೈಟ್‌ನಲ್ಲಿ ಈ ಕೈಪಿಡಿ ಇಲ್ಲ. ಅಧಿಕಾರಿಗಳ ವಿವರವಷ್ಟೇ ಇದೆ. ಸಾರಿಗೆ ಇಲಾಖೆಯ ಕೈಪಿಡಿ ಒಂದು ವರ್ಷ ಹಳೆಯದು. ಆಹಾರ ಇಲಾಖೆಯ ವೆಬ್‌ಸೈಟ್‌ನಲ್ಲಿರುವ ಕೈಪಿಡಿಯು 2011ನೇ ವರ್ಷಕ್ಕೆ ಸಂಬಂಧಿಸಿದ್ದು. ಆಹಾರ ಭದ್ರತಾ ಆಯೋಗದ ವೆಬ್‌ಸೈಟ್ ಇಲ್ಲ. ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಮಾಹಿತಿ ಹಕ್ಕಿಗೆ ಸಂಬಂಧಿಸಿದ ಕೊಂಡಿ ಇದ್ದರೂ ಅದನ್ನು ಕ್ಲಿಕ್ ಮಾಡಿದರೆ ಯಾವುದೇ ಮಾಹಿತಿ ದೊರೆಯುವುದಿಲ್ಲ.

ಕರ್ನಾಟಕ ಮಾಹಿತಿ ಆಯೋಗ ಸ್ಥಾಪನೆಯಾದದ್ದು 2006- 07ರಲ್ಲಿ. ರಾಜ್ಯ ಸರ್ಕಾರವು ಆಯೋಗಕ್ಕೆ ಬೇಕಾದ ಎಲ್ಲ ಸೌಲಭ್ಯಗಳನ್ನೂ ನೀಡಿದೆ. ಪ್ರತಿವರ್ಷ ಆಯೋಗಕ್ಕೆ ಬೇಕಾದ ಹಣ ಬಿಡುಗಡೆ ಮಾಡುತ್ತಿದೆ. ಆಯೋಗಕ್ಕೆ ಸ್ವತಂತ್ರ ಕಟ್ಟಡ ನಿರ್ಮಿಸಿಕೊಟ್ಟಿದೆ. ಆಯೋಗದ ವಾರ್ಷಿಕ ಖರ್ಚು ಸುಮಾರು ₹ 5 ಕೋಟಿ. ಇಷ್ಟೆಲ್ಲಾ ಸೌಲಭ್ಯ ಇದ್ದರೂ ಆಯೋಗದ ಕಾರ್ಯವೈಖರಿ ಬಗ್ಗೆ ಅಸಮಾಧಾನ ವ್ಯಕ್ತವಾಗಿದೆ. ಕಾಯ್ದೆಯ ಪ್ರಕಾರ, ಮಾಹಿತಿ ಹಕ್ಕಿನ ಅನುಷ್ಠಾನದ ಬಗ್ಗೆ ವಾರ್ಷಿಕ ವರದಿ ಸಿದ್ಧಪಡಿಸುವುದು ಆಯೋಗದ ಜವಾಬ್ದಾರಿ. ಅಲ್ಲದೆ ವರದಿಯನ್ನು ಆದಷ್ಟು ಶೀಘ್ರವಾಗಿ ಸದನದಲ್ಲಿ ಮಂಡಿಸಬೇಕು. ಕರ್ನಾಟಕ ಮಾಹಿತಿ ಆಯೋಗದ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಇತ್ತೀಚಿನ ವಾರ್ಷಿಕ ವರದಿಯು 2016-17ಕ್ಕೆ ಸಂಬಂಧಿಸಿದ್ದು. ಆರು ವರ್ಷಗಳಿಂದ ವಾರ್ಷಿಕ ವರದಿ ಬಾಕಿ ಉಳಿದಿದೆ. ಮಾಹಿತಿ ಹಕ್ಕು ಅರ್ಜಿಯ ಸ್ವೀಕೃತಿ, ವಿಲೇವಾರಿ ಬಗ್ಗೆ ಇತ್ತೀಚಿನ ಮಾಹಿತಿ ಲಭ್ಯವಿಲ್ಲ. ಮಾಹಿತಿ ಆಯುಕ್ತರ ನೇಮಕಾತಿಯಲ್ಲೂ ಅಪಸ್ವರ ಕೇಳಿಬಂದಿದೆ. ಮಾಹಿತಿ ಹಕ್ಕು ಅರ್ಜಿ ವಿಲೇವಾರಿಯ ವಿಷಯದಲ್ಲೂ ಆಯೋಗ ಹಿಂದೆ ಉಳಿದಿದೆ. ಮಾಹಿತಿ ಹಕ್ಕು ಕಾರ್ಯಕರ್ತರೊಬ್ಬರು ಹೇಳುವ ಪ್ರಕಾರ, ಮಾರ್ಚ್ 2022ರ ಅಂತ್ಯದಲ್ಲಿ ಸುಮಾರು 20,000 ಅರ್ಜಿಗಳು ಬಾಕಿ ಇದ್ದವು.

ಮಾಹಿತಿ ಹಕ್ಕಿನ ಇವತ್ತಿನ ಸ್ಥಿತಿಗೆ ಅರ್ಜಿದಾರರೂ ಸ್ವಲ್ಪಮಟ್ಟಿಗೆ ಕಾರಣ. ಸಾರ್ವಜನಿಕರಿಗೆ ಉಪಯುಕ್ತವಾದ ಮಾಹಿತಿಯನ್ನು ಸುಲಭವಾಗಿ ಪಡೆದುಕೊಳ್ಳುವುದಕ್ಕಾಗಿ ಕಾಯ್ದೆ ಜಾರಿಗೊಳಿಸಲಾಗಿದೆ. ಮಾಹಿತಿ ಪಡೆಯುವ ಮೂಲಕ ಸರ್ಕಾರದ ಸೇವಾ ಗುಣಮಟ್ಟ ಹೆಚ್ಚಿಸುವುದು, ಅಧಿಕಾರಿಗಳಲ್ಲಿ ಉತ್ತರದಾಯಿತ್ವ ಉಂಟುಮಾಡುವಂತಹ ವಿಷಯಗಳಿಗೆ ಮಾಹಿತಿ ಹಕ್ಕು ಉಪಯೋಗಿಸಬಹುದು. ಕೆಲವು ವೈಯಕ್ತಿಕ ಕುಂದುಕೊರತೆಗಳ ಬಗ್ಗೆ ಮಾಹಿತಿ ಪಡೆಯುವುದಕ್ಕೂ ಅವಕಾಶವಿದೆ. ಆದರೆ ಈ 17 ವರ್ಷಗಳಲ್ಲಿ ಮಾಹಿತಿ ಹಕ್ಕನ್ನು ಈ ರೀತಿಯ ಉದ್ದೇಶಕ್ಕೆ ಬಳಸಿರುವುದು ಕಡಿಮೆ. ಸರ್ಕಾರಿ ಅಧಿಕಾರಿಗಳ ಮೇಲಿನ ದ್ವೇಷಕ್ಕಾಗಿ ಮಾಹಿತಿ ಹಕ್ಕನ್ನು ಬಳಸುವುದು ಕಂಡುಬಂದಿದೆ.

ಸರ್ಕಾರಿ ಅಧಿಕಾರಿ ಕೆಲಸಕ್ಕೆ ಸೇರಿದಾಗಿನಿಂದ ಈವರೆಗೆ ಎಲ್ಲೆಲ್ಲಿ ಕೆಲಸ ಮಾಡಿದರು, ಸಂಬಳ ಎಷ್ಟಿತ್ತು, ಈಗ ಎಷ್ಟಿದೆ, ಅಧಿಕಾರಿಗೆ ನೀಡಿದ ನೇಮಕಾತಿ ಪತ್ರ, ವರ್ಗಾವಣೆ ಪತ್ರ, ರಜೆ ಚೀಟಿಯ ಪ್ರತಿ ಹೀಗೆ ಹತ್ತಾರು ಮಾಹಿತಿ ಕೇಳುವುದು ಕಂಡುಬಂದಿದೆ. ಅಧಿಕಾರಿಯ ಹೆಂಡತಿ ಅಥವಾ ಗಂಡ ಮತ್ತು ಮಕ್ಕಳ ವಿವರ, ವಿಳಾಸ ಕೇಳಿರುವುದೂ ಇದೆ. ಕೆಲವು ಪ್ರಕರಣಗಳಲ್ಲಿ ಈ ರೀತಿ ಮಾಹಿತಿಗೆ ಅವಕಾಶವಿಲ್ಲ ಎಂದು ಆಯೋಗ ಮತ್ತು ನ್ಯಾಯಾಲಯ ತೀರ್ಪು ನೀಡಿದ್ದರೂ ಪದೇಪದೇ ಅರ್ಜಿಗಳು ಸಲ್ಲಿಕೆಯಾಗುತ್ತಿವೆ. ನಾಗರಿಕರು ಮಾಹಿತಿ ಹಕ್ಕು ಕಾಯ್ದೆಯ ಇತಿಮಿತಿಗಳನ್ನು ಅರ್ಥಮಾಡಿಕೊಂಡು ಅದನ್ನು ಮೇಲ್‌ಸ್ತರಕ್ಕೆ ಕೊಂಡೊಯ್ಯುವುದು ಅವಶ್ಯ.

ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಬಹಳಷ್ಟು ವಿಚಾರ ವಿನಿಮಯ ನಡೆದಿದೆ. ಸರ್ಕಾರ ನೇಮಕ ಮಾಡಿದ ಸಮಿತಿ ಹಾಗೂ ಸರ್ಕಾರೇತರ ಸಂಸ್ಥೆಗಳು ನಡೆಸಿರುವ ಅಧ್ಯಯನ ಆಧರಿಸಿ ಕೆಲವೊಂದು ಸೂಚನೆಗಳನ್ನು ನೀಡಲಾಗಿದೆ. ಕೈಪಿಡಿಯನ್ನು ವರ್ಷಕ್ಕೊಮ್ಮೆಯಾದರೂ ನವೀಕರಿಸುವುದು, ಸಾರ್ವಜನಿಕರು ಅರ್ಜಿ ಸಲ್ಲಿಸಲು ಎಲ್ಲ ಅನುಕೂಲ ಮಾಡಿಕೊಡುವುದು, ಮಾಹಿತಿ ಅಧಿಕಾರಿಯ ನೇಮಕ, ಅರ್ಜಿಗಳಿಗೆ ನಿಗದಿತ ವಾಯ್ದೆಯಲ್ಲಿ ಉತ್ತರಿಸುವಂತಹ ಕ್ರಮ ಕೈಗೊಳ್ಳಬೇಕಾಗುತ್ತದೆ. ಮಾಹಿತಿ ನೀಡಲು ವಿನಾಕಾರಣ ವಿಳಂಬ ಮಾಡಿದ ಅಧಿಕಾರಿಗಳಿಗೆ ದಂಡ ವಿಧಿಸುವುದು, ವೆಬ್‌ಸೈಟ್ ಉತ್ತಮಪಡಿಸುವುದು, ಅಗತ್ಯ ಸಂಖ್ಯೆಯಲ್ಲಿ ಮಾಹಿತಿ ಅಧಿಕಾರಿಗಳನ್ನು ನೇಮಕ ಮಾಡುವಂತೆ ಸರ್ಕಾರಕ್ಕೆ ಸೂಚಿಸುವಂತಹ ಕ್ರಮ ಕೈಗೊಳ್ಳಬೇಕಿದೆ.

ಆಯೋಗಕ್ಕೆ ಹಣ ಬಿಡುಗಡೆ ಮಾಡಿ ತನ್ನ ಜವಾಬ್ದಾರಿ ಮುಗಿಯಿತು ಎಂದು ರಾಜ್ಯ ಸರ್ಕಾರ ಸುಮ್ಮನೆ ಕುಳಿತುಕೊಳ್ಳಲು ಸಾಧ್ಯವಿಲ್ಲ. ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರದಲ್ಲಿ 'ಟ್ರಾನ್ಸ್‌ಪರೆನ್ಸಿ ಆಫೀಸರ್' ನೇಮಕ ಮಾಡ ಬೇಕೆಂದು ಹಾಗೂ ಸಾರ್ವಜನಿಕ ಪ್ರಾಧಿಕಾರ ಪ್ರಕಟಿಸುವ ಸ್ವಯಂಪ್ರೇರಿತ ಕೈಪಿಡಿಯನ್ನು ಆಡಿಟ್ ಮಾಡಿಸಬೇಕೆಂಬ ಸಲಹೆಯನ್ನೂ ಕೇಂದ್ರ ಸರ್ಕಾರ ನೀಡಿದೆ. ಇವೆಲ್ಲವನ್ನೂ ಕೂಲಂಕಷವಾಗಿ ಚರ್ಚಿಸಿ ಸರ್ಕಾರಕ್ಕೆ ಸಲಹೆ ನೀಡಲು 'ಮಾಹಿತಿ ಹಕ್ಕು ಸಲಹಾ ಸಮಿತಿ' ರಚಿಸುವುದು ಸೂಕ್ತವೆಂದು ತೋರುತ್ತದೆ. ಮಾಹಿತಿ ಹಕ್ಕು ದಿನಾಚರಣೆಯ ಸಂದರ್ಭದಲ್ಲಿ ಸರ್ಕಾರ, ಆಯೋಗ, ನಾಗರಿಕರು ಇದರತ್ತ ಗಮನಹರಿಸಬೇಕಿದೆ.

ಲೇಖಕ: ಕೇಂದ್ರ ಗ್ರಾಹಕ ಸಂರಕ್ಷಣಾ ಪರಿಷತ್ತಿನ ಮಾಜಿ ಸದಸ್ಯ

ಚುರುಮುರಿ

ಚಿನ್ನದಂಥಾ ಮಾತು

• ಲಿಂಗರಾಜು ಡಿ.ಎಸ್.

'ಚಿನ್ನ ತಕ್ಕಬರುಮಾ ಅಂತ ಹೋಗಿದ್ದೋ ಕನೋ! ಅದಕ್ಕೆ ಲೇಟಾಯ್ತು' ಅಂದರು ತುರೇಮಣೆ.

'ಅಲ್ಲ ಸಾ, 'ಒಡವೆ ಚಿನ್ನ ತಗಂಡ್ರೆ ನಮ್ಮತಾವು ಮಾಡುಗೂಲಿ ಇಲ್ಲ, ತ್ಯಾಮಾನ ಅರ್ಧಕ್ಕರ್ಧ ಕೊಟ್ರೆ ಸಾಕು. ಈಗಲೇ ತಕ್ಕಬುಡಿ' ಅಂತ ಬೆಳಗಾನ ಪುಂಗ್ತರಲ್ಲಾ' ಅಂತ ಕೇಳಿದೆ.

'ಅಣ್ಣೈ, ನನಗೊಂದು ಅನುಮಾನ! 'ಮನೇಲಿ ಚಿನ್ನ ಯಾಕೆ ಮಡಿಕಂಡಿದೀರಾ? ನಮ್ಮತಾವೇ ಅಡ ಇಟ್ಟು ಸಾಲ ತಗಳಿ, ಇಲ್ಲಾ ಮಾರಿಬುಟ್ಟು ಮಸಾಲೆದೋಸೆ ತಿಂದುಕಳಿ' ಅಂತ ಸಿನಿಮಾದವು ಅಡ್ವೈಸು ಮಾಡ್ತವ್ರಲ್ಲಾ? ಇದೆಂಗೆ?' ಚಂದ್ರು ಗಾಬರಿ ಬಿದ್ದ.

'ಸಿನಿಮಾದವುಕ್ಕೆ ಕ್ಯಾಮೆ ಏನದ್ಲಾ? ಇಂತದ್ದೇ ಕುಡೀರಿ, ರಮ್ಮಿ ಆಡ್ರಿ, ಪಾನ್ ಮಸಾಲೆ ತಿನ್ರಿ ಅಂತ ಚಿತಾವಣೆ ಮಾಡ್ತವೆ!' ತುರೇಮಣೆ ಸಿಡಿದರು.

'ಅವುರು ದಬ್ಬಾಕಿದ್ದು ಅಷ್ಟರಗೇ ಅದೆ. ಬ್ಯಾರೇದೇನಾದ್ರೂ ಹೇಳಿ ಸಾ!' ಅಂತಂದೆ.

'ಅವುಕ್ಕೇನಾ ಲಂಗುಲಗಾಮಿಲ್ದೆ ಬತ್ತವೆ! ಸೇತುವೆ, ಫ್ಲೈ ಓವರುಗಳೆಲ್ಲಾ ಕಿಸ್ಕಂಡು ಬಿದ್ದೋಯ್ತಿದ್ರೆ ಬಿಬಿಎಂಪಿಗೆ ಖುಷಿಯಾಗ್ಯದಂತೆ. ಈಜಿಪುರದ ಮೇಲ್ಸೇತುವೆ ಈಜಿಯಾಗಿ ಮುಗೀತಿಲ್ಲ. ಬೆಂಗಳೂರು ರಸ್ತೆಗುಂಡಿ, ಟ್ರಾಫಿಕ್ ನಡಂತರದೇಲಿ ಮದುವೆ ಫೋಟೋಶೂಟ್- ಒಂದು ಲವ್ ಸ್ಟೋರಿ! ಕಾವೇರಿ ನದಿಗೆ ರಾಜಕಾಲುವೆ ಸಂಪರ್ಕ. ಭ್ರಷ್ಟಾಚಾರದ ಬಗ್ಗೆ ಚರ್ಚೆ ಮಾಡೋಣ ಬನ್ರಿ. ದಮ್ಮಿದೆಯಾ? ತಾಕತ್ತಿದೆಯಾ? ಭ್ರಷ್ಟಾಚಾರ ಮಾಡದೆ ಬದುಕೋದು ಸುಲಭಲ್ಲ. ವಿದ್ಯುತ್ ದರ ಮತ್ತೆ ಏರಿಕೆ. ಕಾಲುವೆ-ಕೆರೆ ಒತ್ತುವರಿ ತೆರವು ಕಾರ್ಯಾಚರಣೆ ನಿರಂತರ. ಪ್ರಭಾವಿಗಳನ್ನೂ ಬಿಡುವುದಿಲ್ಲ. ಕೇಂದ್ರದಿಂದ 14,000 ಕೋಟಿ ಜಿಎಸ್‌ಟಿ ಬಾಕಿ. ಅದಾನಿ ಸಂಪತ್ತು ವರ್ಷಕ್ಕೆ 5.88 ಲಕ್ಷ ಕೋಟಿಯಂಗೆ ಏರಿ ಐದು ವರ್ಷದೇಲಿ ಹದಿನೈದು ಪಟ್ಟಾಗ್ಯದೆ' ಅಂದ್ರು ತುರೇಮಣೆ.

'ಗಿಲೀಟಿನ ಮಾತು ಸಾಕು. ಒಂದೇ ಒಂದು ಚಿನ್ನದಂಥಾ ಮಾತು ಹಂಗನ್ನಿ ಸಾ' ಅಂತಂದೆ.

'ನ ಖಾವೂಂಗ ನಾ ಖಾನೇ ದೂಂಗ' ಅಂತಂದ್ರು.

ಈ ಮಾತು ಕೇಳಿದ ಯಂಟಪ್ಪಣ್ಣ ಪಿಳಿಪಿಳಿ ಕಣ್‌ಬಿಡೋದಾ!

ಸಂಗತ

ಮಕ್ಕಳನ್ನು ದಂಡಿಸುವ ಮುನ್ನ...

ಮಕ್ಕಳನ್ನು ದೈಹಿಕವಾಗಿ ದಂಡಿಸುವುದರಿಂದ ನಮ್ಮೊಳಗಿನ ಸಿಟ್ಟು ತಣಿಯಬಹುದು, ಆದರೆ ಅವರಲ್ಲಿ ಅಗತ್ಯ ಬದಲಾವಣೆ ತರಲು ಅದು ನೆರವಾಗದು

• ಡಾ. ಎಚ್.ಬಿ.ಚಂದ್ರಶೇಖರ್

ಪ್ರಾಂಶುಪಾಲರು ತನ್ನ ಕೆನ್ನೆಗೆ ಹೊಡೆದರು ಎಂಬ ಕಾರಣಕ್ಕಾಗಿ ಉತ್ತರಪ್ರದೇಶದ ಶಾಲೆಯೊಂದರ 12ನೇ ತರಗತಿಯ ವಿದ್ಯಾರ್ಥಿಯು ಪ್ರಾಂಶುಪಾಲರ ಮೇಲೆ ಗುಂಡು ಹಾರಿಸಿದ ಕುರಿತಾದ ಸುದ್ದಿಯು (ಪ್ರ.ವಾ., ಸೆ. 25) ಪೋಷಕರು ಹಾಗೂ ಶಿಕ್ಷಣ ವಲಯದಲ್ಲಿ ತಲ್ಲಣ ಸೃಷ್ಟಿಸಿದೆ. ದೈಹಿಕವಾಗಿ ದಂಡಿಸುವ ಮೂಲಕ ವಿದ್ಯಾರ್ಥಿಗಳನ್ನು ಶಿಸ್ತಿಗೊಳಪಡಿಸುವುದು ತಪ್ಪೇ ಎಂಬ ಚರ್ಚೆಯು ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ.

ಪ್ರಾಂಶುಪಾಲರ ಮೇಲೆ ಗುಂಡು ಹಾರಿಸಿದ ವಿದ್ಯಾರ್ಥಿಯು ಈ ಹಿಂದೆಯೂ ಅನೇಕ ತೀವ್ರ ಅಶಿಸ್ತಿನ ವರ್ತನೆಗಳನ್ನು ತೋರಿದ್ದ ಎನ್ನಲಾಗಿದೆ. ತೀವ್ರ ಅಶಿಸ್ತನ್ನು ತೋರುವ ಇಂತಹ ವಿದ್ಯಾರ್ಥಿಗಳನ್ನು ಶಿಸ್ತಿಗೆ ಒಳಪಡಿಸಲು ದಂಡಿಸುವ ವಿಧಾನವು ಉಪಯೋಗಕ್ಕೆ ಬಾರದು. ಉತ್ತರಪ್ರದೇಶದ ಘಟನೆಯಂತೆ ಕೆಲವು ಸಲ ದಂಡಿಸುವವರಿಗೇ ತೀವ್ರ ಅಪಾಯ ತಂದೊಡ್ಡುತ್ತದೆ.

ಮಕ್ಕಳನ್ನು ದಂಡಿಸದಿದ್ದಲ್ಲಿ ಅವರ ಪುಂಡಾಟಕ್ಕೆ ಕೊನೆ ಹೇಗೆ ಎಂದು ಅನೇಕರು ಅದನ್ನು ಸಮರ್ಥಿಸುತ್ತಾರೆ. ಆದರೆ ಸರಿದಾರಿಗೆ ತರಲು ವಿದ್ಯಾರ್ಥಿಯ ಕೆನ್ನೆಗೆ ಒಂದು ಏಟು ಕೊಟ್ಟ ಪ್ರಾಂಶುಪಾಲರು ಸಾವು–ಬದುಕಿನ ನಡುವೆ ಆಸ್ಪತ್ರೆಯಲ್ಲಿದ್ದರೆ, ಗುರುವಿಗೇ ಗುಂಡು ಹೊಡೆದ ಪುಂಡ ಹುಡುಗ ತಲೆ ತಪ್ಪಿಸಿಕೊಂಡು ತಿರುಗುತ್ತಿದ್ದಾನೆ. ಪೊಲೀಸರು ಪತ್ತೆಹಚ್ಚಿದ ನಂತರ ಬಾಲಕ ಪುನರ್ವಸತಿ ಕೇಂದ್ರದ ಪಾಲಾಗುವುದು ಖಚಿತ. ಇಲ್ಲಿ ದಂಡಿಸಿದ್ದರಿಂದಾದ ಪ್ರಯೋಜನವೇನು ಎಂಬ ಪ್ರಶ್ನೆ ಮೂಡದೇ ಇರದು.

ಮಕ್ಕಳನ್ನು ದಂಡಿಸುವ ಮೂಲಕ ನಮ್ಮೊಳಗಿನ ಸಿಟ್ಟು, ಆಕ್ರೋಶಗಳು ತಣಿಯಬಹುದು. ತಾತ್ಕಾಲಿಕ ಸಮಾಧಾನ ಸಿಗಬಹುದು. ಆದರೆ ದಂಡನೆಯು ಮಕ್ಕಳಲ್ಲಿ ಅಗತ್ಯ ಬದಲಾವಣೆ ತರುವಲ್ಲಿ ಸಹಾಯಕವಾಗದು. ತನ್ನ ಓರಗೆಯ ಸ್ನೇಹಿತರು, ಸಹಪಾಠಿಗಳ ಎದುರು ಹೊಡೆಯುವುದು, ಮೂದಲಿಸುವುದು, ಹೀಯಾಳಿಸುವುದನ್ನು ಮಾಡಿದಲ್ಲಿ ಮಕ್ಕಳು ಸಹಜವಾಗಿ ಅವಮಾನಕ್ಕೆ ಒಳಗಾಗುತ್ತಾರೆ. ಕೌಟುಂಬಿಕ ಪ್ರೀತಿ, ಮನ್ನಣೆ, ಭರವಸೆಗಳು ದೊರೆಯದ ಹಿನ್ನೆಲೆಗಳಿಂದ ಬಂದ ಕೆಲವು ಮಕ್ಕಳು ತಮಗಾದ ಅವಮಾನಗಳಿಂದ 'ಗಾಯಗೊಂಡ ಹುಲಿ'ಗಳಂತಾಗಿ, ಅವಮಾನ ಮಾಡಿದವರು ಶಿಕ್ಷಕರು ಅಥವಾ ಪೋಷಕರು ಎಂಬುದನ್ನೂ ನೋಡದೆ ಅಪಾಯಕಾರಿ ಕೃತ್ಯಗಳಿಗೆ ಕೈಹಾಕುತ್ತಾರೆ.

ತಾವು ಚಿಕ್ಕ ವಯಸ್ಸಿನಲ್ಲಿ ದಂಡನೆಗೊಳಗಾದ ಕಾರಣದಿಂದಲೇ ಶಿಸ್ತಿನಿಂದ ಬೆಳೆದಿದ್ದೇವೆ ಎಂದು ಹೇಳುತ್ತಾ ಬೆತ್ತ ಬಳಸುವುದನ್ನು ಅನೇಕರು ಸಮರ್ಥಿಸಿಕೊಳ್ಳುತ್ತಾರೆ. ದಂಡಿಸದೇ ಮಕ್ಕಳನ್ನು ಸರಿದಾರಿಗೆ ತರುವ ಮನೋವೈಜ್ಞಾನಿಕ ವಿಧಾನಗಳ ಅರಿವು ಹೆಚ್ಚಿನವರಲ್ಲಿ ಇಲ್ಲದ ಕಾಲದಲ್ಲಿ ಮಕ್ಕಳನ್ನು ದೈಹಿಕವಾಗಿ ದಂಡಿಸುವುದು ಸಾಮಾನ್ಯ ಹಾಗೂ ಒಪ್ಪಿತ ವಿಧಾನವಾಗಿತ್ತು.

ಬದಲಾದ ಆಧುನಿಕ ಯುಗದಲ್ಲಿ ಮಕ್ಕಳು ತೀವ್ರ ರೀತಿಯ ಒತ್ತಡ, ಆತಂಕ, ಸಂಘರ್ಷಗಳನ್ನು ಎದುರಿಸುತ್ತಿದ್ದಾರೆ. ಅನಾಕರ್ಷಕ ಶಿಕ್ಷಣ, ಕುಟುಂಬದಲ್ಲಿ ಪೋಷಕರ ನಡುವಿನ ಕಲಹ, ಭಿನ್ನಾಭಿಪ್ರಾಯಗಳು, ಮಕ್ಕಳು ಕೇಳಿದ್ದನ್ನೆಲ್ಲಾ ಕ್ಷಣಮಾತ್ರದಲ್ಲಿ ಪೂರೈಸುವ ಪೋಷಕರ ಅತಿ ಎನಿಸುವಂತಹ ಕುರುಡುಪ್ರೀತಿ, ಮಾಧ್ಯಮಗಳ ಪ್ರಭಾವದಂತಹ ಅಂಶಗಳೂ ಮಕ್ಕಳ ಅಶಿಸ್ತಿಗೆ ಕಾರಣವಾಗುತ್ತವೆ.

ತಮ್ಮಲ್ಲಿ ಇರಬಹುದಾದ ಮಾನಸಿಕ ದೌರ್ಬಲ್ಯ, ಕೌಟುಂಬಿಕ ಒತ್ತಡಗಳನ್ನು ನಿರ್ವಹಣೆ ಮಾಡಲು ಅರಿಯದ ಕೆಲ ಶಿಕ್ಷಕರು ಮಕ್ಕಳಿಗೆ ದಂಡನೆ ನೀಡುವ ಮೂಲಕ ಸಮಾಧಾನ ಕಂಡುಕೊಳ್ಳುತ್ತಾರೆ. ಸಮರ್ಪಕ ಹಾಗೂ ಪರಿಣಾಮಕಾರಿ ಬೋಧನೆಯ ಮೂಲಕ ಮಕ್ಕಳನ್ನು ತೊಡಗಿಸಿಕೊಳ್ಳಲು ಸಮರ್ಥರಲ್ಲದ ಶಿಕ್ಷಕರು ಸುಲಭವಾಗಿ ದಂಡನೆಯ ಮೊರೆ ಹೋಗುತ್ತಾರೆ. ಮಕ್ಕಳನ್ನು ಮನೋವೈಜ್ಞಾನಿಕ ಹಿನ್ನೆಲೆಯಿಂದ ಅರ್ಥ ಮಾಡಿಕೊಂಡು, ಅವರೊಂದಿಗೆ ಒಡನಾಡುವ ಪ್ರಾಯೋಗಿಕ ಜ್ಞಾನ, ಅನುಭವಗಳ ಅಭಾವ ಸಹ ದಂಡಿಸುವಂತೆ ಮಾಡುವ ಸಾಧ್ಯತೆ ಇದೆ. ಚಿಕ್ಕಂದಿನಲ್ಲಿ ತಾವು ಬೆತ್ತದ ಏಟು ತಿಂದೇ ಶಿಕ್ಷಣ ಪಡೆದು ಶಿಕ್ಷಕರಾದವರು ಸಹ 'ದಂಡಿಸುವುದು ಪರಿಣಾಮಕಾರಿ' ಎಂದು ಭಾವಿಸುತ್ತಾರೆ.

ಮಕ್ಕಳ ಮಾತನ್ನು ಹೇಗೆ ಗಮನವಿಟ್ಟು ಕೇಳಿಸಿಕೊಳ್ಳಬೇಕು ಹಾಗೂ ಅವರಿಗೆ ಇಷ್ಟವಾಗುವಂತೆ ಶಾಲೆಯನ್ನು ಹೇಗೆ ರೂಪಿಸಬೇಕು ಎಂಬುದನ್ನು ನೈಜ ಕಥನವಾದ ಜಪಾನಿನ ಪ್ರಸಿದ್ಧ ಪುಸ್ತಕ 'ತೊತ್ತೊಚಾನ್' ಸುಂದರವಾಗಿ ವಿವರಿಸುತ್ತದೆ. ಯಾವಾಗಲೂ ಕೀಟಲೆ, ತುಂಟತನ ಮಾಡುತ್ತಿದ್ದ ತೊತ್ತೊಚಾನ್‌ಳ ಬಗ್ಗೆ ಶಾಲೆಯ ಮುಖ್ಯೋಪಾಧ್ಯಾಯರು ಒಂದು ದಿನವೂ ಅವಳ ತಂದೆತಾಯಿಗೆ ದೂರು ಕಳಿಸುವುದಿಲ್ಲ. ಬದಲಾಗಿ ತೊತ್ತೊಚಾನ್ ಕುರಿತು ಅವರು ಅವಕಾಶ ಸಿಕ್ಕಾಗಲೆಲ್ಲಾ 'ನೀನು ನಿಜವಾಗಿಯೂ ಒಳ್ಳೆಯ ಹುಡುಗಿ ಗೊತ್ತಾ?!' ಎಂದು ಹೇಳುತ್ತಿದ್ದರು. ತಾನು ಒಳ್ಳೆಯ ಹುಡುಗಿ ಎಂಬ ಭಾವನೆಯನ್ನು ಮುಖ್ಯೋಪಾಧ್ಯಾಯರು ಅವಳಲ್ಲಿ ಆಳವಾಗಿ ಬೇರೂರುವಂತೆ ಮಾಡಿದ್ದರು. ಈ ಮಾತು ಅವಳ ಇಡೀ ಬದುಕು ರೂಪುಗೊಳ್ಳಲು ಸಹಾಯಕವಾಗುತ್ತದೆ. ತೊತ್ತೊಚಾನ್‌ಳ ಶಾಲೆಯ ವಾತಾವರಣ, ಬಳಕೆಯಲ್ಲಿದ್ದ ಶಿಕ್ಷಣ ಪದ್ಧತಿಗಳು ಅವಳು ಒಳ್ಳೆಯವಳಾಗಲು ಪೂರಕವಾಗುತ್ತವೆ.

ಪೋಷಕರು, ಶಿಕ್ಷಕರು ಮಕ್ಕಳಿಗೆ ನೀಡಬಹುದಾದ ಪ್ರೀತಿ, ಬೆಂಬಲ, ಆಕರ್ಷಣೀಯ ಬೋಧನಾ ಪದ್ಧತಿ, ಮಕ್ಕಳಸ್ನೇಹಿ ಕೌಟುಂಬಿಕ ಶಾಲಾ ವಾತಾವರಣ ಹಾಗೂ ಮಕ್ಕಳನ್ನು ಬೆವರಿಳಿಸುವಂತೆ ತೊಡಗಿಸಿಕೊಳ್ಳುವ ಆಟೋಟ, ಕ್ರೀಡೆಗಳು, ಮನಸ್ಸನ್ನು ಮುದಗೊಳಿಸುವ ಕಲೆ, ಸಾಂಸ್ಕೃತಿಕ ಚಟುವಟಿಕೆಗಳು ಮಕ್ಕಳಲ್ಲಿ ಶಿಸ್ತು ಮೂಡಿಸುವಲ್ಲಿ ನೆರವಾಗುವ ಕೆಲ ಅಂಶಗಳಾಗಿವೆ.

ವಾಚಕರ ವಾಣಿ

ದಸರಾ ಉದ್ಘಾಟನೆ ಅರ್ಥಪೂರ್ಣ

ಈಗಿನ ಮೈಸೂರು ಪ್ರದೇಶವು ಹಿಂದೊಮ್ಮೆ ಅರಣ್ಯ ಪ್ರದೇಶವಾಗಿತ್ತು. ಅರಣ್ಯದಲ್ಲಿ ಕಾಡುಕೋಣ, ಕಾಡೆಮ್ಮೆ ಹೆಚ್ಚಾಗಿದ್ದದ್ದರಿಂದ ಇದು ಮಹಿಷ (ಕೋಣ) ಕಾಡು ಆಗಿತ್ತು. ಈ ಕಾಡಲ್ಲಿ ಚಾಮಿ ಎಂಬ ಮೂಲ ಜನಾಂಗದ ಮಹಿಳೆ ತನ್ನ ಮಕ್ಕಳೊಂದಿಗೆ ವಾಸವಾಗಿದ್ದಳು. ಒಮ್ಮೆ ಕಾಡುಕೋಣದಿಂದ ಮಕ್ಕಳನ್ನು ರಕ್ಷಿಸಬೇಕಾದ ಪ್ರಮೇಯ ಒದಗಿತು. ಆಗ ಅಸ್ತ್ರದಿಂದ ಕೋಣದ ಮುಂಡವನ್ನು ಛೇದಿಸಿ ಮಕ್ಕಳನ್ನು ಕಾಪಾಡಿದಳು. ಇದರಿಂದ ಚಾಮಿಯನ್ನು ಚಾಮುಂಡಿ ಎಂದು ಕರೆಯಲಾಗಿ, ಮುಂದೆ ಮಾತೃದೇವತೆಯಾಗಿ, ಚಾಮುಂಡೇಶ್ವರಿ ಆಗಿ, ಶಕ್ತಿದೇವತೆಯಾಗಿ, ಈಗ ನಾಡದೇವತೆಯಾಗಿ ಆಕೆ ಪ್ರಸಿದ್ಧಳಾಗಿದ್ದಾಳೆ. ಮಹಿಷ ಕಾಡು ಮಹಿಷ ಮಂಡಲವಾಗಿ, ಇಲ್ಲಿನ ಊರು ಮಹಿಷ ಊರು- ಈಗ ಮೈಸೂರು ಆಗಿದೆ.

ಇಲ್ಲಿ ಒಡೆಯರು ಈ ದೇವತೆಯನ್ನು ಮನೆದೇವತೆಯಾಗಿ ಸ್ವೀಕರಿಸಿ ಆಳಿದರು. ಹಾಗಾಗಿ ಚಾಮುಂಡೇಶ್ವರಿ ಆಗಿರುವ ಚಾಮಿಯು ಈ ಕಾಡಿನ ಬುಡಕಟ್ಟು ಜನಾಂಗಕ್ಕೆ ಸೇರಿದವಳು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರೂ ಬುಡಕಟ್ಟು ಜನಾಂಗಕ್ಕೆ ಸೇರಿದವರು. ಆದ್ದರಿಂದ ಮುರ್ಮು ಅವರು ಈ ಬಾರಿಯ ದಸರಾವನ್ನು ಇಲ್ಲಿನ ಬುಡಕಟ್ಟು ಮೂಲದ ಚಾಮಿ- ಚಾಮುಂಡೇಶ್ವರಿ ವಿಗ್ರಹಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿದ್ದು ವಿಶೇಷ ಹಾಗೂ ಅರ್ಥಪೂರ್ಣವಾಗಿದೆ.

ಸಿ.ಸಿದ್ದರಾಜು ಆಲಕೆರೆ, ಮಂಡ್ಯ

ಶರಣಾಗತಿ ಮನಃಸ್ಥಿತಿ ಸಲ್ಲದು

'...ದಂಡ ಕಟ್ಟಲು ಸಿದ್ಧ. ಆದರೆ, ದೇವರನ್ನು ಮುಟ್ಟಲು ದಲಿತರಿಗೆ ಅವಕಾಶ ಕೊಡಬೇಕು' ಎಂದು ಕೆಪಿಸಿಸಿ ಪರಿಶಿಷ್ಟ ಜಾತಿ ಘಟಕದ ಅಧ್ಯಕ್ಷ ಧರ್ಮಸೇನ ಅವರು ಹೇಳಿರುವುದು ವರದಿಯಾಗಿದೆ (ಪ್ರ.ವಾ., ಸೆ. 25). ಉಳ್ಳೇರಹಳ್ಳಿಯಲ್ಲಿ ಪರಿಶಿಷ್ಟ ಸಮುದಾಯದ ಬಾಲಕ, ದೇವರ ಗುಜ್ಜುಕೋಲು ಮುಟ್ಟಿದ ಕಾರಣಕ್ಕೆ ಹಲ್ಲೆಗೆ ಒಳಗಾಗಿದ್ದರಿಂದ ಈ ಮಾತು ಬಂದಿದೆ. 'ದಂಡ' ಪದದ ಅರ್ಥ ತಪ್ಪು ಮಾಡಿದವರಿಗೆ ಶಿಕ್ಷೆ ವಿಧಿಸುವುದು, ಜುಲ್ಮಾನೆ ಹಾಕುವುದು ಎಂದು. 'ನಾವು ತಪ್ಪು ಮಾಡುತ್ತೇವೆ. ಆ ತಪ್ಪಿಗೆ ನೀವು ನಮಗೆ ಶಿಕ್ಷೆ ವಿಧಿಸಿ, ಜುಲ್ಮಾನೆ ಹಾಕಿ' ಎಂದು ಹೇಳಿದಂತಾಯಿತು. ದಲಿತರು ಈ ರೀತಿಯ ಶರಣಾಗತಿ ಮನಃಸ್ಥಿತಿಯಿಂದ ಹೊರಬರಬೇಕಿದೆ.

'ದೇವರನ್ನು ಮುಟ್ಟಲು ನಾವೂ ಅರ್ಹರಾಗಿದ್ದೇವೆ. ಅದನ್ನು ನಿರಾಕರಿಸುವ ಹಕ್ಕು ನಿಮಗಿಲ್ಲ. ಮುಟ್ಟಿದರೆ ದಂಡ ವಿಧಿಸುವ ಅಧಿಕಾರವೂ ನಿಮಗಿಲ್ಲ' ಎಂದು ಹೇಳಿ, ದಂಡ ವಿಧಿಸಿದವರ ಅಧಿಕಾರ ವ್ಯಾಪ್ತಿಯ ಮಿತಿಯನ್ನು ಅವರಿಗೆ ನೆನಪಿಸಬೇಕಿದೆ. ದಲಿತರು ಸಮಾನತೆಗಾಗಿ, ಸಮಾನ ಹಕ್ಕುಗಳಿಗಾಗಿ ಆಗ್ರಹಿಸಬೇಕು ಮತ್ತು ಸಂಘಟಿತ ಹೋರಾಟ ಮಾಡಿ ಆ ಹಕ್ಕುಗಳನ್ನು ಪಡೆಯುವ ದಿಸೆಯಲ್ಲಿ ಪ್ರಯತ್ನಿಸಬೇಕು.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಬೇಕು ಉದ್ಯಮ ಪರಿಣತರಿಗೆ ಆದ್ಯತೆ

ವಿಶ್ವವಿದ್ಯಾಲಯಗಳಲ್ಲಿ ಉದ್ಯಮದ ಪರಿಣತರನ್ನು 'ಪ್ರೊಫೆಸರ್ ಆಫ್ ಪ್ರ್ಯಾಕ್ಟಿಸ್' ಎಂದು ನೇಮಕ ಮಾಡಿಕೊಳ್ಳುವ ವಿಚಾರದಲ್ಲಿ ಯುಜಿಸಿಯ ಆಶಯ ಹಾಗೂ ಪಿಎಚ್.ಡಿ ಪದವಿ ಇಲ್ಲದ ಉದ್ಯಮ ಪರಿಣತರಿಗೆ ಪ್ರಾಧ್ಯಾಪಕ ಪಟ್ಟ ನೀಡುವುದಕ್ಕೆ ಶೈಕ್ಷಣಿಕ ವಲಯದ ವಿರೋಧವಿರುವ ಬಗ್ಗೆ ಡಾ. ಎಚ್.ಆರ್.ಕೃಷ್ಣಮೂರ್ತಿ ಅವರು ವಿವರವಾಗಿ ತಿಳಿಸಿದ್ದಾರೆ (ಪ್ರ.ವಾ., ಸೆ. 24).

ಆದರೆ, ಉದ್ಯಮ ಪರಿಣತರ ತಿಳಿವಿಗೆ ಆಳವಿರುತ್ತದೆ, ಅಗಲ ಇರುವುದಿಲ್ಲ ಎನ್ನುವ ಶೈಕ್ಷಣಿಕ ವಲಯದ ವಾದ ಒಪ್ಪುವಂಥದ್ದಲ್ಲ. ಕೈಗಾರಿಕೆಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದಲ್ಲಿ ಹತ್ತಾರು ವರ್ಷಗಳ ಕಾಲ ತೊಡಗಿಸಿಕೊಂಡವರಿಗೆ ಬೋಧನೆಯ ಹಂಬಲವೂ ಇದ್ದರೆ ಜ್ಞಾನದ ಅಗಲ ಅನಾಯಾಸವಾಗಿ ಒದಗುತ್ತದೆ. ಉದ್ಯಮ ಕ್ಷೇತ್ರದ ಸಂಶೋಧನೆ ವಿಭಾಗದಲ್ಲಿ ಇಂತಿಷ್ಟು ವರ್ಷಗಳ ಕಾಲ ತೊಡಗಿಸಿಕೊಂಡ ಅಭ್ಯರ್ಥಿಗಳಿಗೆ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕ ಹುದ್ದೆ ನೇಮಕಾತಿಯಲ್ಲಿ ಆದ್ಯತೆ ಕೊಡುವುದರ ಬಗ್ಗೆ ಸರ್ಕಾರ ಚಿಂತನೆ ನಡೆಸಲಿ.

ಡಾ. ಜಿ.ಬೈರೇಗೌಡ, ಬೆಂಗಳೂರು

ಸಂಘಟಿತ ಪ್ರಯತ್ನದಿಂದ ಅಪಾಯಕ್ಕೆ ತಡೆ

ಕೆಲವು ದಿನಗಳಿಂದ ಹಳ್ಳಿಗಳಲ್ಲಿ ಮಕ್ಕಳ ಕಳ್ಳತನದ ವದಂತಿ ಹರಿದಾಡುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಮಕ್ಕಳ ಅಪಹರಣಕ್ಕೆ ಸಂಬಂಧಿಸಿದ ವಿಡಿಯೊಗಳು ಮತ್ತು ಆಡಿಯೊ ಕ್ಲಿಪ್‌ಗಳು ಗಾಳಿಸುದ್ದಿಗಳಿಗೆ ರೆಕ್ಕೆ ಮೂಡುವಂತೆ ಮಾಡಿವೆ.

ಮಕ್ಕಳು ಈ ಬಗೆಯ ದಂಧೆಗೆ ಬಲಿಯಾಗುವುದನ್ನು ತಪ್ಪಿಸಲು ಪೋಷಕರು ತಮ್ಮ ಮಗುವಿನಲ್ಲಿ ಅಪಾಯದ ಬಗ್ಗೆ ಅರಿವು ಮೂಡಿಸುವ ಅಗತ್ಯವಿದೆ. ಜನಸಾಮಾನ್ಯರಿಗೆ ಕಾನೂನಾತ್ಮಕ ಸಾಮಾಜಿಕ ಜವಾಬ್ದಾರಿಗಳ ಕುರಿತು ಜಾಗೃತಿಯನ್ನೂ ಮೂಡಿಸಬೇಕಾಗಿದೆ. ಸಂಘಟಿತ ಪ್ರಯತ್ನಗಳಿಂದ ಮಾತ್ರ ಅಪಹರಣದ ಅಪಾಯಗಳನ್ನು ನಾವು ಕೊನೆಗಾಣಿಸಲು ಸಾಧ್ಯ.

ಪ್ರವೀಣ ನಾಗಪ್ಪ ಯಲವಿಗಿ, ಹಾವೇರಿ

ತಪ್ಪಿತಸ್ಥರಲ್ಲಿ ನಾಚಿಕೆ ಮೂಡಿಸಿ

ದೇವರ ಗುಜ್ಜುಕೋಲು ಮುಟ್ಟಿದ್ದಕ್ಕೆ ಬಹಿಷ್ಕಾರ ಬೆದರಿಕೆಗಳನ್ನು ಎದುರಿಸುತ್ತಿರುವ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಉಳ್ಳೇರಹಳ್ಳಿಯ ಪ್ರಕರಣ ಸೇರಿದಂತೆ ಇಂಥ ಎಲ್ಲ ಅಸ್ಪೃಶ್ಯತೆಯ ಪ್ರಕರಣಗಳಲ್ಲಿ ತಪ್ಪಿತಸ್ಥರಾದವರ ಜಾತಿಯನ್ನು ನಿರ್ದಿಷ್ಟವಾಗಿ ಗುರುತಿಸಿ ವರದಿ ಮಾಡಬೇಕು. ಮೇಲ್ಜಾತಿ, ಸವರ್ಣೀಯರು ಇತ್ಯಾದಿ ಪದಗಳನ್ನು ಬಳಸುವುದು ಹೊಣೆಗೇಡಿತನ.

ಇಂಥ ಹೀನಕೃತ್ಯಗಳಲ್ಲಿ ಇಂತಹ ಜಾತಿಯವರು ಭಾಗಿಯಾಗಿದ್ದಾರೆ ಅನ್ನುವುದನ್ನು ಮುಲಾಜಿಲ್ಲದೆ ಹೇಳುವುದರ ಮೂಲಕ ಆಯಾಯ ಜಾತಿಯವರಲ್ಲಿ ನಾಚಿಕೆ ಮೂಡಿಸಬೇಕು. ಅದು ಯಾವುದೇ ಪತ್ರಿಕೆಯ ನೈತಿಕ ಹೊಣೆಗಾರಿಕೆಯೂ ಹೌದು.

ವಿಕ್ರಂ ಹತ್ವಾರ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜಾನುವಾರುಗಳಿಗೆ ಚರ್ಮಗಂಟು ರೋಗದ ಕಾಟ

‘ಮಾನವರಿಗೆ ಕೊರೊನಾವೈರಸ್ ಎಷ್ಟು ಅಪಾಯಕಾರಿಯೋ, ಜಾನುವಾರುಗಳಿಗೆ ಚರ್ಮಗಂಟು ರೋಗವು ಅಷ್ಟೇ ಅಪಾಯಕಾರಿ’ ಎಂದು ಕೇಂದ್ರ ಮೀನುಗಾರಿಕೆ ಮತ್ತು ಹೈನುಗಾರಿಕೆ ಸಚಿವ ಧರ್ಮಪಾಲ್ ಹೇಳಿದ್ದಾರೆ. ಈ ರೋಗದ ಭೀಕರತೆಯನ್ನು ಅವರ ಈ ಹೇಳಿಕೆ ಬಿಂಬಿಸುತ್ತದೆ. ದೇಶದ 16 ರಾಜ್ಯಗಳ 251 ಜಿಲ್ಲೆಗಳಿಗೆ ಹರಡಿರುವ ಚರ್ಮಗಂಟು ರೋಗವು ಈವರೆಗೆ 1 ಲಕ್ಷಕ್ಕಿಂತಲೂ ಹೆಚ್ಚು ಜಾನುವಾರುಗಳನ್ನು ಬಲಿತೆಗೆದುಕೊಂಡಿದೆ ಎಂದು ವರದಿಯಾಗಿದೆ. ಸೆಪ್ಟೆಂಬರ್ ಮೂರನೇ ವಾರದವರೆಗಿನ ದತ್ತಾಂಶಗಳು ಮಾತ್ರ ಲಭ್ಯವಿದ್ದು, ರೋಗ ಹರಡಿರುವ ಸ್ಥಿತಿಯ ಬಗ್ಗೆ ಪೂರ್ಣ ಚಿತ್ರಣ ಲಭ್ಯವಿಲ್ಲ. ಪ್ರತಿ ರಾಜ್ಯದಲ್ಲಿ ಎಷ್ಟು ಜಾನುವಾರುಗಳಿಗೆ ಈ ರೋಗ ಹರಡಿದೆ ಎಂಬುದರ ನಿಖರ ಮಾಹಿತಿ ಲಭ್ಯವಾಗಿಲ್ಲ

ಜಾನುವಾರುಗಳ ಜೀವಕ್ಕೆ ಕಂಟಕವಾಗಿರುವ ‘ಚರ್ಮಗಂಟು ರೋಗ’ (ಲಂಪಿ ಸ್ಕಿನ್ ಡಿಸೀಸ್) ದೇಶದಾದ್ಯಂತ ಹರಡುವ ಸೂಚನೆಗಳು ಕಾಣುತ್ತಿವೆ. ದನಗಳಲ್ಲಿ ಇದು ಕಾಣಿಸಿಕೊಂಡಿದೆ. ಕ್ಯಾಪ್ರಿಪಾಕ್ಸ್ ಎಂಬ ವೈರಾಣುವಿನ ಮೂಲಕ ಒಂದು ಜಾನುವಾರುವಿನಿಂದ ಮತ್ತೊಂದಕ್ಕೆ ಇದು ಹರಡುತ್ತದೆ. 2019ರಲ್ಲಿ ದೇಶದಲ್ಲಿ ಕಾಣಿಸಿಕೊಂಡ ಈ ರೋಗ ಇದೇ ಆಗಸ್ಟ್‌ನಿಂದ ವ್ಯಾಪಕವಾಗಿ ಹರಡಲು ಶುರು ಮಾಡಿತು. ಈಗ ಸಾವಿರಾರು ಜಾನುವಾರುಗಳನ್ನು ಬಲಿ ತೆಗೆದುಕೊಂಡಿದೆ. ಸೂಕ್ತ ಮುನ್ನೆಚ್ಚರಿಕೆ ಕ್ರಮಗಳು ಹಾಗೂ ಲಸಿಕೆಯಿಂದ ಈ ರೋಗವನ್ನು ತಡೆಗಟ್ಟಬಹುದಾಗಿದೆ.

16 ರಾಜ್ಯಗಳಿಗೆ ಹರಡಿದ ಸೋಂಕು



ಕರ್ನಾಟಕದ ಸ್ಥಿತಿ

ಕರ್ನಾಟಕದ ಹಾವೇರಿ, ಗದಗ, ಕೋಲಾರ ಮತ್ತು ಬೆಳಗಾವಿಯಲ್ಲಿ ಚರ್ಮ ಗಂಟು ರೋಗ ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಂಡಿದೆ. ಇತರ ಕೆಲವು ಜಿಲ್ಲೆಗಳಲ್ಲಿಯೂ ಕೆಲವು ಪ್ರಕರಣಗಳು ವರದಿಯಾಗಿವೆ. ಇಲ್ಲಿಯವರೆಗೆ ಐದು ಲಕ್ಷ ಡೋಸ್ ಲಸಿಕೆಗಳನ್ನು ಸರ್ಕಾರವು ಪೂರೈಸಿದೆ. ಅಕ್ಟೋಬರ್‌ನಲ್ಲಿ 25 ಲಕ್ಷ ಡೋಸ್ ಲಸಿಕೆ ಪೂರೈಸಲು ಸಿದ್ಧತೆ ನಡೆಸಲಾಗಿದೆ ಎಂದು ಪಶು ಸಂಗೋಪನಾ ಇಲಾಖೆಯು ಮಾಹಿತಿ ನೀಡಿದೆ. ಈವರೆಗೆ ಮೂರು ಸಾವಿರಕ್ಕೂ ಹೆಚ್ಚು ಜಾನುವಾರುಗಳಲ್ಲಿ ಈ ರೋಗ ದೃಢಪಟ್ಟಿದೆ. 20ಕ್ಕೂ ಹೆಚ್ಚು ಜಾನುವಾರುಗಳು ಮೃತಪಟ್ಟಿವೆ. ಜಾನುವಾರು ಸಾಗಾಟದ ಮೇಲೆ ಕಟ್ಟುನಿಟ್ಟಿನ ನಿಗಾ ಇರಿಸಲಾಗಿದೆ.

ಲಸಿಕೆ

ಚರ್ಮಗಂಟು ರೋಗದಿಂದ ಬಳಲುತ್ತಿರುವ ಜಾನುವಾರುಗಳಿಗೆ ಸೋಂಕು ತಡೆಗಟ್ಟಲು ಗೋಟ್‌ಪಾಕ್ಸ್ ಮತ್ತು ಶೀಪ್‌ಪಾಕ್ಸ್ ಲಸಿಕೆಯನ್ನು ಈಗ ನೀಡಲಾಗುತ್ತಿದೆ. ಈ ಲಸಿಕೆಗಳು ಚರ್ಮಗಂಟು ರೋಗವನ್ನು ಶೇಕಡ ನೂರರಷ್ಟು ತಡೆಯುತ್ತದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಇಲ್ಲಿವರೆಗೆ ಸುಮಾರು 1 ಕೋಟಿ ಜಾನುವಾರುಗಳಿಗೆ ಗೋಟ್‌ಪಾಕ್ಸ್ ಮತ್ತು ಶೀಪ್‌ಪಾಕ್ಸ್ ಲಸಿಕೆಗಳನ್ನು ನೀಡಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಚರ್ಮಗಂಟು ರೋಗವನ್ನು ತಡೆಯಲೆಂದೇ ಪ್ರತ್ಯೇಕ ಲಸಿಕೆಯನ್ನು ಹರಿಯಾಣದ ಹಿಸ್ಸಾರ್‌ನಲ್ಲಿರುವ ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ಅಭಿವೃದ್ಧಿಪಡಿಸಿದೆ. ಮಂಡಳಿಯ ನ್ಯಾಷನಲ್ ಯುನೀಕ್ ರಿಸರ್ಚ್ ಸೆಂಟರ್(ಎನ್‌ಇಆರ್‌ಸಿ) ಹಾಗೂ ಬರೇಲಿಯಲ್ಲಿರುವ ಭಾರತೀಯ ಪಶು ಸಂಶೋಧನಾ ಸಂಸ್ಥೆಯ (ಐವಿಆರ್‌ಐ) ಜಂಟಿ ಸಹಯೋಗದಲ್ಲಿ ‘ಲಂಪಿ ಪ್ರೊವ್ಯಾಕ್ ಇಂಡ್’ ಎಂಬ ಲಸಿಕೆಯನ್ನು ಅಭಿವೃದ್ಧಿಪಡಿಸಲಾಗಿದೆ. ಕೆಲವು ತಿಂಗಳಲ್ಲಿ ತಯಾರಿಕೆ ಶುರುವಾಗುವ ನಿರೀಕ್ಷೆಯಿದೆ. ಲಸಿಕೆ ತಯಾರಿಕೆಗೆ ಮೂರು ಸಂಸ್ಥೆಗಳು ಮುಂದೆ ಬಂದಿವೆ ಎಂದು ಸರ್ಕಾರ ಮಾಹಿತಿ ನೀಡಿದೆ. ದೇಶದಲ್ಲಿ ಸುಮಾರು 30 ಕೋಟಿ ಜಾನುವಾರುಗಳಿದ್ದು, ಹಂತಹಂತವಾಗಿ ಎಲ್ಲ ಜಾನುವಾರುಗಳನ್ನು ಲಸಿಕಾ ಕಾರ್ಯಕ್ರಮಕ್ಕೆ ಒಳಪಡಿಸಲು ಸರ್ಕಾರ ನಿರ್ಧರಿಸಿದೆ.

ಹರಡುವ ಬಗೆ



ರೋಗ ಲಕ್ಷಣ
- ಜ್ವರ, ಆಹಾರ ನಿರಾಕರಣೆ
- ಹಾಲಿನ ಇಳುವರಿ ಕಡಿಮೆ
- ದನಗಳ ಮೈಮೇಲೆ ಗಂಟುಗಳು ಕಾಣಿಸಿಕೊಳ್ಳುತ್ತವೆ; ಇವು ನಂತರ ಒಡೆದುಹೋಗುತ್ತವೆ

ಹಾಲು ಸುರಕ್ಷಿತ

ಚರ್ಮ ಗಂಟು ರೋಗವು ಪ್ರಾಣಿಗಳಿಂದ ಮನುಷ್ಯರಿಗೆ ಹರಡುವುದಿಲ್ಲ. ರೋಗ ಇರುವ ಹಸುವಿನ ಹಾಲು ಕುಡಿಯುವುದಕ್ಕೆ ಯಾವುದೇ ಅಡ್ಡಿ ಇಲ್ಲ. ಹಾಲನ್ನು ಕುದಿಸಿ ಕುಡಿಯಬಹುದು ಇಲ್ಲವೇ ಕುದಿಸದೆಯೂ ಕುಡಿಯಬಹುದು ಎಂದು ಭಾರತೀಯ ಪಶು ಸಂಶೋಧನಾ ಸಂಸ್ಥೆಯು ಹೇಳಿದೆ.

ಪರಿಣಾಮಗಳು

- ಒಂದರಿಂದ ಮತ್ತೊಂದಕ್ಕೆ ಹರಡುವ ಕಾರಣ, ಒಂದಿಡೀ ಪ್ರದೇಶದ ಜಾನುವಾರುಗಳಿಗೆ ಈ ರೋಗ ಹರಡುವ ಅಪಾಯ ಇರುತ್ತದೆ
- ರೋಗಪೀಡಿತ ಹಸು, ಎಮ್ಮೆಗಳ ಹಾಲಿನ ಇಳುವರಿ ಶೇ 40ರಷ್ಟು ಕಡಿಮೆಯಾಗುವ ಸಾಧ್ಯತೆಯಿದ್ದು, ಹಾಲಿನ ಉತ್ಪಾದನೆ ತಗ್ಗುತ್ತದೆ; ಹಾಲಿನ ಉಪ ಉತ್ಪನ್ನಗಳ ತಯಾರಿಕೆಗೂ ಹೊಡೆತ ಬೀಳುತ್ತದೆ
- ರೋಗಪೀಡಿತ ದನಗಳು ಮೃತಪಡುವ ಸಾಧ್ಯತೆಯಿದ್ದು, ದನದ ಮಾಂಸ ಉತ್ಪಾದನೆ ಕುಂಠಿತಗೊಳ್ಳುತ್ತದೆ
- ಚರ್ಮೋದ್ಯಮ ಹಾಗೂ ಜಾನುವಾರುಗಳನ್ನು ಒಳಗೊಳ್ಳುವ ಸಂಬಂಧಿತ ಉದ್ಯಮಗಳಲ್ಲಿ ನಷ್ಟ ಎದುರಾಗುವ ಸಾಧ್ಯತೆಯಿದೆ
- ಜಾನುವಾರುಗಳನ್ನು ಬಳಸಿ ಉಳುಮೆ ಮಾಡುವ ಹಾಗೂ ಹೈನುಗಾರಿಕೆ ಉದ್ಯಮದಲ್ಲಿ ತೊಡಗಿರುವ ರೈತರಿಗೆ ಆರ್ಥಿಕವಾಗಿ ಸಂಕಷ್ಟ ಎದುರಾಗುತ್ತದೆ
- ರೋಗಪೀಡಿತ ದನಗಳ ಆರೈಕೆ, ಲಸಿಕೆ, ಚೇತರಿಕೆಗೆ ಸಾಕಷ್ಟು ಹಣ ಹಾಗೂ ಸಮಯ ಬೇಕಾಗುತ್ತದೆ

ಆಧಾರ: ಪಿಟಿಐ, ಕೇಂದ್ರ ಮೀನುಗಾರಿಕೆ ಮತ್ತು ಹೈನುಗಾರಿಕೆ ಸಚಿವಾಲಯ, ವಿಶ್ವ ಆರೋಗ್ಯ ಸಂಸ್ಥೆ

ನಿಯಂತ್ರಣ ಹೇಗೆ?

- ರೋಗಪೀಡಿತ ಜಾನುವಾರುಗಳನ್ನು ಆರೋಗ್ಯವಂತ ಜಾನುವಾರುಗಳಿಂದ ತಕ್ಷಣ ಬೇರ್ಪಡಿಸಬೇಕು, ರೋಗಪೀಡಿತ ಜಾನುವಾರುಗಳಿಗೆ ಪಶುವೈದ್ಯರಿಂದ ಚಿಕಿತ್ಸೆ ಕೊಡಿಸಬೇಕು
- ಜಾನುವಾರು ಕೊಟ್ಟಿಗೆಗಳನ್ನು ಸ್ವಚ್ಛಗೊಳಿಸಬೇಕು, ಸೋಂಕು ನಿವಾರಕಗಳನ್ನು ಪಶು ವೈದ್ಯರ ಸಲಹೆಯಂತೆ ಸಿಂಪಡಿಸಬೇಕು
- ರೋಗಕ್ಕೆ ಚಿಕಿತ್ಸೆ ನೀಡುವುದರ ಜತೆಗೆ, ಖನಿಜಾಂಶವುಳ್ಳ ಔಷಧ, ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಔಷಧಗಳನ್ನು ನೀಡಬೇಕು. ಇದರಿಂದ ಜಾನುವಾರುಗಳು ನಿಶ್ಶಕ್ತವಾಗುವುದನ್ನು ತಪ್ಪಿಸಬಹುದು
- ಜಾನುವಾರು ಸಾವನ್ನಪ್ಪಿದರೆ ಅವುಗಳಿಗೆ ಸೋಂಕು ನಿವಾರಕ ಸಿಂಪಡಿಸಿ, ಆಳವಾದ ಗುಂಡಿ ತೋಡಿ ಹೂಳಬೇಕು
- ನಾಲ್ಕು ತಿಂಗಳಿಗಿಂತ ಹೆಚ್ಚು ವಯಸ್ಸಾದ ಎಲ್ಲ ಜಾನುವಾರುಗಳಿಗೆ ಚರ್ಮಗಂಟು ರೋಗ ತಡೆ ಲಸಿಕೆ ಹಾಕಬಹುದು

- ಸೋಂಕು ಕಾಣಿಸಿಕೊಂಡ ಊರಿನ ಸುತ್ತಲು ಐದು ಕಿ.ಮೀ. ವ್ಯಾಪ್ತಿಯಲ್ಲಿ ಲಸಿಕೆ ಅಭಿಯಾನ ನಡೆಸಿ ಸೋಂಕು ಹರಡುವುದನ್ನು ತಡೆಯಬಹುದು
- ಸೋಂಕು ಪೀಡಿತ ಪ್ರದೇಶದ ಜಾನುವಾರುಗಳನ್ನು ಸೋಂಕು ಇಲ್ಲದ ಪ್ರದೇಶಕ್ಕೆ ಒಯ್ಯಬಾರದು. ಸೋಂಕು ಇಲ್ಲದ ಪ್ರದೇಶದ ಜಾನುವಾರುಗಳನ್ನು ಸೋಂಕು ಇರುವ ಪ್ರದೇಶಕ್ಕೆ ಕರೆತರಬಾರದು
- ರೋಗಪೀಡಿತ ಜಾನುವಾರುಗಳ ಆರೈಕೆ ಮಾಡುತ್ತಿರುವವರು ಆರೋಗ್ಯವಂತ ಜಾನುವಾರುಗಳಿಂದ ದೂರ ಇರಬೇಕು. ರೋಗ ಇರುವ ಪ್ರದೇಶದ ಜನರು ರೋಗ ಇಲ್ಲದ ಕಡೆಗೆ ಹೋಗುವುದರ ಮೇಲೆ ನಿರ್ಬಂಧ ಹೇರಬೇಕು
- ರೋಗ ಕಾಣಿಸಿಕೊಂಡ ಪ್ರದೇಶದ ಸುತ್ತಲಿನ 10 ಕಿ.ಮೀ. ವ್ಯಾಪ್ತಿಯಲ್ಲಿ ನಡೆಯುವ ಜಾನುವಾರು ಸಂತೆಗಳನ್ನು ರದ್ದುಪಡಿಸಬೇಕು

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ: ಹೌದು 83% ಅಲ್ಲ 17%

ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಡಿಸೆಂಬರ್‌ನಲ್ಲೇ 150 ವಿಧಾನಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಣೆ ಮಾಡುತ್ತದೆ ಎನ್ನುವ ವಿಶ್ವಾಸ ಇದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 235

ಪಾರ್ವತಿಯ ದಹಿಸದ ಅಗ್ನಿ

ಶಿವನಿಲ್ಲದೆ ಈ ಜನ್ಮದಲ್ಲಿ ಜೀವಂತ ಇರಲಾರೆ ಎಂದು ಪಾರ್ವತಿ ಅಗ್ನಿಕುಂಡವನ್ನು ಪ್ರವೇಶಿಸಿಯೇ ಬಿಟ್ಟಳು. ಆದರೆ ಪಾರ್ವತಿ ಅಗ್ನಿಪ್ರವೇಶ ಮಾಡಿದರೂ ಅವಳ ತಪಃಪ್ರಭಾವದಿಂದ ಅಗ್ನಿಯು ದಹಿಸದೆ ಚಂದನದಂತೆ ಶೀತಲವಾಯಿತು.

ಉರಿಯುತ್ತಿದ್ದ ಬೆಂಕಿ ತಾನು ಪ್ರವೇಶಿಸುತ್ತಿದ ತಕ್ಷಣವೇ ತಣ್ಣಗಾಗಿದ್ದು ಕಂಡು ಪಾರ್ವತಿ ಆಶ್ಚರ್ಯಗೊಂಡಳು. ಸ್ವಲ್ಪಹೊತ್ತು ಅಗ್ನಿ ಕುಂಡದಲ್ಲೇ ನಿಂತು ತನ್ನನ್ನು ಅಗ್ನಿ ಸುಡದಿರಲು ಕಾರಣವೇನೆಂದು ಯೋಚಿಸಿದಳು. ಸರಿಯಾಗಿ ತಿಳಿಯಲಾಗದೆ ಅಗ್ನಿಕುಂಡದಿಂದ ಮೇಲೆ ಬಂದಳು. ಶಿವ ಕೇಳಿದ, ‘ಎಲೈ ಭದ್ರೇ, ನಿನ್ನ ತಪಸ್ಸು ಆಶ್ಚರ್ಯಕರವಾಗಿದೆ. ಹಾಗೇ ವಿಚಿತ್ರವೂ ಆಗಿದೆ. ನಿನ್ನ ಇಷ್ಟದಂತೆ ಶರೀರವು ಸುಟ್ಟುಹೋಗಲಿಲ್ಲ. ನೀ ಬಯಸಿದ ಸಿದ್ಧಿಯೂ ಸಿಗಲಿಲ್ಲ. ಹೀಗೇಕಾಯಿತೆಂಬ ವಿಚಾರವೇ ನನಗೆ ಸ್ಪಷ್ಟವಾಗಿ ತಿಳಿಯುತ್ತಿಲ್ಲ. ಆದುದರಿಂದ ನಿನ್ನ ಇಷ್ಟಾರ್ಥವನ್ನು ನನಗೆ ಸ್ಪಷ್ಟವಾಗಿ ಹೇಳು. ನಾವಿಬ್ಬರೂ ಈಗಾಗಲೇ ಬಹಳ ಹೊತ್ತು ಮುಕ್ತವಾಗಿ ಮಾತನಾಡಿದ್ದರಿಂದ ನಮ್ಮ ನಡುವೆ ಸ್ನೇಹ ನಿರ್ಮಾಣವಾಗಿದೆ. ಸ್ನೇಹಿತರಲ್ಲಿ ಯಾವ ವಿಚಾರವನ್ನು ಮುಚ್ಚಿಡಬಾರದು. ನೀನು ಯಾವ ವರವನ್ನು ಪಡೆಯಲು ಇಚ್ಛಿಸುವೆ? ಏಕೆಂದರೆ ನಿನ್ನಲ್ಲಿಯೇ ಎಲ್ಲಾ ಫಲಗಳೂ ಕಾಣಿಸುತ್ತಿವೆ. ಬೇರೆ ಫಲಕ್ಕಾಗಿ ತಪಸ್ಸು ಮಾಡುವುದೆಂದರೆ ಕೈಯಲ್ಲಿದ್ದ ರತ್ನವನ್ನು ಎಸೆದು, ಗಾಜನ್ನು ಬಯಸಿದಂಥ ಮೂರ್ಖತನವಾಗುತ್ತದೆ. ಆದುದರಿಂದ ಇಷ್ಟು ರಮಣೀಯವಾದ ನಿನ್ನ ಸೌಂದರ್ಯವನ್ನು ಏಕೆ ವ್ಯರ್ಥಮಾಡುತ್ತಿರುವೆ? ನಿನ್ನ ಮುಖ ಸೌಂದರ್ಯಕ್ಕೆ ಹೊಂದುವ ಸುಂದರವಾದ ವಸ್ತ್ರಗಳನ್ನು ಬಿಟ್ಟು, ಇಂಥ ನಾರುಮಡಿಯ ಚರ್ಮವನ್ನೇಕೆ ಧರಿಸಿರುವೆ? ಈ ನಿನ್ನ ತಪಸ್ಸಿಗೆ ನಿಜವಾದ ಕಾರಣವನ್ನು ಹೇಳು’ ಎಂದ.

ಹೀಗೆ ಶಿವ ಕೇಳಿದಾಗ, ಪಾರ್ವತಿಯು ಸಖಿಗೆ ತನ್ನ ವೃತ್ತಾಂತ ಹೇಳುವಂತೆ ಸೂಚಿಸಿದಳು. ಗಿರಿಜೆಗೆ ತುಂಬಾ ಆಪ್ತಳಾದ ವಿಜಯಾ ಎಂಬ ಸಖಿಯು ಶಿವನಿಗೆ ‘ಎಲೈ ಸಾಧುವೆ, ಈ ನನ್ನ ಗೆಳತಿ ಗಿರಿರಾಜನಾದ ಹಿಮವಂತನ ಮಗಳು. ಇವಳನ್ನು ತಾಯಿ ಮೇನಾದೇವಿಯೂ ಕಾಳೀ ಎಂದು ಕರೆಯುತ್ತಾಳೆ. ಇವಳಿಗಿನ್ನೂ ಮದುವೆಯಾಗಿಲ್ಲ. ಶಿವನನ್ನು ಹೊರತು ಇನ್ನಾರನ್ನೂ ಇವಳು ವರಿಸಲು ಇಚ್ಛಿಸುವುದಿಲ್ಲ. ಅದಕ್ಕಾಗಿ ಗಿರಿಜೆಯು ಮೂರು ಸಾವಿರ ವರ್ಷಗಳಿಂದ ತಪಸ್ಸು ಮಾಡುತ್ತಿದ್ದಾಳೆ. ಶಿವನಿಗಾಗಿಯೇ ತಾನು ಜನ್ಮ ತಾಳಿರುವುದಾಗಿ ಭಾವಿಸಿದ್ದಾಳೆ. ಪಾರ್ವತಿಯು ತಪೋವನದ ಅನೇಕ ಮರಗಳಿಗೆ ನೀರೆರೆದು ಬೆಳೆಸಿದಳು. ಅವೆಲ್ಲವೂ ಕೃತಜ್ಞತೆಯಾಗಿ ಬೇಕಾದಷ್ಟು ಹಣ್ಣು, ಹೂವು ಮುಂತಾದುವುಗಳನ್ನು ಪ್ರತಿಫಲವಾಗಿ ಕೊಡುತ್ತಿವೆ. ಅದರಂತೆ ಶಿವನಿಗಾಗಿ ಹಗಲಿರುಳು ತಪಸ್ಸು ಮಾಡುತ್ತಿರುವ ತನಗೆ ಆತನಿಂದ ಪ್ರತಿಫಲ ಸಿಗದೇ ಇರುವುದಿಲ್ಲ ಎಂಬ ಅಪಾರವಾದ ನಂಬಿಕೆಯಿಂದ ತಪಸ್ಸು ಮಾಡುತ್ತಿದ್ದಾಳೆ. ಈ ತಪಸ್ಸು ಕೇವಲ ಶಿವನನ್ನು ಪಡೆಯಬೇಕೆಂಬ ಸ್ವಾರ್ಥಕ್ಕಾಗಿ ಮಾಡುತ್ತಿಲ್ಲ. ತನ್ನ ರೂಪದ ಫಲತೆಗಾಗಿ, ತಂದೆಯ ಕುಲವನ್ನು ಉದ್ಧರಿಸುವುದಕ್ಕಾಗಿ ಮತ್ತು ತನ್ನ ಕಾರಣಕ್ಕಾಗಿ ಬಲಿಯಾದ ಮನ್ಮಥನನ್ನು ಅನುಗ್ರಹಿಸುವುದಕ್ಕಾಗಿ ಮಾಡುತ್ತಿದ್ದಾಳೆ’ ಎಂದು ಸ್ಪಷ್ಟಪಡಿಸಿದಳು.

ಈ ಮಾತನ್ನು ಕೇಳಿ ರುದ್ರ ‘ನೀನು ಹೇಳುತ್ತಿರುವ ಮಾತು ನಿಜವಾಗಿದ್ದರೆ, ಗಿರಿಜೆಯೇ ತನ್ನ ತಪದ ಹಿಂದಿನ ಅಭಿಲಾಷೆಯನ್ನು ಬಾಯಿಬಿಟ್ಟು ಹೇಳಲಿ’ ಎಂದ. ಆಗ ಪಾರ್ವತಿಯೇ, ತನ್ನ ಮನೋಭಿಲಾಷೆ ಹೇಳಲು ಮುಂದಾದಳು ಎಂಬಲ್ಲಿಗೆ ಶ್ರೀಶಿವಮಹಾಪುರಾಣದ ಪಾರ್ವತೀಖಂಡದಲ್ಲಿ ಇಪ್ಪತ್ತಾರನೆ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬುರ್ಖಾಧಾರಿ ಮಹಿಳೆಯೊಬ್ಬರು ರಸ್ತೆಬದಿಯಲ್ಲಿ ಭಿಕ್ಷೆ ಬೇಡುವ ಸೋಗಿನಲ್ಲಿ ಬಾಲಕನನ್ನು ಅಪಹರಿಸುವ ವಿಡಿಯೊ ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಭಿಕ್ಷೆ ಬೇಡಿದ ಮಹಿಳೆ, ಆ ಬಾಲಕನಿಗೆ ಮತ್ತು ಬರಿಸುವ ಔಷಧವೊಂದನ್ನು ಸಿಂಪಡಿಸಿದಂತೆ ತೋರುತ್ತದೆ. ಆ ಬಾಲಕ ಪ್ರಜ್ಞೆ ಕಳೆದುಕೊಳ್ಳುತ್ತಾನೆ. ತಕ್ಷಣ ಅಲ್ಲಿಗೆ ಬರುವ ಆಟೊದಲ್ಲಿ ಬಾಲಕನನ್ನು ಕರೆದೊಯ್ಯಲಾಗುತ್ತದೆ. ಇವಿಷ್ಟು ದೃಶ್ಯಗಳು ಈ ವಿಡಿಯೊದಲ್ಲಿವೆ.

ಈ ವಿಡಿಯೊ ಭಾರತಕ್ಕೆ ಸಂಬಂಧಿಸಿದ್ದಲ್ಲ ಎಂದು ಆಲ್ಟ್ ನ್ಯೂಸ್ ವರದಿ ಮಾಡಿದೆ. ಈ ಹಿಂದೆ ಹಲವು ಬಾರಿ ಈ ವಿಡಿಯೊ ಬಗ್ಗೆ ಚರ್ಚೆಯಾಗಿತ್ತು. ಇದು ಈಜಿಪ್ಟ್‌ನಲ್ಲಿ ನಡೆದ ಘಟನೆ. ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಜನರು ನೋಡಬೇಕು ಎಂಬ ಅಪೇಕ್ಷೆಯಿಂದ ಯುವಕರ ಗುಂಪೊಂದು ಕೃತಕವಾಗಿ ಈ ಸನ್ನಿವೇಶ ಸೃಷ್ಟಿಸಿ ಚಿತ್ರೀಕರಿಸಿದೆ. ಈಜಿಪ್ಟ್‌ನ ಮಾಧ್ಯಮಗಳು ಇದನ್ನು ವರದಿ ಮಾಡಿದ್ದು, ಘಟನೆ ಸಂಬಂಧ ನಾಲ್ವರನ್ನು ಬಂಧಿಸಲಾಗಿತ್ತು. ಆದರೆ, ಭಾರತದಲ್ಲಿ ಮುಸ್ಲಿಮರನ್ನು ಗುರಿಯಾಗಿಸಲು ಈ ವಿಡಿಯೊವನ್ನು ಬಳಸಿಕೊಳ್ಳಲಾಗುತ್ತದೆ ಎಂದು ವೆಬ್‌ಸೈಟ್ ತಿಳಿಸಿದೆ.

ಗುಂಡಣ್ಣ



ಬೆರಗಿನ ಬೆಳಕು ಗುರುರಾಜ ಕರಜಗಿ

ನೆಮ್ಮದಿಗೆ ಮೂರು ಗುಣಗಳು

ಸ್ವಸ್ಥತೆಯ ಕದಲಿಸದ ಜಗದಾಸ್ಥೆಯೊಂದು ಗುಣ |
ಆಸ್ಥೆಯನು ಕುಂದಿಸದ ತಾಟಸ್ಥ್ಯವೊಂದು ||
ನಷ್ಟಲಾಭಂಗಳಲಿ ಲಘುಹಾಸ್ಯನಯವೊಂದು |
ಸ್ವಸ್ತಿಗಾವಶ್ಯಕವೊ – ಮಂಕುತಿಮ್ಮ || 723 ||

ಪದ-ಅರ್ಥ: ಸ್ವಸ್ಥತೆ = ನೆಮ್ಮದಿ, ಜಗದಾಸ್ಥೆಯೊಂದು = ಜಗದ + ಆಸ್ಥೆ(ಉತ್ಸಾಹ) + ಒಂದು, ತಾಟಸ್ಥ್ಯವೊಂದು = ತಾಟಸ್ಥ್ಯ(ತಟಸ್ಥಭಾವ) + ಒಂದು, ಸ್ವಸ್ತಿಗಾವಶ್ಯಕವೊ = ಸ್ವಸ್ತಿಗೆ (ಕ್ಷೇಮಕ್ಕೆ) + ಅವಶ್ಯಕವೊ.

ವಾಚ್ಯಾರ್ಥ: ನಮ್ಮ ನೆಮ್ಮದಿಯನ್ನು ಕೆಡಿಸದ, ಜಗದ ವ್ಯವಹಾರದಲ್ಲಿ ಉತ್ಸಾಹ ಒಂದು ಗುಣ, ಉತ್ಸಾಹವನ್ನು ಕುಂದಿಸದ ಅಲಿಪ್ತ ಮನಸ್ಸು, ನಷ್ಟವೋ, ಲಾಭವೊ, ಅದನ್ನು ಹಗುರಾದ ಹಾಸ್ಯದಿಂದ ಸ್ವೀಕರಿಸುವ ಗುಣ, ಇವು ನಮ್ಮ ಕ್ಷೇಮಕ್ಕೆ ಅವಶ್ಯವಾದವುಗಳು.

ವಿವರಣೆ: ರಾಮಣ್ಣನವರಿಗೆ ಸದಾ ಆತಂಕ. ಸಮಾಜದಲ್ಲಿ ಏನಾಗಿಬಿಡುತ್ತದೋ, ಎಂದು ಕಾಳಜಿಯಿಂದ ಕೈಗೆ ಸಿಕ್ಕ ಪೇಪರುಗಳನ್ನೆಲ್ಲ ಓದುತ್ತ, ಇಪ್ಪತ್ನಾಲ್ಕು ಗಂಟೆ ಏನಾದರೂ ಅನಾಹುತವನ್ನು ಹೇಳುತ್ತಲೇ ಇರುವ ವಾರ್ತಾವಾಹಿನಿಗಳನ್ನು ನೋಡುತ್ತ ರಕ್ತದ ಒತ್ತಡ ಹೆಚ್ಚಿಸಿಕೊಂಡಿದ್ದಾರೆ: ಅಯ್ಯೋ, ಯುಕ್ರೇನ್‌ನಲ್ಲಿ ಬಾಂಬ್ ಬಿತ್ತಂತೆ, ಪಾಕಿಸ್ತಾನದಲ್ಲಿ ಮಲೇರಿಯಾ ಹುಚ್ಚೆದ್ದು ಕುಣಿಯುತ್ತಿದೆಯಂತೆ, ಶ್ರೀಲಂಕಾದಲ್ಲಿ ಹಣಕಾಸಿನ ಪರಿಸ್ಥಿತಿ ಪೂರ್ತಿ ಬಿಗಡಾಯಿಸಿದೆ, ಎಲ್ಲಿ ಅಮೇರಿಕಾ ಮತ್ತು ಚೀನಾಗಳ ನಡುವೆ ಯುದ್ಧವಾಗಿಬಿಡುತ್ತದೋ ಎಂಬ ಚಿಂತೆ ಅವರದು. ಅವರ ಹೆಂಡತಿ ತರಕಾರಿ ತರಲು ಹೇಳಿದ್ದು ಮರೆತೇ ಹೋಗಿದೆ ಅವರಿಗೆ. ಜಗದ ವ್ಯವಹಾರಗಳಲ್ಲಿ ಆಸಕ್ತಿ ಇರಲಿ ಆದರೆ ಅದು ನಮ್ಮ ಸಮಾಧಾನವನ್ನು ಕಿತ್ತುಕೊಳ್ಳಬಾರದು.

ಸೋಮಣ್ಣನವರು ಇನ್ನೊಂದು ತರಹ. ಅವರಿಗೆ ಯಾವುದರಲ್ಲಿಯೂ ಆಸಕ್ತಿ ಇಲ್ಲ. ಯಾರು ಯಾರ ಮೇಲೆ ಬಾಂಬ್ ಹಾಕಿದರೇನು? ನಮ್ಮ ಮನೆಯ ಮೇಲಂತೂ ಅಲ್ಲವಲ್ಲ. ಜಗತ್ತಿನಲ್ಲಿ, ದೇಶದಲ್ಲಿ ಕೋಲಾಹಲ ಇದ್ದೇ ಇರುತ್ತದೆ, ಅದಕ್ಕೆಲ್ಲ ನಾವು ತಲೆಕೆಡಿಸಿಕೊಳ್ಳುವುದಾಗುತ್ತದೆಯೇ? ಅವರದು ಸದಾಕಾಲದ ನಿರ್ಲಿಪ್ತತೆ. ನಿರ್ಲಿಪ್ತತೆ ಕೆಲವು ಸಂದರ್ಭಗಳಲ್ಲಿ ಒಳ್ಳೆಯದು ಆದರೆ ಅದು ಬದುಕಿನಲ್ಲಿ ಜಗತ್ತಿನ ಜೀವನದಲ್ಲಿ ಆಸಕ್ತಿಯನ್ನು ಕುಂದಿಸಬಾರದು.

ಭೀಮಣ್ಣ ತುಂಬ ವ್ಯವಹಾರಸ್ಥ. ವ್ಯವಹಾರವನ್ನು ತುಂಬ ಅಚ್ಚುಕಟ್ಟಾಗಿ, ಬಿಗಿಯಾಗಿ ನಡೆಸುವವರು. ಅವರು ತುಂಬ ಖಿನ್ನರಾಗಿದ್ದನ್ನು ಕಂಡು ಸ್ನೇಹಿತರು ಕೇಳಿದರು, “ಯಾಕೆ ಸ್ವಾಮಿ, ವ್ಯವಹಾರದಲ್ಲಿ ನಷ್ಟವಾಯಿತೋ?”, ಭೀಮಣ್ಣ ಹುಬ್ಬು ಗಂಟಿಕ್ಕಿಕೊಂಡೇ ಹೇಳಿದರು, “ನಷ್ಟವೇನೂ ಆಗಿಲ್ಲ, ಆದರೆ ಕೊರೊನಾ ಬರುವುದಕ್ಕೆ ಹಿಂದಿನ ವರ್ಷ ಆದಷ್ಟು ಲಾಭವಾಗಿಲ್ಲ. ಅದೇ ನಷ್ಟ ನನಗೆ”. ಹೆಚ್ಚು ಲಾಭ ಬರಲಿಲ್ಲವೆಂಬ ಕೊರಗು ಅವರಿಗೆ. ಆದರೆ ಗುಂಡಣ್ಣ ಮಾತ್ರ ಸದಾ ಹಸನ್ಮುಖಿ. “ಯಾಕೆ ಗುಂಡಣ್ಣ, ವ್ಯಾಪಾರದಲ್ಲಿ ಲಾಟರಿ ಹೊಡೆದ ಹಾಗಿದೆ?” ಎಂದು ಸ್ನೇಹಿತರು ಕೇಳಿದರೆ, “ಒಂದು ವ್ಯಾಪಾರದಲ್ಲಿ ನಷ್ಟವಾಯಿತು. ಮತ್ತೊಂದರಲ್ಲಿ ಕೊಂಚ ಲಾಭ. ಪರವಾಗಿಲ್ಲ ಬಿಡಿ. ನಾನು ಬದುಕಿದ್ದು ಸಂತೋಷವಾಗಿರುವುದಕ್ಕೆ. ಈ ಲಾಭ ನಷ್ಟಗಳ ಬಗ್ಗೆ ತುಂಬ ತಲೆ ಕೆಡಿಸಿಕೊಂಡರೆ, ಸದಾ ಕೊರಗಿದರೆ ಬದುಕಿಗೇನು ಅರ್ಥ? ಒಮ್ಮೆ ಲಾಭ, ಒಮ್ಮೆ ನಷ್ಟ. ಬದುಕು ಇದೇ ತಾನೇ?” ಎಂದು ಜೋರಾಗಿ ನಕ್ಕರು. ಜಗದ ಪ್ರೀತಿ ಮನದ ನೆಮ್ಮದಿಯನ್ನು ಕೆಡಿಸದಿರಲಿ. ನಮ್ಮ ಅತಿಯಾದ ನಿರ್ಲಿಪ್ತತೆ ಬದುಕಿನ ಆಸಕ್ತಿಯನ್ನು ಕಡಿಮೆ ಮಾಡದಿರಲಿ, ಮತ್ತು ಜೀವನ ಏರು-ಇಳಿವುಗಳಲ್ಲಿ ಅವುಗಳನ್ನು ಹಗುರಾಗಿ ತೆಗೆದುಕೊಳ್ಳುವ ಹಾಸ್ಯಗುಣ ಇರಲಿ. ಈ ಮೂರು ಗುಣಗಳು ಬದುಕಿನ ನೆಮ್ಮದಿಗೆ ಅವಶ್ಯಕ.

ದಿನ ಭವಿಷ್ಯ ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ ಮಂಗಳವಾರ ಸೆಪ್ಟೆಂಬರ್ 27, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ದ್ವಿತೀಯ ಗಂ.26-29 ನಕ್ಷತ್ರ: ಹಸ್ತ ಗಂ.06-16 ಯೋಗ: ಬ್ರಹ್ಮ ಗಂ.06-43, ಐಂದ್ರ ಗಂ.29-03 ಕರಣ: ಬಾಲವ ಗಂ.14-52, ಕನ್ಯಾ ಮಾಸದ 10ನೇ ದಿನ. ರಾಹುಕಾಲ : ಮಧ್ಯಾಹ್ನ 03:00 -04:30, ಸೂರ್ಯೋದಯ : 06-23 ಸೂರ್ಯಾಸ್ತ : 06-20, ಮುಸ್ಲಿಂ ದಿನಾಂಕ : 30 ಸಫರ್

ದಿನ ವಿಶೇಷ : ಜ್ಯೂಯಿಷ್ ಹೊಸ ವರ್ಷ (ರೋಷ್ ಹಶ್ನಾಹ್)

ಅದೃಷ್ಟ ಸಂಖ್ಯೆ : 1, 2

ಮೇಷ: ಹಿರಿಯರ ಅನುಗ್ರಹದಿಂದ ಇಷ್ಟಸಿದ್ಧಿಯಾಗಿ ಕೃಷಿ ಉತ್ಪನ್ನಗಳ ಅಥವಾ ಪದಾರ್ಥಗಳ ಕ್ರಯ- ವಿಕ್ರಯದಲ್ಲಿ ಲಾಭ ತರಲಿದೆ. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವುದು. ಆರ್ಥಿಕ ಬೆಳವಣಿಗೆ ಅಧಿಕವಾಗುವುದು.

ವೃಷಭ: ಕಳೆದುಹೋದ ವಸ್ತುವಿನ ಲಭ್ಯತೆಯಿಂದ ಸಂತಸಆಗಲಿದೆ. ಕಾರ್ಯಗಳಿಗೆ ಅಡ್ಡಿ ಉಂಟಾದಲ್ಲಿ ಸರಿಯಾಗಿ ವಿಮರ್ಶಿಸಿಮುಂದುವರಿಯುವುದು ಉತ್ತಮ. ಸ್ವಂತ ನಿರ್ಧಾರದಲ್ಲಿ ತೊಡಕುಗಳೇ ಉಂಟಾಗುವುದು.

ಮಿಥುನ: ಇನ್ನೊಬ್ಬರಿಗೆ ತಿಳಿವಳಿಕೆ ಹೇಳುವ ಸಮಯದಲ್ಲಿ ಜಾಗ್ರತರಾಗಿರಿ. ನಿಮ್ಮಿಂದ ಸಲಹೆ ಸಹಕಾರವನ್ನು ಪಡೆದು ನಿಮ್ಮನ್ನೇ ಮೂರ್ಖರನ್ನಾಗಿ ಮಾಡುವವರು ಎದುರಾಗುವರು.

ಕರ್ಕಾಟಕ: ಹಿಡಿದ ಕೆಲಸ ಪೂರ್ಣಗೊಳಿಸುವ ಬಗ್ಗೆ ಹೆಚ್ಚಿನ ಪ್ರಯತ್ನವಿರಲಿ. ಗುರುಗಳು ನೀಡಿದ ಉಪದೇಶ ನಿ ಬದುಕಿಗೆ ದಾರಿದೀಪವಾಗುವ ಲಕ್ಷಣಗಳಿರುವುದು. ಅವಿವಾಹಿತರಿಗೆ ವಿವಾಹ ಯೋಗವಿದೆ.

ಸಿಂಹ: ವ್ಯಾಪಾರ, ವ್ಯವಹಾರಗಳಲ್ಲಿ ತೀವ್ರವಾದ ಪೈಪೋಟಿ ಎದುರಾಗಿ ಆತಂಕಕ್ಕೆ ಕಾರಣವಾಗಲಿದೆ. ನಷ್ಟ ಸಂಭವಿಸುವುದು. ಮನೆಯ ಸದಸ್ಯರಲ್ಲಿದ್ದ ಭಿನ್ನಾಭಿಪ್ರಾಯ, ವೈಮನಸ್ಸಿಗೆ ಕಾರಣ ಮತ್ತು ಪರಿಹಾರ ಕಂಡುಕೊಳ್ಳುವಿರಿ.

ಕನ್ಯಾ: ಸಜ್ಜನರ ಸಹವಾಸ ಮಾಡುವ ನಿಮ್ಮ ಹಂಬಲಕ್ಕೆ ಪೂರಕವಾದ ವಾತಾವರಣ ಸಿಗಲಿದೆ. ಆಡುವ ಮಾತಿನ ಬಗ್ಗೆ ನಿಗಾವಿರಲಿ, ನಿಮ್ಮ ಮಾತನ್ನು ನೀವೇ ಸಾಧಿಸಿ ತೋರಿಸಬೇಕಾಗುತ್ತದೆ.

ತುಲಾ: ಅನವಶ್ಯಕ ಮಾತುಗಳಿಂದ ಆತ್ಮೀಯರಲ್ಲಿ ಕಲಹ ಉಂಟಾಗಬಹುದು. ಶುಭ ಕಾರ್ಯಗಳಿಗೆ ಉತ್ತಮ ಕಾಲವಾದರೂ ಬರುವ ಅವಕಾಶಗಳಿಂದ ವಂಚಿತರಾಗದಿರಿ. ತಾಯಿಯವರ ಮಾನಸಿಕ ಆರೋಗ್ಯ ಸುಧಾರಿಸಲಿದೆ.

ವೃಶ್ಚಿಕ: ಯಂತ್ರೋಪಕರಣ ಅಥವಾ ಕಾರ್ಖಾನೆ ಮೊದಲಾದ ಕೆಲಸಗಳಲ್ಲಿರುವವರಿಗೆ ಹೆಚ್ಚಿನ ಧನ ಲಾಭವಿರುವುದು. ಮನಸ್ಸು ಧ್ಯಾನದತ್ತ ಹರಿಯಲು ಧಾರ್ಮಿಕ ವಿಚಾರಧಾರೆಯಂತಹ ಸಮಾರಂಭಗಳ ಆಲಿಕೆ ಮಾಡಬಹುದು.

ಧನು: ನಿಮ್ಮ ಹೆಚ್ಚಿನ ಪರಿಶ್ರಮವಿದ್ದರೂ ಅಲ್ಪ ಕಾರ್ಯಸಿದ್ಧಿಯಾಗುವುದು ದುಃಖಕ್ಕೆ ಮೂಲ ಕಾರಣ. ಅತಿಯಾದ ನಿದ್ದೆ, ವಿಪರೀತ ವ್ಯಸನವು ನಿಮ್ಮ ಅಭಿವೃದ್ಧಿಗೆ ಧಕ್ಕೆಯನ್ನು ತರಲಿದೆ.

ಮಕರ: ಬಟ್ಟೆ ವ್ಯಾಪಾರಿಗಳಿಗೆ ಇಂದು ಉತ್ತಮ ಮಾರಾಟ ಹಾಗೂ ಉತ್ತಮ ಲಾಭವಾಗುವುದು. ಬಹಳ ದಿನಗಳ ನಂತರ ಸೋದರನ ಆಗಮನದಿಂದಾಗಿ ಮನೆಯಲ್ಲಿ ಹೆಚ್ಚಿನ ಸಂಭ್ರಮವಿರುವುದು. ಅಧಿಕಾರ ಪ್ರಾಪ್ತಿ ಯೋಗವಿದೆ.

ಕುಂಭ: ಮಕ್ಕಳ ಸರ್ವತೋಮುಖ ಪ್ರಗತಿಯಿಂದಾಗಿ ಮಾನಸಿಕ ನೆಮ್ಮದಿ ಪ್ರಾಪ್ತಿಯಾಗುವುದು. ಆಸ್ತಿ ಖರೀದಿಯಂತಹ ಮಹತ್ವದ ಕೆಲಸಗಳಿಗೆ ಸಕಾಲ. ನೌಕರಿ ಲಾಭದ ಜೊತೆಗೆ ಅಧಿಕಾರಿ ವರ್ಗದವರ ಕಿರುಕುಳವು ನಿವಾರಣೆಯಾಗಲಿದೆ.

ಮೀನ: ಆರ್ಥಿಕವಾಗಿ ಬಹಳ ದಿನಗಳಿಂದ ಇದ್ದಂತಹ ಋಣಬಾಧೆಯಿಂದ ಮುಕ್ತಿ ದೊರಕುವುದು. ನಿಮ್ಮ ಪ್ರಯತ್ನ ಬಲಕ್ಕೆ, ಆತ್ಮ ವಿಶ್ವಾಸಕ್ಕೆ ಸರಿಸಮಾನವಾದ ಫಲ ನಿಶ್ಚಿತವಿದ್ದರೂ ಸದ್ಯದ ಪರಿಸ್ಥಿತಿಯಲ್ಲಿ ಹೊಂದಾಣಿಕೆ ಅಗತ್ಯವಿದೆ.

ಪದಬಂಧ 5092 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕತ್ತಲು ಇಲ್ಲಿ ಆವರಿಸಿದೆ (4)
3.ಅಶ್ವಯುಜ ಮಾಸದ ಒಂಬತ್ತು ರಾತ್ರಿಗಳು (4)
5.ವಾರ ಮೊದಲಿದ್ದಾಗಲೇ ಒಡೆತನ (3)
6.ಉಪಕಾರದ ವಿರುದ್ಧ ಪದ (4)
8.ಬಿಸಿಲುಕುದುರೆ ಇಲ್ಲಿ ಕಾಣುತ್ತಿದೆ (4)
10.ಇದು ಬೇರೆಯವರ ಹಣ (4)
12.ಸವೆದು ಹೋದುದು (4)
13.ವರ ಪಡೆದಿರುವ ಅಮಾತ್ಯ! (3)
16.ಮಾಣಿಕ್ಯ ಇಲ್ಲಿದೆ (4)
17.ತೀಡೀ ತೀಡಿ ಮಾಡಿದ ಸುಧಾರಣೆ (4)

ಮೇಲಿಂದ ಕೆಳಕ್ಕೆ
1.ಅಂಬುಧಿಯಲ್ಲಿರುವ ಬಾಣ (2)
2.ಭಾನುವಾರವನ್ನು ಹೀಗೂ ಹೇಳುವರು (4)
3.ಅದೇ ತಾನೆ ಅರಳಿದ ಹೂವು (4)
4.ಮಗಳಿಲ್ಲಿ ಉಲ್ಟಾ ಪಲ್ಟಾ ನಿಂತಿದ್ದಾಳಲ್ಲಾ? (2)
7.ಕೊನೆಗೆ ಬೆಲೆಯಿದ್ದಾಗ ಕಾಣಿಸಿದ ಮಡಿಕೆ (3)
9.ಕದವನ್ನು ಭದ್ರಪಡಿಸಲು ಹಾಕಿದ ಅಗಳಿ (3)
11.ದೇವಾಲಯದ ಸಭಾಮಂಟಪ (4)
12.ಈಕೆ ವಿದ್ಯಾಧಿದೇವತೆ (4)
14.ಮಂಡೂಕವಿರುವ ಬಾವಿ (2)
15.ನಾಡಾಡಿಯ ಧಮನಿ (2)



5091ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಂತಃಕಲಹ 3.ಕುಲಾವಿ 5.ಜಲಸಮಾಧಿ 7.ಸಾವಿರ 8.ಮತಿ ಭ್ರಮಣೆ 10.ಸದರ 11.ವಾರಸುದಾರ 14.ಕುಲುಮೆ 15.ಸಹಗಮನ

ಮೇಲಿಂದ ಕೆಳಕ್ಕೆ: 1.ಅಂಡಜ 2.ಕಳಸ 4.ವಿಧುರ 6.ಮಾರುತಿ 7.ಸಾರಣೆ 8.ಮಸೂರ 9.ಮಕರ 10.ಸರಕು 12.ಸುರಂಗ 13.ರಗಡ

ಸುಡೊಕು 5478

					7		1	4
8		7	6		4			
	2			8			5	
	4			1		9		
		1	8		5		7	
7	5			9		3	4	
	8			7		4		3
	3		4		8			
9		4			2		6	8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5477 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಪರ್ವತಾರೋಹಿಗೆ ಗಾಯ

ಕಠ್ಮಂಡು (ಪಿಟಿಐ): ನೇಪಾಳದ ಮೌಂಟ್ ಮಾನಾಸ್ಲು ಪರ್ವತದಲ್ಲಿ ಸೋಮವಾರ ಸಂಭವಿಸಿದ ಭಾರಿ ಹಿಮಪಾತದಿಂದಾಗಿ ಭಾರತದ ಪರ್ವತಾರೋಹಿ ಬಲ್‌ಜೀತ್ ಕೌರ್ ಸಹಿತ 12 ಮಂದಿ ಗಾಯಗೊಂಡಿದ್ದಾರೆ. ಗಾಯಗೊಂಡವರ ಪೈಕಿ ಮೂವರ ಸ್ಥಿತಿ ಗಂಭೀರವಾಗಿದೆ. ಕೌರ್ ಮತ್ತು ಅವರ ಜತೆಗಿದ್ದ ಶೆರ್ಪಾ ಅವರು ಅಪಾಯದಿಂದ ಪಾರಾಗಿದ್ದಾರೆ ಎಂದು ಸ್ಥಳೀಯ ಮಾಧ್ಯಮ ವರದಿಗಳಿಂದ ತಿಳಿದುಬಂದಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ನಿಧನ

ಶ್ರೀ ರಾ|| ತಿಮ್ಮೇಗೌಡ, 77 ವರ್ಷ

ಪ್ರಧಾನ ಕಾರ್ಯದರ್ಶಿ, ಕೆಂಪೇಗೌಡ ಸ್ಮಾರಕ ಪ್ರತಿಷ್ಠಾನ

ಇವರು ದಿನಾಂಕ: 26–9–2022 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು ಇಂದು (27–9–2022) ಮಧ್ಯಾಹ್ನ 12.00 ಗಂಟೆಗೆ ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಬಿಲ್ಲಿನಕೋಟೆ ಗ್ರಾಮದಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು: ಕುಟುಂಬವರ್ಗ

ನವೀನ್ : 9964483692

ಧ್ರುವ : 9916168454

‘ಭಯೋತ್ಪಾದನೆ ನಿಗ್ರಹದ ಹೆಸರಿನಲ್ಲಿ ಯಾರನ್ನೂ ಮೂರ್ಖರನ್ನಾಗಿಸಲಾಗದು: ಸಚಿವ ಜೈಶಂಕರ್

ಪಾಕ್‌ಗೆ ವಿಮಾನ: ಅಮೆರಿಕ ನೀತಿಗೆ ಬೇಸರ

ಪ್ರಜಾವಾಣಿ ವಾರ್ತೆ

ವಾಷಿಂಗ್ಟನ್: ‘ಭಯೋತ್ಪಾದನೆಯ ನಿಗ್ರಹದ ಕಾರಣ ನೀಡಿ, ನೀವು ಪಾಕಿಸ್ತಾನಕ್ಕೆ ಎಫ್ 16 ಯುದ್ಧ ವಿಮಾನಗಳನ್ನು ಕೊಡುತ್ತಿದ್ದೀರಿ. ಈ ಮೂಲಕ ನೀವು ಯಾರನ್ನು ಮೂರ್ಖರನ್ನಾಗಿಸಲು ಹೊರಟಿದ್ದೀರಿ’ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಅಮೆರಿಕದ ಇಬ್ಬಗೆಯ ನೀತಿ ವಿರುದ್ಧ ಚಾಟಿ ಬೀಸಿದ್ದಾರೆ.

ವಾಷಿಂಗ್ಟನ್‌ನಲ್ಲಿ ಮೂರು ದಿನಗಳ ಪ್ರವಾಸದಲ್ಲಿರುವ ಅವರು ಭಾರತೀಯ ಅಮೆರಿಕನ್ನರೊಂದಿಗೆ ಸೋಮವಾರ ನಡೆದ ಸಂವಾದದಲ್ಲಿ ಪಾಲ್ಗೊಂಡು ಮಾತನಾಡಿದರು.

‘ಎಫ್ -16ರಂತಹ ಯುದ್ಧ ವಿಮಾನಗಳ ಸಾಮರ್ಥ್ಯ ಎಲ್ಲರಿಗೂ ತಿಳಿದಿದೆ. ಭಯೋತ್ಪಾದನೆ ನಿಗ್ರಹಕ್ಕಾಗಿ ಇವುಗಳನ್ನು ಒದಗಿಸುತ್ತಿರುವುದಾಗಿ ನೀವು (ಅಮೆರಿಕ) ಹೇಳಬಹುದು. ಆದರೆ, ಅವುಗಳನ್ನು ಅವರು ಎಲ್ಲಿ ನಿಯೋಜಿಸಿದ್ದಾರೆ ಮತ್ತು ಯಾವುದಕ್ಕೆ ಬಳಸಿಕೊಳ್ಳುತ್ತಿದ್ದಾರೆ ಎನ್ನುವುದು ನಿಮಗೆ ತಿಳಿದಿದೆಯಾ? ಇಂತಹ ವಿಷಯಗಳನ್ನು ಹೇಳಿ ನೀವು ಯಾರನ್ನೂ ಮೂರ್ಖರನ್ನಾಗಿಸಲಾಗದು’ ಎಂದು ಜೈಶಂಕರ್ ಸಭಿಕರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು.

ಪಾಕಿಸ್ತಾನಕ್ಕೆ ನೀಡುತ್ತಿರುವ ಸೇನಾ ನೆರವಿನ ಸಮರ್ಥನೆ ಮತ್ತು ಆ ರಾಷ್ಟ್ರದೊಂದಿಗಿನ ಬಾಂಧವ್ಯಗಳು ಅಮೆರಿಕದ ಹಿತಾಸಕ್ತಿಗಳನ್ನು ಎಂದಿಗೂ ರಕ್ಷಿಸಿಲ್ಲ ಎಂದು ಅವರು ಹೇಳಿದರು.

ಅಮೆರಿಕ ಮಾಧ್ಯಮಗಳಿಗೂ ತಪರಾಕಿ:

‘ಅಮೆರಿಕದ ಮಾಧ್ಯಮಗಳು ಭಾರತದ ಬಗ್ಗೆ ಪಕ್ಷಪಾತದಿಂದ ಕೂಡಿದ ವರದಿಗಳನ್ನು ಪ್ರಕಟಿಸುತ್ತಿವೆ’ ಎಂದು ಸಚಿವ ಎಸ್. ಜೈಶಂಕರ್ ಟೀಕಿಸಿದ್ದಾರೆ.

ಹೆಸರು ಉಲ್ಲೇಖಿಸದೇ ‘ದಿ ವಾಷಿಂಗ್ಟನ್ ಪೋಸ್ಟ್’ ಪತ್ರಿಕೆ ಬಗ್ಗೆಯೂ ಅವರು ಪರೋಕ್ಷ ಆಕ್ಷೇಪ ವ್ಯಕ್ತಪಡಿಸಿ, ‘ಇಲ್ಲಿನ ಮಾಧ್ಯಮಗಳನ್ನು ಗಮನಿಸಿದೆ. ಈ ನಗರದಿಂದ ಪ್ರಕಟವಾಗುವ ಪತ್ರಿಕೆಯೊಂದು ಸೇರಿ ಇಲ್ಲಿನ ಮಾಧ್ಯಮಗಳು ಏನು ಪ್ರಕಟಿಸುತ್ತಿವೆ ಎಂಬುದು ನಿಮಗೆ ನಿಜವಾಗಿಯೂ ಗೊತ್ತಿದೆಯೇ’ ಎಂದು ಭಾರತೀಯ–ಅಮೆರಿಕನ್ನರನ್ನು ಪ್ರಶ್ನಿಸಿದರು.

ಜೆಫ್ ಬೆಜೋಸ್ ಮಾಲೀಕತ್ವದ ‘ದಿ ವಾಷಿಂಗ್ಟನ್ ಪೋಸ್ಟ್’ ಪತ್ರಿಕೆಯು ವಾಷಿಂಗ್ಟನ್‌ನಿಂದ ಪ್ರಕಟವಾಗುತ್ತಿದೆ.

ಭಾರತ ವಿರೋಧಿ ಶಕ್ತಿಗಳು ಇಲ್ಲಿ ಹೆಚ್ಚುತ್ತಿವೆಯಲ್ಲ ಎಂದು ಕೇಳಿದ ಪ್ರಶ್ನೆಗೆ, ‘ಇಲ್ಲಿನ ಮಾಧ್ಯಮಗಳ ವರದಿಗಳು ಪಕ್ಷಪಾತದಿಂದ ಕೂಡಿವೆ. ಭಾರತದಲ್ಲಿ ನಿಜವಾಗಿಯೂ ಪ್ರಯತ್ನಗಳಾಗುತ್ತಿವೆ. ಭಾರತವು ತನ್ನ ಹಾದಿಯಲ್ಲೇ ಸಾಗುತ್ತಿದೆ. ಆದರೆ, ತಾವೇ ಭಾರತದ ರಕ್ಷಕರು ಮತ್ತು ಭಾರತ ರೂಪಿಸುವವರು ಎಂದು ಭಾವಿಸಿರುವವರು ಅಲ್ಲಿ ನೆಲೆ ಕಳೆದುಕೊಳ್ಳುತ್ತಿದ್ದಾರೆ. ಹೀಗೆ ಹೇಳುವವರ ಬಣ್ಣವೂ ಬಯಲಾಗುತ್ತಿದೆ’ ಎಂದರು.

ಅಮೆರಿಕದ ವಾಷಿಂಗ್ಟನ್‌ನಲ್ಲಿ ಸೋಮವಾರ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಭಾವಚಿತ್ರಕ್ಕೆ ನಮನ ಸಲ್ಲಿಸಿದರು – ಪಿಟಿಐ ಚಿತ್ರ

‘ರಷ್ಯಾ ರಕ್ಷಣಾ ಸಾಮಗ್ರಿ ಅವಲಂಬನೆ ಭಾರತದ ವೈಫಲ್ಯವಲ್ಲ’

ವಾಷಿಂಗ್ಟನ್ (ಪಿಟಿಐ): ‘ರಷ್ಯಾದ ರಕ್ಷಣಾ ಸಾಧನಗಳ ಮೇಲಿನ ಅವಲಂಬನೆ ಭಾರತದ ವೈಫಲ್ಯವಲ್ಲ. ಅಮೆರಿಕದ ಧೋರಣೆಯಿಂದಾಗಿಯೇ ನಾವು ರಷ್ಯಾದ ಶಸ್ತ್ರಾಸ್ತ್ರ ಖರೀದಿಸಬೇಕಾಯಿತು ಮತ್ತು ಆ ರಾಷ್ಟ್ರದೊಂದಿಗೆ ಬಲವಾದ ರಕ್ಷಣಾ ಸಂಬಂಧ ಬೆಳೆಸಬೇಕಾಯಿತು’ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಭಾನುವಾರ ಸಮರ್ಥಿಸಿಕೊಂಡಿದ್ದಾರೆ.

ಯುಎಸ್ ಇಂಡಿಯಾ ಫ್ರೆಂಡ್‌ಶಿಪ್ ಆ್ಯಂಡ್ ಫೌಂಡೇಶನ್ ಫಾರ್ ಇಂಡಿಯಾ ಆ್ಯಂಡ್ ಇಂಡಿಯನ್ ದಿಸ್ಪೊರಾ ಸ್ಟಡೀಸ್ ಭಾರತೀಯ ಅಮೆರಿಕನ್ನರೊಂದಿಗೆ ಆಯೋಜಿಸಿದ್ದ ಸಂವಾದದಲ್ಲಿ ಅವರು ಮಾತನಾಡಿದರು.

‘1965ರಿಂದ ಮುಂದಿನ 40 ವರ್ಷಗಳವರೆಗೆ ಭಾರತಕ್ಕೆ ಅಮೆರಿಕದ ಒಂದೇ ಒಂದು ರಕ್ಷಣ ಸಾಧನಗಳು ಸಿಗಲಿಲ್ಲ. ಇದು ವಾಸ್ತವವಾಗಿ, ಭಾರತ ಮತ್ತು ಸೋವಿಯತ್ ರಷ್ಯಾ ಸಂಬಂಧವು ತುಂಬಾ ಪ್ರಬಲವಾದ ಅವಧಿಯಾಗಿದೆ. ಈಗ ಅಮೆರಿಕ ಮತ್ತು ಭಾರತದ ಸಂಬಂಧದಲ್ಲಿ ಬದಲಾವಣೆಯಾಗಿದ್ದು, ಅದೂ ಕಳೆದ 15 ವರ್ಷಗಳಿಂದ ಉಭಯ ರಾಷ್ಟ್ರಗಳ ನಡುವೆ ರಕ್ಷಣಾ ಸಹಕಾರ ಏರ್ಪಟ್ಟಿದೆ ಎಂದರು.

‘ಇಂದು ಉಭಯ ರಾಷ್ಟ್ರಗಳ ಸಂಬಂಧವು ವಿಭಿನ್ನ ಹೆಜ್ಜೆ ಇರಿಸಿದೆ. ಭದ್ರತಾ ಕ್ಷೇತ್ರವಷ್ಟೇ ಅಲ್ಲ, ಹಲವು ರಂಗಗಳಲ್ಲಿ ಒಟ್ಟಿಗೆ ಕೆಲಸ ಮಾಡುವ ಸಾಧ್ಯತೆಗಳಿವೆ. ಅಮೆರಿಕದ ಸಿ 17 ನಂತಹ ಅನೇಕ ವಿಮಾನಗಳನ್ನು ನಾವು ಹಾರಿಸುವ ಜತೆಗೆ ಅಮೆರಿಕದ ಸೇನೆಯೊಂದಿಗೆ ನಾವು ಸಮರಾಭ್ಯಾಸ ನಡೆಸುತ್ತಿದ್ದೇವೆ’ ಎಂದರು.

ರಷ್ಯಾ ಸೇನಾಧಿಕಾರಿಗೆ ಗುಂಡು ಹಾರಿಸಿದ ಯುವಕ

ಕೀವ್ (ಎಪಿ): ರಷ್ಯಾ ಸೇನೆಗೆ ಯೋಧರ ನೇಮಕಾತಿ ವೇಳೆ ಯುವಕನೊಬ್ಬ ಸೇನಾಧಿಕಾರಿಗೆ ತುಂಬಾ ಹತ್ತಿರದಿಂದ ಗುಂಡು ಹಾರಿಸಿರುವ ಘಟನೆ ಸೋಮವಾರ ನೇಮಕಾತಿ ಕಚೇರಿ ಬಳಿ ನಡೆದಿದೆ.

ಉಕ್ರೇನ್ ವಿರುದ್ಧ ನಡೆಯುತ್ತಿರುವ ಯುದ್ಧಕ್ಕೆ ಲಕ್ಷಾಂತರ ಪುರುಷರನ್ನು ಸಜ್ಜುಗೊಳಿಸುವ ರಷ್ಯಾದ ನಾಯಕತ್ವದ ಪ್ರಯತ್ನಗಳಿಗೆ ಪ್ರತಿರೋಧವಾಗಿ ಯುವಕ ‘ನಾವು ಯಾರೊಬ್ಬರು ಯುದ್ಧ ಮಾಡಲು ಉಕ್ರೇನ್‌ಗೆ ಹೋಗುವುದಿಲ್ಲ. ನಾವೆಲ್ಲರೂ ಮನೆಗೆ ಹೋಗುತ್ತೇವೆ’ ಎಂದು ಕೂಗುತ್ತಾ ಈ ಕೃತ್ಯ ಎಸಗಿದ್ದಾನೆ.

ಸೈಬೀರಿಯಾದ ಉಸ್ತ್– ಇಲಿಮ್‌ಸ್ಕ್ ನಗರದಲ್ಲಿ ಈ ಘಟನೆ ನಡೆದಿದೆ. ಗುಂಡಿನ ದಾಳಿ ಮಾಡಿದ ಸ್ಥಳೀಯ ಯುವಕ ರಸ್ಲಾನ್ ಜಿನಿನ್ (25) ಎಂಬಾತನನ್ನು ಬಂಧಿಸಲಾಗಿದೆ. ಗಾಯಗೊಂಡ ಸೇನಾಧಿಕಾರಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸೇನೆಗೆ ಸೇರಲು ನಿರಾಕರಿಸಿ ವಿವಿಧ ನಗರಗಳಲ್ಲಿ ಪ್ರತಿಭಟಿಸಿದ ಸುಮಾರು 2 ಸಾವಿರ ಜನರನ್ನು ಬಂಧಿಸಲಾಗಿದೆ.

ಕೋವಿಡ್ ಸೋಂಕಿತ ಹದಿಹರೆಯದವರಲ್ಲಿ ಟೈಪ್ 1 ಮಧುಮೇಹ ಹೆಚ್ಚಳ ಸಾಧ್ಯತೆ

ವಾಷಿಂಗ್ಟನ್ (ಪಿಟಿಐ): ಕೋವಿಡ್ 19 ಸೋಂಕಿತ ಮಕ್ಕಳು ಮತ್ತು ಹದಿಹರೆಯದವರಲ್ಲಿ ಟೈಪ್ 1 ಡಯಾಬಿಟಿಸ್ (ಟಿ1ಡಿ) ಹೆಚ್ಚು ಅಪಾಯದ ಮಟ್ಟದಲ್ಲಿರುವುದು ಕಂಡುಬಂದಿದೆ ಎಂದು ಹೊಸ ಅಧ್ಯಯನವೊಂದು ಹೇಳಿದೆ.

18 ವರ್ಷ ಮತ್ತು ಅದಕ್ಕಿಂತ ಕಡಿಮೆ ವಯಸ್ಸಿನ 10 ಲಕ್ಷ ರೋಗಿಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ, ಕೋವಿಡ್ ಸೋಂಕಿತರಲ್ಲಿ ಅತಿ ಹೆಚ್ಚಿನ ಅಪಾಯದ ಮಟ್ಟದಲ್ಲಿ ಟೈಪ್ 1 ಡಯಾಬಿಟಿಸ್‌ಗೆ ಕಾರಣವಾಗುತ್ತಿರುವುದು ಕಂಡುಬಂದಿದೆ ಎಂದು ಇತ್ತೀಚೆಗೆ ಜಮಾ (ಜೆಎಎಂಎ) ನೆಟ್‌ವರ್ಕ್ ಓಪನ್ ಜರ್ನಲ್‌ನಲ್ಲಿ ತಿಳಿಸಲಾಗಿದೆ.

ಕೋವಿಡ್ ದೃಢಪಟ್ಟ 6 ತಿಂಗಳಲ್ಲಿ ಹೊಸದಾಗಿ ಟೈಪ್ 1 ಡಯಾಬಿಟಿಸ್‌ಗೆ ತುತ್ತಾಗಿರುವುದು ಕಂಡುಬಂದಿದೆ. ಇದರ ಪ್ರಮಾಣವೂ ಶೇ 72ರಷ್ಟು ಹೆಚ್ಚಳ ಆಗಿದೆ ಎಂದು ಅಧ್ಯಯನ ತಂಡದಲ್ಲಿದ್ದ ಅಮೆರಿಕದ ಕೇಸ್ ವೆಸ್ಟರ್ನ್ ರಿಸರ್ವ್ ಸ್ಕೂಲ್ ಆಫ್ ಮೆಡಿಸಿನ್‌ನ ಪ್ರಾಧ್ಯಾಪಕಿ ಪಮೇಲಾ ಡೇವಿಸ್ ಹೇಳಿದ್ದಾರೆ.

ವಿಮಾನದಲ್ಲಿ ಮಾಸ್ಕ್ ಕಡ್ಡಾಯ ಅಂತ್ಯ

ಟೊರಾಂಟೊ (ಎಪಿ): ಕೆನಡಾದಲ್ಲಿ ವಿಮಾನ ಪ್ರಯಾಣಿಕರು ಇನ್ನು ಮಾಸ್ಕ್ ಧರಿಸಬೇಕಿಲ್ಲ. ಲಸಿಕೆ ಪಡೆಯದೆ ದೇಶದೊಳಕ್ಕೆ ಬರುವವರಿಗೆ ಇದ್ದ 14 ದಿನಗಳ ಕ್ವಾರಂಟೈನ್ ನಿರ್ಬಂಧವನ್ನೂ ರದ್ದುಪಡಿಸಲಾಗಿದೆ.

ಕೋವಿಡ್ ಪ್ರಕರಣಗಳು ನಿಯಂತ್ರಣಕ್ಕೆ ಬಂದಿರುವುದರಿಂದ ಅಕ್ಟೋಬರ್ 1ರಿಂದ ಜಾರಿಗೆ ಬರುವಂತೆ ಮಾಸ್ಕ್ ಕಡ್ಡಾಯವನ್ನು ತೆಗೆದುಹಾಕಲಾಗಿದೆ ಎಂದು ಸಾರಿಗೆ ಸಚಿವಾಲಯ ತಿಳಿಸಿದೆ.

ಸುದ್ದಿ 2 ನಿಮಿಷ

ರಷ್ಯಾದ ಶಾಲೆಯಲ್ಲಿ ಗುಂಡಿನ ದಾಳಿ: 15 ಸಾವು

ಮಾಸ್ಕೊ (ಎಪಿ): ಇಲ್ಲಿಂದ 960 ಕಿ.ಮೀ.ದೂರದ ಇಜೆವ್ಸ್ಕ ನಗರದಲ್ಲಿ ಸೋಮವಾರ ಬಂದೂಕುಧಾರಿಯೊಬ್ಬ ಶಾಲೆಗೆ ನುಗ್ಗಿ ಗುಂಡಿನ ದಾಳಿ ನಡೆಸಿದ್ದು, 15 ಮಂದಿ ಮೃತಪಟ್ಟಿದ್ದಾರೆ ಹಾಗೂ 24 ಮಂದಿ ಗಾಯಗೊಂಡಿದ್ದಾರೆ.

ಮೃತರಲ್ಲಿ ಇಬ್ಬರು ಕಾವಲು ಸಿಬ್ಬಂದಿ, ಇಬ್ಬರು ಶಿಕ್ಷಕರು ಹಾಗೂ ಉಳಿದವರು ವಿದ್ಯಾರ್ಥಿಗಳು ಎಂದು ಹೇಳಲಾಗಿದೆ. ಗಾಯಗೊಂಡವರಲ್ಲಿ 22 ಮಂದಿ ಮಕ್ಕಳು ಸೇರಿದ್ದಾರೆ.

ರಷ್ಯಾದ ಕೇಂದ್ರ ಭಾಗದ ಉರಾಲ್ ಪರ್ವತ ಪ್ರದೇಶದ ಪಶ್ಚಿಮಕ್ಕೆ ಇರುವ ಉದ್ಮರ್‌ತಿಯಾ ಪ್ರಾಂತ್ಯದಲ್ಲಿ ಈ ನಗರ ಇದ್ದು, ಇಲ್ಲಿ 6.4 ಲಕ್ಷ ಜನಸಂಖ್ಯೆ ಇದೆ.

ಗುಂಡಿನ ದಾಳಿಯ ಬಳಿಕ ಹಂತಕ ತನಗೆ ಗುಂಡು ಹಾರಿಸಿಕೊಂಡು ಮೃತಪಟ್ಟಿದ್ದಾನೆ. ಆತನನ್ನು 34 ವರ್ಷದ ಆರ್ಟೋಯಮ್ ಕಜಂಟ್ಸೆವ್ ಎಂದು ಗುರುತಿಸಲಾಗಿದೆ. ಆತ ಇದೇ ಶಾಲೆಯಲ್ಲಿ ಓದಿದ್ದ. ಈ ಕೃತ್ಯ ನಡೆಸಲು ಏನು ಕಾರಣ ಎಂಬುದು ತಿಳಿದುಬಂದಿಲ್ಲ ಎಂದು ಉದ್ಮರ್‌ತಿಯಾದ ಗವರ್ನರ್ ಅಲೆಕ್ಸಾಂಡರ್ ಬ್ರೆಚಲೋವ್ ತಿಳಿಸಿದ್ದಾರೆ.

ಈ ಶಾಲೆಯಲ್ಲಿ 1ನೇ ತರಗತಿಯಿಂದ 11ನೇ ತರಗತಿವರೆಗಿನ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಹಂತಕ ಕಪ್ಪು ಬಣ್ಣದ ಟಿ ಶರ್ಟ್ ಧರಿಸಿದ್ದ, ಅದರ ಮೇಲೆ ‘ನಾಝಿ’ ಚಿಹ್ನೆ ಇದೆ ಎಂದು ಅವರು ತಿಳಿಸಿದ್ದಾರೆ.

ಬಾಂಗ್ಲಾ ದೋಣಿ ದುರಂತ: ಮೃತರ ಸಂಖ್ಯೆ 39ಕ್ಕೆ ಏರಿಕೆ

ಢಾಕಾ (ಪಿಟಿಐ): ಬಾಂಗ್ಲಾದೇಶದ ವಾಯವ್ಯ ಭಾಗದ ಪಂಚಗಡ ಜಿಲ್ಲೆಯ ಕೊರೊಟೊ ನದಿಯಲ್ಲಿ ಭಾನುವಾರ ದೋಣಿಯೊಂದು ಮಗುಚಿದ್ದು, ದುರ್ಘಟನೆಯಲ್ಲಿ ಮೃತಪಟ್ಟವರ ಸಂಖ್ಯೆ 39ಕ್ಕೆ ಏರಿಕೆಯಾಗಿದೆ.

ಮೃತರಲ್ಲಿ 21 ಮಹಿಳೆಯರು, 11 ಮಕ್ಕಳು ಮತ್ತು ಏಳು ಮಂದಿ ಪುರುಷರು ಸೇರಿದ್ದಾರೆ. ಇನ್ನೂ 58 ಮಂದಿ ನಾಪತ್ತೆಯಾಗಿದ್ದಾರೆ. ಬೋದೇಶ್ವರಿ ದೇವಸ್ಥಾನಕ್ಕೆ ದುರ್ಗಾ ಪೂಜೆಗಾಗಿ ದೋಣಿಯಲ್ಲಿ ಸುಮಾರು 80 ಮಂದಿ ಪ್ರಯಾಣಿಸುತ್ತಿದ್ದರು ಎಂದು ಸಂಬಂಧಿಗಳನ್ನು ಉಲ್ಲೇಖಿಸಿ ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ನದಿಯಲ್ಲಿ ರಭಸವಾಗಿ ನೀರು ಹರಿಯುತ್ತಿದ್ದು, ಕೆಲವರು ನೀರಲ್ಲಿ ಕೊಚ್ಚಿ ಹೋಗಿರುವ ಸಾಧ್ಯತೆ ಇದೆ ಎಂದು ಅಗ್ನಿಶಾಮಕ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲ್ಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು, ಹುಡುಗರು ಬೇಕಾಗಿದ್ದಾರೆ ಊಟವಸತಿಯಿದೆ 10,000 - 15,000. 8951315839, 9880545002

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

General

ಬೆಂಗಳೂರಿನ ಎಲ್ಲಾ ಭಾಗಗಳಲ್ಲಿ ಪಿಕ್ಕಿಂಗ್, ಪ್ಯಾಕಿಂಗ್,ಸ್ಕ್ಯಾನಿಂಗ್ ಕೆಲಸಗಳಿಗಾಗಿ ಯುವಕ,ಯುವತಿಯರು ಬೇಕಾಗಿದ್ದಾರೆ, ಆಯ್ದ ಭಾಗಗಳಲ್ಲಿ ಊಟ,ವಸತಿ ವಾಹನ ಸೌಲಭ್ಯವಿದೆ,15,000-19,000 /-ಸಂಬಳ. 8123967566, 9036016848.

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಮನೆಯಿಂದಲೇ ಕೆಲಸ: ಗೃಹಿಣಿಯರು, ವಿದ್ಯಾರ್ಥಿಗಳು,ನಿವೃತ್ತರು, ನೌಕರರು, ಡೇಟಾಎಂಟ್ರಿ, ಬುಕ್ ರೈಟಿಂಗ್, ಫಾರಂಫಿಲ್ಲಿಂಗ್,ತಿಂಗಳಿಗೆ 15,000-18,000 ಗಳಿಸಿ. 9148801842, 8904455542.

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000- 20000 ಗಳಿಸಿ. ಕರೆಮಾಡಿ: 9611225266/ 9611225388

ಪ್ರವಾಸ

Travel

16.11.2022 16ದಿನಗಳು ಮಧ್ಯಪ್ರದೇಶ ಗುಜರಾತ್ ರಾಜಸ್ಥಾನ 4ಜ್ಯೋತಿರ್ಲಿಂಗ ಪಂಚದ್ವಾರಕ ಜೋದ್‌ಪುರ, ಪುಷ್ಕರ್‌ಉದಯಪುರ ಜೈಸಲ್ಮೇರ್ ಅಹಮದಾಬಾದ್. ಶ್ರೀಗಂಗಾ ಟೂರಿಸ್ಟ್.ಬೆಂಗಳೂರು: 9480253807, 8105522123

ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ ದಸರಾ ಹಾಗೂ ದೀಪಾವಳಿ ವಿಶೇಷ ಪ್ರವಾಸ. 14.10.2022 8 ದಿನಗಳ ಶಿರಡಿ. 14.10.2022 6 ದಿನಗಳ ದಕ್ಷಿಣಕನ್ನಡ. 27.10.2022 4 ದಿನಗಳ ಗೋವಾ ದುಧ್‌ಸಾಗರ್. 30.10.2022 13 ದಿನಗಳ ಕಾಶಿ,ಮುಕ್ತಿನಾಥ. 09.11.2022 9ದಿನಗಳ ಅಖಂಡ ಗುಜರಾತ್ 06.11.2022 4ದಿನಗಳ ರಾಮೇಶ್ವರಂ ಕನ್ಯಾಕುಮಾರಿ 14.11.2022 12 ದಿನಗಳ ಅಸ್ಸಾಂ ಅರುಣಾಚಲಪ್ರದೇಶ 27.10.2022 ದೆಹಲಿ,ಆಗ್ರಾ ವೈಷ್ಣವಿದೇವಿ 30.10.2022 ದೆಹಲಿ ಕುಲುಮನಾಲಿ 9880847001 9342848791

16.11.2022 11.01.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 06.11.2022 13.01.2023 ದುಬೈ 5 ದಿನಗಳು. 27.11.2022 ನೇಪಾಳ 8 ದಿನಗಳು. 06.10.2022 06.11.2022 09.12.2022 ಕಾಶಿ,ಗಯಾ,ಅಯೋಧ್ಯ 7 ದಿನಗಳು. 13.10.2022 12.11.2022 12.12.2022 ಗುಜರಾತ್ 8 ದಿನಗಳು. 06.11.2022 05.12.2022 ರಾಜಸ್ಥಾನ್ 9 ದಿನಗಳು. ಜೈನ್ ಟ್ರಾವಲ್ಸ್ ಬೆಂಗಳೂರು-3 9448402248 7022547922

ಮಾರುತಿ ಟ್ರಾವೆಲ್ಸ್. 1.10.2022 ತಮಿಳುನಾಡು 5 ದಿನಗಳು. 7.10.2022 ಕೇರಳ 5 ದಿನಗಳು. 14.10.2022 ಶಿರಡಿ 5 ದಿನಗಳು. 21.10.2022 ಆಂಧ್ರ- ತೆಲಂಗಾಣ 5 ದಿನಗಳು. 30.10.2022 ಕಾಶಿಯಾತ್ರಾ 14 ದಿನಗಳು. 9916688569

ಕಾಶಿ ಅಯೋಧ್ಯ ಅಲಹಾಬಾದ್ ಗಯಾ,ಬುದ್ಧಗಯಾ,ಕೋಲ್ಕತ ಪೂರಿಜಗನ್ನಾಥ್ ಕೊನಾರ್ಕ್ ಸೂರ್ಯ ದೇವಾಲಯಾ ಭುವನೇಶ್ವರ್ 02.12.2022 ರಿಂದ 9 ದಿನಗಳು. ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು. 9448294477

ಭವಿಷ್ಯ

Astrology

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 9900510171

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD

BOOK YOUR CLASSIFIEDS ONLINE

ಪ್ರಜಾವಾಣಿ

5 EASY STEP

5 Easy steps to book your ads

LOG INTO WWW.DHCLASSIFIEDS.COM

CHOOSE THE CATEGORY

CHOOSE THE AD DATES

COMPOSE THE MATTER

CONFIRM AND PAY

TO BOOK YOUR CLASSIFIEDS ADS ONLINE

JOB | LOST | REAL ESTATE | NAME CHANGE | EDU | HEALTH

MATRI | AUTO | ASTRO | NOTICE | TRAVEL

condition apply*

WWW.DHCLASSIFIEDS.COM

For more information Contact:

9731810277 | 9901641752 | 9845114560 | 9886213331

Email: dhclassifieds@deccanherald.co.in

ಗರಡಿ ಮನೆಗಳಿಗೆ ₹ 10 ಲಕ್ಷ: ಸಚಿವ

ಪ್ರಜಾವಾಣಿ ವಾರ್ತೆ

ಮೈಸೂರು: ‘ನಾಡಕುಸ್ತಿಗೆ ಪ್ರೋತ್ಸಾಹ ನೀಡಲು ರಾಜ್ಯದ ಪ್ರತಿ ಗರಡಿ ಮನೆಗೆ ₹ 10 ಲಕ್ಷ ನೀಡಲಾಗುವುದು’ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ಹೇಳಿದರು.

ದಸರಾ ನಾಡಕುಸ್ತಿಗೆ ಸೋಮವಾರ ಚಾಲನೆ ನೀಡಿ ಮಾತನಾಡಿ, ‘ಮೈಸೂರು ಹಾಗೂ ಉತ್ತರ ಕರ್ನಾಟಕ ಭಾಗದಲ್ಲಿನ ಗರಡಿ ಮನೆಗಳು ಕುಸ್ತಿಪಟುಗಳನ್ನು ತಯಾರು ಮಾಡುತ್ತಿವೆ. ಹೀಗಾಗಿ ಗರಡಿ ಮನೆಗಳ ದುರಸ್ತಿ ಹಾಗೂ ನಿರ್ಮಾಣಕ್ಕೆ ಇಲಾಖೆಯಿಂದ ಅನುದಾನ ನೀಡಲಾಗುವುದು’ ಎಂದರು.

‘ಜಿಮ್ ಅಬ್ಬರ ಹೆಚ್ಚಿದ್ದರೂ ಪಾರಂಪರಿಕವಾಗಿ ಗರಡಿ ಮನೆಗಳಿಗೆ ವಿಶೇಷ ಮಾನ್ಯತೆ ಇದೆ. ಮೈಸೂರು ಅರಸರು ನಾಡ ಕುಸ್ತಿಗೆ ಪ್ರೋತ್ಸಾಹ ನೀಡಿದ್ದರು. ಆ ಪರಂಪರೆಯನ್ನು ಮುಂದುವರಿಸಬೇಕಿದೆ’ ಎಂದು ಹೇಳಿದರು.

ಮೈಸೂರಿನಲ್ಲಿ ಸೋಮವಾರ ಆರಂಭವಾದ ದಸರಾ ನಾಡಕುಸ್ತಿಯಲ್ಲಿ ಹರಿಯಾಣದ ವಿಕಾಸ್ ಕಾಳ ಹಾಗೂ ಕೊಲ್ಹಾಪುರದ ಪೈಲ್ವಾನ್ ಸಿದ್ದೇಶ್ವರ ಮೌಲಿ ಜಮದಾಳೆ ನಡುವಿನ ಪೈಪೋಟಿಯ ದೃಶ್ಯ. ಈ ಕುಸ್ತಿ ಸಮಬಲದಲ್ಲಿ ಕೊನೆಗೊಂಡಿತು –ಪ್ರಜಾವಾಣಿ ಚಿತ್ರ

ಪಂಕಜ್, ಕೊಠಾರಿಗೆ ನೇರ ಪ್ರವೇಶ

ನವದೆಹಲಿ (ಪಿಟಿಐ): ಭಾರತದ ಪಂಕಜ್ ಅಡ್ವಾಣಿ, ಸೌರವ್ ಕೊಠಾರಿ ಮತ್ತು ಧ್ರುವ ಸಿತ್ವಾಲಾ ಅವರು ಐಬಿಎಸ್‌ಎಫ್ ವಿಶ್ವ ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್‌ಗೆ ನೇರ ಪ್ರವೇಶ ಪಡೆದಿದ್ದಾರೆ.

ಮಲೇಷ್ಯಾದ ಕ್ವಾಲಾಲಂಪುರದಲ್ಲಿ ಅಕ್ಟೋಬರ್ 4ರಿಂದ 8ರವರೆಗೆ ಈ ಚಾಂಪಿಯನ್‌ಷಿಪ್ ನಿಗದಿಯಾಗಿದೆ. ಧ್ವಜ್ ಹರಿಯಾ, ಲೌಕಿಕ್ ಪಥೇರ್, ಎಸ್. ಶ್ರೀಕೃಷ್ಣ ಮತ್ತು ರೋಹನ್ ಜಂಬೂಸಾರಿಯಾ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲಿರುವ ಭಾರತದ ಇನ್ನುಳಿದ ಸ್ಪರ್ಧಿಗಳು.

ಕೋವಿಡ್ ಕಾರಣದಿಂದಾಗಿ ಎರಡು ವರ್ಷ ಸ್ಥಗಿತಗೊಂಡಿದ್ದ ಚಾಂಪಿಯನ್‌ಷಿಪ್ ಈ ಬಾರಿ ನಡೆಯುತ್ತಿದೆ.

ಅಖಿಲ ಭಾರತ ಪೋಸ್ಟಲ್ ವಾಲಿಬಾಲ್ ಇಂದಿನಿಂದ

ಪ್ರಶಸ್ತಿಗೆ 16 ತಂಡಗಳ ಪೈಪೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತ 35ನೇ ಪೋಸ್ಟಲ್ ವಾಲಿಬಾಲ್ ಟೂರ್ನಿಯು ಮಂಗಳವಾರದಿಂದ ಉದ್ಯಾನನಗರಿಯಲ್ಲಿ ನಡೆಯಲಿದ್ದು, ಪ್ರಶಸ್ತಿಗಾಗಿ 16 ವಲಯಗಳ ತಂಡಗಳು ಹೋರಾಟ ನಡೆಸಲಿವೆ.

ಈ ಕುರಿತು ಸೋಮವಾರ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ವೃತ್ತ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್. ರಾಜೇಂದ್ರ ಕುಮಾರ್ ಮಾಹಿತಿ ನೀಡಿದರು.

‘ಇದೇ 30ರವರೆಗೆ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುವ ಟೂರ್ನಿಯಲ್ಲಿ ಆತಿಥೇಯ ಕರ್ನಾಟಕ, ಆಂಧ್ರಪ್ರದೇಶ, ದೆಹಲಿ, ಗುಜರಾತ್, ಹರಿಯಾಣ, ಹಿಮಾಚಲ ಪ್ರದೇಶ, ಕೇರಳ, ಮಧ್ಯಪ್ರದೇಶ, ಮಹಾರಾಷ್ಟ್ರ, ಒಡಿಶಾ, ಪಂಜಾಬ್, ರಾಜಸ್ಥಾನ, ತಮಿಳುನಾಡು, ತೆಲಂಗಾಣ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳದ ಪೋಸ್ಟಲ್ ವೃತ್ತಗಳ ತಂಡಗಳು ಭಾಗವಹಿಸಲಿವೆ’ ಎಂದರು.

1986ರಲ್ಲಿ ಈ ಟೂರ್ನಿ ಆರಂಭವಾಗಿತ್ತು. 2019ರಲ್ಲಿ ಕೊನೆಯ ಬಾರಿ ನಡೆದಿದ್ದ ಟೂರ್ನಿ ನಡೆದಿತ್ತು. ಬಳಿಕ ಎರಡು ವರ್ಷ (2020, 2021) ಕೋವಿಡ್ ಕಾರಣದಿಂದ ಆಯೋಜನೆಯಾಗಿರಲಿಲ್ಲ. ಈ ಬಾರಿ 200ಕ್ಕೂ ಹೆಚ್ಚು ಆಟಗಾರರು ಆಡಲಿದ್ದಾರೆ. ಪಂದ್ಯಗಳ ನೇರಪ್ರಸಾರ ವೀಕ್ಷಿಸಲು https://karnatakapost.gov.in:4431/aipvt ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

2019ರಲ್ಲಿ ಹಿಮಾಚಲ ಪ್ರದೇಶದಲ್ಲಿ ನಡೆದಿದ್ದ ಟೂರ್ನಿಯಲ್ಲಿ ಕರ್ನಾಟಕ ತಂಡವು ರನ್ನರ್‌ಅಪ್ ಆಗಿ ಹೊರಹೊಮ್ಮಿತ್ತು. ಹಿಮಾಚಲ ಪ್ರದೇಶ ಚಾಂಪಿಯನ್ ಪಟ್ಟ ಧರಿಸಿತ್ತು. ಎ. ಕಾರ್ತಿಕ್, ವಿನಾಯಕ ರೋಖಡೆ, ಗಣೇಶ್ ಕೆ, ರೈಸನ್ ಬೆನೆಟ್ ರೆಬೆಲ್ಲೊ, ಕಾರ್ತಿಕ್ ಎಸ್.ಎ. ಕರ್ನಾಟಕ ತಂಡದ ಪ್ರಮುಖ ಆಟಗಾರರಾಗಿದ್ದಾರೆ.ಈ ಬಾರಿ ತಂಡಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಲಾಗಿದ್ದು, ಕರ್ನಾಟಕ ಬಿ ಗುಂಪಿನಲ್ಲಿದೆ. ಆತಿಥೇಯ ತಂಡವು ಮೊದಲ ಪಂದ್ಯದಲ್ಲಿ ಮಂಗಳವಾರ ಪಂಜಾಬ್ ಎದುರು ಸೆಣಸಲಿದೆ. ಕೇರಳ ಮತ್ತು ದೆಹಲಿ ತಂಡಗಳು ಇದೇ ಗುಂಪಿನಲ್ಲಿವೆ. ನಾಕೌಟ್ ಮಾದರಿಯಲ್ಲಿ ಟೂರ್ನಿ ನಡೆಯಲಿದೆ.

ಕರ್ನಾಟಕ ತಂಡ: ಎಡದಿಂದ– ಅಶೋಕ್ ಕುಮಾರ ನಾಯ್ಕ್, ಗಿರೀಶ್ ಟಿ.ಎಸ್, ವಿನೋದ್ ಕುಮಾರ್ ಎನ್, ಬಸವರಾಜ ಪಾಶ್ಚಾಪೂರ, ಸತೀಶ್ ಕುಮಾರ್, ವಿನೋದ್ ಮಾಳಗಿ, ರೋಹಿತ್ ದದಾಮಟ್ಟಿ, ಬಾಹುಬಲಿ ಶಾಪೂರ.

ಕರ್ನಾಟಕಕ್ಕೆ ಎಂಟು ಕಂಚು

ಬೆಂಗಳೂರು: ನವದೆಹಲಿಯ ಇಂದಿರಾಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಅಖಿಲ ಭಾರತ ಪೊಲೀಸ್ ಜೂಡೋ ಕ್ಲಸ್ಟರ್ ಕ್ರೀಡಾಕೂಟದ ಪೆಂಕಾಕ್ ಸಿಲತ್ ಮತ್ತು ಫೆನ್ಸಿಂಗ್ ಕ್ರೀಡೆಗಳಲ್ಲಿ ಕರ್ನಾಟಕ ತಂಡವು ಒಟ್ಟು ಎಂಟು ಕಂಚಿನ ಪದಕ ಗೆದ್ದುಕೊಂಡಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560

Jerry : 9731810277 | Tanveer : 9886213331

Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಕಾರ್ಲ್‌ಸನ್‌ಗೆ ಪ್ರಶಸ್ತಿ

ನ್ಯೂಯಾರ್ಕ್ (ಪಿಟಿಐ): ವಿಶ್ವದ ಅಗ್ರ ರ‍್ಯಾಂಕಿಂಗ್‌ನ ಆಟಗಾರ ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅವರು ಜೂಲಿಯಸ್ ಬೇರ್ ಜೆನರೇಷನ್ ಕಪ್ ಆನ್‌ಲೈನ್ ಚೆಸ್ ಟೂರ್ನಿ ಗೆದ್ದುಕೊಂಡರು. ಮಾತ್ರವಲ್ಲ, 2,900 ರೇಟಿಂಗ್ ಪಾಯಿಂಟ್ ತಲುಪಿ ಐತಿಹಾಸಿಕ ಸಾಧನೆ ಮಾಡಿದರು.

ಭಾರತದ ಯುವ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಎರಿಗೈಸಿ ಫೈನಲ್‌ನಲ್ಲಿ ನಿರಾಸೆ ಅನುಭವಿಸಿದರು. ಎರಡು ಹಂತಗಳಲ್ಲಿ ನಡೆದ ಫೈನಲ್‌ನ ಮೊದಲ ಹಂತದ ಬಳಿಕ ಕಾರ್ಲ್‌ಸನ್ 2.5–0.5 ಪಾಯಿಂಟ್‌ಗಳಿಂದ ಮುನ್ನಡೆ ಸಾಧಿಸಿದ್ದರು. ಸೋಮವಾರ ನಡೆದ ಎರಡನೇ ಹಂತದ ಮೊದಲ ಎರಡು ಪಂದ್ಯಗಳಲ್ಲಿ ಗೆದ್ದು ಚಾಂಪಿಯನ್ ಆದರು.

ಫೈನಲ್ ಪಂದ್ಯವನ್ನು ಬ್ಲಿಟ್ಜ್ ಟೈಬ್ರೇಕರ್‌ಗೆ ಕೊಂಡೊಯ್ಯಬೇಕಿದ್ದರೆ, ಎರಿಗೈಸಿ 2ನೇ ಹಂತ ದಲ್ಲಿ ಗೆಲುವು ಪಡೆಯಲೇಬೇಕಿತ್ತು. ಆದರೆ ವಿಶ್ವ ಚಾಂಪಿಯನ್ ಕಾರ್ಲ್‌ಸನ್ ಎದುರು ಅವರು ಮುಗ್ಗರಿಸಿದರು. ಎರಿಗೈಸಿ ಮೊದಲ ಪಂದ್ಯದಲ್ಲಿ 48 ನಡೆಗಳ ಬಳಿಕ ಸೋಲೊಪ್ಪಿಕೊಂಡರೆ, ಎರಡನೇ ಪಂದ್ಯದಲ್ಲಿ 52 ನಡೆಗಳಲ್ಲಿ ಶರಣಾದರು. ಇಲ್ಲಿ ಪ್ರಶಸ್ತಿ ಗೆಲ್ಲದಿದ್ದರೂ, ಎರಿಗೈಸಿ ಅವರು ಹಲವು ಪ್ರಮುಖ ಆಟಗಾರರನ್ನು ಸೋಲಿಸಿ ಗಮನ ಸೆಳೆದರು. ಸ್ಯಾನ್ ಫ್ರಾನ್ಸಿಸ್ಕೊದಲ್ಲಿ ಈ ವರ್ಷದ ಕೊನೆಯಲ್ಲಿ ನಡೆಯಲಿರುವ ಮೆಲ್ಟ್‌ವಾಟರ್ ಚೆಸ್ ಟೂರ್ ಫೈನಲ್‌ನಲ್ಲಿ ಆಡಲು ಅರ್ಹತೆ ಪಡೆದರು.

ಕಾರ್ಲ್‌ಸನ್ ಟೂರ್ನಿಯ ಪ್ರಿಲಿಮಿನರಿ ಸುತ್ತಿನಲ್ಲಿ ಹ್ಯಾನ್ಸ್ ನೀಮನ್ ಎದುರಿನ ಪಂದ್ಯವನ್ನು ಅರ್ಧದಲ್ಲೇ ತ್ಯಜಿಸಿದ್ದನ್ನು ಹೊರತುಪಡಿಸಿದರೆ, ಅಜೇಯ ಸಾಧನೆಯೊಂದಿಗೆ ನಾಕೌಟ್ ಹಂತ ಪ್ರವೇಶಿಸಿದ್ದರು.

ಅರ್ಜುನ್ ಮೈನಿ

ರೇಸ್: ಅರ್ಜುನ್ ಮೈನಿ ಮಿಂಚು

ಸ್ಪೀಲ್‌ಬರ್ಗ್, ಅಸ್ಟ್ರಿಯಾ (ಪಿಟಿಐ): ಭಾರತದ ರೇಸಿಂಗ್ ಸ್ಪರ್ಧಿ ಅರ್ಜುನ್ ಮೈನಿ ಅವರು ಇಲ್ಲಿ ನಡೆಯುತ್ತಿರುವ ಡಿಟಿಎಂ ಚಾಂಪಿಯನ್‌ಷಿಪ್‌ನ ಏಳನೇ ರೇಸ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿದರು. ಇದರೊಂದಿಗೆ ತಮ್ಮ ಶ್ರೇಷ್ಠ ಸಾಧನೆಯನ್ನು ಸರಿಗಟ್ಟಿದರು.

ಬೆಂಗಳೂರು ಮೂಲದ ಅರ್ಜುನ್ ಇಲ್ಲಿ ಏಳನೆಯವರಾಗಿ ಸ್ಪರ್ಧೆ ಆರಂಭಿಸಬೇಕಿತ್ತು. ಆದರೆ ಕಳೆದ ರೇಸ್‌ನಲ್ಲಿ ಪೆನಾಲ್ಟಿ ಪಡೆದಿದ್ದರಿಂದ 10ನೆಯವರಾಗಿ ಸ್ಪರ್ಧೆ ಆರಂಭಿಸಬೇಕಾಯಿತು.

ಅನೇಕ ಸವಾಲುಗಳ ನಡುವೆಯೂ ಅವರು ಇಲ್ಲಿ ನಾಲ್ಕನೇ ಸ್ಥಾನ ಪಡೆಯುವಲ್ಲಿ ಯಶಸ್ವಿಯಾದರು. ಒಟ್ಟಾರೆ ಪಾಯಿಂಟ್ಸ್ ಪಟ್ಟಿಯಲ್ಲಿ ಸದ್ಯ ಅವರು 18ನೇ ಸ್ಥಾನದಲ್ಲಿದ್ದಾರೆ. 24 ಪಾಯಿಂಟ್ಸ್ ಗಳಿಸಿದ್ದಾರೆ.

36ನೇ ರಾಷ್ಟ್ರೀಯ ಕ್ರೀಡಾಕೂಟ: ಹೆಚ್ಚಿನ ಪದಕ ನಿರೀಕ್ಷೆಯಲ್ಲಿ ಕರ್ನಾಟಕ

ರಾಜ್ಯದ 421 ಸ್ಪರ್ಧಿಗಳು ಕಣಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಜರಾತ್‌ನಲ್ಲಿ ಗುರುವಾರ ಆರಂಭವಾಗಲಿರುವ 36ನೇ ರಾಷ್ಟ್ರೀಯ ಕ್ರೀಡಾಕೂಟಕ್ಕೆ ಕರ್ನಾಟಕವು 421 ಕ್ರೀಡಾಪಟುಗಳ ದೊಡ್ಡ ತಂಡವನ್ನೇ ಕಣಕ್ಕಿಳಿಸಿದ್ದು, ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದೆ.

ರಾಷ್ಟ್ರೀಯ ಕ್ರೀಡಾಕೂಟದ ವಿವಿಧ ಸ್ಪರ್ಧೆಗಳು ಗುಜರಾತ್‌ನ ಆರು ನಗರಗಳಲ್ಲಿ ಆಯೋಜನೆಯಾಗಿವೆ. ಕೆಲವು ವಿಭಾಗಗಳಲ್ಲಿ ಸ್ಪರ್ಧೆಗಳು ಈಗಾಗಲೇ ಆರಂಭವಾಗಿದೆಯಾದರೂ, ಕೂಟದ ಉದ್ಘಾಟನೆ ಸೆ.29 ರಂದು ನಡೆಯಲಿದೆ. ಕಬಡ್ಡಿ, ಲಾನ್‌ಬಾಲ್ಸ್ ಮತ್ತು ನೆಟ್‌ಬಾಲ್ ಕ್ರೀಡೆಗಳು ಸೋಮವಾರ ಆರಂಭವಾದವು.

ಕರ್ನಾಟಕವು ಈ ಬಾರಿ ಅಥ್ಲೆಟಿಕ್ಸ್ ಮತ್ತು ಈಜು ಸೇರಿದಂತೆ 28 ಸ್ಪರ್ಧೆಗಳಲ್ಲಿ ಪದಕಕ್ಕಾಗಿ ಪೈಪೋಟಿ ನಡೆಸಲಿದೆ. ಕ್ರೀಡಾಪಟುಗಳು, ಕೋಚ್ ಮತ್ತು ಮ್ಯಾನೇಜರ್‌ಗಳು ಒಳಗೊಂಡಂತೆ ಕರ್ನಾಟಕದ ಒಟ್ಟು 500 ಸದಸ್ಯರು ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಕರ್ನಾಟಕ ಒಲಿಂಪಿಕ್ ಸಂಸ್ಥೆಯ ಪ್ರಕಟಣೆ ತಿಳಿಸಿದೆ.

68 ಸದಸ್ಯರನ್ನೊಳಗೊಂಡ ಈಜು ತಂಡದಿಂದ ಹೆಚ್ಚಿನ ಪದಕಗಳನ್ನು ನಿರೀಕ್ಷಿಸಲಾಗಿದೆ. ಕರ್ನಾಟಕವು ಎರಡನೇ ಅತಿದೊಡ್ಡ ತಂಡವನ್ನು ಅಥ್ಲೆಟಿಕ್ಸ್‌ನಲ್ಲಿ (44 ಸದಸ್ಯರು) ಕಣಕ್ಕಿಳಿಸಿದೆ.

ಬ್ಯಾಡ್ಮಿಂಟನ್, ಬ್ಯಾಸ್ಕೆಟ್‌ಬಾಲ್, ಬೀಚ್ ವಾಲಿಬಾಲ್, ಬಾಕ್ಸಿಂಗ್, ಕೆನೋಯಿಂಗ್, ಸೈಕ್ಲಿಂಗ್, ಫೆನ್ಸಿಂಗ್, ಫುಟ್‌ಬಾಲ್, ಜಿಮ್ನಾಸ್ಟಿಕ್ಸ್, ಹಾಕಿ, ಜೂಡೊ, ಮಲ್ಲಕಂಬ, ನೆಟ್‌ಬಾಲ್, ಸ್ಕೇಟಿಂಗ್, ಶೂಟಿಂಗ್, ಸ್ಕ್ವಾಷ್, ಟೆನಿಸ್, ಟೇಬಲ್ ಟೆನಿಸ್, ಟ್ರಯಥ್ಲಾನ್, ವಾಲಿಬಾಲ್, ವೇಟ್‌ಲಿಫ್ಟಿಂಗ್, ವುಶು, ಯೋಗಾಸನ ಮತ್ತು ಗಾಲ್ಫ್‌ನಲ್ಲಿ ಕರ್ನಾಟಕ ತಂಡ ಪದಕಕ್ಕಾಗಿ ಪೈಪೋಟಿ ನಡೆಸಲಿದೆ.

ಕಿಟ್ ವಿತರಣೆ: ರಾಷ್ಟ್ರೀಯ ಕ್ರೀಡಾಕೂಟಕ್ಕೆ ತೆರಳಲಿರುವ ಕರ್ನಾಟಕ ತಂಡದ ಸದಸ್ಯರಿಗೆ ಕರ್ನಾಟಕ ಒಲಿಂಪಿಕ್ ಸಂಸ್ಥೆ (ಕೆಒಎ) ವತಿಯಿಂದ ಸೋಮವಾರ ಕಿಟ್ ವಿತರಿಸಲಾಯಿತು.

ಕಂಠೀರವ ಕ್ರೀಡಾಂಗಣದ ಒಲಿಂಪಿಕ್ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೆಒಎ ಅಧ್ಯಕ್ಷ ಕೆ.ಗೋವಿಂದರಾಜ್, ಕಾರ್ಯದರ್ಶಿ ಟಿ.ಅನಂತರಾಜು ಮತ್ತು ಕ್ರೀಡಾ ಇಲಾಖೆಯ ಆಯುಕ್ತ ಡಾ.ಎಚ್.ಎನ್. ಗೋಪಾಲಕೃಷ್ಣ ಅವರು ಪಾಲ್ಗೊಂಡರು.

ಕರ್ನಾಟಕ ತಂಡದ ಸದಸ್ಯರಿಗೆ ಸೋಮವಾರ ಕಿಟ್ ವಿತರಣೆ ಮಾಡಿ ಬೀಳ್ಕೊಡಲಾಯಿತು. ಕೆಒಎ ಕಾರ್ಯದರ್ಶಿ ಟಿ.ಅನಂತರಾಜು, ಅಧ್ಯಕ್ಷ ಕೆ.ಗೋವಿಂದರಾಜ್, ಕ್ರೀಡಾ ಇಲಾಖೆಯ ಆಯುಕ್ತ ಡಾ.ಎಚ್.ಎನ್ ಗೋಪಾಲಕೃಷ್ಣ ಇದ್ದಾರೆ

ನೆಟ್‌ಬಾಲ್: ಕರ್ನಾಟಕ ಶುಭಾರಂಭ

ಕರ್ನಾಟಕ ಮಹಿಳಾ ತಂಡದವರು ರಾಷ್ಟ್ರೀಯ ಕ್ರೀಡಾಕೂಟದ ನೆಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಭಾವನಗರದಲ್ಲಿ ಸೋಮವಾರ ನಡೆದ 'ಬಿ' ಗುಂಪಿನ ಪಂದ್ಯದಲ್ಲಿ ಕರ್ನಾಟಕ 48–44 ರಲ್ಲಿ ದೆಹಲಿ ತಂಡವನ್ನು ಮಣಿಸಿತು.

ಮೊದಲಾರ್ಧ ಕೊನೆಗೊಂಡಾಗ 21–23 ರಲ್ಲಿ ಹಿನ್ನಡೆಯಲ್ಲಿದ್ದ ಕರ್ನಾಟಕ, ಎರಡನೇ ಅವಧಿಯಲ್ಲಿ ತಿರುಗೇಟು ನೀಡಿತು. ಮಂಗಳವಾರ ನಡೆಯುವ ಪಂದ್ಯದಲ್ಲಿ ಗುಜರಾತ್ ತಂಡವನ್ನು ಎದುರಿಸಿದೆ.

ಫುಟ್‌ಬಾಲ್: ಥಾಂಕೋಸ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಆಟವಾಡಿದ ಥಾಂಕೋಸ್ ಸ್ಟೂಡೆಂಟ್ಸ್ ಯೂನಿಯನ್ ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿದರು.

ಸೋಮವಾರ ನಡೆದ ಪಂದ್ಯದಲ್ಲಿ ಥಾಂಕೋಸ್ 2–1ರಿಂದ ಎಫ್‌ಸಿ ಅಗ್ನಿಪುತ್ರ ತಂಡದ ಎದುರು ಗೆದ್ದಿತು. ವಿಜೇತ ತಂಡಕ್ಕಾಗಿ ಲಿಂಡ್ಸೆ ಡೇವಿಡ್ ಹೆಂಡರ್ಸನ್ (7ನೇ ನಿಮಿಷ) ಮತ್ತು ಆದಿತ್ಯ ಪ್ರತಾಪ್ ಸಿಂಗ್ ರಾಥೋಡ್ (36ನೇ ನಿ.) ಗೋಲು ದಾಖಲಿಸಿದರು. ಅಗ್ನಿಪುತ್ರ ಪರ ವ್ಯಾಲೆಂಟಿನ್ ನಾಬಿಲ್ಲಿ 18ನೇ ನಿಮಿಷ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದರು.

ಮತ್ತೊಂದು ಹಣಾಹಣಿಯಲ್ಲಿ ಬೆಂಗಳೂರು ಡ್ರೀಮ್ ಯುನೈಟೆಡ್ 1–1ರಿಂದ ಫ್ರೆಂಡ್ಸ್ ಯುನೈಟೆಡ್ ಎಫ್‌ಸಿ ತಂಡದೊಂದಿಗೆ ಡ್ರಾ ಸಾಧಿಸಿತು. ಡ್ರೀಮ್ ಪರ ಜೈ ಹರಿ ಬರ್ಮನ್ (55ನೇ ನಿ.) ಮತ್ತು ಫ್ರೆಂಡ್ಸ್ ಪರ ವಿಜಯ್ ತಂಗವೇಲ್ (20ನೇ ನಿ.) ಗೋಲು ಹೊಡೆದರು.

ಪರಿಕ್ರಮ ಜಯಭೇರಿ: ಕರ್ನಾಟಕ ಮಹಿಳಾ ಲೀಗ್ ಟೂರ್ನಿಯಲ್ಲಿ ಪರಿಕ್ರಮ ಎಫ್‌ಸಿ 4–1ರಿಂದ ಮಾಡರ್ನ್ ಗರ್ಲ್ಸ್ ಎದುರು ಗೆದ್ದಿತು. ವಿಜೇತ ತಂಡದ ಪರ ಆರತಿ ತುಡು (7ನೇ ನಿ.), ಸೋನಾಲಿ ಮಂಡಲ್ (17ನೇ ನಿ.), ಪಕೀಲಾ ಬೋರೊ (28ನೇ ನಿ.) ಮತ್ತು ಸುಜಾತಾ ರೈ (64ನೇ ನಿ.) ಗೋಲು ದಾಖಲಿಸಿದರು. ಮಾಡರ್ನ್ ಗರ್ಲ್ಸ್ ತಂಡಕ್ಕಾಗಿ ಉಷಂ ಲಕ್ಷ್ಮಿ (45 + 2) ಗೋಲು ಹೊಡೆದರು.

ಕಾರ್ಯನಿರ್ವಾಹಕ ನಿರ್ದೇಶಕರು,
ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್,
ಕಮಲಾಪುರ, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ.

ಸಂಖ್ಯೆ:ಅಬಿವಾಮೃ/ಟೆ.ಕಾ.ಓಹೆಚ್‌ಟಿ/& ಅ.ಕೊ/102/2022–23 ದಿನಾಂಕ:23–09–2022

ಇ–ಟೆಂಡರ್ ಪ್ರಕಟಣೆ

2022–23ನೇ ಸಾಲಿನಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್, ಕಮಲಾಪುರ ಮೃಗಾಲಯದಲ್ಲಿ (1) **ಅಡುಗೆ ಮತ್ತು ಆಹಾರ ದಾಸ್ತಾನು ಸಂಗ್ರಹಣೆ ಕೊಠಡಿಯನ್ನು ಮತ್ತು (2) 2.50 ಲಕ್ಷ ಲೀಟರಿನ ಓವರ್ ಹೆಡ್ ಟ್ಯಾಂಕ್ ನಿರ್ಮಾಣ** ಮಾಡುವ ಸಂಬಂಧ ಕಾಮಗಾರಿಗಳಿಗೆ ಕರ್ನಾಟಕ ಅರಣ್ಯ ಇಲಾಖೆ/ ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ನಿಯಮ 2000 ಮತ್ತು ಕಾಯ್ದೆ 1999ರ ಇ–ಪೋರ್ಟಲ್ ಪ್ರಕಾರ ಟೆಂಡರ್ ಕರೆಯಲಾಗಿದೆ.

ಇಂಡೆಂಟ್ ಸಂಖ್ಯೆ: 1.ZAK/2022-23/OW/WORK_INDENT477. ಅಂದಾಜು ಮೊತ್ತ (ರೂ. ಗಳಲ್ಲಿ): Rs. 54,00,000.00. ಇ.ಎಂ.ಡಿ ಮೊತ್ತ (ರೂ.): Rs.1,10,000.00. ಇಂಡೆಂಟ್ ಸಂಖ್ಯೆ: 2.ZAK/2022-23/OW/WORK_INDENT478. ಅಂದಾಜು ಮೊತ್ತ (ರೂ. ಗಳಲ್ಲಿ): Rs. 86,00,000.00. ಇ.ಎಂ.ಡಿ ಮೊತ್ತ (ರೂ.): Rs.1,72,000.00

ಈ ಟೆಂಡರ್ ಪ್ರಕಟಣೆ ಪ್ರತಿಯು www.eproc.karnataka.gov.in ಇಲ್ಲಿ ಲಭ್ಯವಿರುತ್ತದೆ. ಟೆಂಡರ್ ವಿವರಗಳು ಇ–ಪ್ರಕ್ಯೂರಮೆಂಟ್‌ನಲ್ಲಿ ಲಭ್ಯವಾಗುವ ದಿನಾಂಕ: 23.09.2022, ಕೊನೆಯ ದಿನಾಂಕ: 15.10.2022 ಸಾಯಂಕಾಲ 5.30 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 18.10.2022 ಬೆಳಿಗ್ಗೆ 11.30 ಗಂಟೆಗೆ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: 19.10.2022 ಬೆಳಿಗ್ಗೆ 11.30 ಗಂಟೆಯ ನಂತರ. ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್, ಕಮಲಾಪುರ–ಪಾಪಿನಾಯಕನಹಳ್ಳಿ ಮುಖ್ಯರಸ್ತೆ (ಜಂಗಲ್ ರೆಸಾರ್ಟ್ ಹತ್ತಿರ) ಕಮಲಾಪುರ ಇವರ ಕಛೇರಿಯಿಂದ ಅಥವಾ ದೂರವಾಣಿ ಸಂಖ್ಯೆ : **08394–295289** ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ನಿರ್ದೇಶಕರು, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್, ಕಮಲಾಪುರ ಹೊಸಪೇಟೆ ತಾಲ್ಲೂಕು ವಿಜಯನಗರ ಜಿಲ್ಲೆ

ಡಿಐಪಿಆರ್/ಬಳ್ಳಾರಿ/ಹೊಸಪೇಟೆ/154/ಎಂಸಿಎ/2022–23

ಡೀನ್‌ಗೆ ಎಚ್ಚರಿಕೆ ಕೊಟ್ಟಿದ್ದೆವು: ದೀಪ್ತಿ

ನವದೆಹಲಿ (ಪಿಟಿಐ): 'ಕ್ರೀಸ್‌ಬಿಟ್ಟು ಮುಂದೆ ಹೋಗಿದ್ದಕ್ಕೆ ಇಂಗ್ಲೆಂಡ್ ತಂಡದ ಚಾರ್ಲಿ ಡೀನ್‌ಗೆ ಎಚ್ಚರಿಕೆ ನೀಡಲಾಗಿತ್ತು' ಎಂದು ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ ದೀಪ್ತಿ ಶರ್ಮಾ ಹೇಳಿದ್ದಾರೆ.

ಭಾನುವಾರ ಲಾರ್ಡ್ಸ್‌ನಲ್ಲಿ ನಡೆದಿದ್ದ ಕೊನೆಯ ಏಕದಿನ ಪಂದ್ಯದಲ್ಲಿ ದೀಪ್ತಿ ಅವರು ಡೀನ್ ಅವರನ್ನು ರನೌಟ್ (ಮಂಕಡಿಂಗ್) ಮಾಡಿದ ರೀತಿ ಚರ್ಚೆಗೆ ಕಾರಣವಾಗಿತ್ತು.

'ಆ ರೀತಿ ರನೌಟ್ ಮಾಡುವುದು ನಮ್ಮ ಯೋಜನೆಯಾಗಿತ್ತು. ಏಕೆಂದರೆ ಡೀನ್ ಅವರು ಎಸೆತ ಹಾಕುವ ಮುನ್ನವೇ ಕ್ರೀಸ್ ಬಿಟ್ಟು ಹಲವು ಸಲ ಮುಂದೆ ಹೋಗಿದ್ದರು. ಅದಕ್ಕೆ ಎಚ್ಚರಿಕೆಯನ್ನೂ ಕೊಟ್ಟಿದ್ದೆವು' ಎಂದು ಸೋಮವಾರ ತಂಡದ ಸಹ ಆಟಗಾರ್ತಿಯರ ಜತೆ ಕೋಲ್ಕತ್ತಕ್ಕೆ ಬಂದಿಳಿದ ದೀಪ್ತಿ, ಮಾಧ್ಯಮದವರಿಗೆ ತಿಳಿಸಿದರು.

'ಈ ವಿಷಯವನ್ನು ಅಂಪೈರ್ ಗಮನಕ್ಕೂ ತಂದಿದ್ದೆವು. ಆದರೂ ಅವರು ಅದೇ ತಪ್ಪು ಪುನರಾವರ್ತಿಸಿದರು. ರನೌಟ್ ಮಾಡದೆ ಬೇರೆ ದಾರಿಯಿರಲಿಲ್ಲ. ನಾವು ಆಟದ ನಿಯಮದಡಿಯಲ್ಲೇ ಎಲ್ಲವನ್ನೂ ಮಾಡಿದ್ದೇವೆ' ಎಂದು ರನೌಟ್‌ಅನ್ನು ಸಮರ್ಥಿಸಿಕೊಂಡರು.

ನಾನ್‌ಸ್ಟ್ರೈಕರ್ ಬ್ಯಾಟರ್‌ಗಳು ಎಸೆತ ಹಾಕುವ ಮುನ್ನವೇ ಕ್ರೀಸ್‌ನಿಂದ ಹೊರಗಡಿಯಿಟ್ಟಿದ್ದರೆ ರನೌಟ್ ಮಾಡಲು ಬೌಲರ್‌ಗೆ ಐಸಿಸಿ ನಿಯಮದಡಿ ಅವಕಾಶ ಇದೆ. ಆದರೂ ಡೀನ್ ಅವರ ಬಗ್ಗೆ ರನೌಟ್ ಪರ–ವಿರೋಧ ಚರ್ಚೆ ನಡೆದಿತ್ತು.

'ನಾವು ಯಾವುದೇ ಅಪರಾಧ ಮಾಡಿಲ್ಲ' ಎಂದು ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಪಂದ್ಯದ ಬಳಿಕ ಪ್ರತಿಕ್ರಿಯಿಸಿದ್ದರು. ಭಾರತ ತಂಡದ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಅವರೂ ದೀಪ್ತಿಗೆ ಬೆಂಬಲ ಸೂಚಿಸಿದ್ದರು.

ಆದರೆ ಇಂಗ್ಲೆಂಡ್‌ನ ಹಾಲಿ ಹಾಗೂ ಮಾಜಿ ಆಟಗಾರರು ತಮ್ಮ ಅಸಮಾಧಾನ ಹೊರಹಾಕಿದ್ದರು.

'ಆ ರೀತಿಯ ತಂತ್ರಗಾರಿಕೆ (ಮಂಕಡಿಂಗ್) ಬಳಸಿ ಪಂದ್ಯ ಗೆಲ್ಲುವುದಾದರೆ, ನೀವು ವರ್ಷಗಳ ಕಾಲ ಕಠಿಣ ಅಭ್ಯಾಸ ನಡೆಸುವ ಅಗತ್ಯವಿಲ್ಲ. ನಾನ್‌ಸ್ಟ್ರೈಕರ್‌ನಲ್ಲಿರುವ ಬ್ಯಾಟರ್ ಕ್ರೀಸ್ ಬಿಟ್ಟು ಮುಂದೆ ಹೋಗದಂತೆ ತರಬೇತಿ ಪಡೆಯಬೇಕಿರುವುದು ನಿಜ. ಆದರೆ ಪಂದ್ಯವೊಂದನ್ನು ಈ ರೀತಿ ಗೆಲ್ಲುವುದು ಅಸಹ್ಯಕರ ಎನಿಸುತ್ತದೆ' ಎಂದು ಇಂಗ್ಲೆಂಡ್ ತಂಡದ ಮಾಜಿ ನಾಯಕ ಮೈಕಲ್ ವಾನ್ ಟೀಕಿಸಿದ್ದಾರೆ.

ಸ್ವಾಗತ: ಇಂಗ್ಲೆಂಡ್ ಎದುರಿನ ಏಕದಿನ ಸರಣಿಯನ್ನು 3–0 ರಲ್ಲಿ ಗೆದ್ದುಕೊಂಡು 'ಕ್ಲೀನ್‌ಸ್ವೀಪ್' ಸಾಧನೆ ಮಾಡಿದ ಭಾರತ ತಂಡದ ಆಟಗಾರ್ತಿಯರು ಸೋಮವಾರ ಕೋಲ್ಕತ್ತಕ್ಕೆ ಬಂದಿಳಿದಾಗ ಅದ್ದೂರಿ ಸ್ವಾಗತ ನೀಡಲಾಯಿತು. ವಿಮಾನ ನಿಲ್ದಾಣದಲ್ಲಿ ನೆರೆದಿದ್ದ ಅಭಿಮಾನಿಗಳು ಹೂಮಳೆಗರೆದು ಬರಮಾಡಿಕೊಂಡರು.

ಸೋಮವಾರ ಕೋಲ್ಕತ್ತಕ್ಕೆ ಬಂದಿಳಿದ ಜೂಲನ್ ಗೋಸ್ವಾಮಿ ಅವರನ್ನು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಲಾಯಿತು –ಪಿಟಿಐ ಚಿತ್ರ

ಎಚ್ಚರಿಕೆ ನೀಡಿಲ್ಲ: ನೈಟ್

'ರನೌಟ್‌ಗೂ ಮುನ್ನ ಡೀನ್‌ಗೆ ಎಚ್ಚರಿಕೆ ನೀಡಲಾಗಿತ್ತು ಎಂಬುದು ಸುಳ್ಳು' ಎಂದು ಇಂಗ್ಲೆಂಡ್ ತಂಡದ ನಾಯಕಿ ಹೀದರ್ ನೈಟ್ ಹೇಳಿದ್ದಾರೆ.

'ಚಾರ್ಲಿ ಡೀನ್ ಅವರನ್ನು ಐಸಿಸಿ ನಿಯಮದಡಿಯಲ್ಲೇ ರನೌಟ್ ಮಾಡಲಾಗಿದೆ. ಭಾರತ ತಂಡ ಪಂದ್ಯ ಹಾಗೂ ಸರಣಿ ಗೆಲುವಿಗೆ ಅರ್ಹವಾಗಿದೆ. ಆದರೆ ಯಾವುದೇ ಎಚ್ಚರಿಕೆ ಕೊಟ್ಟಿರಲಿಲ್ಲ. ಭಾರತವು ಸುಳ್ಳು ಹೇಳುವ ಮೂಲಕ ರನೌಟ್‌ಅನ್ನು ಸಮರ್ಥಿಸಿಕೊಳ್ಳುವ ಅಗತ್ಯವಿರಲಿಲ್ಲ' ಎಂದು ಸೋಮವಾರ 'ಟ್ವೀಟ್' ಮಾಡಿದ್ದಾರೆ.

ಇಂಗ್ಲೆಂಡ್‌ನಲ್ಲಿ ನಗದು, ಆಭರಣ ಕಳವು: ತಾನಿಯಾ

ತಾನಿಯಾ

ನವದೆಹಲಿ (ಪಿಟಿಐ): ಇಂಗ್ಲೆಂಡ್ ಪ್ರವಾಸದ ವೇಳೆ ನಗದು ಹಾಗೂ ಬೆಲೆಬಾಳುವ ವಸ್ತುಗಳು ಕಳವಾಗಿವೆ ಎಂದು ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ ತಾನಿಯಾ ಭಾಟಿಯಾ ದೂರಿದ್ದಾರೆ.

'ಲಂಡನ್‌ನ ಮ್ಯಾರಿಯಟ್ ಹೋಟೆಲ್‌ನಲ್ಲಿ ಆಗಿರುವ ಕಹಿ ಅನುಭವದಿಂದ ನಿರಾಸೆ ಹಾಗೂ ಆಘಾತ ಉಂಟಾಗಿದೆ. ನನ್ನ ಕೊಠಡಿಯಲ್ಲಿಟ್ಟಿದ್ದ ನಗದು, ಎಟಿಎಂ ಕಾರ್ಡ್, ವಾಚ್ ಹಾಗೂ ಆಭರಣಗಳನ್ನು ಯಾರೋ ಕದ್ದೊಯ್ದಿದ್ದಾರೆ' ಎಂದು ಭಾಟಿಯಾ 'ಟ್ವೀಟ್' ಮಾಡಿದ್ದಾರೆ.

'ಘಟನೆ ಬಗ್ಗೆ ತನಿಖೆ ನಡೆದು, ನನ್ನ ವಸ್ತುಗಳು ಮರಳಿ ಸಿಗಬಹುದೆಂಬ ವಿಶ್ವಾಸ ಇದೆ. ಇಂಗ್ಲೆಂಡ್ ಕ್ರಿಕೆಟ್ ಮಂಡಳಿ, ಭಾರತ ತಂಡದ ಆಟಗಾರ್ತಿಯರ ವಾಸ್ತವ್ಯಕ್ಕೆ ಗುರುತಿಸಿದ್ದ ಹೋಟೆಲ್‌ನಲ್ಲೂ ಸುರಕ್ಷತೆ ಇಲ್ಲದಿರುವುದು ಅಚ್ಚರಿಯಾಗಿದೆ' ಎಂದಿದ್ದಾರೆ.

ಭಾಟಿಯಾ ಅವರ ದೂರಿಗೆ ಹೋಟೆಲ್‌ನ ಆಡಳಿತ ಮಂಡಳಿ 'ಟ್ವೀಟ್' ಮೂಲಕ ಪ್ರತಿಕ್ರಿಯಿಸಿದ್ದು, 'ನಿಮಗೆ ಆಗಿರುವ ತೊಂದರೆಗೆ ವಿಷಾದಿಸುತ್ತೇವೆ. ಕೊಠಡಿ ಕಾಯ್ದಿರಿಸುವಾಗ ನೀವು ನೀಡಿರುವ ಇ–ಮೇಲ್ ವಿಳಾಸ ಹಾಗೂ ವಾಸ್ತವ್ಯದ ದಿನಾಂಕವನ್ನು ನಮಗೆ ಕಳುಹಿಸಿ. ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಹೇಳಿದೆ.

ಕರ್ನಾಟಕ ಸರ್ಕಾರ

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಗುಬ್ಬಿ ತಮಕೂರು ಜಿಲ್ಲೆ

Website: https://gubbitown.mrc.gov.in

Mail ID:itstaff_ulb_gubbi@yahoo.co.in ದೂರವಾಣಿ: 08131–222248

ನಂ.ಗುಪಪ/ತಾಂಶಾ/ಜೆ.ಇ/ಎಸ್‌ಎಫ್‌ಸಿ/03/2022–23 ದಿನಾಂಕ: 20.09.2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯಲ್ಲಿ ಅಧ್ಯಾದೇಶ 2000 ನಿಯಮದಂತೆ ಪಟ್ಟಣ ಪಂಚಾಯಿತಿ ಗುಬ್ಬಿ ಇಲ್ಲಿಗೆ 2019–20ನೇ ಸಾಲಿನ ಎಸ್ ಎಫ್ ಸಿ ವಿಶೇಷ ಅನುದಾನ ಯೋಜನೆಯಡಿ ಮತ್ತು ಎಸ್ ಬಿ ಎಂ ಅನುದಾನದಲ್ಲಿ ಕೆಲವು ಕಾಮಗಾರಿಗಳನ್ನು ಸ್ಟ್ಯಾಂಡರ್ ಟೆಂಡರ್ ಡಾಕ್ಯುಮೆಂಟ್‌ನ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

ಆಹ್ವಾನಿಸಿರುವ ಕಾಮಗಾರಿಗಳ ಇಂಡೆಂಟ್ ವಿವರಗಳು ಈ ಕೆಳಕಂಡಂತಿದೆ.

INDENT NO	Estimate Cost in (LAKHS)	EMD	Reservation
DMA/2022-23/RD/WORK_INDENT138033	115.00	195000.00	Others
DMA/2022-23/OW/WORK_INDENT138121	43.60	74000.00	Others
DMA/2022-23/OW/WORK_INDENT138425	2.50	6250.00	Others
DMA/2021-22/OW/WORK_INDENT120428/CALL-4	2.90	3625.00	Reserved

ಇ–ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **06/10/2022** ರಂದು ಸಂಜೆ **17:00** ಗಂಟೆ ವರೆಗೆ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿದೆ.

ಸಹಿ/–ಅಧ್ಯಕ್ಷರು, ಪಟ್ಟಣ ಪಂಚಾಯಿತಿ, ಗುಬ್ಬಿ | ಸಹಿ/–ಉಪಾಧ್ಯಕ್ಷರು ಪಟ್ಟಣ ಪಂಚಾಯಿತಿ, ಗುಬ್ಬಿ | ಸಹಿ/–ಮುಖ್ಯಾಧಿಕಾರಿ ಪಟ್ಟಣ ಪಂಚಾಯಿತಿ, ಗುಬ್ಬಿ

DIPR/TUM/546/MCA/2022-23

ಕ್ರಿಕೆಟ್: ಭುವಿ, ಹರ್ಷಲ್ ಬೆಂಬಲಕ್ಕೆ ನಿಂತ ರೋಹಿತ್

ಕಾರ್ತಿಕ್‌ಗೆ ಇನ್ನಷ್ಟು ಅವಕಾಶ

ಹೈದರಾಬಾದ್ (ಪಿಟಿಐ): ಟಿ20 ವಿಶ್ವಕಪ್‌ಗೆ ಮುನ್ನ ವಿಕೆಟ್‌ಕೀಪರ್ ಬ್ಯಾಟರ್ ದಿನೇಶ್ ಕಾರ್ತಿಕ್‌ಗೆ ಇನ್ನಷ್ಟು ಪಂದ್ಯಗಳಲ್ಲಿ ಆಡಲು ಅವಕಾಶ ನೀಡಲಾಗುವುದು ಎಂದು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಹೇಳಿದ್ದಾರೆ.

ಈ ಮೂಲಕ ದಕ್ಷಿಣ ಆಫ್ರಿಕಾ ಎದುರಿನ ಸರಣಿಯಲ್ಲೂ ರಿಷಭ್ ಪಂತ್ ಬದಲು ಕಾರ್ತಿಕ್‌ಗೆ ಅಂತಿಮ ಇಲೆವನ್‌ನಲ್ಲಿ ಸ್ಥಾನ ನೀಡುವ ಸೂಚನೆ ನೀಡಿದ್ದಾರೆ. ದಕ್ಷಿಣ ಆಫ್ರಿಕಾ ವಿರುದ್ಧದ ಮೂರು ಪಂದ್ಯಗಳ ಟಿ20 ಸರಣಿಯ ಮೊದಲ ಪಂದ್ಯ ತಿರುವನಂತಪುರದಲ್ಲಿ ಬುಧವಾರ ನಡೆಯಲಿದೆ.

ಏಷ್ಯಾ ಕಪ್ ಟೂರ್ನಿಯಲ್ಲಿ ಕಾರ್ತಿಕ್ ಬದಲು ಯುವ ಆಟಗಾರ ರಿಷಭ್‌ಗೆ ಸ್ಥಾನ ನೀಡಲಾಗಿತ್ತು. ಆದರೆ ಆಸ್ಟ್ರೇಲಿಯಾ ವಿರುದ್ಧದ ಎಲ್ಲ ಮೂರು ಪಂದ್ಯಗಳಲ್ಲೂ ತಮಿಳುನಾಡಿನ ಅನುಭವಿ ಆಟಗಾರನಿಗೆ ಅವಕಾಶ ಲಭಿಸಿತ್ತು.

'ವಿಶ್ವಕಪ್‌ಗೆ ಮುನ್ನ ಇಬ್ಬರಿಗೂ ಸಾಕಷ್ಟು ಪಂದ್ಯಗಳನ್ನು ಆಡುವ ಅವಕಾಶ ನೀಡುವುದು ಗುರಿಯಾಗಿತ್ತು. ದಿನೇಶ್‌ಗೆ ಇನ್ನಷ್ಟು ಅವಕಾಶ ದೊರೆಯಬೇಕು ಎಂಬುದು ನನ್ನ ಭಾವನೆ. ಏಕೆಂದರೆ ಈ ಸರಣಿಯಲ್ಲಿ ಅವರಿಗೆ ಹೆಚ್ಚು ಹೊತ್ತು ಬ್ಯಾಟ್ ಮಾಡಲು ಆಗಿಲ್ಲ. 3–4 ಎಸೆತಗಳನ್ನಷ್ಟೇ ಆಡಿದ್ದಾರೆ. ಅದು ತುಂಬಾ ಕಡಿಮೆಯಾಯಿತು' ಎಂದಿದ್ದಾರೆ.

'ದಕ್ಷಿಣ ಆಫ್ರಿಕಾ ತಂಡದ ಬೌಲಿಂಗ್ ವಿಭಾಗದ ಶಕ್ತಿ ಹಾಗೂ ದೌರ್ಬಲ್ಯವನ್ನು ಅರಿತುಕೊಂಡು ಅಂತಿಮ ಇಲೆವನ್ ಆಯ್ಕೆ ಮಾಡುತ್ತೇವೆ. ಎಡಗೈ ಬ್ಯಾಟರ್ ಬೇಕೇ (ಪಂತ್) ಅಥವಾ ಬಲಗೈ ಬ್ಯಾಟರ್‌ಅನ್ನು (ಕಾರ್ತಿಕ್) ಆಡಿಸಬೇಕೇ ಎಂಬುದನ್ನು ಪರಿಸ್ಥಿತಿಯನ್ನು ನೋಡಿಕೊಂಡು ನಿರ್ಧರಿಸುತ್ತೇವೆ' ಎಂದು ಸ್ಪಷ್ಟಪಡಿಸಿದ್ದಾರೆ.

ಭುವಿ, ಹರ್ಷಲ್‌ಗೆ ಬೆಂಬಲ: ಈ ಸರಣಿಯಲ್ಲಿ ಅಷ್ಟೊಂದು ಪ್ರಭಾವಿ ಎನಿಸದ ವೇಗಿಗಳಾದ ಭುವನೇಶ್ವರ್ ಕುಮಾರ್ ಮತ್ತು ಹರ್ಷಲ್ ಪಟೇಲ್ ಬೆಂಬಲಕ್ಕೆ ರೋಹಿತ್ ನಿಂತಿದ್ದಾರೆ.

ಭುವನೇಶ್ವರ್ ಮತ್ತು ಗಾಯದಿಂದ ಚೇತರಿಸಿಕೊಂಡು ಬಂದಿರುವ ಹರ್ಷಲ್ ಅವರು ಪ್ರತಿ ಓವರ್‌ನಲ್ಲಿ ಸರಾಸರಿ 12ಕ್ಕೂ ಅಧಿಕ ರನ್ ಬಿಟ್ಟುಕೊಟ್ಟಿದ್ದರು.

'ಭುವಿ ಅವರಂತಹ ಆಟಗಾರನ ಉಪಸ್ಥಿತಿ ತಂಡದ ಶಕ್ತಿಯನ್ನು ಹೆಚ್ಚಿಸುತ್ತದೆ. ಕೆಲವೊಂದು ವಿಭಾಗಗಳಲ್ಲಿ ಆಗಿರುವ ಲೋಪಗಳನ್ನು ಸರಿಪಡಿಸಲು ಅವರು ಪ್ರಯತ್ನಿಸುತ್ತಿದ್ದಾರೆ. ಶೀಘ್ರದಲ್ಲೇ ಹಳೆಯ ಲಯ ಕಂಡುಕೊಳ್ಳುವ ವಿಶ್ವಾಸವಿದೆ' ಎಂದು ನುಡಿದಿದ್ದಾರೆ.

'ಹರ್ಷಲ್ ಅವರೂ ಪ್ರಮುಖ ಆಟಗಾರ. ಗಾಯದ ಕಾರಣ ಎರಡು ತಿಂಗಳು ಅಂಗಳದಿಂದ ದೂರವಿದ್ದ ಬಳಿಕ ಅವರು ಮರಳಿದ್ದಾರೆ. ಒಂದು ಸರಣಿಯಲ್ಲಿ ನೀಡಿದ ಪ್ರದರ್ಶನವನ್ನು ಆಧರಿಸಿ ಅವರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಸರಿಯಲ್ಲ' ಎಂದರು.

ಆಸ್ಟ್ರೇಲಿಯಾ ವಿರುದ್ಧ ಆಡಿದ ಮೂರು ಪಂದ್ಯಗಳಲ್ಲಿ ಹರ್ಷಲ್ ಒಟ್ಟು ಎಂಟು ಓವರ್‌ಗಳನ್ನು ಬೌಲ್ ಮಾಡಿದ್ದು, 99 ರನ್‌ಗಳನ್ನು ಬಿಟ್ಟುಕೊಟ್ಟಿದ್ದರು.

ಶಹಬಾಜ್, ಅಯ್ಯರ್‌ಗೆ ಸ್ಥಾನ

ನವದೆಹಲಿ (ಪಿಟಿಐ): ಆಲ್‌ರೌಂಡರ್ ಶಹಬಾಜ್ ಅಹ್ಮದ್ ಮತ್ತು ಮಧ್ಯಮ ಕ್ರಮಾಂಕದ ಬ್ಯಾಟರ್ ಶ್ರೇಯಸ್ ಅಯ್ಯರ್ ಅವರು ದಕ್ಷಿಣ ಆಫ್ರಿಕಾ ವಿರುದ್ಧದ ಮೂರು ಪಂದ್ಯಗಳ ಟಿ20 ಸರಣಿಗೆ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ವೇಗದ ಬೌಲರ್ ಮೊಹಮ್ಮದ್ ಶಮಿ ಕೋವಿಡ್‌ನಿಂದ ಇನ್ನೂ ಗುಣಮುಖರಾಗದ ಕಾರಣ ಈ ಸರಣಿಯಿಂದಲೂ ಹೊರಬಿದ್ದಿದ್ದಾರೆ. ಶಮಿ, ಆಸ್ಟ್ರೇಲಿಯಾ ಎದುರಿನ ಸರಣಿಯಲ್ಲೂ ಆಡಿರಲಿಲ್ಲ.

ಹಾರ್ದಿಕ್ ಪಾಂಡ್ಯ ಅವರಿಗೆ ವಿಶ್ರಾಂತಿ ನೀಡಿರುವುದರಿಂದ ಅವರ ಜಾಗದಲ್ಲಿ ಶಹಬಾಜ್ ತಂಡ ಸೇರಿದ್ದಾರೆ. ಬೆನ್ನು ನೋವಿನಿಂದ ಬಳಲುತ್ತಿರುವ ದೀಪಕ್ ಹೂಡಾ ಸರಣಿಯಿಂದ 'ಔಟ್' ಆಗಿದ್ದು, ಅಯ್ಯರ್‌ಗೆ ಅವಕಾಶ ದೊರೆತಿದೆ.

ದಿನೇಶ್ ಕಾರ್ತಿಕ್

ಹಾಕಿ: ಬೆಂಗಳೂರು ಬ್ಲ್ಯೂಸ್, ಜೆಎಫ್‌ಎಚ್‌ಎಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೂಡ್ ಫೆಲಿಕ್ಸ್ ಹಾಕಿ ಅಕಾಡೆಮಿ (ಜೆಎಫ್‌ಎಚ್‌ಎ) ಮತ್ತು ಬೆಂಗಳೂರು ಬ್ಲ್ಯೂಸ್ ಹಾಕಿ ಕ್ಲಬ್ ತಂಡಗಳು ಬಿಎಚ್‌ಎ ಪ್ರೆಸಿಡೆಂಟ್ಸ್ ಕಪ್ 5 ಎ ಸೈಡ್ ಹಾಕಿ ಟೂರ್ನಿಯ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗಗಳಲ್ಲಿ ಪ್ರಶಸ್ತಿ ಜಯಿಸಿದವು.

ಭಾನುವಾರ ನಡೆದ ಪುರುಷರ ಫೈನಲ್ ಪಂದ್ಯದಲ್ಲಿ ಜೆಎಫ್‌ಎಚ್‌ಎ 3–2ರಿಂದ ಫಾಲ್ಕನ್ ಹಾಕಿ ಕ್ಲಬ್ ತಂಡವನ್ನು ಮಣಿಸಿತು. ವಿಜೇತ ತಂಡಕ್ಕಾಗಿ ಸುರೇಶ್ (16 ಮತ್ತು 19ನೇ ನಿ.) ಮತ್ತು ಗೋವಿಂದರಾಜ್ (4ನೇ ನಿ.) ಗೋಲು ಹೊಡೆದರು. ಫಾಲ್ಕನ್ ಪರ ಸುಂದರ್ ಎಂ. (4ನೇ ನಿ.) ಮತ್ತು ರಾಯನ್ ರಾಡ್ರಿಗಸ್ (9ನೇ ನಿ.) ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದರು.

ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಬೆಂಗಳೂರು ಬ್ಲ್ಯೂಸ್ 7–6ರಿಂದ ಟೈಬ್ರೇಕರ್‌ನಲ್ಲಿ ಸದರ್ನ್ ಅಲ್ಫಾ ಸ್ಪೋರ್ಟ್ಸ್ ಅಸೋಸಿಯೇಷನ್ ಎದುರು ಗೆದ್ದಿತು. ಬ್ಲ್ಯೂಸ್ ಪರ ನಿಗದಿತ ಅವಧಿಯಲ್ಲಿ ಮೆಹರ್ ಕೌರ್ (12, 14 ಮತ್ತು 16ನೇ ನಿ.) ಹ್ಯಾಟ್ರಿಕ್ ಗೋಲು ಹೊಡೆದರು. ಸಲ್ವಿಯಾ (6ನೇ ನಿ.) ಕಾಣಿಕೆ ನೀಡಿದರು. ಸದರ್ನ್ ಅಲ್ಫಾ ತಂಡಕ್ಕಾಗಿ ಯುಕ್ತಾ ಎಸ್. (7, 12ನೇ ನಿ.) ಮತ್ತು ಗೀತಾ ರಾಥೋಡ್ (13, 16ನೇ ನಿ.) ಕಾಲ್ಚಳಕ ತೋರಿದರು. ಟೈಬ್ರೇಕರ್‌ನಲ್ಲಿ ಬ್ಲ್ಯೂಸ್ ತಂಡದವರು ಮೂರು ಗೋಲು ದಾಖಲಿಸಿದರೆ ಅಲ್ಫಾ ತಂಡಕ್ಕೆ ಎರಡು ಗೋಲು ಗಳಿಸಲು ಮಾತ್ರ ಸಾಧ್ಯವಾಯಿತು.

ಫುಟ್‌ಬಾಲ್: ಭಾರತ–ವಿಯೆಟ್ನಾಂ ಸೆಣಸು

ಹೊ ಚಿ ಮಿನ್ ಸಿಟಿ (ಪಿಟಿಐ): ಭಾರತ ಫುಟ್‌ಬಾಲ್ ತಂಡವು ಸ್ನೇಹಪರ ಪಂದ್ಯದಲ್ಲಿ ಮಂಗಳವಾರ ವಿಯೆಟ್ನಾಂ ತಂಡಕ್ಕೆ ಮುಖಾಮುಖಿಯಾಗಲಿದೆ.

ಹಂಗ್ ಥಿನ್ ಸ್ನೇಹಪರ ಫುಟ್‌ಬಾಲ್ ಟೂರ್ನಿಯ ಮೊದಲ ಪಂದ್ಯದಲ್ಲಿ ಶನಿವಾರ ಸುನಿಲ್ ಚೆಟ್ರಿ ನಾಯಕತ್ವದ ಭಾರತ 1–1ರಿಂದ ಸಿಂಗಪುರ ತಂಡದೊಂದಿಗೆ ಡ್ರಾ ಮಾಡಿಕೊಂಡಿತ್ತು. ಈ ಪಂದ್ಯದಲ್ಲಿ ಗೆಲುವಿನ ತವಕದಲ್ಲಿದೆ. ವಿಯೆಟ್ನಾಂ ತನ್ನ ಮೊದಲ ಪಂದ್ಯದಲ್ಲಿ 4–0ಯಿಂದ ಸಿಂಗಪುರ ತಂಡಕ್ಕೆ ಸೋಲುಣಿಸಿತ್ತು.

ಪಂದ್ಯ ಆರಂಭ: ಸಂಜೆ 5.30

ನೇರ ಪ್ರಸಾರ: ಯೂರೋ ಸ್ಪೋರ್ಟ್

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

ಸಂ:ಕಾ.ಸಾ.ಚಿ/ಪಿ.ಬಿ–4/ಟೆಂಡರ್ ಪ್ರಕಟಣೆ–ಐ.ಎಫ್.ಟಿ–25/2022–23/2042 ದಿನಾಂಕ:– 22–09–2022

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಟಿಪಿಪಿ ಆಕ್ಟ್–2000 ನಿಯಮದಂತೆ, ಹಾಗೂ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–2 ನಿಬಂಧನೆಗಳಿಗೊಳಪಟ್ಟಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ 1ನೇ ದರ್ಜೆ ಹಾಗೂ ಒಂದನೇ ದರ್ಜೆ ಎಲೆಕ್ಟ್ರಿಕಲ್ ಲೈಸೆನ್ಸ್ ಹೊಂದಿರುವ ಅರ್ಹ ಗುತ್ತಿಗೆದಾರರಿಂದ / ಏಜೆನ್ಸಿ ಗಳಿಂದ ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು:– (1) ಪ್ಯಾಕೇಜ್–1 ದಾವಣಗೆರೆ ಜಿಲ್ಲೆ, ಹೊನ್ನಾಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 1. ಗಂಗಾನಾಯ್ಕ ಬಿನ್ ಗೇಮ್ಲಾನಾಯ್ಕ ಮುಸ್ಸೇನಾಳ್ ಗ್ರಾಮದಲ್ಲಿ ಕೊಳವೆ ಬಾವಿ. 2.ತಿಪ್ಪಾನಾಯ್ಕ ಬಿನ್ ಚಂದ್ರನಾಯ್ಕ ತಿಮ್ಲಾಪುರ ತಾಂಡ ಗ್ರಾಮದಲ್ಲಿ ಕೊಳವೆ ಬಾವಿ. 3.ಶೀರಾನಾಯ್ಕ್ ಬಿನ್ ತಿಮ್ಲಾನಾಯ್ಕ್, ಫಲವನಹಳ್ಳಿ ಗ್ರಾಮದಲ್ಲಿ ಕೊಳವೆ ಬಾವಿ 4. ಅನುಸೂಯ ಕೋಂ ಸುರೇಶನಾಯ್ಕ ತಿಮ್ಲಾಪುರ ತಾಂಡ ಗ್ರಾಮದಲ್ಲಿ ಕೊಳವೆ ಬಾವಿ 5.ರುದ್ರಬಾಯಿ ಕೋಂ ದೊಡ್ಡನಾಯ್ಕ ಕಮ್ಮಾರಘಟ್ಟ ತಾಂಡ ಗ್ರಾಮದಲ್ಲಿ ಕೊಳವೆ ಬಾವಿ. (ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ ಮೀಸಲು) ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.ಲಕ್ಷಗಳಲ್ಲಿ:– 35.00 (2) ಪ್ಯಾಕೇಜ್–2 ದಾವಣಗೆರೆ ಜಿಲ್ಲೆ, ಹೊನ್ನಾಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 1. ಪೂರ್ಯಾನಾಯ್ಕ ಬಿನ್ ರಾಮಾನಾಯ್ಕ ಕುಂಬಳೂರು ಗ್ರಾಮದಲ್ಲಿ ಕೊಳವೆ ಬಾವಿ. 2. ಮಲ್ಲಪ್ಪ ಬಿನ್ ಸಣ್ಣನಿಂಗಣ್ಣ ಮಾದನಬಾವಿ ಗ್ರಾಮದಲ್ಲಿ ಕೊಳವೆ ಬಾವಿ. 3.ಎ.ಕೆ. ಹಾಲಪ್ಪ ಬಿನ್ ಪಕೀರಪ್ಪ ಕ್ಯಾಸಿನಕೆರೆ ಗ್ರಾಮ ಗ್ರಾಮದಲ್ಲಿ ಕೊಳವೆ ಬಾವಿ. 4. ನರಸಪ್ಪ ಬಿನ್ ಬಸವ್ವಪ್ಪ ಹಳೇಜೋಗ ಗ್ರಾಮದಲ್ಲಿ ಕೊಳವೆ ಬಾವಿ. (ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ ಮೀಸಲು) ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.ಲಕ್ಷಗಳಲ್ಲಿ:– 28.00. (3) ಪ್ಯಾಕೇಜ್–3 ದಾವಣಗೆರೆ ಜಿಲ್ಲೆ, ಹೊನ್ನಾಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ1. ಮಂಜಪ್ಪ ಬಿನ್ ಸಿದ್ದಪ್ಪ ನೇರಲಗುಂಡಿ ಗ್ರಾಮದಲ್ಲಿ ಕೊಳವೆಬಾವಿ 2.ಹನುಮಂತಪ್ಪ ಎ.ಕೆ. ಸಣ್ಣ ಹನುಮಂತಪ್ಪ ಸೋಗಿಲು ಗ್ರಾಮದಲ್ಲಿ ಕೊಳವೆ ಬಾವಿ 3.ಲಕ್ಷ್ಮಮ್ಮ ಕೋಂ ಲಕ್ಷಪ್ಪ ಕ್ಯಾಸಿನಕೆರೆ ಗ್ರಾಮದಲ್ಲಿ ಕೊಳವೆಬಾವಿ 4.ಹಳಚಪ್ಪ ಬಿನ್ ಹನುಮಂತಪ್ಪ ಹಳೆಜೋಗ ಗ್ರಾಮದಲ್ಲಿ ಕೊಳವೆಬಾವಿ (ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ ಮೀಸಲು) ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.ಲಕ್ಷಗಳಲ್ಲಿ:– 28.00 (4) ಪ್ಯಾಕೇಜ್–4 ದಾವಣಗೆರೆ ಜಿಲ್ಲೆ, ಹೊನ್ನಾಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 1. ಹೇಮ್ಲಿಬಾಯಿ ಕೋಂ ತೋಳಚನಾಯ್ಕ ಸೋಗಿಲು ಗ್ರಾಮದಲ್ಲಿ ಕೊಳವೆ ಬಾವಿ 2.ಸಾಮ್ಯಾನಾಯ್ಕ ಬಿನ್ ರಾಮನಾಯ್ಕ ಘಂಟ್ಯಾಪುರ ಗ್ರಾಮದಲ್ಲಿ ಕೊಳವೆ ಬಾವಿ 3.ಕೃಷ್ಣಾನಾಯ್ಕ ಬಿನ್ ಗಂಗಾನಾಯ್ಕ ತಿಮ್ಲಾಪುರ ತಾಂಡ ಗ್ರಾಮದಲ್ಲಿ ಕೊಳವೆ ಬಾವಿ 4.ಲಕ್ಷೀಬಾಯಿ ಕೋಂ ತಾವರೇನಾಯ್ಕ ಚನ್ನೇನಹಳ್ಳಿ 5.ಹನುಮಂತಪ್ಪ ಬಿನ್ ಕೆಂಚಪ್ಪ ಆರುಂಡಿ ಗ್ರಾಮದಲ್ಲಿ ಕೊಳವೆ ಬಾವಿ 6.ಕರ್ಕಿಬಾಯಿ ಕೋಂ ಡಿ.ತಿಪ್ಪನಾಯ್ಕ ಚನ್ನೇನಹಳ್ಳಿ ಗ್ರಾಮದಲ್ಲಿ ಕೊಳವೆಬಾವಿ 7.ಪ್ರೇಮಬಾಯಿ ಕೋಂ ಕುಬೇರನಾಯ್ಕ ಚೀಲಾಪುರ ಗ್ರಾಮದಲ್ಲಿ ಕೊಳವೆಬಾವಿ 8.ಮಹೇಶಪ್ಪ ಬಿನ್ ದೇವಿರಪ್ಪ ಬೆನಕನಹಳ್ಳಿ ಗ್ರಾಮದಲ್ಲಿ ಕೊಳವೆ ಬಾವಿ. ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.ಲಕ್ಷಗಳಲ್ಲಿ:– 56.00 (5) ಪ್ಯಾಕೇಜ್–5: ದಾವಣಗೆರೆ ಜಿಲ್ಲೆ, ಹೊನ್ನಾಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 1.ಗಂಗಮ್ಮ ಕೋಂ ತಿಮ್ಮಪ್ಪ ಚೀಲೂರು ಗ್ರಾಮದಲ್ಲಿ ಕೊಳವೆ ಬಾವಿ 2.ಲಕ್ಷ್ಮೀಬಾಯಿ ಕೋಂ ಶಂಕ್ರನಾಯ್ಕ್ ತಿಮ್ಲಾಪುರ ತಾಂಡ ಗ್ರಾಮದಲ್ಲಿ ಕೊಳವೆ ಬಾವಿ 3.ಲಲಿತಾಬಾಯಿ ಕೋಂ ಚನ್ನನಾಯ್ಕ ಘಂಟ್ಯಾಪುರ ಗ್ರಾಮದಲ್ಲಿ ಕೊಳವೆ ಬಾವಿ 4.ತುಳಜಾನಾಯ್ಕ ಕೋಂ ಜೇಮ್ಲಾನಾಯ್ಕ ಮಾವಿನಕೋಟೆ ತಾಂಡಾ ಗ್ರಾಮದಲ್ಲಿ ಕೊಳವೆ ಬಾವಿ 5.ಕಮಲಾಬಾಯಿ ಕೋಂ ಲಾಲಾನಾಯ್ಕ ತಿಮ್ಲಾಪುರ ತಾಂಡ ಗ್ರಾಮದಲ್ಲಿ ಕೊಳವೆ ಬಾವಿ 6.ಗಂಗಾಬಾಯಿ ಕೋಂ ಧನುಜಾನಾಯ್ಕ್ ತಿಮ್ಲಾಪುರ ತಾಂಡ ಗ್ರಾಮದಲ್ಲಿ ಕೊಳವೆ ಬಾವಿ 7.ಪುಟ್ಟನಾಯ್ಕ ಬಿನ್ ಚಂದ್ರನಾಯ್ಕ ತಿಮ್ಲಾಪುರ ತಾಂಡ ಗ್ರಾಮದಲ್ಲಿ ಕೊಳವೆ ಬಾವಿ 8.ಧರ್ಮಾನಾಯ್ಕ ಬಿನ್ ರೇಖಾನಾಯ್ಕ ತಿಮ್ಲಾಪುರ ತಾಂಡ ಗ್ರಾಮದಲ್ಲಿ ಕೊಳವೆ ಬಾವಿ. ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.ಲಕ್ಷಗಳಲ್ಲಿ:– 56.00 (6) ಪ್ಯಾಕೇಜ್–6: ದಾವಣಗೆರೆ ಜಿಲ್ಲೆ, ಹೊನ್ನಾಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 1. ಪಾರ್ವತಮ್ಮ ಕೋಂ ದಾನೇಶಪ್ಪ ಮಾದಾಪುರ ಗ್ರಾಮದಲ್ಲಿ ಕೊಳವೆ ಬಾವಿ 2.ತಿಮ್ಮಾನಾಯ್ಕ್ ಬಿನ್ ಸಂಕಾನಾಯ್ಕ್ ಕುರುವ ತಾಂಡಾ ಗ್ರಾಮದಲ್ಲಿ ಕೊಳವೆ ಬಾವಿ 3. ಗಣೇಶ್‌ನಾಯ್ಕ್ ಬಿನ್ ನಾನಾನಾಯ್ಕ್ ಸೇವಲಾಲ್ ನಗರ ಗ್ರಾಮದಲ್ಲಿ ಕೊಳವೆ ಬಾವಿ 4.ಶಂಕರನಾಯ್ಕ ಬಿನ್ ರಾಮಾನಾಯ್ಕ ಸೇವಲಾಲ್ ನಗರ ಗ್ರಾಮದಲ್ಲಿ ಕೊಳವೆ ಬಾವಿ 5.ಜಾನಕಿಬಾಯಿ ಕೋಂ ಲೋಕ್ಯಾನಾಯ್ಕ ಸೇವಲಾಲ್ ನಗರದಲ್ಲಿ ಕೊಳವೆ ಬಾವಿ 6.ರಾಜನಾಯ್ಕ ಬಿನ್ ಹನುಮಾನಾಯ್ಕ ಸೇವಲಾಲ್ ನಗರದಲ್ಲಿ ಕೊಳವೆ ಬಾವಿ 7.ಹನುಮಂತನಾಯ್ಕ ಬಿನ್ ಮಂಜಾನಾಯ್ಕ ಹೊನ್ನೂರುವಡ್ಡರಹಟ್ಟಿ ಗ್ರಾಮದಲ್ಲಿ ಕೊಳವೆ ಬಾವಿ 8.ಸಿದ್ದಪ್ಪ ಬಿನ್ ದಪ್ಪನ ಸಿದ್ದಪ್ಪ ಹೊನ್ನೂರುವಡ್ಡರಹಟ್ಟಿ ಗ್ರಾಮದಲ್ಲಿ ಕೊಳವೆ ಬಾವಿ. ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.ಲಕ್ಷಗಳಲ್ಲಿ:– 56.00 (7) ಪ್ಯಾಕೇಜ್–7: ದಾವಣಗೆರೆ ಜಿಲ್ಲೆ, ಹೊನ್ನಾಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ1.ಹನುಮಂತನಾಯ್ಕ ಬಿನ್ ಪುಣ್ಯಾನಾಯ್ಕ ಕಮ್ಮಾರಘಟ್ಟ ತಾಂಡ ಗ್ರಾಮದಲ್ಲಿ ಕೊಳವೆ ಬಾವಿ 2.ಸೋನುಬಾಯಿ ಕೋಂ ಹಾಲನಾಯ್ಕ ಕುಂಬಳೂರು ಗ್ರಾಮದಲ್ಲಿ ಕೊಳವೆ ಬಾವಿ. 3.ಹನಿಯನಾಯ್ಕ ಬಿನ್ ಜುಂಜ್ಯಾನಾಯ್ಕ ಸಾಸ್ವೇಹಳ್ಳಿ ಗ್ರಾಮದಲ್ಲಿ ಕೊಳವೆ ಬಾವಿ. 4.ಹನುಮಂತನಾಯ್ಕ ಬಿನ್ ಡಾಕ್ಯಾನಾಯ್ಕಾ ಸಾಸ್ವೇಹಳ್ಳಿ ಗ್ರಾಮದಲ್ಲಿ ಕೊಳವೆ ಬಾವಿ. 5.ಮಂಜಪ್ಪ ಬಿನ್ ಸಿದ್ದಲಿಂಗಪ್ಪ ಸಿಂಗಟಗೆರೆ ಗ್ರಾಮದಲ್ಲಿ ಕೊಳವೆ ಬಾವಿ. 6.ಶೀರ್ಯಾನಾಯ್ಕ ಬಿನ್ ಧನುಜಾನಾಯ್ಕ ಸೇವಾಲಾಲ್ ನಗರ ಗ್ರಾಮದಲ್ಲಿ ಕೊಳವೆ ಬಾವಿ. 7.ಹೇಮಾಬಾಯಿ ಕೋಂ ಜಯನಾಯ್ಕ ಸೇವಾಲಾಲ್ ಗ್ರಾಮದಲ್ಲಿ ನಗರ ಕೊಳವೆ ಬಾವಿ. 8.ವೀರಪ್ಪ ಬಿನ್ ಹಾಲಪ್ಪ ಕ್ಯಾಸಿನಕೆರೆ ಗ್ರಾಮದಲ್ಲಿ ಕೊಳವೆ ಬಾವಿ. ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.ಲಕ್ಷಗಳಲ್ಲಿ:– 56.00 (8) ಪ್ಯಾಕೇಜ್–8: ದಾವಣಗೆರೆ ಜಿಲ್ಲೆ, ಹೊನ್ನಾಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ1.ಮಂಜಪ್ಪ ಬಿನ್ ಕುಮಾರಸ್ವಾಮಿ ಜಯನಗರ ಗ್ರಾಮದಲ್ಲಿ ಕೊಳವೆ ಬಾವಿ. 2.ಮಂಜಪ್ಪ ಬಿನ್ ಬಸಪ್ಪ ಹಳೇಜೋಗ ಗ್ರಾಮದಲ್ಲಿ ಕೊಳವೆ ಬಾವಿ. 3.ಮಲ್ಲಿಕನಾಯ್ಕ ಬಿನ್ ಮಾನ್ಯನಾಯ್ಕ ವಿಜಯಪುರ ತಾಂಡದಲ್ಲಿ ಕೊಳವೆ ಬಾವಿ. 4.ನಾಗರಾಜನಾಯ್ಕ ಬಿನ್ ಗಂಗನಾಯ್ಕ ವಿಜಯಪುರ ತಾಂಡದಲ್ಲಿ ಕೊಳವೆ ಬಾವಿ. 5.ಚಂದ್ರನಾಯ್ಕ ಬಿನ್ ಗೋವಿಂದನಾಯ್ಕ ವಿಜಯಪುರ ತಾಂಡದಲ್ಲಿ ಕೊಳವೆ ಬಾವಿ. ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.ಲಕ್ಷಗಳಲ್ಲಿ:– 35.00

ಸದರಿ ಟೆಂಡರ್ ಪ್ರಕ್ರಿಯೆಗಳನ್ನು ಈ ಕೆಳಗಿನಂತೆ ನಿಗದಿಪಡಿಸಿದೆ. ದಿನಾಂಕ: 28–09–2022 ರಿಂದ ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 10–10–2022 ಸಾಯಂಕಾಲ 5.30 ರವರೆಗೆ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 12–10–2022 ರ ಸಾಯಂಕಾಲ 4.00 ಗಂಟೆಯವರೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ: 13–10–2022 ಸಾಯಂಕಾಲ 04–30 ಗಂಟೆಯ ನಂತರ(ಸಾಧ್ಯವಾದಲ್ಲಿ) ಸದರಿ ಕಾಮಗಾರಿಯಲ್ಲಿ ಟೆಂಡರ್ ಮೊತ್ತ ಅಥವಾ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತ ಅಂತಿಮವಾಗಿರುತ್ತವೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ (08194–231811) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ: 080–25501216/080–25501227 ರಿಂದ ಪಡೆಯಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

DIPR/CTA/MCA/561/2022-23